ಸಂಕಲನ

ವರ್ಷ ೫

ಮೇ + ಜೂನ್
೨೦೦೩

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

೨೭

ಸಂಕಲನ : ಮೇ + ಜೂನ್ ೨೦೦೬

ಸಂಪುಟ ೫, ಸಂಚಿಕೆ ೩

ಸಂಪಾದಕರು : **ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ**

●

ಯು. ವೆಂಕಟ್ರಾಜ ರಾವ್ — ಎಂ. ಡಿ. ಗೋಗೇರಿ

ಚಿದಾನಂದ ಸಾಲಿ — ನಾ. ಮೊಗಸಾಲೆ

ಲಲಿತಾ ಸಿದ್ದಬಸವಯ್ಯ — ಎಂ. ಸುದರ್ಶನ ರಾಜ್

ಬಸವರಾಜ ಕೋಡಗುಂಟಿ — ಹೊರೆಯಾಲ ದೊರೆಸ್ವಾಮಿ

ಸುಮತೀಂದ್ರ ನಾಡಿಗ — ಬಿ. ಎಂ. ರೋಹಿಣಿ

ಸತೀಶ ಕುಲಕರ್ಣಿ — ಮಿರ್ಜಾ ಬಷೀರ್

ಬಿ. ಎ. ಸನದಿ — ಷ. ಶೆಟ್ಟರ್

●

• ವಿ. ಎಸ್. ಶ್ಯಾನಭಾಗ್ • ಶ್ರೀನಿವಾಸ ಜೋಕಟ್ಟೆ

• ಎ. ಮುರಿಗೆಪ್ಪ

• ದೇಶಪಾಂಡೆ ಸುಬ್ಬರಾಯ • ಬಸವರಾಜ ವಕ್ಕುಂದ

• ವಿನಯಾ

• ಪ್ರಹ್ಲಾದ ಅಗಸನಕಟ್ಟೆ • ಶ್ಯಾಮಸುಂದರ ಬಿದರಕುಂದಿ

●

• ಅರವಿಂದ ನಾಡಕರ್ಣಿ

• ಶಶಿಧರ ತೋಡಕರ • ವಸುಂಧರಾ ದೇಸಾಯಿ

• ವಸಂತಕುಮಾರ ಪೆರ್ಲ

• ಕೃ. ಶಿ. ಹೆಗಡೆ • ಲಲಿತಾ ಸಿದ್ದಬಸವಯ್ಯ

• ಶ್ರೀನಿವಾಸ ಹಾವನೂರ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

ಸಂಕಲನ

ಮೇ + ಜೂನ್ ೨೦೦೬

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ
ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 5, Issue 3 : May + June 2006

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೨೭

ಸಂಪುಟ ೫, ಸಂಚಿಕೆ ೩ : ಮೇ + ಜೂನ್ ೨೦೦೬

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮, ಮೊಬೈಲ್ : ೯೪೪೮೬ ೩೦೬೩೭, ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

೨೦೦೫ ರಿಂದ ಒಟ್ಟು ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮

ಮೊಬೈಲ್ : ೯೮೮೦೩ ೮೧೮೬೯

ಸಂಕಲನ - ೨೬ : ಪರಿವಿಡಿ

೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫

೨. ಪರಿಸರವಾದ ಮತ್ತು ಔದ್ಯೋಗೀಕರಣ – ಯು. ವೆಂಕಟ್ರಾಜ ರಾವ್ ೬–೨೧

೩. ನೀವೇ ಪ್ರಮಾಣು – ಎಂ. ಡಿ. ಗೋಗೇರಿ ೨೧

೪. ಬರೀ ಬಸ್ಸಲ್ಲೋ ಅಣ್ಣಾ, ಇದು ಬ್ರಹ್ಮಾಂಡ ! – ಚಿದಾನಂದ ಸಾಲಿ ೨೨–೨೫

೫. ಎರಡು ಕನಸುಗಳು – ನಾ. ಮೊಗಸಾಲೆ ೨೬

೬. ಒಂದು ಹೂ ಹೆಚ್ಚಿಗೆ ಇಡುತೀನಿ – ಲಲಿತಾ ಸಿದ್ದಬಸವಯ್ಯ ೨೬–೨೮

೭. ವೋಲ್ಕರ್ ವರದಿ – ಎಂ. ಸುದರ್ಶನ ರಾಜ್ ೨೮

೮. ನೆಲತಾಯಿ ವಟ್ಟ್ಯಾಗಿನ ಮಾತು – ಬಸವರಾಜ ಕೋಡಗುಂಟಿ ೨೮

೯. ರಾಘವೇಂದ್ರ ಪಾಟೀಲರ 'ತೇರು' – ಹೊರೆಯಾಲ ದೊರೆಸ್ವಾಮಿ ೨೯-೩೪

೧೦. ನಾಲ್ಕು ಕವಿತೆಗಳು – ಸುಮತೀಂದ್ರ ನಾಡಿಗ ೩೫-೩೭

೧೧. ನನ್ನ ಶಾಲಾ ಗುರುಗಳು : ಗೌರವ-೧೦ – ಬಿ. ಎಂ. ರೋಹಿಣಿ ೩೮-೪೪

೧೨. ಮೂರು ಕವಿತೆಗಳು – ಸತೀಶ ಕುಲಕರ್ಣಿ ೪೫-೪೬

೧೩. ನನ್ನ ಅಪ್ಪ ನನ್ನ ಅಮ್ಮ : ಕೃತಜ್ಞತೆ-೨೭ – ಮಿರ್ಜಾ ಬಷೀರ್ ೪೭-೫೪

೧೪. ವಿಂದಾ ಕರಂದೀಕರ್‌ರ ೫ ವಿರೂಪಿಕಾ ಪದ್ಯಗಳು – ಬಿ. ಎ. ಸನದಿ ೫೪-೫೫

೧೫. ಕವಿರಾಜಮಾರ್ಗಮಂಥನ : ಲೇಖನಮಾಲೆ - ೯ –ಷ. ಶೆಟ್ಟರ್ ೫೬-೬೮

೧೬. ಪುಸ್ತಕ ಪರಿಶೀಲನೆ : ೬೯-೭೮

೧. ಸಮಚಿತ್ತ : ವಿಶ್ವನಾಥ ಕಾರ್ನಾಡ – ವಿ. ಎಸ್. ಶ್ಯಾನಭಾಗ್

೨. ಬಿ.ಎ.ಸನದಿ ಬದುಕು-ಬರಹ : ಜಿ.ಎನ್.ಉಪಾಧ್ಯ– ಶ್ರೀನಿವಾಸ ಜೋಕಟ್ಟೆ

೩. ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ : ಚಂದ್ರಶೇಖರ ವಸ್ತ್ರದ – ಎ. ಮುರಿಗೆಪ್ಪ

೪. ಹೆಣ್ಣು-ಹಕ್ಕು-ಹೋರಾಟ : ವೆಂ. ವನಜ – ದೇಶಪಾಂಡೆ ಸುಬ್ಬರಾಯ

೫. ಇತಿಹಾಸ ಮರೆತವರು : ಮರಿಯಪ್ಪ ನಾಟೇಕರ್ – ಬಸವರಾಜ ವಕ್ಕುಂದ

೬. ನದಿಗೊಂದು ಕನಸು ಮತ್ತು ಅವಳು : ಸತ್ಯಾನಂದ ಪಾತ್ರೋಟ – ವಿನಯಾ

೭. ಹೈಬ್ರಿಡ್ ಕತೆಗಳು : ಆರ್ಯ – ಪ್ರಹ್ಲಾದ ಅಗಸನಕಟ್ಟೆ

೮. ಸಾಹಿತ್ಯ ರೂಪ ಜಿಜ್ಞಾಸೆ : ಎಚ್. ವಿ. ನಾಗೇಶ್;

೯. ದಲಿತ ಚಳುವಳಿಯ ನಾಳೆಗಳು : ಆರ್. ಟಿ. ವಿಠ್ಠಲಮೂರ್ತಿ– ಶ್ಯಾಮಸುಂದರ ಬಿದರಕುಂದಿ

೧೭. ಸಂಕಲನ : ಅನಿಸಿಕೆ ೭೯

೧೮. ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೮೦ + ಆವರಣ ಪುಟ ೩

ಸಂಪಾದಕರ ಮಾತು

ಸಂಕಲನದ ಇತ್ತೀಚೆನ ಕೆಲವು ಸಂಚಿಕೆಗಳಲ್ಲಿ ವೈಚಾರಿಕ ಹಾಗೂ ವಿಮರ್ಶಾ ಲೇಖನಗಳಿಗೆ ಹೆಚ್ಚು ಒತ್ತು ಬೀಳುತ್ತ ಬಂದಿದೆ. ಹೀಗಾಗಿ ಪ್ರಕಟಣೆಗೆ ಸ್ವೀಕೃತವಾಗಿದ್ದ ಸೃಜನಶೀಲ ಬರವಣಿಗೆಗಳು ಬಹಳ ಉಳಿದುಬಿಟ್ಟಿವೆ. ಈಗ ಅವನ್ನು ಹೊಂದಿಸಿಕೊಳ್ಳುವ ನಿಟ್ಟಿನಲ್ಲಿ ಈ ಸಂಚಿಕೆಯಿಂದ ಮತ್ತೆ ಅಂಥ ಲೇಖನಗಳಿಗೆ ಸೂಕ್ತ ಸ್ಥಳಾವಕಾಶದ ವ್ಯವಸ್ಥೆ ಮಾಡಲಾಗಿದೆ. ಬಹುಕಾಲದಿಂದ ಉಳಿದಿದ್ದ ಕವಿತೆ, ಕತೆ, ನಾಟಕ ಇತ್ಯಾದಿಗಳು ಇನ್ನು ಒಂದೊಂದಾಗಿ ಬೆಳಕಿಗೆ ಬರಲಿವೆ.

ಕಳೆದ ೨-೩ ವರ್ಷಗಳಿಂದ ಸಂಕಲನವನ್ನು ಪ್ರೀತಿಸಿ ತರಿಸಿಕೊಳ್ಳುತ್ತಿರುವ, ಆದರೆ ಚಂದಾಹಣವನ್ನು ಮಾತ್ರ ಹಲವು ಸಲ ನೆನಪಿಸಿದರೂ ಕೊಡದಿರುವ ಅಜಮಾಸು ೩೦೦ ಮಂದಿಗೆ ಈ ಸಲದ ಸಂಚಿಕೆಯ ಜೊತೆಗೆ ಪತ್ರವನ್ನು ಬರೆಯುತ್ತಿದ್ದೇವೆ. ಅಂಥವರು ಅನ್ಯಥಾ ಭಾವಿಸದೆ ತಮ್ಮ ಬಾಕಿ ಇದ್ದ ಚಂದಾಹಣ ಕಳಿಸಿ ಸಹಕರಿಸಬೇಕೆಂದು ಆಗ್ರಹಪೂರ್ವಕ ಕೋರುತ್ತೇವೆ.

೧ ಮೇ ೨೦೦೬
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಮಧ್ಯಕಾಲೀನ ಹಿಂದೀ ಸಾಹಿತ್ಯಾಕಾಶದ ಸೂರ್ಯ, ವ್ರಜ ಭಾಷೆಯ ವಾಲ್ಮೀಕಿ ಅಂತನ್‌ಅ ಪ್ರಸಿದ್ಧಿ ಪಡೆದಿರುವ ಮಹಾಕವಿ ಸೂರದಾಸ ಹುಟ್ಟುಗುರುಡನಾಗಿದ್ದನಂತ. ಅವನ 'ಪದ'ಗಳನ್ನ ಓದಿದರ ಅವ್ನ ಕುರುಡ ಆಗಿದ್ದ ಅಂತ ನಂಬಾಕ್‌ಅ ಆಗೂದುಲ್ಲ. ಕೃಷ್ಣ, ರಾಧೆ, ಗೋಪಿಯರ ಬಗ್ಗೆ ಸೂರದಾಸ ರಚಿಸಿದ ಪದಗಳು ಅಯ್ದು ಸಾವಿರಕ್ಕಿಂತ ಹೆಚ್ಚು ಅಂತ ಹೇಳತಾರ.

ಅವನ ಬದುಕಿನ ಹೆಚ್ಚಿನ ವಿವರ ತಿಳಿದಿಲ್ಲ. ಆದರೂ ಅವ್ನ ನೂರಾಅಯ್ದು ವರ್ಷ ಬದುಕಿದ್ದ ಅಂತ ಪ್ರತೀತಿ. ಒಂದು ಬಡ ಸಾರಸ್ವತ ಕುಟುಂಬದೊಳಗ ಹುಟ್ಟಿದ ಸೂರದಾಸ ಆರು ವರ್ಷದವ್ನ ಇದ್ದಾಗ ಮನಿಯಿಂದ ದೂರ ಹೋದ. ಒಂದು ಕೆರೀ ದಂಡೀಮ್ಯಾಲ ಗುಡಸಲಾ ಹಾಕ್ಕೊಂಡು ಹದಿನೆಂಟು ವರ್ಷ ಇದ್ದನಂತ. ತನ್ನ ಹಾಡು, ಸಂಗೀತ, ಕಾವ್ಯದಿಂದಾಗಿ ಆಗಲೇ ಅವ್ನಗ ಭೋಲೋ ಹೆಸರು ಬಂದಿದ್ದಿರಬೇಕು. ನಂತರ ಸ್ವಲ್ಪ ಕಾಲ ಮಥುರಾ ಆಗರಾದ ನಡುವ ಇರುವ ಗಊಘಾಟ್‌ದೊಳಗ ಇದ್ದ. ಒಮ್ಮೆ ಅಲ್ಲಿಗೆ ಬಂದ ರುದ್ರಸಂಪ್ರದಾಯದ ವಲ್ಲಭಾಚಾರ್ಯರು ಅವನ ಪ್ರತಿಭೆಯನ್ನ ಗುರುತಿಸಿದರು. ಗೋಕುಲಕ್ಕ ಕರೆದೊಯ್ದರು. ಆನಂತರ ಗೋವರ್ಧನದ ಶ್ರೀನಾಥ ಮಂದಿರದೊಳಗ ಸೂರದಾಸನ ಉಳಿದ ಆಯುಷ್ಯ ಕಳೀತು.

ಅವನಿಗಿದ್ದಿರಬಹುದಾದ ಉಚ್ಚ ಶಿಕ್ಷಣ, ಸಂಗೀತಜ್ಞಾನ, ಕಾವ್ಯಾಭ್ಯಾಸ, ಜೀವನಾನುಭವ, ಆಧ್ಯಾತ್ಮಿಕ ಭಾವನೆ, ಸೂಕ್ಷ್ಮ ಚಿಂತನೆಗಳ ಅದ್ಭುತ ಸಂಪತ್ತು ಅವನ 'ಸೂರಸಾಗರ'ದ ಪದ್ಯಗಳಲ್ಲಿ ತುಂಬಿ ತುಳಕತಯ್ತಿ. ತನ್ನ ವಾತ್ಸಲ್ಯ ಭಾವದ ಹಾಡು, ರಾಧಾ-ಗೋಪಿಕಾ-ಕೃಷ್ಣರ ಮಿಲನ ಶೃಂಗಾರ ವರ್ಣನೆಗಳು, 'ಭ್ರಮರಗೀತ' ಮತ್ತು 'ವಿನಯ' (ಪ್ರಾರ್ಥನಾ) ಪದಗಳಿಂದಾಗಿ ಸೂರದಾಸ ಅಪಾರ ಲೋಕಪ್ರಿಯ. ಶುದ್ಧಾದ್ವೈತವನ್ನ ಮನಸಾ ಒಪ್ಪಿ ಹಾಡಿದ ಶ್ರೇಷ್ಠ ಭಕ್ತ, ವಿಶುದ್ಧ ಪ್ರೇಮಿ, ಯಶಸ್ವೀ ಕವಿ. 'ಭ್ರಮರಗೀತ' ಅನ್ನುವ ಹೊಸ ಕಾವ್ಯಪರಂಪರೆಗೆ ಆದ್ಯಪ್ರವರ್ತಕ. 'ವಿನಯ' ಪದಗಳಲ್ಲಿ ಅವನು ತೋರುವ ತನ್ಮಯತೆ ಹಿಂದೀ ಮಧ್ಯಕಾಲದ ಕಾವ್ಯದ ಶಿಖರ ಸೌಂದರ್ಯ.

ಚರನ-ಕಮಲ ಬಂದ್ೌ ಹರಿ-ರಾಇ |
ಜಾಕೀ ಕೃಪಾ ಪಂಗು ಗಿರಿ ಲಂಘೈ, ಅಂಧೇ ಕೋ ಸಬ ಕಛು ದರಸಾಇ ||
ಬಹಿರೌ ಸುನೈ, ಗೂಂಗ ಪುನಿ ಬೋಲೈ, ರಂಕ ಚಲೈ ಸಿರ ಛತ್ರ ಧರಾಇ |
ಸೂರದಾಸ ಸ್ವಾಮೀ ಕರುನಾಮಯ, ಬಾರ-ಬಾರ ಬಂದ್ೌ ತಿಹ್ಹಿ ಪಾಇ ||

'ಸರ್ವೇಶ್ವರನಾದ ಶ್ರೀಹರಿಯ ಚರಣಕಮಲಗಳಿಗೆ ವಂದಿಸತೇನಿ. ಯಾರ ಅನುಗ್ರಹ, ಕೃಪಾದಿಂದ ಕುಂಟ ಗಿರಿಯನ್ನ ಏರಬಲ್ಲನೋ, ಕುರುಡಗ ಎಲ್ಲಾ ಕಾಣಸತೈತ್ಯೋ, ಕಿವುಡಗ ಕೇಳಸತೈತ್ಯೋ, ಮೂಕ ಮಾತಾಡಾಕ ಹತ್ತತಾನೋ, ದಟ್ಟ ದರಿದ್ರ ಸೈತ ತಲೀಮ್ಯಾಲ ಛತ್ರ ಧರಿಸಿ ರಾಜನಂಗ ಮೆರೀತಾನೋ ಅಂಥಾ ಕರುಣಾಮಯ ಸ್ವಾಮಿಗೆ ಮತ್ತ ಮತ್ತ ವಂದಿಸತೇನಿ' ಅಂತ ಅರ್ಥ.

ಬಿಲಾವಲ ರಾಗದೊಳಗ ಸೂರದಾಸ ನಿಬದ್ಧಗೊಳಿಸಿದ ಈ ಹಾಡು ಅವನ ಸಂಪೂರ್ಣ ವ್ಯಕ್ತಿತ್ವದ ಪ್ರತಿಬಿಂಬ. ದೇವರ ಅನ್ನಾವ್ನ ಹಿಂಗ ಇರಬೇಕು ಅಥವಾ ಇಂಥಾದ್ದೆಲ್ಲ ಮಾಡೂವವ್ನ ದೇವರು ಅಂತ ಅನಿಸಿಕೋತಾನ, ಅಂಥವ್ನಗ ವಂದಿಸಬೇಕು ಅನ್ನೂದು ಇಲ್ಲಿಯ ಧ್ವನಿ.

ಪರಿಸರವಾದ ಮತ್ತು ಔದ್ಯೋಗೀಕರಣ — ಯು. ವೆಂಕಟ್ರಾಜ ರಾವ್

ನಮ್ಮ ದೇಶದಲ್ಲೀಗ ಪರಿಸರದ ಬಗೆಗಿನ ವಾದ ವಿವಾದಗಳು ಬರೇ ವೈಚಾರಿಕವಾಗಿ ಉಳಿಯದೆ, ಅತೀ ಅಗತ್ಯವಾಗಿರುವ ಆರ್ಥಿಕ ಮುನ್ನಡೆಗೆ ಅದೆಷ್ಟೋ ಬಾರಿ ಎದುರಾಳಿಯಾಗಿ ನಿಂತಿದೆ. ಆರ್ಥಿಕ ಪ್ರಗತಿಗೆ ಅವಶ್ಯವಾದ ಕೈಗಾರಿಕೀಕರಣ ಮತ್ತು ರಸ್ತೆ ಸಾರಿಗೆ-ಅಣೆಕಟ್ಟುಗಳು-ಬಂದರುಗಳು ಮುಂತಾದ ಸವಲತ್ತುಗಳ ಬೆಳವಣಿಗೆಗೆ ಪರಿಸರವಾದಿಗಳಿಂದ ಪ್ರಬಲವಾದ ಅಡಚಣೆ ಬಂದ ನಿದರ್ಶನಗಳು ಇತ್ತೀಚೆಗೆ ಹಲವಾರು. ಉದಾಹರಣೆಗೆ ನರ್ಮದಾ ಅಣೆಕಟ್ಟಿನ ಸಂಯೋಜನೆ, ಮುಂಬಯಿ-ಪುಣೆಗಳ ಮಧ್ಯದ ತ್ವರಿತ ದಾರಿ, ದಕ್ಷಿಣ ಕನ್ನಡದ ಎಂ.ಆರ್.ಪಿ.ಎಲ್. ಮತ್ತು ಕ್ರೊಜೆಂಟ್ರಿಕ್ಸ್, ಉತ್ತರ ಕನ್ನಡದ ಕೈಗಾ ಇವೆಲ್ಲ ಪರಿಸರವಾದಿಗಳ ಚಳುವಳಿಯಿಂದಾಗಿ ಒಂದಲ್ಲ ಒಂದು ರೀತಿಯಲ್ಲಿ ತೊಂದರೆಗೊಳಗಾಗಿವೆ. ಪರಿಣಾಮವಾಗಿ ಕೈಗಾರಿಕೀಕರಣ ಮತ್ತು ಸವಲತ್ತುಗಳ ಬೆಳವಣಿಗೆಗಳು ಮೂಲತಃ ಪರಿಸರದ ವೈರಿಗಳೇ?– ಎಂಬ ಪ್ರಶ್ನೆಯನ್ನು ಮೀರಿ,– ಅವುಗಳು ವೈರಿಗಳೇ ಆಗಿವೆ ಎಂಬ ಸಿದ್ಧಾಂತವು ಬೆಳೆದಿದೆ. ಇದರ ಬೇರುಗಳನ್ನು ಸರಿಯಾಗಿ ಗುರುತಿಸಿ, ಮೂಲ ಪ್ರಶ್ನೆಯನ್ನು ಸಚೇತನವಾಗಿರಿಸಿಕೊಳ್ಳುವುದು ತುಂಬ ಅಗತ್ಯ.

ಈ ಪ್ರಶ್ನೆಗೆ ಹಲವಾರು ಮುಖಗಳಿವೆ, ಹಲವಾರು ಉತ್ತರಗಳಿವೆ, – ಖಡಾಖಂಡಿತವಾದ ಒಂದೇ ಉತ್ತರವಂತೂ ಇಲ್ಲ.

– ಪರಿಸರದ ಮೂಲ ವೈರಿಗಳು ಯಾರು?

– ಕೈಗಾರಿಕೀಕರಣ ಮತ್ತು ಸೌಲಭ್ಯಗಳ ಬೆಳವಣಿಗೆ ಯಾಕೆ ಮತ್ತು ಎಷ್ಟರ ಮಟ್ಟಿಗೆ ಅಗತ್ಯ?

– ಇವು ಅಗತ್ಯವಿದ್ದರೆ, ಇವುಗಳ ಅಭಿವೃದ್ಧಿ ಪರಿಸರವನ್ನು ಹಾಳುಗೆಡಹದೆ ಸಾಧ್ಯವೇ?

– ಈ ನಿಟ್ಟಿನಲ್ಲಿ ಮುಂದುವರಿದ ದೇಶಗಳ ಅನುಭವ ನಮಗೆ ಉಪಯೋಗವಾಗಬಲ್ಲುದೇ?

ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವ ಪ್ರಯತ್ನವಷ್ಟೆ ಪ್ರಸ್ತುತ ಇಲ್ಲಿದೆ.

ಪರಿಸರದಲ್ಲಿ ಸಮತೋಲನ

ಒಂದು ಪರಿಸರದ ಎಲ್ಲಾ ಜೀವ ನಿರ್ಜೀವ ವರ್ಗಗಳು ಯಾವುದೋ ಒಂದು ಸಮತೋಲನದಲ್ಲಿರುತ್ತವೆ ಎನ್ನುವುದು ಹೆಚ್ಚಿನವರ ನಂಬಿಗೆ. ಆದರೆ ಯಾವತ್ತೂ ಈ ಸಮತೋಲನವು ಶಾಶ್ವತವಲ್ಲ. ಅಂದರೆ, ಯಾವುದೊಂದು ವರ್ಗವು ತನ್ನ ಪ್ರಮಾಣಕ್ಕೆ ಮೀರಿದಾಗ ಉಳಿದ ವರ್ಗಗಳ ಪ್ರಮಾಣಗಳು ಅದಕ್ಕೆ ಅನುಗುಣವಾಗಿ ಬದಲಾಗುತ್ತವೆ, –ಒಳ್ಳೆಯದಕ್ಕೋ, ಕೆಟ್ಟುದಕ್ಕೋ ಎಂಬುದು ಕಂಡುಕೊಂಡವರ ದೃಷ್ಟಿಕೋನಕ್ಕೆ ಹೊಂದಿದೆ. ಇದು ಪ್ರಕೃತಿ ನಿಯಮ.

ಹುಲ್ಲು ತಿನ್ನುವ ಹರಿಣಗಳನ್ನು ಹುಲಿಗಳು ಬೇಟೆಯಾಡುತ್ತಿರುವ ಒಂದು ಪ್ರಕೃತಿ ವಲಯದಲ್ಲಿ, –ಹರಿಣಗಳ ಸಂಖ್ಯೆ ಹೆಚ್ಚಾದರೆ, ಹುಲ್ಲಿನ ಕೊರತೆಯಾಗಿ, ಆಹಾರದ ಅಭಾವದಿಂದ ಹರಿಣಗಳ ಸಂಖ್ಯೆ ತನ್ನಷ್ಟಕ್ಕೆ ಹಿಡಿತಕ್ಕೆ ಬಂದೀತು; ಅದೇ ರೀತಿ ಹುಲಿಗಳ ಸಂಖ್ಯೆ ಹೆಚ್ಚಾದರೆ ಅವುಗಳು ಬೇಟೆಯಾಡುವ ಹರಿಣಗಳ ಸಂಖ್ಯೆ ಕಡಿಮೆಯಾಗುತ್ತ ಹೋಗಿ, ಹುಲಿಗಳಿಗೆ ಆಹಾರ ಕಡಿಮೆಯಾಗಿ, ಅವುಗಳ ಸಂಖ್ಯೆ ತನ್ನಷ್ಟಕ್ಕೆ ಹಿಡಿತಕ್ಕೆ ಬಂದೀತು. ಅಂತೂ, ಮೂರೂ ವರ್ಗಗಳ

ಸಂಖ್ಯೆ ಅವುಗಳ ಪರಸ್ಪರ ಹೊಂದಾಣಿಕೆಯಿಂದಾಗಿ ಸಮತೋಲನದಲ್ಲಿರುತ್ತವೆ. ಆದರೆ ಈ ಮೂರೂ ವರ್ಗಗಳಿಗೆ ಹೊರತಾಗಿ ಬೇರೆಯೇ ಒಂದು ಅಂಶ ಅಥವಾ ಪ್ರಭಾವ ಹುಟ್ಟಿಕೊಂಡರೆ ಈ ಸಮತೋಲನ ಶಾಶ್ವತವಾಗಿ ಬದಲಾಗಬಹುದು. ಉದಾಹರಣೆಗೆ, ಈ ಪ್ರಕೃತಿವಲಯಕ್ಕೆ ಮನುಷ್ಯರು ವಲಸೆ ಬಂದು ಅವರ ಕೃಷಿಯಿಂದಾಗಿ ಇಲ್ಲವೆ, ಅವರು ಸಾಕಿದ ಆಡುಗಳ ಮೇವಿನಿಂದಾಗಿ ಹುಲ್ಲುಗಾವಲುಗಳು ಬರಡಾದರೆ ಹರಿಣಗಳೂ, ಹುಲಿಗಳೂ ನಿರ್ಮೂಲವಾಗಿ ಹೊಸತೇ ಆದ ಸಮತೋಲನ ಸ್ಥಾಪಿತವಾದೀತು. ಪರಿಸರ ಶಾಶ್ವತವಾಗಿ ಒಂದೇ ಸಮತೋಲನದಲ್ಲಿರಬೇಕೆಂದಿಲ್ಲ.

ಪರಿಸರದ ಸಮತೋಲನವನ್ನು ಮನುಷ್ಯನೇ ಕೆಡಿಸಬೇಕೆಂದಿಲ್ಲ. ಉದಾಹರಣೆಗೆ, ಅವನೇ ಹುಟ್ಟಿಕೊಂಡಿರದ ಕಾಲದಲ್ಲಿ, –ಸಾಧಾರಣ ಎಪ್ಪತ್ತು, ಎಂಭತ್ತು ಮಿಲಿಯ ವರ್ಷಗಳ ಹಿಂದೆ, –ಪೃಥ್ವಿಯಲ್ಲಿದ್ದ ಅತಿ ದೊಡ್ಡ ಮೃಗರಾಶಿಯಾದ 'ಡೈನಾಸಾರ್'ಗಳು ಕೆಲವೇ ವರ್ಷಗಳಲ್ಲಿ ಸಂಪೂರ್ಣವಾಗಿ ನಿರ್ನಾಮವಾಗುವುದಕ್ಕೆ ಕಾರಣ ಬಾಹ್ಯಾಕಾಶದಿಂದ ಪೃಥ್ವಿಯ ಮೇಲೆ ಅತಿವೇಗದಿಂದ ಎರಗಿದ ಕಲ್ಲುಗ್ರಹ(asteroid)ವೊಂದರಿಂದಾಗಿ ಎಂಬುದು ವಿಜ್ಞಾನಿಗಳ ಊಹೆ. ಈ ಕಲ್ಲುಗ್ರಹ ಭೂಮಿಗೆರಗಿ, ಸಿಡಿದು, ಆಕಾಶವೆಲ್ಲ ಅಸಾಧ್ಯ ಧೂಳುತುಂಬಿ, ಸೂರ್ಯನ ಬೆಳಕಿನ ಅಭಾವದಿಂದ ಸಸ್ಯರಾಶಿಗಳು ನಾಶವಾಗಿ, ಅವನ್ನು ಅವಲಂಬಿಸಿದ ಡೈನಾಸಾರ್‌ಗಳೂ ನಾಶವಾದವು ಎಂಬುದು ಈ ಊಹೆಯ ವಾದ. ಅದೇ ರೀತಿ, ಪೃಥ್ವಿ ತಿರುಗುವ ಕಕ್ಷೆ ಬದಲಾದಾಗ ತಾಪಮಾನದ ಅಸಾಧಾರಣ ಬದಲಾವಣೆಯಾಗಿ ಜೀವರಾಶಿಗಳ ಮೇಲೆ ವಿಪರೀತ ಪರಿಣಾಮವಾಗುವುದಿದೆ. ಹೀಗೆ ಮನುಷ್ಯ ಜಾತಿ ಪರಿಪೂರ್ಣವಾಗಿ ಉದ್ಭವಿಸುವ ಮೊದಲೇ ಭೂಮಿಯಲ್ಲಿ ಭಾರೀ ಪ್ರಮಾಣದಲ್ಲಿ ಪರಿಸರದ ಬದಲಾವಣೆಗಳು ಆಗುತ್ತಲೇ ಇದ್ದವು. ಇತ್ತೀಚೆಗಿನ ಶತಕಗಳಲ್ಲಷ್ಟೇ ಪರಿಸರದ ಮೇಲೆ ಮನುಷ್ಯ ವರ್ಗದ ಹಸ್ತಕ್ಷೇಪ ಗಮನಾರ್ಹವಾಗಿದೆ, –ಅದರಲ್ಲೂ ಕಳೆದ ಕೆಲವು ದಶಕಗಳಲ್ಲಿ ಇದು ವಿಪರೀತವಾಗಿದೆ.

ಜನಸಂಖ್ಯೆಯ ವೃದ್ಧಿ ಮತ್ತು ಪರಿಸರ

ಸ್ಥೂಲವಾಗಿ ಹೇಳುವುದಿದ್ದರೆ, ಜನಸಂಖ್ಯೆ ಹೆಚ್ಚಾಗುತ್ತ ಹೋದಂತೆ, ಪರಿಸರದ ಮೇಲೆ ಮನುಷ್ಯ ವರ್ಗದ ಹಸ್ತಕ್ಷೇಪ ಹೆಚ್ಚುತ್ತಲೇ ಹೋಯಿತು. ಹಾಗಾಗಿ, ಪೃಥ್ವಿಯ ಪರಿಸರಗಳಲ್ಲಿ ಮನುಷ್ಯ ವರ್ಗವು ಈಗ ಎಲ್ಲಕ್ಕೂ ಮಿಗಿಲಾದ ಹೊಸ ಅಂಶ ಅಥವಾ ಪ್ರಭಾವವಾಗಿದೆ ಎನ್ನಬೇಕು. ಮೊದಲೇ ಹೇಳಿದಂತೆ, ಹೊಸತೇ ಆದ ಅಂಶ ಅಥವಾ ಪ್ರಭಾವದಿಂದಾಗಿ ಪರಿಸರದ ಸಮತೋಲನ ಬದಲಾಗುತ್ತದೆ, –ಹಾಗಾಗಿ ಮನುಷ್ಯ ವರ್ಗದ ಒಮ್ಮುಖವಾಗಿ ಸಾಗಿರುವ ಪ್ರಭಾವದಿಂದಾಗಿ ಪೃಥ್ವಿಯ ಪರಿಸರಗಳು ಹೊಸ ಸಮತೋಲನಗಳನ್ನು ಪಡೆಯುತ್ತಲೇ ಬಂದಿವೆ. ಮನುಷ್ಯ ವರ್ಗದ 'ಪ್ರಗತಿ' ಬಹಳ ಭರಾಟೆಯಿಂದ ಸಾಗುತ್ತಿರುವ ಇತ್ತೀಚಿನ ದಶಕಗಳಲ್ಲಿ ಈ ಬದಲಾವಣೆಗಳು ತ್ವರಿತವಾಗುತ್ತಿದೆಯಷ್ಟೆ.

ಪ್ರಗತಿ ಪಥದಲ್ಲಿ ಮನುಷ್ಯನ ಮೊದಲ ಹೆಜ್ಜೆಗಳನ್ನು, ಇವತ್ತಿನ ದೃಷ್ಟಿಯಲ್ಲಿ ನೋಡಿದಾಗ, ಅವು ಪರಿಸರಕ್ಕೆ ಸ್ನೇಹಪರವಾಗಿದ್ದೀತು ಎಂದು ಕಾಣುತ್ತದೆ. ಕಾಡು ಬಯಲುಗಳಲ್ಲಿ ಅಲೆದಾಡಿ ಹಣ್ಣುಗಡ್ಡೆಗಳನ್ನು ಹೆಕ್ಕಿ ತಿಂದು, ಸಣ್ಣ ಜಾತಿಯ ಮೃಗಗಳನ್ನು ಕೈಯ್ಯಲ್ಲಿ ಹಿಡಿದು ತಿಂದು,

ಜೀವನ ಸಾಗಿಸುತ್ತಿದ್ದ ಆದಿಮಾನವನು ಪ್ರಕೃತಿಯ ಸಮತೋಲನದಲ್ಲಿ ಸಂಪೂರ್ಣ ಭಾಗಿಯಾಗಿದ್ದ. ಆದರೆ ಅವನ ಕೈಗೆ ಕಲ್ಲಿನಲ್ಲಿ ಕಡೆದ ಆಯುಧ ಬರುತ್ತಲೇ ಪರಿಸರದ ಮೇಲೆ ಮನುಷ್ಯನ ಹಸ್ತಕ್ಷೇಪ ಮೊದಲಾಯಿತು ಎನ್ನಬಹುದು. ಬಿಲ್ಲು ಬಾಣ, ಈಟಿ, ಹೀಗೆಲ್ಲಾ ಹೆಚ್ಚು ಮಾರಕವಾದ ಆಯುಧಗಳನ್ನು ನಿರ್ಮಿಸಿ ಬಳಕೆಗೆ ತಂದ ಮನುಷ್ಯ ಪರಿಸರದ ಸಮತೋಲನಕ್ಕೆ ಧಕ್ಕೆ ತರಲು ಶುರುಮಾಡಿಯಾಯಿತು. ಸಾಧಾರಣ ಮೂವತ್ತು ಸಾವಿರ ವರ್ಷಗಳ ಹಿಂದೆ ನಶಿಸಿ ಹೋದ, ಆನೆಗಳ ಜಾತಿಗೆ ಸೇರಿದ, ಮೇಮತ್(Mammoth) ಎಂಬ ದಟ್ಟ ಕೂದಲಿನ, ದೀರ್ಘ ದಾಡೆಗಳ ಪ್ರಾಣಿವರ್ಗ ಆದಿಮಾನವನ ನಿರಂಕುಶ ಬೇಟೆಗಾರಿಕೆಗೆ ಒಳಗಾಗಿ ನಶಿಸಿತೇ ಎಂಬ ಸಂಶಯ ವಿಜ್ಞಾನಿಗಳಿಗಿದೆ.

ಜನಸಂಖ್ಯೆ ಹೆಚ್ಚುತ್ತಲೇ ಹೊಸ ಪ್ರದೇಶಗಳಿಗೆ ಮಾನವ ವರ್ಗವು ವಲಸೆ ಹೋಗಿದ್ದಲ್ಲದೆ, ಕೃಷಿ ವಿಧಾನವನ್ನು ಕಂಡುಕೊಂಡು, ಕ್ರಮೇಣ ಒಂದೆಡೆಯಲ್ಲೇ ನೆಲೆಸುವ ಕ್ರಮವನ್ನು ಮಾಡಿಕೊಂಡಿತು. ಕೃಷಿಗಾರಿಕೆಯನ್ನು ಕೈಕೊಂಡ ಮನುಷ್ಯ ಪರಿಸರವನ್ನು ತನಗೆ ಬೇಕಾದಂತೆ ಬದಲಾಯಿಸತೊಡಗಿದ. ಜೋಳ, ಗೋಧಿ, ಭತ್ತ ಇತ್ಯಾದಿ ಸಸ್ಯ ವರ್ಗಗಳಿಗೆ ಹೀಗಾಗಿ ಭಡ್ತಿ ಸಿಕ್ಕಿತು. ಮಿಲಿಯಗಟ್ಟಲೆ ಎಕ್ರೆಗಳಲ್ಲಿ ಮೊದಲಿದ್ದ ಕಾಡು, ಹುಲ್ಲು, ಪೊದೆಗಳು ಇಲ್ಲವಾದುವು. ಆದರೆ ಈ ಎಲ್ಲಾ ಬದಲಾವಣೆಗಳ ವೇಗವು ಮಿತವಾಗಿಯೇ ಇದ್ದು, ಒಂದೊಂದು ಮಟ್ಟದಲ್ಲೂ ಪ್ರಕೃತಿಗೆ ಹೊಸ ಸಮತೋಲನವನ್ನು ಹೊಂದುವ ಸಮಯ ಸಿಕ್ಕಿತ್ತು. ಆದರೂ ಅವೆಷ್ಟೋ ಜೀವವರ್ಗಗಳು, ಪರಿಸರಗಳು ಈ ಮಿತವಾದ ಬದಲಾವಣೆಗೂ ಬಲಿಯಾಗಿದ್ದಿದೆ. ಉದಾಹರಣೆಗೆ–

ಕ್ರಿಸ್ತ ಪೂರ್ವದಲ್ಲೆ, ಉತ್ತರ ಭಾರತದ ಗಂಗಾ ತಪ್ಪಲಿನಲ್ಲಿದ್ದ ದಟ್ಟವಾದ ಅರಣ್ಯ ಸಂಪತ್ತನ್ನು ಆಗಿನ ಆಡಳಿತ ವರ್ಗವು ಮರದ ಕೋಟೆ, ಅರಮನೆ ಇತ್ಯಾದಿಗಳನ್ನು ಭವ್ಯ ರೀತಿಯಲ್ಲಿ ಕಟ್ಟುವಲ್ಲಿ ಅತಿಯಾಗಿ ವ್ಯಯಿಸಿದ್ದರಿಂದಾಗಿ (ಆಗಿನ್ನೂ ಕಲ್ಲಿನಿಂದ ಕಟ್ಟುವ ಕ್ರಮ ಶುರುವಾಗಿದ್ದಿಲ್ಲ) ಪರಿಸರ ತನ್ನ ಸಮತೋಲನವನ್ನು ಕಳೆದುಕೊಂಡು ಕಾನನಗಳು ಬಟ್ಟ ಬಯಲುಗಳಾದವು ಎನ್ನುತ್ತಾರೆ.

ವಸಾಹತುಗಳು ಹಬ್ಬುತ್ತಿದ್ದ ಕಾಲದಲ್ಲಿ, ಮಡಗಾಸ್ಕರ್ ದ್ವೀಪದಲ್ಲಿ ಜನವಸತಿ ಶುರುವಾದ ಕೆಲವೇ ವರ್ಷಗಳಲ್ಲಿ ಅಲ್ಲಿನ ಅದೆಷ್ಟೋ ಅಸದೃಶ, ಬೇರೆಲ್ಲೂ ಕಾಣದ ಜೀವ ವರ್ಗಗಳು ನಿರ್ನಾಮವಾದವು. ಸಂತತಿ ನಿರ್ನಾಮಕ್ಕೆ ರೂಪಕವಾದ ಡೋಡೋ ಹಕ್ಕಿ ಇದರಲ್ಲೊಂದು.

ಮೇಲಿನ ಉದಾಹರಣೆಗಳಿಂದ ವಿದಿತವಾಗುವ ಸಂಗತಿ ಎಂದರೆ ಪ್ರಕೃತಿಯ ಸಮತೋಲನವನ್ನು ಬದಲಿಸುವ ಮಾನವ ಪ್ರವೃತ್ತಿ ಇವತ್ತು ನಿನ್ನೆಯದಲ್ಲ. ತನ್ನ ಸಂಖ್ಯೆಯನ್ನು ಅನವರತವಾಗಿ ಹೆಚ್ಚಿಸುತ್ತಾ ಹೋದ ಮಾನವನಿಗೆ ಬೇರೆ ದಾರಿ ಇರಲಿಲ್ಲ,– ಇವತ್ತಿಗೂ ಇಲ್ಲ.

ಇತ್ತೀಚಿನ ದಶಕಗಳಲ್ಲಿ ಪ್ರಕೃತಿಯ ಮೇಲೆ ಮಾನವನ ಹಸ್ತಕ್ಷೇಪ ಹದ ಮೀರಿ ಹೋಗುವುದಕ್ಕೆ ಮುಖ್ಯ ಕಾರಣಗಳಲ್ಲಿ ಜನಸಂಖ್ಯೆ ವಿಪರೀತವಾಗಿ ಬೆಳೆಯುವುದು ಒಂದಾದರೆ,– ಮಾನವನು ಅರಸುವ ಮತ್ತು ನಿರೀಕ್ಷಿಸುವ ಸೌಲಭ್ಯಗಳು ಹೆಚ್ಚುತ್ತಾ ಹೋಗಿರುವುದು ಇನ್ನೊಂದು ಕಾರಣ.

ಮೊದಲಿನ ಕಾರಣವನ್ನು ನೋಡೋಣ. ಸ್ಥೂಲವಾಗಿ ಹೇಳುವುದಾದರೆ, ಇಪ್ಪತ್ತನೆಯ ಶತಮಾನದ ಮೊದಲ ಕೆಲವು ದಶಕಗಳಲ್ಲಿ ವೈದ್ಯಕೀಯ ವಿಧಾನಗಳಲ್ಲಾದ ಗಮನೀಯ

ಪ್ರಗತಿಯಿಂದಾಗಿ ಮನುಷ್ಯನ ಹುಟ್ಟು-ಸಾವುಗಳ ಪ್ರಮಾಣದಲ್ಲಿ ದೊಡ್ಡ ಬದಲಾವಣೆ ಯಾಯಿತು. ಜನನ ಸಂಖ್ಯೆ ಅಷ್ಟೊಂದು ಹೆಚ್ಚಾಗದಿದ್ದರೂ, ಮರಣ ಸಂಖ್ಯೆಯಲ್ಲಿ ಭಾರೀ ಕಡಿತವಾಯಿತು. ಮುಖ್ಯತಃ ಮಾನವನನ್ನು ಕೋಟ್ಯಂತರ ವರ್ಷಗಳಿಂದ ಕಾಡುತ್ತಿದ್ದ ಹಲವಾರು ಬೇಕ್ಟೀರಿಯಾಗಳಿಗೆ – ಸಲ್ಫಾ ಮದ್ದುಗಳಿಂದಾಗಿ, ಏಂಟಿ ಬಯೋಟಿಕ್ಕುಗಳಿಂದಾಗಿ, ಮತ್ತು ವೈರಸ್‌ಗಳಿಗೆ – ದಾಕು ಹಾಕುವುದರಿಂದಾಗಿ ಮೊದಲ ಬಾರಿಗೆ ಕಡಿವಾಣ ಬಿತ್ತು. ಹತ್ತು ಮಕ್ಕಳು ಹುಟ್ಟಿದಲ್ಲಿ ಒಂದೆರಡನ್ನು 'ದೇವರು ಉಳಿಸಿಕೊಟ್ಟ'ದ್ದಿದ್ದರೆ ಹಟಾತ್ತಾಗಿ, ಹತ್ತು ಮಕ್ಕಳ ಆರೋಗ್ಯವಂತ ಸಂಸಾರಗಳು ಎಲ್ಲೆಲ್ಲೂ ಕಂಡುಬಂದವು.

ಮಾನವನ ಪಕ್ಷವನ್ನು ನಾವು ಹಿಡಿಯುವುದಲ್ಲವಾದರೆ,– ಇದು ಮಾನವನು ಪರಿಸರದ ಸಮತೋಲನದಲ್ಲಿ ಮಾಡಿದ ಅತಿ ದೊಡ್ಡ ಹಸ್ತಕ್ಷೇಪ ಎನ್ನಲೇಬೇಕು. ಮನುಷ್ಯನ ದೇಹವನ್ನೇ ತಮ್ಮ ಜೀವನಕ್ಷೇತ್ರವಾಗಿ ಮಾಡಿಕೊಂಡ ಈ ಬಡಪಾಯಿ ಬೇಕ್ಟೀರಿಯಾ ಮತ್ತು ವೈರಸ್‌ಗಳನ್ನು ಸಾಯಿಸಿ ಇಲ್ಲವೇ ಗಡಿಪಾರು ಮಾಡಿ ಜೀವ ಸಮುದಾಯದಲ್ಲಿ ಮಾನವನು ತನ್ನ ಸಂಖ್ಯೆಯನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿಕೊಂಡ. (ಹೀಗೆ ನಿರ್ನಾಮಗೊಂಡ ಜೀವಿಗಳಲ್ಲಿ ಮೈಲಿ [smallpox] ರೋಗವನ್ನು ಹಬ್ಬಿಸುತ್ತಿದ್ದ ವೈರಸ್ ಒಂದಾಗಿದೆ.) ಇನ್ನೊಂದು ರೀತಿಯಲ್ಲಿ ನೋಡಿದರೆ, ಅದುವರೆಗೆ ಮಾನವನ ಸಂಖ್ಯೆಯನ್ನು ಸಾಕಷ್ಟು ನಿಯಂತ್ರಣದಲ್ಲಿಟ್ಟು ಪರಿಸರ ಸಮತೋಲನದಲ್ಲಿ ಭಾಗವಹಿಸಿದ್ದ ಈ ಜೀವಿಗಳಿಗೆ ಇದೊಂದು ಪರಾಜಯ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಇತ್ತೀಚಿನ ದಶಕಗಳ ಚರಿತ್ರೆಯನ್ನು ನೋಡಿದರೆ ಮೇಲೆ ಹೇಳಿದ ಮಾತುಗಳು ವಿದಿತವಾಗುತ್ತವೆ. ಸಾಧಾರಣ ಇಪ್ಪತ್ತನೆಯ ಶತಮಾನದ ಮೊದಲ ಮೂರು ದಶಕಗಳ ವರೆಗೆ ಜನನ-ಮರಣಗಳ ಪ್ರಮಾಣ ತಕ್ಕ ಮಟ್ಟಿಗೆ ಸಮತೋಲನದಲ್ಲಿದ್ದು, ಜನಸಂಖ್ಯೆಯ ಹೆಚ್ಚುವಿಕೆ ಮಿತಿಯೊಳಗೆ ಇತ್ತು. ಹೆರಿಗೆಯಲ್ಲಿ ಸಾಯುವ ತಾಯಂದಿರು, ಹುಟ್ಟಿ ಕೆಲವೇ ಸಮಯದೊಳಗೆ ಅಳಿದು ಹೋಗುವ ಮಕ್ಕಳು, ಮಧ್ಯವಯಸ್ಸು ಮುಟ್ಟುವ ಮೊದಲೇ ಟೈಫಾಯಿಡ್, ಕ್ಷಯ, ಮಲೇರಿಯಾ ಮುಂತಾದ ಖಾಯಿಲೆಗಳಿಗೆ ತುತ್ತಾಗುವ ಜನತೆ,– ಇನ್ನೂ ನೆನಪಿಗೆ ಎಟಕುವ ಸಂಗತಿ.

ನಲ್ವತ್ತರ ದಶಕದಲ್ಲಿ ಅಭಿವೃದ್ಧಿ ಹೊಂದಲು ಶುರುವಾದ ವೈದ್ಯಕೀಯ ಸವಲತ್ತುಗಳು ಮತ್ತು ವೈದ್ಯ ವಿಜ್ಞಾನ ನೀಡಿದ ಏಂಟಿ ಬಟೋಟಿಕ್ಕುಗಳು, ದಾಕು ಹಾಕುವಿಕೆ ಮತ್ತು ಇತರ ಹೊಸ ಔಷಧಗಳು ಮತ್ತು ಚಿಕಿತ್ಸಾ ವಿಧಾನಗಳಿಂದಾಗಿ ವಾರ್ಷಿಕ ಮರಣ ಸಂಖ್ಯೆ ತೀವ್ರವಾಗಿ ಕೆಳಗಿಳಿಯುತ್ತಲೇ, ಜನಸಂಖ್ಯೆ ಅಷ್ಟೇ ತೀವ್ರವಾಗಿ ಮೇಲೇರುತ್ತ ಹೋಯಿತು.

ಹೆಚ್ಚುತ್ತಿದ್ದ ಜನಸಂಖ್ಯೆಗೆ ಹೆಚ್ಚುವರಿ ಆಹಾರ, ವಸತಿ, ಶಾಲೆಗಳು, ದಾರಿಗಳು, ಉರಿಸಲು ಕಟ್ಟಿಗೆ ಇತ್ಯಾದಿಗಳನ್ನು ಒದಗಿಸುವಲ್ಲಿ ಜಿಲ್ಲೆಯ ಕಾಡುಗಳು, ಹಾಡಿಗಳು, ಬಯಲುಗಳು,– ಅದರಲ್ಲಿನ ವನ್ಯಮೃಗಗಳು, ಪಕ್ಷಿಗಳು ಎಲ್ಲವೂ ಬಲಿಯಾಗತೊಡಗಿದವು. ಐವತ್ತು ವರ್ಷಗಳ ಕೆಳಗೆ, ದಟ್ಟವಾದ ಕಾಡುಗಳಲ್ಲಿ ಹುಲಿಗಳಿದ್ದು, ಅವುಗಳ ಬೇಟೆಯೂ ನಮ್ಮ ಜಿಲ್ಲೆಯಲ್ಲಿ ಆಗುತ್ತಿತ್ತೆಂದರೆ ಈಗ ಆಶ್ಚರ್ಯವೆನಿಸುತ್ತದೆ. ಈ ಬದಲಾವಣೆಗಳು ಆಗುತ್ತಿದ್ದಾಗ ನಮ್ಮ ಜಿಲ್ಲೆಯಲ್ಲಿ ಮೊದಲಿನಿಂದಲೇ ಇದ್ದ ಹಂಚಿನ ಕಾರ್ಖಾನೆಗಳನ್ನು ಬಿಟ್ಟರೆ ಯಾವ ರೀತಿಯ

ದೊಡ್ಡ ಉದ್ಯಮಗಳಾಗಲೀ, ವಿದ್ಯುತ್ ಸ್ಥಾವರಗಳಾಗಲೀ ಬಂದದ್ದಿಲ್ಲ. ಆದರೆ ಹೀಗೆ ಜನಸಂಖ್ಯೆಯ ವೃದ್ಧಿಯಿಂದಲೇ ಆದ ಪರಿಸರದ ಬದಲಾವಣೆಗಳನ್ನು ಆಧುನಿಕತೆಯ ಪರಿಣಾಮವೆಂದೋ, ಔದ್ಯೋಗೀಕರಣದ ಪ್ರಭಾವವೆಂದೋ ಹೇಳಲಾಗುತ್ತದೆ.

ವಿಪರೀತವಾಗಿ ವೃದ್ಧಿಸುತ್ತಿದ್ದ ನಮ್ಮ ಜಿಲ್ಲೆಯ ಜನಸಂಖ್ಯೆ ನಮ್ಮ ಪರಿಸರಕ್ಕೆ ಇನ್ನೂ ದೊಡ್ಡ ಪ್ರಮಾಣದಲ್ಲಿ ಹಾನಿ ಮಾಡಿರದಿದ್ದರೆ ಅದಕ್ಕೆ ಮುಖ್ಯ ಕಾರಣ ಜಿಲ್ಲೆಯ ಜನ ಭಾರೀ ಸಂಖ್ಯೆಗಳಲ್ಲಿ ಹೊರಪ್ರದೇಶಗಳಿಗೆ ವಲಸೆ ಹೋದದ್ದು. ಜಿಲ್ಲೆಯ ಜನರ ಸ್ವಾಭಾವಿಕವಾದ ಸಾಹಸಪ್ರವೃತ್ತಿ ಮತ್ತು ಅವರಿಗೆ ದೊರೆತ ಶಿಕ್ಷಣ ಇದಕ್ಕೆ ಸಹಾಯಕಾರಿಯಾಗಿ ಇದ್ದವು. ಮೂಲತಃ ನಮ್ಮ ಜಿಲ್ಲೆಯವರಾಗಿದ್ದು ಈಗ ಹೊರ ಪ್ರದೇಶಗಳಲ್ಲಿ ವಾಸಿಸುವವರ ಸಂಖ್ಯೆ, ಜಿಲ್ಲೆಯಲ್ಲಿ ಪ್ರಸ್ತುತ ವಾಸಿಸುವವರ ಸಂಖ್ಯೆಗಿಂತ ಹೆಚ್ಚಾಗಿದ್ದರೆ ಏನೂ ಆಶ್ಚರ್ಯವಿಲ್ಲ. ಆದರೆ ಹಾಗೆ ಹೊರಗೆ ಹೋಗಿ ಬೆಳೆದ ಜನರು ಇವತ್ತಿಗೂ ಜಿಲ್ಲೆಯಲ್ಲೇ ಉಳಿದಿದ್ದರೆ, ಜಿಲ್ಲೆಯ ಜನನಿಬಿಡತೆ ಎಷ್ಟು ಇರುತ್ತಿತ್ತು ಮತ್ತು ನಮ್ಮ ಅಳಿದುಳಿದ ಪರಿಸರದ ಮೇಲೆ ಇದರ ಪರಿಣಾಮ ಏನಾಗುತ್ತಿತ್ತು ಎಂಬುದನ್ನು ಊಹಿಸಿದರೆ ಭಯವಾಗುತ್ತದೆ.

ಜನಸಂಖ್ಯೆ ವೃದ್ಧಿಯಾಗಿದ್ದಲ್ಲದೆ, ಜನರ ಆಶಯಗಳು ಕಳೆದ ದಶಕಗಳಿಗಿಂತ ಹೆಚ್ಚುತ್ತ ಹೋಗಿವೆ. 'ಚಿಮಿಣಿ' ದೀಪವಿದ್ದಲ್ಲಿ ವಿದ್ಯುತ್ ದೀಪ, ಕಾಲ್ನಡಿಗೆಯಲ್ಲಿ ಇಲ್ಲವೆ ಎತ್ತಿನ ಗಾಡಿಯಲ್ಲಿ ಹೋಗುವ ಬದಲು ಬಸ್ಸು, ಕಾರು, ಆಟೋರಿಕ್ಷಾ ಇತ್ಯಾದಿ; ಹುಲ್ಲಿನ ಮಾಡಿನ ಬದಲು ಹಂಚು, ಆಮೇಲೆ ಕಾಂಕ್ರೀಟು,– ಹೀಗೆಲ್ಲ ಹೆಚ್ಚಿದ ಆಶಯಗಳು ಪರಿಸರದ ಮೇಲೆ ವೃದ್ಧಿಸುತ್ತಿರುವ ಜನಸಂಖ್ಯೆ ಬೀರುವ ಪ್ರಭಾವವನ್ನು ಇನ್ನೂ ತೀವ್ರಗೊಳಿಸಿದ್ದಾವೆ.

ಯಾವುದೇ ರೀತಿಯ ಉದ್ಯಮ ಅಥವಾ ಸವಲತ್ತುಗಳ ಹೆಚ್ಚುವರಿ ಬೆಳವಣಿಗೆ ಇಲ್ಲದೆ, ಬರೇ ವೃದ್ಧಿಸುತ್ತಿರುವ ಜನಸಂಖ್ಯೆ ಮತ್ತು ಜನರ ಅಭಿವೃದ್ಧಿ ಹೊಂದಿದ ಜೀವನಶೈಲಿ ಇವೆರಡು ಪರಿಸರದ ಸಮತೋಲನವನ್ನು ಕೆಡಿಸುವಲ್ಲಿ ಹಾಗೂ ಪರಿಸರ ಮಾಲಿನ್ಯವನ್ನು ಹೆಚ್ಚಿಸುವಲ್ಲಿ ಹೇಗೆ ಕಾರಣವಾಗುತ್ತದೆ ಎಂಬುದಕ್ಕೆ ಕೆಳಗೆ ಕಾಣಿಸಿದ ಉದಾಹರಣೆಗಳಿವೆ :

- ಮೊದಲೇ ಹೇಳಿದಂತೆ, ಹೆಚ್ಚುತ್ತಿರುವ ಜನಸಂಖ್ಯೆಗೆ ಬೇಕಾದ ಜನವಸತಿಗಳಿಗೆ, ಆಹಾರ ಉತ್ಪಾದನೆಗೆ, ರಸ್ತೆಗಳಿಗೆ, ಇತ್ಯಾದಿಗಳಿಗೆಲ್ಲ ಕಾಡುಗಳು, ಬಯಲುಗಳು, ಜಲಾಶಯಗಳು ತುತ್ತಾಗುತ್ತವೆ.
- ಹೆಚ್ಚುತ್ತಿರುವ ಜನಸಂಖ್ಯೆಗೆ ಹೆಚ್ಚು ಹೆಚ್ಚು ಮೀನು ವ್ಯವಸಾಯ ಅಗತ್ಯವಾಗಿ ಸಮುದ್ರದ ಜೀವರಾಶಿಗಳು ಬರಡಾಗುವುದಲ್ಲದೆ, ಅವುಗಳೊಳಗಿನ ಸಮತೋಲನ ಕೆಡುತ್ತದೆ.
- ಸಾರಿಗೆಯಲ್ಲಿ ವ್ಯಯವಾಗುವ ಪೆಟ್ರೋಲ್, ಡೀಸಲ್ ಇತ್ಯಾದಿಗಳ ಜ್ವಲನದಿಂದಾಗಿ ಕಾರ್ಬನ್ ಡಯಾಕ್ಸೈಡ್ ಮತ್ತು ಮೊನೋಕ್ಸೈಡ್, ಗಂಧಕದ ಕಾಂಪೌಂಡುಗಳು, ಅಂಗಾರದ ಧೂಳು ಇತ್ಯಾದಿ ಉಂಟಾಗಿ, ಪರಿಸರಕ್ಕೆ ಬಾಧೆ ಬರುತ್ತದೆ.
- ಹೆಚ್ಚುತ್ತಿರುವ ಜನಸಂಖ್ಯೆಗೆ ನೀರಿನ ಬೇಡಿಕೆ ಅತಿಯಾಗಿ ನೆಲದ ಕೆಳಗಿನ ಜಲರಾಶಿಯ ಪ್ರಮಾಣ ಕಡಿಮೆಯಾಗುತ್ತ ಹೋಗಿ ಬಾವಿ ಕೆರೆಗಳಲ್ಲಿ ನೀರು ಬತ್ತಿ ಹೋಗುತ್ತದೆ.
- ಬೆಳೆಯುತ್ತಿರುವ ಜನಸಂಖ್ಯೆಗೆ ಹೆಚ್ಚು ಆಹಾರ ಬೇಕು. ಆದರೆ ಹೆಚ್ಚಿನ ಕೃಷಿಗೆ ಬೇಕಾದ ಜಾಗ ಅಷ್ಟೇ ಪ್ರಮಾಣದಲ್ಲಿ ಹೆಚ್ಚಾಗಲಾರದು (ಅದಷ್ಟೋ ಕಾಡುಗಳನ್ನು ನೆಲಸಮ

ಮಾಡಿಯೂ). ಹಾಗಾಗಿ ಇದ್ದ ಜಾಗದಲ್ಲಿ ಹೆಚ್ಚುವರಿ ಕೃಷಿ ಮಾಡಲಿಕ್ಕೆ ಕೃತಕ ಗೊಬ್ಬರ, ಕೀಟನಾಶಕ ಮುಂತಾದ ಪರಿಸರಕ್ಕೆ ಹಾನಿಕರವಾದ ಸಾಧನೆಗಳನ್ನು ಬಳಸಬೇಕು.

ಜನಸಂಖ್ಯೆಯ ನಿಯಂತ್ರಣ ಮತ್ತು ವಿದ್ಯಾವಂತಿಕೆ – ಇವುಗಳ ಅಗತ್ಯತೆ

ಈ ರೀತಿ ಪರಿಸರಕ್ಕೂ ಹೆಚ್ಚುತ್ತಿರುವ ಜನಸಂಖ್ಯೆಗೂ ವಿಷಮ ನಂಟು. ಹಾಗಿರುವಾಗ, ಪರಿಸರ ಪಾಲನೆಗೆ ಮುಖ್ಯವಾಗಿ, ಮೂಲಭೂತವಾಗಿ, ಜನಸಂಖ್ಯೆಯ ನಿಯಂತ್ರಣ ಅತ್ಯಗತ್ಯ.

ಒತ್ತಡವಿಲ್ಲದೆ ಜನಸಂಖ್ಯೆಯ ನಿಯಂತ್ರಣ ಆಗಬೇಕಾದರೆ ಜನರು ವಿದ್ಯಾವಂತರಾಗುವುದು ಅಗತ್ಯ ಎಂಬುದನ್ನು ಸಮಾಜವು ಅನುಭವದಿಂದ ಕಂಡುಕೊಂಡ ಸಂಗತಿ. ಜನಸಂಖ್ಯೆಯ ನಿಯಂತ್ರಣದ ಹೊರತಾಗಿಯೂ ವಿದ್ಯೆಯು ಅದೆಷ್ಟೋ ಕಾರಣಗಳಿಗೆ ಬೇಕಾದದ್ದು ಎಂಬುದು ಪ್ರತ್ಯೇಕವಾದ ಸಂಗತಿ. ಆದರೆ ಪ್ರಸ್ತುತವಾಗಿ, ಜನಸಂಖ್ಯೆಯ ನಿಯಂತ್ರಣದ ಮೂಲಕ ವಾಗಿಯೂ, ಹಾಗೂ ನೇರವಾಗಿಯೂ, ವಿದ್ಯೆಯು ಪರಿಸರದ ಪಾಲನೆಗೆ ಹೇಗೆ ನೆರವಾಗಬಹು ದೆಂಬುದನ್ನು ಸುಲಭವಾಗಿಯೇ ಕಾಣಬಹುದು.

- ವಿದ್ಯಾವಂತರು ಪರಿವಾರ ನಿಯಂತ್ರಣಕ್ಕೆ ಹೆಚ್ಚು ಮಹತ್ವ ಕೊಡುತ್ತಾರೆ ಎಂಬುದು ಗೊತ್ತಿದ್ದ ಸಂಗತಿ.
- ವಿದ್ಯಾವಂತರು ಹೆಚ್ಚಾದಂತೆ ಸಮಾಜದ ಆರ್ಥಿಕ ಸಂಪತ್ತು ಹೆಚ್ಚುತ್ತದೆಂಬುದು ಎಲ್ಲಾ ಸ್ಥಿತಿವಂತ ದೇಶಗಳ ಉದಾಹರಣೆಗಳಿಂದ ಕಂಡುಕೊಳ್ಳಬಹುದು.
- ಹೆಚ್ಚಿನ ಸಂಪತ್ತಿನಿಂದಲೂ, ವಿದ್ಯೆಯ ಮೂಲಕ ಉಂಟಾಗುವ ಪರಿಸರ ಪಾಲನೆಯ ಅಗತ್ಯತೆಯ ಅರಿವಿನಿಂದಲೂ, ಅಂಥ ಸಮಾಜವು ಪರಿಸರವನ್ನು ಕಾಪಾಡುವ ತಕ್ಕ ಉಪಾಯ ಗಳನ್ನು ಕೈಗೊಳ್ಳಬಹುದು.

ಈ ದಿಕ್ಕಿನಲ್ಲಿ ಕೆಲವು ಉದಾಹರಣೆಗಳು :

- ಹೆಚ್ಚು ಮೌಲ್ಯದ ಅನಿಲ ರೂಪದ ಇಂಧನ (ಎಲ್.ಪಿ. ಗ್ಯಾಸ್, ನೇಚುರಲ್ ಗ್ಯಾಸ್)ಗಳನ್ನು ಉಪಯೋಗಿಸಿ ನಮ್ಮ ವನಸಂಪತ್ತನ್ನು ನಿರ್ಮೂಲಗೊಳಿಸುತ್ತಿರುವ ಸೌದೆ ಉಪಯೋಗ ವನ್ನು ನಿಲ್ಲಿಸಬಹುದು.
- ನಮ್ಮ ದಕ್ಷಿಣ ಕನ್ನಡದಲ್ಲಿ ಹಂಚಿನ ಕಾರ್ಖಾನೆಗಳು ಇವತ್ತಿಗೂ ದಶಕಗಳ ಮೊದಲಿನ ಅಭ್ಯಾಸದಂತೆ ಅಗಾಧ ಪ್ರಮಾಣದಲ್ಲಿ ಅಗ್ಗವಾಗಿ ದೊರಕುವ ಸೌದೆಯನ್ನು ಉರಿಸುತ್ತಿವೆ. ಅದರ ಬದಲು ಹೆಚ್ಚು ಮೌಲ್ಯದ ಇಂಧನ ಅನಿಲ ಅಥವಾ ಇಂಧನ ಎಣ್ಣೆ(ಫರ್ನೇಸ್ ಆಯಿಲ್) ಯನ್ನು ಹಂಚು ಬೇಯಿಸಲಿಕ್ಕೆ ಉಪಯೋಗಿಸಿದರೆ ಕಾಡುಗಳಿಗೆ ಬರುತ್ತಿರುವ ಕುತ್ತನ್ನು ಕಡಿಮೆ ಮಾಡಬಹುದು. ಅದೇ ಸಮಯದಲ್ಲಿ, ಆಧುನಿಕ ಒಲೆಗಳನ್ನು ಬಳಸಿ ಹಂಚಿನ ಕ್ರಯ ಹೆಚ್ಚಾಗದಂತೆಯೂ ನೋಡಿಕೊಳ್ಳಬಹುದು. ಆದರೆ ಆಧುನಿಕ ಉಪಕರಣಗಳನ್ನು ಹಾಕಿಸಲು ಬಂಡವಾಳ ಹೆಚ್ಚು ಬೇಕಾದೀತು. ಹೆಚ್ಚು ಸ್ಥಿತಿವಂತ ಮತ್ತು ಅರಿವು ಉಳ್ಳ ಸಮಾಜ ಇದಕ್ಕೆ ಹಿಂಜರಿಯಲಾರದು. (ಪ್ರಾಯಶಃ ಕುದುರೆಮುಖ ಸಂಸ್ಥೆ ತನ್ನ ಗಣಿಯನ್ನು ಶುರು ಮಾಡಿದಾಗ ಒಂದು ಬಾರಿ ಸವರಿದಷ್ಟು ಮರಗಳನ್ನು ನಮ್ಮ ಹಂಚಿನ ಕಾರ್ಖಾನೆಗಳು ಪ್ರತಿವರ್ಷ ಬಳಸುತ್ತಾ ಇರಬಹುದು.– ಇದು ಅಧ್ಯಯನ ಯೋಗ್ಯ.)

ಅದೆಷ್ಟೋ ಉದ್ಯಮಗಳಲ್ಲಿ, ಸ್ಥಾವರಗಳಲ್ಲಿ ಉಂಟಾಗುವ ಪರಿಸರ ಮಾಲಿನ್ಯಕ್ಕೆ ಕಾರಣವಾದ ಪದಾರ್ಥಗಳನ್ನು ಅಥವಾ ದ್ರವ್ಯಗಳನ್ನು ತಕ್ಕುದಾದ ಉಪಾಯಗಳಿಂದ ಕಡಿಮೆಯಾಗಿಸಬಹುದು ಅಥವಾ ಇಲ್ಲವಾಗಿಸಬಹುದು. ಆದರೆ ಇಂತಹ ಉಪಾಯಗಳಿಗೆ ಹೆಚ್ಚು ಮೌಲ್ಯದ ಉಪಕರಣಗಳನ್ನು ಮತ್ತು ಆಧುನಿಕ ತಾಂತ್ರಿಕತೆಯನ್ನು ಬಳಸಬೇಕಾಗುತ್ತದೆ. ಇವೆಲ್ಲಕ್ಕೂ ಹೆಚ್ಚು, ಬಂಡವಾಳ ಮತ್ತು ಹಣ ವ್ಯಯವಾಗುವುದರಲ್ಲಿ ಸಂಶಯವಿಲ್ಲ. ಸ್ಥಿತಿವಂತ ಹಾಗೂ ಅರಿವು ಉಳ್ಳ ಸಮಾಜ ಇದಕ್ಕೆ ಹಿಂಜರಿಯಲಾರದು. ಉದಾಹರಣೆಗೆ, ಉಕ್ಕಿನ ಸ್ಥಾವರಗಳಲ್ಲಿ ಉಕ್ಕಿನ ತಗಡನ್ನು ಸ್ವಚ್ಛಗೊಳಿಸಲಿಕ್ಕೆ (pickling) ಆಮ್ಲ(acid)ಗಳನ್ನು ಬಳಸಲಾಗುತ್ತದೆ. ಇದರಿಂದ ಉತ್ಪತ್ತಿಯಾಗುವ ಮಲಿನ ಆಮ್ಲವನ್ನು ನಮ್ಮ ದೇಶದಲ್ಲಿ ಬರೇ ಕಣ್ಣುಕಟ್ಟಿನ ರೀತಿಯಲ್ಲಿ ನಿಷ್ಪರಿಣಾಮವಾಗಿಸಿ (neutralise), ಹೊಳೆಗಳಲ್ಲಿ, ತೊರೆಗಳಲ್ಲಿ ಬಿಟ್ಟುಬಿಡುತ್ತಾರೆ. ಆದರೆ ಆಧುನಿಕ ಉಪಾಯಗಳಿಂದ ಮತ್ತು ಉಪಕರಣಗಳಿಂದ ಇಂಥ ಮಲಿನ ಆಮ್ಲದಿಂದ ನೂರಕ್ಕೆ ನೂರೆಂಬಷ್ಟು ಶುದ್ಧ ಆಮ್ಲವನ್ನು ಪುನರುತ್ಪತ್ತಿ ಮಾಡಬಹುದು. ಮಾತ್ರ, ಅಂಥ ಉಪಕರಣ ಅಥವಾ ಉಪಸ್ಥಾವರಗಳನ್ನು ಸ್ಥಾಪಿಸಲಿಕ್ಕೆ ಮತ್ತು ನಡೆಸಲಿಕ್ಕೆ ಸಾಕಷ್ಟು ಹಣ ವ್ಯಯ ಮಾಡಬೇಕಾಗುತ್ತದೆ. ಸ್ಥಾಪನೆಯಾದ ಮೇಲೆ ಆಮ್ಲದ ಪುನರುತ್ಪತ್ತಿಯಿಂದಾಗಿ ಮುಂದೆ ಸಾಕಷ್ಟು ಹಣ ಉಳಿತಾಯವೂ ಆಗುತ್ತದೆ. ವಿದ್ಯಾವಂತ ಹಾಗೂ ಸ್ಥಿತಿವಂತ ದೇಶಗಳಲ್ಲಿ ಇದಕ್ಕೆ ಬೇಕಾದ ಬಂಡವಾಳವೂ ಇದೆ, ಪರಿಸರ ರಕ್ಷಣೆಯ ಅರಿವೂ ಇದೆ.

ಬಸ್ಸು, ಲಾರಿ ಇತ್ಯಾದಿ ವಾಹನಗಳಿಗೂ, ಚಿಕ್ಕ ಪ್ರಮಾಣದ (ಆದರೆ ಅಪಾರ ಸಂಖ್ಯೆಯಲ್ಲಿರುವ) ವಿದ್ಯುತ್‌ಜನಕ(ಡೀಸಲ್ ಜನರೇಟರ್)ಗಳಲ್ಲೂ ಇಂಧನವಾಗಿ ಉಪಯೋಗಿಸುವ ಡೀಸಲ್‌ನಲ್ಲಿ ಗಂಧಕದ ಪ್ರಮಾಣ ಸ್ವಾಭಾವಿಕವಾಗಿ ಅಧಿಕ. ಇದರಿಂದ ಹೆಚ್ಚಿನ ಪ್ರಮಾಣದ ಪರಿಸರ ಮಾಲಿನ್ಯ ಉಂಟಾಗುತ್ತದೆ. ಇದನ್ನು ತಡೆಗಟ್ಟಲಿಕ್ಕೆ ಆಧುನಿಕ ತಂತ್ರಗಳು ಉಪಸ್ಥಾವರಗಳಲ್ಲಿ ಡೀಸಲ್‌ನಲ್ಲಿರುವ ಗಂಧಕದ ಪ್ರಮಾಣವನ್ನು ಸಾಕಷ್ಟು ಕಡಿಮೆ ಮಾಡಬಹುದು. ಇದಕ್ಕೂ ಬಂಡವಾಳ ಅಗತ್ಯ ಮತ್ತು ಇದರಿಂದ ಉತ್ಪತ್ತಿಯಾಗುವ ಡೀಸಲ್‌ನ ಕ್ರಯ ಹೆಚ್ಚು.

ಇದೇ ರೀತಿ ಅದೆಷ್ಟೋ ರೀತಿಗಳಲ್ಲಿ ಪರಿಸರದ ಮೇಲಾಗುವ ದುಷ್ಪರಿಣಾಮಗಳನ್ನು ಕಡಿಮೆ ಮಾಡಬಹುದು ಅಥವಾ ಇಲ್ಲವಾಗಿಸಬಹುದು. ಆದರೆ ಇದನ್ನು ಮಾಡಬೇಕಾದ ಸಮಾಜ ಸ್ಥಿತಿವಂತರಾಗಿರಬೇಕು; ಅದಕ್ಕೂ ಮೊದಲು ವಿದ್ಯಾವಂತವಾಗಿರಬೇಕು. ಅಂದರೆ ಬಂಡವಾಳವೂ ಬೇಕು, ಅರಿವೂ ಬೇಕು.

ಮೂಲತಃ, ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆ ಮತ್ತು ಬಡತನಕ್ಕೆ ಹಾಗೂ ಸಾಮಾಜಿಕ ಅಜ್ಞಾನಕ್ಕೆ ಕಾರಣವಾದ ನಿರ್ಬಲ ಶಿಕ್ಷಣ ವ್ಯವಸ್ಥೆ,– ಇವೆರಡೂ ಒಂದನ್ನೊಂದು ಹಿಂಬಾಲಿಸಿಕೊಂಡು, ವಿಷಮ ವೃತ್ತವೊಂದನ್ನು ರಚಿಸಿವೆ. ಪರಿಸ್ಥಿತಿ ಹೀಗಿರುವಾಗ, ಪರಿಸರದ ಪರವೆ ಇದ್ದವರು ಈ ಮೂಲಭೂತ ಕಾರಣವಾದ ಜನಸಂಖ್ಯೆಯನ್ನು ನಿಯಂತ್ರಣಕ್ಕೆ ತರಲು ಬೇಕಾದ ಪರಿವಾರ ಯೋಜನೆ ಮತ್ತು ಅದಕ್ಕೆ ಪೂರಕವಾಗಿ ಬೇಕಾಗಿರುವ ಉತ್ತಮ ರೀತಿಯ ಹಾಗೂ ಸಾರ್ವತ್ರಿಕವಾದ ಶಿಕ್ಷಣ ವ್ಯವಸ್ಥೆ– ಇವೆರಡಕ್ಕೆ ಚಲನೆ ಕೊಟ್ಟು, ಈ ವಿಷಮ ವೃತ್ತದಿಂದ ಹೊರಬರುವ ಯೋಜನೆಯತ್ತ ದೃಷ್ಟಿ ಹಾಯಿಸುವುದಿಲ್ಲ ಏಕೆ? ಯಾಕೆಂದರೆ,– ಇದಕ್ಕೆ ಬಹಳಷ್ಟು ಹೆಣಗಾಡಬೇಕಾಗುತ್ತದೆ,– ಒಂದೆರಡು ವಾರಗಳಲ್ಲಿ ಮುಗಿಸಬಹುದಾದ

ಕೆಲಸ ಇದಲ್ಲ. ಸಂಘಟಿತ ರೀತಿಯಲ್ಲಿ ಹಲವಾರು ವರ್ಷಗಳ, ಅವಿರತ ಪರಿಶ್ರಮ ಅಗತ್ಯ. ಫಲಿತಾಂಶವೂ ದಿಢೀರ್ ಸಿಗಲಾರದು. ಪರಿವಾರ ಯೋಜನೆಯನ್ನು ಜನರಿಗೆ ತಲುಪಿಸುವ ಸಮಾಜಕ್ರಿಯಾಶೀಲರಿಗೆ ದಿನಪತ್ರಿಕೆ, ದೂರದರ್ಶನಗಳಂತಹ ಮಾಧ್ಯಮಗಳ ಸಂಭ್ರಮದ ಸ್ವಾಗತ ಸಿಗಲಾರದು. ಮಾಧ್ಯಮಗಳ ಮರೆಯಲ್ಲಿ ಮಾಡಬೇಕಾದ ಈ ಕೆಲಸಕ್ಕೆ ಜನರ ಆದರವಾಗಲೀ, ಸುಲಭವಾದ ಖ್ಯಾತಿಯಾಗಲೀ ಸಿಗಲಾರದು. ಆದರೆ ಬೃಹತ್ ಉದ್ಯಮವೋ, ವಿದ್ಯುತ್ ಸ್ಥಾವರವೋ ಅಥವಾ ಅಣೆಕಟ್ಟೋ ತಲೆ ಎತ್ತಲಿದೆ ಎಂದು ಸುದ್ದಿ ಆಗುತ್ತಲೇ ಹಲವೊಂದು ಹಿಂಬಾಲಕರನ್ನು ಒಟ್ಟುಹಾಕಿ, ರಸ್ತೆಗಿಳಿದು ಮೆರವಣಿಗೆ ಮಾಡಿ, ಅವನ್ನು ಖಂಡಿಸುವ ಕೈಬೋರ್ಡುಗಳನ್ನು ಮೆರೆದಾಡಿಸಿ, ಬೇಕಿದ್ದರೆ ಕಲ್ಲು ತೂರಿ, ಭಾಷಣ ಬಿಗಿದು, ಸರಣಿ ಉಪವಾಸ ನಡೆಸಿ,– ಅವನ್ನು ತಲೆ ಎತ್ತದಂತೆ ಮಾಡಿದರೆ ದಿಢೀರ್ ಖ್ಯಾತಿ ಗಳಿಸುವುದು ಎಷ್ಟು ಸುಲಭ! ಒಂದೆರಡು ವಾರ,– ಹೆಚ್ಚೆಂದರೆ ಕೆಲವು ತಿಂಗಳ ಅವಧಿಯಲ್ಲಿ ನಡೆದ ಈ ಚಳುವಳಿಗಳ ನೇತೃತ್ವ ವಹಿಸಿದವರು ಅದೇನೋ ಹಿರಿಯ ಸಾಧನೆ ಮಾಡಿದ್ದಾರೆಂದು ಸಮಾಜದಲ್ಲಿ ಭ್ರಮೆ ಹುಟ್ಟಿಸಿಬಿಡುತ್ತದೆ. ಇವರ ಜನಸೇವೆಯನ್ನು ಪರಿಗಣಿಸಿ ರಾಜಕೀಯ ನೇತೃತ್ವವೂ ದೊರೆಯಬಹುದು. ಇವರ ಕೆಲಸವನ್ನು ಮೆಚ್ಚಿ ದೇಶ ವಿದೇಶಗಳಲ್ಲಿಯ ವಿವಿಧ ರೀತಿಯ ಪಾರಿತೋಷಕಗಳೂ, ಪುರಸ್ಕಾರಗಳೂ ದೊರೆಯಬಹುದು.

ಔದ್ಯೋಗೀಕರಣದ ಅಗತ್ಯತೆ

ಜನಸಂಖ್ಯೆಯ ನಿಯಂತ್ರಣ ಮತ್ತು ಸಾರ್ವತ್ರಿಕ ಶಿಕ್ಷಣದ ವ್ಯವಸ್ಥೆಗಳು ಬರೇ ಸಮಾಜ ಸ್ವಯಂಸೇವಕರ ಉಮೇದಿನಿಂದಾಗಲು ಅಸಾಧ್ಯ. ಇದಕ್ಕೆ ದೊಡ್ಡ ರೀತಿಯ ಸರಕಾರೀ ಯೋಜನೆಗಳು ಅಗತ್ಯ ಮತ್ತು ಅದಕ್ಕೆ ಬೇಕಾದ ಬಂಡವಾಳವೂ ಅಗತ್ಯ. ಈ ಬಂಡವಾಳಕ್ಕೆ ಹಣ ಎಲ್ಲಿಂದ ಬರಬೇಕು? ಈಗಿನ ಸಮಾಜ 'ಹೊಟ್ಟೆ-ಬಟ್ಟೆ'ಗಳ ಮಟ್ಟದಲ್ಲಿ ಮಾತ್ರ ಇರುವಾಗ ಇದು ಅಸಾಧ್ಯ. ಇದಕ್ಕೆ ಭಾರಿ ಪ್ರಮಾಣದ ಔದ್ಯೋಗೀಕರಣ ಮತ್ತು ಅದಕ್ಕೆ ಪೂರಕವಾದ ಸವಲತ್ತುಗಳ ಬೆಳವಣಿಗೆಯಿಂದ ಉತ್ಪತ್ತಿಯಾಗುವ ಸಂಪತ್ತಿನ ಸಹಾಯದಿಂದಲೇ ಮೇಲೆ ಹೇಳಿದ ವಿಷಮ ವೃತ್ತದಿಂದ ಹೊರಬರುವುದು ಸಾಧ್ಯ. ಮುಂದುವರಿದ ರಾಷ್ಟ್ರಗಳ ಚರಿತ್ರೆಯನ್ನು ನೋಡಿದರೆ ಅಲ್ಲಿನ ಸಾರ್ವತ್ರಿಕ ಶಿಕ್ಷಣ ವ್ಯವಸ್ಥೆ ಬರುವ ಬಹಳ ಮುಂಚೆಯೇ ಔದ್ಯೋಗೀಕರಣ ಪರ್ವದ ನಾಂದಿಯಾಗಿತ್ತು; ಮತ್ತು ಅದರಿಂದ ಒದಗಿ ಬಂದ ಸಂಪತ್ತಿನಿಂದಲೇ ಸಾರ್ವಜನಿಕ ಕ್ಷೇಮ-ಸುಖದ ತಳಹದಿಯ ಸಾಮಾಜಿಕ ವ್ಯವಸ್ಥೆ ಹುಟ್ಟಿಕೊಂಡಿತು.

ಖನಿಜ ತೈಲದ(petroleum) ಬೃಹತ್ ಸ್ಥಾವರಗಳು ಮತ್ತು ಉಕ್ಕು, ಸಿಮೆಂಟು, ವಿದ್ಯುತ್ತು, ರಾಸಾಯನಿಕಗಳು(chemicals),– ಇವೇ ಮುಂತಾದವುಗಳ ಉತ್ಪಾದನೆಯಿಂದ ಹಿಡಿದು ಬಟ್ಟೆ, ಕಾರು, ಸೈಕಲ್ಲು ಮುಂತಾದ ಸಾಮಾನ್ಯ ಬಳಕೆಯ ಸಾಮಾನುಗಳನ್ನು ಉತ್ಪಾದಿಸುವ ಉದ್ಯಮಗಳು – ಇವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ ಪರಿಸರವನ್ನು ಮಲಿನ ಮಾಡುತ್ತವೆ. – ಹಾಗಾಗಿ ಇವುಗಳನ್ನೆಲ್ಲ ವಿರೋಧಿಸಲೇಬೇಕೆಂಬ ವಾದ ಬಲವತ್ತರವಾಗಿದೆ. ಆದರೆ, ಮೇಲಿನ ನೋಟದಲ್ಲಿ ಪರಿಸರ ಪಾಲನೆ ಮತ್ತು ಉದ್ಯಮಗಳು ಒಂದಕ್ಕೊಂದು ವಿರೋಧವೆಂದು ಕಂಡರೂ, ನಿಜದಲ್ಲಿ ಈ ವಿರೋಧವು ಆಂತರ್ಗಿಕವಾಗಿಲ್ಲ. ಪರಿಸ್ಥಿತಿಯ ಮೇಲೆ ಹೊಂದಿಕೊಂಡು ಇದೆ.

ಔದ್ಯೋಗೀಕರಣ ಮತ್ತು ಮುಂದುವರಿದ ರಾಷ್ಟ್ರಗಳ ಉದಾಹರಣೆ

ಪರಿಸರ ಮತ್ತು ಔದ್ಯೋಗೀಕರಣ, ಇವೆರಡರ ಪರಸ್ಪರ ಸಂಬಂಧವನ್ನು ಪರಿಶೀಲಿಸಲಿಕ್ಕೆ ಸುಲಭೋಪಾಯವೆಂದರೆ, – ಉದ್ಯಮದಲ್ಲಿ ಬಹಳ ಮುಂದುವರಿದ ಪಶ್ಚಿಮದ ರಾಷ್ಟ್ರಗಳನ್ನು ನಮ್ಮ ರಾಷ್ಟ್ರದೊಂದಿಗೆ ಹೋಲಿಸುವುದು. ನಮ್ಮಲ್ಲಿ ಔದ್ಯೋಗೀಕರಣ ಮುಂದುವರಿದರೆ ಪರಿಸರದ ಮೇಲೆ ಅದರ ಪರಿಣಾಮ ಏನಾಗಬಹುದೆಂದು ಊಹೆಗಳನ್ನು ಮಾಡುವ ಬದಲು ನಿಜ ಜಗತ್ತಿನಲ್ಲಿ ಏನಾಗಿದೆ ಎಂಬುದನ್ನು ಇದರಿಂದ ನಾವು ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ, ಭಾರತವನ್ನು ಯುರೋಪಿನ ಮುಂದುವರಿದ ಔದ್ಯೋಗಿಕ ರಾಷ್ಟ್ರಗಳೊಂದಿಗೆ ಹೋಲಿಸಬಹುದು.

ಜನನಿಬಿಡತೆಯಲ್ಲಿ ಎರಡು ಭೂಭಾಗಗಳು ಸಮಸಮವಾಗಿವೆ. ಎರಡೂ ಭಾಗಗಳಲ್ಲಿ ಜನಸಂಖ್ಯೆಯ ಹೆಚ್ಚಳ ಸಾಧಾರಣ ಒಂದೇ ಸಮಯಕ್ಕೆ ಆಗಿರಬಹುದು. ಆದರೆ ಯುರೋಪ್ ವಿದ್ಯಾವಂತಿಕೆಯಲ್ಲಿ ಮತ್ತು ಔದ್ಯೋಗೀಕರಣದಲ್ಲಿ ನಮ್ಮ ದೇಶಕ್ಕಿಂತ ಬಹಳ ಮುಂದೆ ಹೋದುದರಿಂದ ಅದು ತನ್ನ ಜನತೆಗೆ ಅದೆಷ್ಟೋ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿ ಕೊಟ್ಟೂ ಪರಿಸರದ ಮೇಲೆ ದುಷ್ಪರಿಣಾಮ ವಿಪರೀತವಾಗದಂತೆ ನೋಡಿಕೊಳ್ಳಲು ಸಮರ್ಥವಾಗಿದೆ. ವಿಪರ್ಯಾಸವೆಂದು ಕಂಡರೂ,– ಇದಕ್ಕೆ ಮುಖ್ಯ ಕಾರಣ ಔದ್ಯೋಗೀಕರಣವೇ ಆಗಿದೆ.

ಮುಂಚೆಯೇ ಹೇಳಿದಂತೆ ಜನಸಂಖ್ಯೆಯ ಹೆಚ್ಚಳದಿಂದ ಪರಿಸರದ ಮೇಲೆ ಒತ್ತಡ ಬೀಳುತ್ತದೆ. ಆ ಒತ್ತಡವನ್ನು ಕಡಿಮೆ ಮಾಡಲು ಉಪಾಯಗಳಿವೆ. ಆದರೆ ಆ ಉಪಯೋಗಗಳಿಗೆ ಬಂಡವಾಳ ಬೇಕು, ಅಷ್ಟಲ್ಲದೆ ಅದನ್ನು ನಡೆಸಲು ಖರ್ಚು ಹೆಚ್ಚು – ಇದು ಸಂಪತ್ತುಳ್ಳ ಜನತೆಗೆ ಮಾತ್ರ ಸಾಧ್ಯ. ಆದರೆ ಆ ಸಂಪತ್ತಿನ ಮೂಲ ಔದ್ಯೋಗೀಕರಣವೇ ಆಗಿದೆ.

ರಾಸಾಯನಿಕ ಉತ್ಪಾದನೆಯೇ ಆಗಲಿ, ಉಕ್ಕಿನ ಉತ್ಪಾದನೆಯೇ ಆಗಲಿ, ಜರ್ಮನಿ ನಮ್ಮ ರಾಷ್ಟ್ರಕ್ಕಿಂತ ಅದೆಷ್ಟೋ ಮುಂದು. ಆದರೆ ಜರ್ಮನಿಯ ವಿಸ್ತೀರ್ಣತೆ ನಮ್ಮ ದೇಶದ ಸಾಧಾರಣ ಹತ್ತನೇ ಒಂದು ಪಾಲು ಮಾತ್ರ ಎನ್ನಬಹುದು. ಅಂದರೆ ಉತ್ಪಾದನಾ ಸ್ಥಾವರಗಳ ನಿಬಿಡತೆ ನಮ್ಮ ದೇಶಕ್ಕಿಂತ ಅದೆಷ್ಟೋ ಪಾಲು ಎಂದಾಯಿತು. ಹಾಗಿದ್ದರೆ ಅಲ್ಲಿಯ ಪರಿಸರ ನಮ್ಮದಕ್ಕಿಂತ ಅದೆಷ್ಟೋ ಪಾಲು ಹೆಚ್ಚು ಕೆಟ್ಟು ಹೋಗಿರಲೇ ಬೇಕಷ್ಟೆ? ಆದರೆ ಅಲ್ಲಿಯ ಪರಿಸರ ನಮ್ಮ ದೇಶದ ಪರಿಸರಕ್ಕಿಂತ ಅದೆಷ್ಟೋ ಪಾಲು ಉತ್ತಮವಾಗಿದೆ. ಎಲ್ಲೆಲ್ಲಿ ನೋಡಿದರೂ ನಳನಳಿಸುವ ದಟ್ಟ ಕಾಡುಗಳು (ಹೆಸರಾಂತ black forestನ ಮರಗಳು ಗಗನಕ್ಕೇರಿ ನಿಂತಿವೆ) ಮತ್ತು ಸಸ್ಯ ಭರಿತ ಬಯಲುಗಳು. ಫ್ರಾಂಕ್‌ಫರ್ಟ್, ಡುಸೆಲ್‌ಡೋರ್ಫ್ ಮುಂತಾದ ಮಹಾನಗರಗಳ ಸುತ್ತಮುತ್ತಲೂ, ಕೆಲವೊಮ್ಮೆ ನಗರದ ಮಧ್ಯೆಯೂ ಈ ಪರಿಸ್ಥಿತಿ. ನಮ್ಮ ದೇಶದಲ್ಲಿಯ ಉತ್ಪಾದನೆಯ ಸ್ಥಾವರಗಳ ನಿಬಿಡತೆ ಎಷ್ಟೋ ಪಾಲು ಕಡಿಮೆಯಾದರೂ ಎಲ್ಲಿ ನೋಡಿದರಲ್ಲಿ ಬೋಳಾಗುತ್ತಿರುವ ಗುಡ್ಡ ಕಾಡುಗಳು. ಪ್ರತಿವರ್ಷ ನಮ್ಮ ವನಸಂಪತ್ತು ಕರಗಿ ಹೋಗುತ್ತಿದೆ. ಗೆದ್ದಲು ಹುಳುಗಳು ಮರದ ಸಂಪತ್ತನ್ನು ನಿರ್ಮೂಲ ಮಾಡುವಂತೆ,– ನಮ್ಮ ಬಡಜನರು ದಿನದ ಅಡುಗೆ, ಸ್ನಾನಗಳಿಗೋಸ್ಕರ ಕಾಡುಗಳನ್ನು ಕಡಿಯುತ್ತಲೇ ಇದ್ದಾರೆ. ಕಾಶ್ಮೀರ, ಕುಲು ಮನಾಲಿಗಳಂತಹ ಚಳಿ ಪ್ರದೇಶಗಳಲ್ಲಿ ಹೆಂಗಸರು ದಿನದ ಹೆಚ್ಚಿನಾಂಶವನ್ನು

ಸೌದೆ ಒಟ್ಟುಮಾಡುವುದರಲ್ಲೆ ಕಳೆಯುತ್ತಾರೆ. ವನ್ಯ ಮೃಗಗಳಿಗೋಸ್ಕರ ಮಾಡಿಟ್ಟ ಅಭಯಾರಣ್ಯಗಳೂ ಈ ಬಡತನದ ಬೇಡಿಕೆಗೆ ತುತ್ತಾಗಿವೆ. ಹಾಗಾಗಿ ನಮ್ಮ ವನ್ಯ ವಿಭಾಗಗಳೂ ನಾಶವಾಗುತ್ತಿವೆ. (ಕಾಡು ಕಡಿದುದರಿಂದಾಗಿ ಮರದ ಬೇರುಗಳ ಬಿಗಿತವಿಲ್ಲದೆ ನೆಲದ ಮಣ್ಣು ಸಡಿಲಾಗಿ ನೆಲಕೊರೆತ, ಅದರಿಂದಾಗುವ ನೆರೆ, ಇವೆಲ್ಲಾ ಬೇರೆ.)

ಆದರೆ ಜರ್ಮನಿಯಲ್ಲಿ ಅಡುಗೆಗೆ ಮತ್ತು ತಾಪ ಅನುಕೂಲಕ್ಕೆ ಖನಿಜ ಅನಿಲ(natural gas)ವನ್ನು ಉಪಯೋಗಿಸುತ್ತಾರೆ. ಇದು ಸಾಧಾರಣ ಮಟ್ಟಿಗೆ ಎಲ್ಲಾ ಮುಂದುವರಿದ ದೇಶಗಳಿಗೆ ಅನ್ವಯಿಸುತ್ತದೆ. ಜಪಾನ್, ಸಿಂಗಾಪುರದಂತಹ ಮುಂದುವರಿದ ಪೂರ್ವ ರಾಷ್ಟ್ರಗಳು ತಮ್ಮದೇ ಆದ ಖನಿಜ ತೈಲ ಅಥವಾ ಅನಿಲದ ನಿಕ್ಷೇಪಗಳಿಲ್ಲದಿದ್ದರೂ, ಬೇರೆ ದೇಶಗಳಿಂದ ಇವನ್ನು ಆಮದು ಮಾಡಿಕೊಂಡು ಉಪಯೋಗಿಸುವುದರಿಂದಾಗಿ ಅವರ ಸಸ್ಯ ಸಂಪತ್ತು ನಶಿಸಿ ಹೋಗುತ್ತಿಲ್ಲ.

ನಮ್ಮ ದೇಶಕ್ಕಿಂತ ಅದೆಷ್ಟೋ ಪಾಲು ವಾಹನ ನಿಬಿಡತೆ ಇದ್ದರೂ ಮುಂದುವರಿದ ರಾಷ್ಟ್ರಗಳಲ್ಲಿ ನಮ್ಮ ನಗರಗಳಲ್ಲಿದ್ದಷ್ಟು ವಾಯು ಮಾಲಿನ್ಯತೆ ಇಲ್ಲ. ಇದಕ್ಕೆ ಕಾರಣ ವಾಹನಗಳು ತಡೆಯಿಲ್ಲದೆ ಸರಾಗವಾಗಿ ಹೋಗಲಿಕ್ಕಾಗಿ ಅವರು ಮಾಡಿಕೊಂಡ ಭವ್ಯ ರಾಜಮಾರ್ಗಗಳು, ಅಷ್ಟಲ್ಲದೆ ಅವರ ವಾಹನಗಳು ಇಂಧನ ಬಳಕೆಯಲ್ಲಾಗಲೀ, ವಿಸರ್ಜಿಸಲ್ಪಡುವ ಅನಿಲಗಳ ಶುದ್ಧತೆಯಲ್ಲಾಗಲೀ, ನಮ್ಮ ವಾಹನಗಳಿಂದ ಅದೆಷ್ಟೋ ಮುಂದು.

ಅವರ ಔದ್ಯೋಗೀಕರಣದಿಂದ ಬಂದೊದಗಿದ ಸಂಪತ್ತಿನಿಂದಾಗಿ ಈ ರೀತಿಯ ರಾಜಮಾರ್ಗಗಳ ನಿರ್ಮಾಣವಾಗಲೀ, ಹೆಚ್ಚು ಮೌಲ್ಯದ ಆಧುನಿಕ ವಾಹನಗಳ ಬಳಕೆ ಯಾಗಲೀ ಅವರಿಗೆ ಸಾಧ್ಯವಾಗಿದೆ.

ವಿದ್ಯುತ್ ಬಳಕೆ ನಮ್ಮ ದೇಶಕ್ಕಿಂತ ಎಷ್ಟೋ ಹೆಚ್ಚು. ಹಾಗಾಗಿ ಅವರ ಜೀವನ ಸೌಕರ್ಯ ಗಳು ಹಲವು ಪಟ್ಟು ಹೆಚ್ಚು. ಆದರೆ ಔದ್ಯೋಗೀಕರಣದಿಂದ ಉಂಟಾದ ಸಂಪತ್ತಿನಿಂದ ಅವರ ವಿದ್ಯುತ್ ಸ್ಥಾವರಗಳಲ್ಲಿ ವಿಸರ್ಜನೆಯ ಅನಿಲಗಳನ್ನು ಶುದ್ಧ ಮಾಡಲು ಸಮರ್ಥ ರಾಗಿದ್ದಾರೆ. ಇದೇ ಸಂಪತ್ತು ಅವರ ನದಿ, ಸರೋವರಗಳನ್ನು ಶುದ್ಧವಾಗಿಡಲು ಬೇಕಾದ ಸಲಕರಣೆಗಳ, ತಾಂತ್ರಿಕ ಉಪಾಯಗಳ ಬಳಕೆಯನ್ನು ಸಾಧ್ಯ ಮಾಡಿಕೊಟ್ಟಿದೆ.

ಔದ್ಯೋಗೀಕರಣದ ಸಂಪತ್ತಿನಿಂದಾಗಿ ಅವರ ಮಕ್ಕಳಿಗೆ ಮುಂದುವರಿದ ದೇಶಗಳು ಸಾಕಷ್ಟು ಶಿಕ್ಷಣವನ್ನು ಕೊಡುವ ಪರಿಸ್ಥಿತಿಯನ್ನು ಹೊಂದಿವೆ. ಸದಾ ಸುಧಾರಿಸುತ್ತಿರುವ ವಿದ್ಯೆಯಿಂದಾಗಿ ಅವರ ಜನರ ಉತ್ಪಾದನಾ ಶಕ್ತಿ (productivity) ಮತ್ತು ಅದರಿಂದಾಗಿ ಸಂಪತ್ತನ್ನು ಸೃಷ್ಟಿಸುವ ಶಕ್ತಿ ಹೆಚ್ಚಾಗುತ್ತಲೇ ಇದೆ. ಈ ವಿದ್ಯಾವಂತರು ಪರಿಸರದ ವಿಷಯದಲ್ಲಿ ಇನ್ನೂ ಹೆಚ್ಚಿನ ಅರಿವು, ಕಾಳಜಿಗಳನ್ನು ಬೆಳೆಸಿಕೊಳ್ಳುತ್ತಾರೆ. ಪರಿಸರವಾದವನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡ ಹಸಿರು ಪಕ್ಷ – Green Party – ಜರ್ಮನಿಯ ರಾಜಕೀಯದಲ್ಲಿ ಸಾಕಷ್ಟು ಪ್ರಭಾವಶಾಲಿ ಯಾಗಿದೆ. ಇಂತಹದೇ ಒಂದು ಹಸಿರು ಪಕ್ಷ ನಮ್ಮ ಅವಿದ್ಯಾವಂತ ದೇಶದ ರಾಜಕೀಯದಲ್ಲಿ ಪಾತ್ರ ವಹಿಸುವುದು ಸದ್ಯಕ್ಕೆ ಕಂಡುಬರುವುದಿಲ್ಲ. ಇಂತಹ ಮುಂದುವರಿದ ರಾಷ್ಟ್ರಗಳ ವಿದ್ಯಾವಂತ ಜನತೆಯಿಂದ ಹುಟ್ಟಿಕೊಂಡು ಬಂದ ಪರಿಸರವಾದವೇ ನಮ್ಮ ದೇಶಕ್ಕೆ ಪಸರಿಸಿ ಈಗ ಬೇರು ಬಿಡುತ್ತಿದೆ.

ಸಿಂಗಾಪುರವನ್ನು ನೋಡಿದವರಿಗೆ, – ಈ ನಂದನವನದಂತಹ ಹಸಿರು ಭರಿತ, ಶುದ್ಧ ಪರಿಸರದ ದೇಶ ಜಗತ್ತಿನ ಅತಿ ದೊಡ್ಡ, ಖನಿಜ ತೈಲಗಳ ಶುದ್ಧೀಕರಣದ (petroleum-oil-refinery) ಉತ್ಪಾದನಾ ಕೇಂದ್ರಗಳಲ್ಲೊಂದು ಎಂಬುದು ನಂಬಲಿಕ್ಕಾಗದು. ಸಿಂಗಾಪುರದ ಇಂದಿನ ಅಗಾಧ ಸಂಪತ್ತಿನ ಒಂದು ಮೂಲ ಈ ತೈಲಾಗಾರಗಳೇ ಆಗಿವೆ. ಈ ತೈಲ ಉದ್ಯಮ ದಿಂದ ಮತ್ತು ಬೇರೆ ಉದ್ಯಮಗಳಿಂದ ಬಂದ ಸಂಪತ್ತನ್ನು ಅವರು ತೈಲಾಗಾರಗಳ ನವೀಕರಣದ ಉಪಯೋಗಕ್ಕೆ ಬಳಸಿ, ಪರಿಸರ ಪಾಲನೆ ಮಾಡಿದ್ದಾರಲ್ಲದೆ, ಆ ಸಂಪತ್ತನ್ನು ದೇಶದ ಬಡತನ ವನ್ನು ನಿರ್ಮೂಲನ ಮಾಡಿ, ಜನತೆಯನ್ನು ವಿದ್ಯಾವಂತ ಹಾಗೂ ಸಂಪನ್ನರನ್ನಾಗಿ ಮಾಡಲಿಕ್ಕೆ ಉಪಯೋಗಿಸಿದ್ದಾರೆ.

ಮೇಲಿನ ಉದಾಹರಣೆಗಳಿಂದ ವಿದಿತವಾಗುವುದೇನೆಂದರೆ ಉದ್ಯಮಗಳಿಂದಾಗಿ ಪರಿಸರ ಹಾನಿಯಾಗಬೇಕೆಂದಿಲ್ಲ. ಅದರ ಪ್ರತಿಯಾಗಿ, ಉದ್ಯಮಗಳೇ ನಮ್ಮ ಹೆಚ್ಚುತ್ತಿರುವ ಜನಸಂಖ್ಯೆಯ ಪರಿಸರಕ್ಕೆ ಆಗುವ ಹಾನಿಯನ್ನು ತಡೆಗಟ್ಟಲು ಬೇಕಾದ ಬಂಡವಾಳ ಹಾಗೂ ಹಣವ್ಯಯವನ್ನು ಒದಗಿಸಬಲ್ಲದು.

ಔದ್ಯೋಗೀಕರಣಕ್ಕೆ ಬೇಕಾದ ಮುಂಜಾಗ್ರತೆ

ಯಾವುದೇ ಉದ್ಯಮ, ಉತ್ಪಾದನಾ ಸ್ಥಾವರ – ಇಂಥವುಗಳನ್ನು ಬರೇ ಆರ್ಥಿಕ ಪ್ರಗತಿಯ ದೃಷ್ಟಿಯಲ್ಲಿ ಮಾತ್ರ ನೋಡಿಕೊಂಡು ಅವುಗಳ ಪರಿಸರದ ಮೇಲಿನ ಪ್ರಭಾವವನ್ನು ಕಡೆಗಣಿಸ ಬೇಕೆಂದಿಲ್ಲ. ಇಂಥ ಆರ್ಥಿಕ ಪ್ರಗತಿಯ ಸಾಧನಗಳು ಪರಿಸರವನ್ನು ಯಾವ ರೀತಿಯಲ್ಲಿ ಕೆಡಿಸಬಹುದು, ಹಾಗೆ ಕೆಡಿಸದಂತೆ ಯಾವ ತಂತ್ರೋಪಾಯಗಳನ್ನು ಬಳಸಬಹುದು ಎಂಬೀ ವಿಚಾರಗಳಲ್ಲಿ ಸಾಮಾಜಿಕ ಹಾಗೂ ತಾಂತ್ರಿಕ ಅಧ್ಯಯನ, ಪರಿಶೀಲನೆಗಳು ನಡೆದಿವೆ. ಸಾಕಷ್ಟು ಪುರಾವೆಗಳು, ಅನುಭವಗಳು ದೊರಕಿವೆ. ಮುಂದುವರಿದ ರಾಷ್ಟ್ರಗಳು ಔದ್ಯೋಗೀಕರಣದ ಮೊದಲ ಹಂತಗಳಲ್ಲಿ ಪರಿಸರದ ಮೇಲೆ ದುಷ್ಪರಿಣಾಮವಾದುದನ್ನು ಕಂಡದ್ದಿದೆ. ಆದರೆ ಈ ವಿಷಯದಲ್ಲಿ ಅರಿವು ಮೂಡುತ್ತಲೇ ಅಂತಹ ದುಷ್ಪರಿಣಾಮಗಳನ್ನು ಹೇಗೆ ತಡೆಗಟ್ಟಬೇಕೆಂಬ ವಿಚಾರದಲ್ಲಿ ಅಧ್ಯಯನ, ಪರಿಶೀಲನೆಗಳನ್ನು ನಡೆಸಿ ಪರಿಸರ ಪರ ತಾಂತ್ರಿಕ ಜ್ಞಾನವನ್ನು ಬೆಳೆಸಿಕೊಂಡಿದ್ದಾರೆ. ಇಂತಹ ಅನುಭವ, ತಾಂತ್ರಿಕ ಜ್ಞಾನವನ್ನು ನಾವು ಮೊದಲೇ ಬಳಸಿಕೊಂಡರೆ ನಮ್ಮ ಔದ್ಯೋಗೀಕರಣ ಪ್ರಥಮ ಹಂತದಿಂದಲೇ ಪರಿಸರಪರವಾಗಬಹುದು.

ಹೊಸ ಉದ್ಯಮ, ಹೊಸ ಉತ್ಪಾದನೆಯ ಸ್ಥಾವರಗಳ ಸ್ಥಾಪನೆಯಾಗುವುದಿದ್ದರೆ ಅವನ್ನು ಪೂರ್ವಾಪರಗಳಿಲ್ಲದೆ ಎದುರಿಸಿ ಅವು ಮೇಲೆ ಬರದಂತೆ ಮಾಡುವುದರಲ್ಲೇ ಪರಿಸರದ ಉಳಿವು ಎಂಬ ಭಾವನೆ ತಪ್ಪು. ನಮ್ಮ ನಿಯಂತ್ರಣದಲ್ಲಿ ಇಲ್ಲದ (ನಮ್ಮ ದೂರದೃಷ್ಟಿಯಿಲ್ಲದ ರಾಜಕಾರಣವೇ ಇದಕ್ಕೆ ಕಾರಣ) ಜನಸಂಖ್ಯೆಯ ಹೆಚ್ಚಳವು ಪರಿಸರವನ್ನು ಬಾಧಿಸದಂತೆ ನೋಡಿಕೊಳ್ಳಬೇಕೆಂದರೆ ಅದಕ್ಕೆ ಆರ್ಥಿಕ ಸಂಪತ್ತಿನ ಅಗತ್ಯ ಎಷ್ಟೆಂದು ನಾವು ಕಂಡುಕೊಂಡಿ ದ್ದೇವೆ. ಆ ಆರ್ಥಿಕ ಸಂಪತ್ತು ಔದ್ಯೋಗೀಕರಣದಿಂದಲೇ ಬರಬೇಕು. ಹಾಗಾಗಿ ಔದ್ಯೋಗೀ ಕರಣಕ್ಕೆ ಬೇಕಾದ ಸ್ಥಾವರಗಳನ್ನು ನಾವು ಸ್ವಾಗತಿಸಲೇ ಬೇಕು. (ಬಂದರೆ ಬರಲಿ, ಬರದಿದ್ದರೆ ಬೇಡವೆಂಬ ತಾತ್ಸಾರ ಭಾವವೂ ಸಲ್ಲದು.) – ಆದರೆ ಹಾಗೆ ಸ್ವಾಗತಿಸುವಾಗ ಅದಕ್ಕೆ

ಬಳಸುವ ತಾಂತ್ರಿಕತೆ ಪರಿಸರ ಪರವಾಗಿದೆಯೇ ಎಂದು ಅವಶ್ಯವಾಗಿ ನೋಡಿಕೊಳ್ಳಬೇಕು. ಉದಾಹರಣೆಗೆ, ವಿದ್ಯುತ್ ಸ್ಥಾವರದ ಸ್ಥಾಪನೆಯಾಗುವುದಿದ್ದರೆ ಅದನ್ನು ಸ್ಥಾಪಿಸುವ ಉದ್ಯೋಗಪತಿಗಳು ಅಲ್ಲಿಯ ಜನತೆಯನ್ನು ಸಂಪರ್ಕಿಸಿ ತಮ್ಮ ಸ್ಥಾವರ ಹೇಗೆ ಪರಿಸರವನ್ನು ಹಾನಿಗೊಳಿಸದು ಎಂದು ವಿವರಿಸತಕ್ಕದ್ದು. ಅಲ್ಲಿಯ ಜನತೆಯೂ ತಮ್ಮೊಳಗೆ ಈ ವಿಷಯದಲ್ಲಿ ತಜ್ಞತೆ ಇದ್ದವರ ಅಥವಾ ಅಂತಹ ವಿಷಯಗಳನ್ನು ವೈಜ್ಞಾನಿಕ, ಸಾಮಾಜಿಕ ಹಾಗೂ ತಾಂತ್ರಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಬಲ್ಲವರ 'ಪರಿಸರ' ಸಮಿತಿಯನ್ನು ರಚಿಸಿ, ಈ ಸಮಿತಿ ಉದ್ಯೋಗಪತಿಗಳ ಪ್ರತಿನಿಧಿಗಳೊಡನೆ ವಿಚಾರ ವಿನಿಮಯ ಮಾಡಿಕೊಳ್ಳಬೇಕು. ಸ್ಥಾವರದಿಂದ ಉಂಟಾಗಬಹುದಾದ ಹಾನಿಕರ ದ್ರವ್ಯಗಳ ಪ್ರಮಾಣದ ಅಂಕೆ ಸಂಖ್ಯೆಗಳು ಜಗತ್ತಿನ ಮುಂದುವರಿದ ರಾಷ್ಟ್ರಗಳಲ್ಲಿ ಸರಕಾರ ಸಹಿತ ಒಪ್ಪಿಕೊಂಡ, ಸಹಿಸಿಕೊಳ್ಳುವ ಮಟ್ಟದ ಅಂಕೆ ಸಂಖ್ಯೆಗಳ ಪರಿಮಿತಿಯೊಳಗೆ ಇವೆಯೇ ಎಂಬುದನ್ನು ಪರಿಶೀಲಿಸಿ ದಾಖಲು ಮಾಡಿಕೊಳ್ಳಬೇಕು. ಸಾಧ್ಯವಿದ್ದಲ್ಲಿ ಉದ್ಯೋಗಪತಿಗಳು ಈ 'ಪರಿಸರ' ಸಮಿತಿಯ ಸದಸ್ಯರನ್ನು ಮುಂದುವರಿದ ದೇಶದಲ್ಲಿರುವ ಅಂತಹುದೇ ಸ್ಥಾವರಕ್ಕೆ ಭೇಟಿ ಕೊಡುವಂತೆ ಮಾಡಿ ಅಲ್ಲಿಯ ಸುತ್ತಮುತ್ತಲ ಜನರ, ತಾಂತ್ರಿಕಜ್ಞರ, ಪರಿಸರವಾದಿಗಳೊಂದಿಗೆ ಸಂಪರ್ಕಿಸುವಂತೆ ಮಾಡಿ ಸ್ಥಾಪಿಸಲಿರುವ ಸ್ಥಾವರದೊಂದಿಗೆ ತುಲನೆ ಮಾಡುವ ಅವಕಾಶ ಕಲ್ಪಿಸಿಕೊಡಬಹುದು. ಸಮಿತಿಯು ಈ ಎಲ್ಲಾ ವಿಚಾರಗಳನ್ನು ಪರಿಶೀಲಿಸಿ ತಮ್ಮ ಒಪ್ಪಿಗೆ(ಬೇಕಿದ್ದರೆ ಸುಧಾರಿಸುವ ಅಗತ್ಯತೆಗಳ ಸೂಚನೆಗಳೊಂದಿಗೆ)ಯನ್ನು ಕೊಡಬಹುದು. ಸ್ಥಾವರ ಸ್ಥಾಪನೆಯಾದ ಮೇಲೂ ಈ ಪರಿಸರ ಸಮಿತಿಗಳು ಮುಂದುವರಿದು, ಕಾಲಕಾಲಕ್ಕೆ ಆ ಸ್ಥಾವರದಿಂದ ಆಗುವ ಪರಿಸರ ಹಾಗೂ ಸಮಾಜದ ಮೇಲಾಗುವ ಪ್ರಭಾವಗಳನ್ನು ಪರಿಶೀಲಿಸಿ, ಸ್ಥಾವರದ ಪ್ರತಿನಿಧಿಗಳೊಂದಿಗೆ ಸ್ಪಂದಿಸಿ, – ಮೊದಲು ದಾಖಲು ಮಾಡಿಕೊಂಡ ಅಂಕೆ ಸಂಖ್ಯೆಗಳೊಂದಿಗೆ ತುಲನೆ ಮಾಡಿ, ಮೊದಲು ಮಾಡಿಕೊಂಡ ಒಪ್ಪಂದದ ಪರಿಮಿತಿಯೊಳಗೆ ಇವೆಲ್ಲಾ ಇವೆ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಈ ರೀತಿಯ ರಚನಾತ್ಮಕವಾದ ನಿಲುವಿನಿಂದ ಸಮಾಜವು ಔದ್ಯೋಗೀಕರಣದ ಫಲವನ್ನು ಪರಿಸರದ ಹಾನಿಯಾಗದಂತೆ ಪಡಕೊಳ್ಳಬಹುದು.

ಔದ್ಯೋಗೀಕರಣಕ್ಕೆ ಪರಿಸರವಾದದ ವಿರೋಧ

ಹೆಚ್ಚುತ್ತಿರುವ ಜನಸಂಖ್ಯೆಯನ್ನು ಮತ್ತು ಸುಖ ಸೌಕರ್ಯಗಳಿಗಾಗಿ ಹೆಚ್ಚುತ್ತಿರುವ ಆಶಯಗಳನ್ನು ಎದುರಿಸುವ ಉಪಾಯವೆಂದರೆ ಬೃಹತ್ ಕೈಗಾರಿಕೀಕರಣ ಮತ್ತು ರಸ್ತೆ ಸಾರಿಗೆಗಳಂತಹ ಸವಲತ್ತುಗಳ ಬೆಳವಣಿಗೆಯೇ ಸೈ. ಈ ಕಟು ಸತ್ಯವನ್ನು ಕೆಲವು ಪರಿಸರಪರರು ಒಪ್ಪಲಾರರು, – ಯಾಕೆಂದರೆ, ಹೆಚ್ಚಾಗಿ ಈ ವರ್ಗದವರು ಸಮಾಜವಾದಿಗಳೂ, ಬಂಡವಾಳ ಶಾಹಿಯ ಮತ್ತು ಜಾಗತೀಕರಣದ ಎದುರಾಳಿಗಳೂ ಆಗಿರುತ್ತಾರೆ. ಇವರ ಅಸ್ಪಷ್ಟ ಮತ್ತು ಅಸಂಪೂರ್ಣ ಸಮಾಜವ್ಯವಸ್ಥೆಯ ಯೋಜನೆಯಲ್ಲಿ ಗ್ರಾಮೀಣ ಉದ್ಯೋಗ, ಸಣ್ಣ ಉದ್ಯಮಗಳು (small industries), ಗಾಂಧೀ ತತ್ವದ ಸರಳ ಜೀವನ ಇವೆಲ್ಲಾ ಅಡಕವಾಗಿರುತ್ತವೆ. ವಿಪರೀತವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಬೇಕಾದ ಆಧುನಿಕ ಸೌಕರ್ಯಗಳನ್ನು ಒದಗಿಸುವಲ್ಲಿ ಈ ರೀತಿಯ ವಾದ ಅಥವಾ ಯೋಜನೆಗಳು ಅಸಫಲವಾಗಿವೆ ಎನ್ನುವುದಕ್ಕೆ

ಇವರು ಒಪ್ಪಲಾರರು. ಜನಸಂಖ್ಯೆಯ ಹೆಚ್ಚಳವನ್ನು ತಡೆಯುವ ವಿಷಯದಲ್ಲಿ ಇವರು ತಲೆಹಾಕಲಾರರು ಮತ್ತು ಗ್ರಾಮೀಣ ಉದ್ಯೋಗ, ಸರಳ ಜೀವನ ತತ್ವ ಇವೆಲ್ಲಾ ಆಧುನಿಕ ಸೌಕರ್ಯಗಳನ್ನು ಹೇಗೆ ಒದಗಿಸಬಲ್ಲುವು ಎಂಬುದಕ್ಕೆ ತಕ್ಕ ವಿವರಣೆ ಸಿಗದು. ಉದಾಹರಣೆಗೆ, – ಚಿಕ್ಕ ಪುಟ್ಟ ಹಳ್ಳಿ, ಊರುಗಳಲ್ಲೂ ಜನರು ಬಸ್ಸುಗಳ ಸಾರಿಗೆ, ವಿದ್ಯುತ್ ದೀಪ ಮುಂತಾದ ಆಧುನಿಕ ಉದ್ಯೋಗದ ಕೊಡುಗೆಗಳಿಗೆ ಒಗ್ಗಿದ್ದಾರೆ. ಗ್ರಾಮೀಣ ಉದ್ಯೋಗ ಅಥವಾ ಸಣ್ಣ ಉದ್ಯಮಗಳು ಬಸ್ಸುಗಳನ್ನು, ಅದನ್ನು ಚಲಿಸಲಿಕ್ಕೆ ಬೇಕಾದ ಡೀಸಲ್ ಇಂಧನ, ವಿದ್ಯುತ್ತು ಇವನ್ನೆಲ್ಲಾ ಒದಗಿಸಬಲ್ಲವೆ? ಅಥವಾ ಈ ಪರಿಯ ಸವಲತ್ತುಗಳನ್ನು ಜನರು ತೊರೆಯಬಲ್ಲರೆ? ಪರಿಸರ ಪರವಾಗಿ ಪಣ ತೊಟ್ಟವರು ಕೂಡಾ ಬಸ್ಸು, ಕಾರು, ವಿಮಾನಗಳನ್ನು ಬಿಟ್ಟು ಗ್ರಾಮೀಣ ಪದ್ಧತಿಯಲ್ಲಿ ನಡೆದುಕೊಂಡು ಇಲ್ಲವೆ ಎತ್ತಿನ ಗಾಡಿಯಲ್ಲಿ ಹೋಗಬಲ್ಲರೇ? ಕಾಂಕ್ರೀಟು ಮನೆಗಳ ಬದಲು ಹುಲ್ಲಿನ ಮಾಡುಗಳ ಮನೆಯಲ್ಲಿ ಇರಬಲ್ಲರೇ? ಅವರು ಉಪಯೋಗಿಸುವ ಸಾಧನಗಳನ್ನು, ಸವಲತ್ತುಗಳನ್ನು ಒದಗಿಸುತ್ತಿರುವುದು ಬೃಹತ್ ಕಾರ್ಖಾನೆಗಳು, ಸ್ಥಾವರಗಳು ಎಂಬುದನ್ನು (ಅವರ ಕಣ್ಣೆದುರಿಗೆ ಇಲ್ಲದಿದ್ದರೂ) ಮರೆಯಲಾಗದು. ಬಸ್ಸು, ಕಾರುಗಳಿಗೆ ಬೇಕಾದ ಇಂಧನ ಬೃಹತ್ ತೈಲ ಶುದ್ಧೀಕರಣ ಸ್ಥಾವರಗಳಲ್ಲಿ (oil refineries) ಉತ್ಪಾದಿಸಲ್ಪಡು ತ್ತದೆ. ಕಾಂಕ್ರೀಟು ಮನೆಗೆ ಬೇಕಾದ ಸಿಮೆಂಟು, ಬಸ್ಸು, ಕಾರುಗಳನ್ನು ತಯಾರಿಸಲು ಬೇಕಾದ ಉಕ್ಕು ಮತ್ತಿತರ ಲೋಹಗಳು ಇವೆಲ್ಲಾ ಬೃಹತ್ ಕಾರ್ಖಾನೆಗಳಲ್ಲಿ ರೂಪುಗೊಳ್ಳುತ್ತವೆ ಮತ್ತು ಸಿಮೆಂಟು, ಉಕ್ಕುಗಳ ತಯಾರಿಗೆ ಬೇಕಾದ ಖನಿಜಗಳು ಬೃಹತ್ ಗಣಿಗಾರಿಕೆಯಲ್ಲಿ ಉತ್ಪಾದಿಸಲ್ಪಡುತ್ತವೆ. ಹೀಗೆ, ಆಧುನಿಕ ಜೀವನ ಶೈಲಿಗೂ ಬೃಹತ್ ಉದ್ಯೋಗಗಳಿಗೂ ಕಡಿಯಲಾರದ ನಂಟು.

ಆಧುನಿಕತೆ ಮತ್ತು ಅದಕ್ಕೆ ಬೇಕಾದ ಔದ್ಯೋಗೀಕರಣಗಳು ಪರಿಸರವನ್ನು ಹಾಳುಕೆಡವುತ್ತವೆ ಎಂಬುದು ಹೆಚ್ಚಾಗಿ ಮೇಲ್ನೋಟಕ್ಕೆ ಮಾತ್ರ ಕಾಣುವ ವಿಚಾರ. ಇದಕ್ಕೆ ಒಂದು ಉದಾಹರಣೆ ಸಾಕು. ಹಳೆಕಾಲದಲ್ಲಿ ಅಡುಗೆಗೆ ಮಡಕೆಗಳನ್ನು ಬಳಸುತ್ತಿದ್ದರು. ಗ್ರಾಮೀಣ ಉದ್ಯೋಗದಲ್ಲಿ ಮಡಕೆಗಳನ್ನು ಆವೆ ಮಣ್ಣಿನಿಂದ ತಯಾರಿಸಲಾಗುತ್ತದೆ. ತಯಾರಿಸಿದ ಹಸಿ ಮಡಕೆಗಳನ್ನು ಕಟ್ಟಿಗೆ ಉರಿಸಿ ಹೊಗೆ ಕಾರುವ ಒಲೆಗಳಲ್ಲಿ ಬೇಯಿಸಲಾಗುತ್ತದೆ. ಹೀಗೆ ಮಾಡಿದ ಮಡಕೆಯ ಬಾಳಿಕೆ ಅಲ್ಪ. ಜೀವನದುದ್ದಕ್ಕೂ ಅವೆಷ್ಟೋ ಮಡಕೆಗಳು ಬೇಕಾಗುತ್ತವೆ. ಮತ್ತು ಇವಿಷ್ಟನ್ನು ಬೇಯಿಸಲಿಕ್ಕೆ ಬೇಕಾದ ಸಾಕಷ್ಟು ಪ್ರಮಾಣದ ಕಟ್ಟಿಗೆ ಕಾಡಿನ ನಷ್ಟವಾಗಿ, ಪರಿಸರಕ್ಕೆ ಹೊಡೆತ ಕೊಟ್ಟು ಬರಬೇಕಾಗುತ್ತದೆ. ಈಗ ಈ ಮಡಕೆಗಳ ಬದಲು ಔದ್ಯೋಗೀಕರಣದ ಫಲವಾದ ಸ್ಟೀಲು, ಇಲ್ಲವೆ ಅಲ್ಯುಮೀನಿಯಂ ಪಾತ್ರೆಗಳನ್ನು ಬಳಸಲಾಗುತ್ತದೆ. ಇವುಗಳ ತಯಾರಿಯಲ್ಲಿ ಅದುರು, ಕಲ್ಲಿದ್ದಲು, ವಿದ್ಯುತ್‌ಗಳನ್ನು ಉಪಯೋಗಿಸಲಾಗುತ್ತದೆ; ಕಟ್ಟಿಗೆಯಲ್ಲ. ಈ ಪಾತ್ರೆಗಳು ಬಡ ಕುಟುಂಬಗಳಿಗೆ ಜೀವಮಾನದುದ್ದಕ್ಕೂ ಎನ್ನುವಂತೆ ಬಾಳಿಕೆಗೆ ಬರುತ್ತವೆ. ಹೀಗಾಗಿ ಇದರಿಂದ ಪರಿಸರಕ್ಕೆ ನೇರವಾಗಿ ಆಗುವ ನಷ್ಟದ ಪ್ರಮಾಣ ತುಂಬ ಕಡಿಮೆ.

ಮೇಲಿನ ಉದಾಹರಣೆಗೆ ಜನಸಂಖ್ಯೆಯ ವೃದ್ಧಿಯ ಪರಿಣಾಮವನ್ನೂ ಸೇರಿಸಬೇಕಾ ಗುತ್ತದೆ. ಸ್ವಾತಂತ್ರ್ಯದ ನಂತರ ಮೂರು ಪಟ್ಟು ಹೆಚ್ಚಾದ ಜನರೆಲ್ಲಾ ಇನ್ನೂ ಮಡಕೆಯನ್ನೇ

ಬಳಸುತ್ತಿದ್ದರೆ, ಈ ಅಸಂಖ್ಯಾತ ಮಡಕೆಗಳನ್ನು ಬೇಯಿಸಲಿಕ್ಕೆ ಎಷ್ಟು ಅಗಾಧ ಪ್ರಮಾಣದಲ್ಲಿ ಕಟ್ಟಿಗೆಯ ವ್ಯಯವಾಗುತ್ತಿತ್ತು. ಇದರಿಂದ ನಮ್ಮ ವನ ಸಂಪತ್ತಿಗೆ ಇನ್ನೆಷ್ಟು ಹಾನಿಯಾಗುತ್ತಿತ್ತು ಎಂದು ಊಹಿಸಿಕೊಳ್ಳಬಹುದು. ವೃದ್ಧಿಸುತ್ತಿರುವ ಜನಸಂಖ್ಯೆಯ ಪಾಲನೆಗೆ ಹೇಗೆ ಔದ್ಯೋಗೀಕರಣ ನೆರವಾಗುತ್ತದೆ ಮತ್ತು ಅದರಿಂದ ಪರಿಸರ ಹಾನಿ ಹೆಚ್ಚಾಗಬೇಕೆಂಬ ನಿಯಮವಿಲ್ಲ ಎಂಬುದಕ್ಕೆ ಇದು ಚಿಕ್ಕ ನಿದರ್ಶನ.

ಪರಿಸರ ಪರವಾಗಿ ಮಾಡಬಹುದಾದ ಕೆಲಸ

ಸುಲಭವಾಗಿ ಗುರುತಿಸಲಾಗುವ ಮತ್ತು ಮಾಧ್ಯಮದ ಝಳಕಕ್ಕೆ ಅನುವಾಗುವ ಹಾಗೂ ಚಳುವಳಿಯ ಒತ್ತಡಕ್ಕೆ ತುತ್ತಾಗುವ ಸರಕಾರಿ ವಲಯದ, ಇಲ್ಲವೆ ಮರ್ಯಾದಸ್ಥ ಖಾಸಗಿ ವಲಯದಲ್ಲಿರುವ ಬೃಹತ್ ಯೋಜನೆಗಳ ಯಾ ಸ್ಥಾವರಗಳ ಎದುರಾಗಿ ದಿಢೀರ್ ಚಳುವಳಿಗಳನ್ನು ಶುರು ಮಾಡುವ ಬದಲು, ಪರಿಸರಕ್ಕೆ ಮೂಲತಃ ಕುತ್ತವಾಗಿರುವ, – ಜನಸಂಖ್ಯೆಯ ಅವಿರತ ಹೆಚ್ಚುವಿಕೆ, ವಿದ್ಯಾಹೀನತೆ, ಹಾಗೂ ದಿನ ನಿತ್ಯದ ಜೀವನದಲ್ಲಿ ಪರಿಸರಕ್ಕೆ ಹಾನಿಕಾರಕವಾಗಿರುವ ರೂಢಿಯ ಕಾರ್ಯಗಳ, ಅಭ್ಯಾಸಗಳತ್ತ ಗಮನ ಹರಿಸಿ, ಅಲ್ಲಿ ಮೂಲಭೂತ ಪರಿವರ್ತನೆಗೆ ಪ್ರಯತ್ನ ಆಗಬೇಕು.

ಉದಾಹರಣೆಗೆ, ಹಠಾತ್ತಾಗಿ ಕುದುರೆಮುಖ ಗಣಿಯ ಎದುರು ಚಳುವಳಿ ಶುರುವಾಗಿದೆ. ಗಣಿಯಿಂದಾಗಿ ನದಿಗಳಿಗೆ, ವನಗಳಿಗೆ ಮತ್ತು ವನ್ಯಜೀವಿಗಳಿಗೆ ಅಪಾರ ಹಾನಿಯಾಗಿದೆ ಎಂದು ಅಂಕೆ ಸಂಖ್ಯೆಗಳ ಮುಖೇನ ಆರೋಪಿಸಲಾಗಿದೆ. ಆದರೆ ಮೊದಲೇ ಹೇಳಿದಂತೆ ನಮ್ಮ ವನಸಂಪತ್ತು ಕುದುರೆಮುಖ ಗಣಿಯ ರೂಪರೇಷೆ ಹಾಕುವ ಮೊದಲೇ ಭಾರೀ ಪ್ರಮಾಣದಲ್ಲಿ ನಾಶವಾಗಲು ಮೊದಲಾಗಿತ್ತು. ಕಾರಣ ವರ್ಷದಿಂದ ವರ್ಷ ಹೆಚ್ಚುವ ಸಂಖ್ಯೆಯ ಬಡ ಸಂಸಾರಗಳು ತಮ್ಮ ಅಡುಗೆಗೆ ದಿನ ನಿತ್ಯ ಕಟ್ಟಿಗೆಯನ್ನು ಉರಿಸುತ್ತ ಬಂದಿದ್ದಾವೆ. ಈ ಕಟ್ಟಿಗೆ ಕಾಡುಗಳಿಂದ ಬರಬೇಕಷ್ಟೆ. ನಮ್ಮ ಜೋಡು ಜಿಲ್ಲೆಗಳಲ್ಲಿ ಇದರಿಂದಾಗಿ ಎಷ್ಟು ಕಾಡುಗಳು ನಾಶವಾಗುತ್ತಿವೆ ಎಂಬುದಕ್ಕೆ ಅಂಕೆ ಸಂಖ್ಯೆಗಳ ಅಗತ್ಯವಿದೆ. ಮೇಲ್ನೋಟಕ್ಕಾದರೂ, ಈ ನಾಶದ ಪ್ರಮಾಣ ಕುದುರೆಮುಖ ಗಣಿಯಿಂದಾದುದಕ್ಕೆ ಹಲವು ಪಟ್ಟು ಹೆಚ್ಚಿದ್ದರೆ ಆಶ್ಚರ್ಯವಿಲ್ಲ. ಕಟ್ಟಿಗೆಯ ಬದಲು ಅಡುಗೆಯ ಅನಿಲವನ್ನು ಉಪಯೋಗಿಸುವುದರಿಂದ ವನಸಂಪತ್ತಿನ ನಾಶವನ್ನು ನಿಲ್ಲಿಸಬಹುದು. ಆದರೆ ಕಟ್ಟಿಗೆಯ ಕ್ರಯ ಅಡುಗೆಯ ಅನಿಲಕ್ಕಿಂತ ಕಡಿಮೆ. ನಮ್ಮ ವನಸಂಪತ್ತನ್ನು ಸಾಕಷ್ಟು ಕಾಳಜಿಯಿಂದ ರಕ್ಷಿಸುತ್ತಿದ್ದರೆ ಅಷ್ಟರ ಮಟ್ಟಿಗೆ ಸೌದೆಯು ದುರ್ಲಭವಾಗಿ ಅದರ ಕ್ರಯ ಹೆಚ್ಚಾಗಿ, ಅನಿಲದ ಸುಲಭ ಸೌಕರ್ಯವೂ ಸೇರಿ, – ಸೌದೆಯ ಬದಲು ಅನಿಲವೇ ಸಾರ್ವತ್ರಿಕವಾಗಿ ಉಪಯೋಗಕ್ಕೆ ಬರುತ್ತಿತ್ತು.

ಹಾಗೆಯೇ ನಮ್ಮ ಜೋಡು ಜಿಲ್ಲೆಗಳಲ್ಲಿ ಹಲವು ಹಂಚಿನ ಕಾರ್ಖಾನೆಗಳಿವೆ. ಮೊದಲು ಹೇಳಿದಂತೆ ಈ ಕಾರ್ಖಾನೆಗಳಲ್ಲಿ ಹಸಿ ಹಂಚನ್ನು ಬೇಯಿಸಲಿಕ್ಕೆ ಕಟ್ಟಿಗೆಯನ್ನು ಭಾರೀ ಪ್ರಮಾಣದಲ್ಲಿ ಉರಿಸುತ್ತಾರೆ. ಪ್ರತಿ ವರ್ಷ ಇದು ಎಷ್ಟು ಪ್ರಮಾಣದಲ್ಲಿ ಇರಬಹುದು ಎಂಬುದಕ್ಕೆ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುವ ಅಗತ್ಯವಿದೆಯಾದರೂ, – ಕುದುರೆಮುಖ ಗಣಿಯನ್ನು ಮೊದಲು ಮಾಡಿದಾಗ ಒಮ್ಮೆ ಉಂಟಾದ ನಾಶಕ್ಕೆ ಇದು ಸಾಟಿಯಾಗಿ ನಿಂತರೆ ಆಶ್ಚರ್ಯವಿಲ್ಲ.

ಇಲ್ಲೂ ಬೇರೆ ಇಂಧನಗಳನ್ನು ಉಪಯೋಗಿಸಬಹುದಾದರೂ, ನಮ್ಮ ನಿರ್ಲಕ್ಷತೆಯಿಂದ ಕಟ್ಟಿಗೆಂದು ಸುಲಭ ಸಾಧ್ಯವಾಗಿ ದೊರೆಯುವಂತಾಗಿ ಅದನ್ನು ಉಪಯೋಗಿಸುವುದು ಅಗ್ಗವಾಗುತ್ತದೆ.

ಕಟ್ಟಿಗೆಯನ್ನು ಇನ್ನೆಷ್ಟೋ ಸಂದರ್ಭಗಳಲ್ಲಿ, – ಬೆಲ್ಲ ಮಾಡುವುದರಿಂದ ಹಿಡಿದು ಮಣ್ಣಿನ ಇಟ್ಟಿಗೆ ಮಾಡುವಲ್ಲಿಯ ವರೆಗೆ, – ಉಪಯೋಗಿಸುತ್ತಾರೆ.

ಬರೇ ಕುದುರೆಮುಖ ಗಣಿಯ ಮೇಲೆ ಏಕಮುಖವಾಗಿ ಧಾಳಿಯ ಬದಲು, ಮೇಲೆ ಹೇಳಿದ ಕುದುರೆಮುಖಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಅವಿರತವಾಗಿ ಅರಣ್ಯ ಸಂಪತ್ತನ್ನು ನಾಶ ಮಾಡುವ ಕಾರಣಗಳತ್ತಲೂ ಯಾಕೆ ದೃಷ್ಟಿ ಹಾಯಿಸಬಾರದು?

ಅನ್ಯಾಯ ರೀತಿಯಲ್ಲಿ ಕಾಡುಗಳನ್ನು ಕಡಿದು ಕಳ್ಳ ಸಾಗಾಟ ಮಾಡುತ್ತಿರುವುದು ಇವತ್ತು ನಿನ್ನೆಯ ಕತೆಯಲ್ಲ; ಕುದುರೆಮುಖ ಯೋಜನೆಗಿಂತ ಎಷ್ಟೋ ಮೊದಲಿನದು. ನಮ್ಮ ವನಸಂಪತ್ತಿನ ಸೂರೆಯ ದೊಡ್ಡ ಸಂಕೇತ ವೀರಪ್ಪನ್ ಆಗಿದ್ದರೂ, ಅವನಂತೆ ನೂರಾರು ವೀರಪ್ಪನ್‌ಗಳು ಕೆಲವು ಭ್ರಷ್ಟ ರಾಜಕಾರಣಿಗಳ ಮತ್ತು ಸರಕಾರಿ ಸಿಬ್ಬಂದಿಯವರ ಸಹಕಾರದಿಂದ ಕಾಡುಗಳನ್ನು ಸೂರೆ ಮಾಡುತ್ತಲೇ ಬಂದಿದ್ದಾರೆ. ಇವರ ವಿರುದ್ಧ ಯಾಕೆ ಯಾವ ಚಳುವಳಿಯೂ ನಡೆಯುತ್ತಿಲ್ಲ?

ಏನಿದ್ದರೂ, ನಮ್ಮ ಜಿಲ್ಲೆಗಳಲ್ಲಿ ಅಡುಗೆಯ ಅನಿಲ (LP gas) ಎಲ್ಲರಿಗೂ ಕೈಗೆಟಕುವ ಕ್ರಯದಲ್ಲಿ ಸಿಗುವುದಿದ್ದರೆ ಸೌದೆಗೆ ಯಾರೂ ಕೈಹಾಕುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ಕಟ್ಟಿಗೆಯ ಬೇಡಿಕೆ ಕಡಿಮೆಯಾಗಿ, ಅದರ ಕಳ್ಳ ಸಾಗಾಟದಲ್ಲಿ ಲಾಭ ಕಡಿಮೆಯಾಗಿ ಅದು ನಿಂತು ಹೋಗಬಹುದಿತ್ತು. ಅಂದರೆ ಮೂಲತಃ ಇದೊಂದು ಆರ್ಥಿಕ ವ್ಯವಸ್ಥೆಯ ಸಮಸ್ಯೆ.

ಸಾರಾಂಶ

ಪ್ರಕೃತಿಯ ಮೇಲೆ ಮಾನವನ ಹಸ್ತಕ್ಷೇಪ ಮಾನವ ಜಾತಿಯ ವಿಕಾಸವಾದಂದಿನಿಂದಲೆ ಮೊದಲಾಗಿದೆ.

ಜನಸಂಖ್ಯೆ ಹೆಚ್ಚುತ್ತಲೆ, ಹೆಚ್ಚಿದ ಜನತೆಯನ್ನು ಪಾಲಿಸಲು ಪೋಷಿಸಲು ಪ್ರಕೃತಿಯ ಮೇಲೆ ಹಾಗೂ ಪರಿಸರ ಸಮತೋಲನದ ಮೇಲೆ ಮಾನವನ ಹಸ್ತಕ್ಷೇಪ ಹೆಚ್ಚುತ್ತಲೇ ಹೋಗಿದೆ.

ವಿಜ್ಞಾನದ ಕೊಡುಗೆಯಾದ ಆಧುನಿಕ ಸೌಲಭ್ಯಗಳು (ಸ್ವಯಂಚಾಲನೆ, ವಿದ್ಯುತ್ತಿನ ಬಳಕೆ ಇತ್ಯಾದಿ) ಮಾನವನಿಗೆ ದೊರೆತು, ಈ ಸೌಲಭ್ಯಗಳನ್ನು ನಿರಂತರವಾಗಿ ದೊರಕಿಸಿಕೊಳ್ಳಲು ಪ್ರಕೃತಿಯನ್ನು ಇನ್ನೂ ಜೋರಾಗಿ ಉಪಯೋಗಿಸುತ್ತಿದ್ದಾನೆ.

ಜನಸಂಖ್ಯೆ ಹೆಚ್ಚುತ್ತಲೇ ಇದೆ, ಆಧುನಿಕತೆ ಇನ್ನೂ ಹಬ್ಬುವುದಲ್ಲದೆ, ಮೊದಲೇ ಇದ್ದಲ್ಲಿ ಇನ್ನೂ ತೀವ್ರವಾಗುತ್ತಿದೆ. ಅಂದರೆ ಪರಿಸರದ ಮೇಲೆ ಈ ಎರಡರ ಪ್ರಭಾವ ಅದಮ್ಯ.

ಜನಸಂಖ್ಯೆ ಹೆಚ್ಚಳ ಸದ್ಯದಲ್ಲಿ ನಿಲ್ಲುವ ಹಾಗಿಲ್ಲ. ಆಧುನಿಕನಾದ ಮಾನವ ಸೌಲಭ್ಯ ಗಳನ್ನು ತೊರೆಯುವ ಸಾಧ್ಯತೆಯೂ ಇಲ್ಲ.

ನಮ್ಮಂತಹ ಇನ್ನೂ ವಿಕಸಿತವಾಗುತ್ತಿರುವ ದೇಶದಲ್ಲಿ ಜನಸಂಖ್ಯೆಯ ಒತ್ತಡ ಒಂದು ಕಡೆಯಾದರೆ, ಆಧುನಿಕ ಸೌಲಭ್ಯಗಳ ಬಳಕೆಯನ್ನು ತೀವ್ರವಾಗಿಸುವ ಒತ್ತಡ ಇನ್ನೊಂದು ಕಡೆ.

ಹೆಚ್ಚುತ್ತಿರುವ ಜನಸಂಖ್ಯೆಯನ್ನು ಪಾಲಿಸಲು ಮತ್ತು ಅವಕ್ಕೆ ಆಧುನಿಕ ಸೌಲಭ್ಯಗಳನ್ನು ಒದಗಿಸಲು, ಆಧುನಿಕ ತಂತ್ರಪೂರಿತ ಕೈಗಾರಿಕೀಕರಣದ ಹೊರತು ಬೇರೆ ಉಪಾಯವಿಲ್ಲ. ಮುಂದುವರಿದ ರಾಷ್ಟ್ರಗಳ ಉದಾಹರಣೆಯಿಂದ ವಿದಿತವಾಗುವುದೆಂದರೆ, – ಕೈಗಾರಿಕೀಕರಣದಿಂದ ಒದಗಿ ಬರುವ ಸಂಪತ್ತಿನಿಂದ ಈ ರಾಷ್ಟ್ರಗಳು ನಮ್ಮ ಜನತೆಯನ್ನು ಹೆಚ್ಚು ಸುಖ ಸೌಕರ್ಯಗಳಿಂದ ಪಾಲಿಸಲು ಶಕ್ತವಾಗಿವೆಯಲ್ಲದೆ, ಈ ಸಂಪತ್ತಿನಿಂದಲೇ ಒದಗಿದ ವ್ಯಾಪಕ ವಿದ್ಯೆ ಮತ್ತು ಅರಿವಿನಿಂದ ತಮ್ಮ ಪರಿಸರದ ಮೇಲೆ ಆಧುನಿಕ ಜೀವನಶೈಲಿ ಮತ್ತು ಕೈಗಾರಿಕೀಕರಣ ಉಂಟುಮಾಡುತ್ತಿರುವ ಹಾನಿಯನ್ನು ಕ್ರಮೇಣ ಕಂಡುಕೊಂಡು, ಆ ಹಾನಿಯನ್ನು ಹೋಗಲಾಡಿಸುವ ಇಲ್ಲವೆ ಹದ್ದಿನೊಳಗಿಡುವ ಉಪಾಯಗಳಿಗೆ ತಮ್ಮ ಸಂಪತ್ತನ್ನು ಬಳಸುತ್ತಿವೆ. ಈಗಷ್ಟೆ ವಿಕಸಿತವಾಗುತ್ತಿರುವ ನಮ್ಮಂತಹ ದೇಶಗಳಿಗೆ ಮುಂದುವರಿದ ರಾಷ್ಟ್ರಗಳು ಪ್ರಗತಿಯ ಮಾರ್ಗದಲ್ಲಿ ಮಾಡಿದ ಮುಂಚಿನ ತಪ್ಪುಗಳನ್ನು ಗುರುತಿಸಲಿಕ್ಕೆ ಮತ್ತೆ ಹಾಗೆ ಮಾಡಿದ ತಪ್ಪುಗಳನ್ನು ತಿದ್ದಲು ಈಗ ಮಾಡಿದ ಉಪಾಯಗಳನ್ನು ಮೊದಲಿನಿಂದಲೆ ಬಳಸಲಿಕ್ಕೆ ಅವಕಾಶವಿದೆ.

ಪೂರ್ವಾಪರಗಳ ಪರಿವೆ ಇಲ್ಲದೆ, ಪರಿಸರದ ಪರವಾಗಿ ಔದ್ಯೋಗೀಕರಣವನ್ನು ದಿಢೀರ್ ಚಳವಳಿಗಳಿಂದ ವಿರೋಧಿಸುವ ಬದಲು, ಪರಿಸರದ ಮೂಲಭೂತ ವೈರಿಯಾದ ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸುವ ಹಾಗೂ ಅದಕ್ಕೆ ಪೂರಕವಾಗಿ ಸಾರ್ವತ್ರಿಕವಾದ ಉತ್ತಮ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವ ಅವಿರತ ಪ್ರಯತ್ನ ಅತ್ಯಗತ್ಯ.

ಔದ್ಯೋಗೀಕರಣ ಮತ್ತು ಸವಲತ್ತುಗಳ ಬೆಳವಣಿಗೆ ಅಗತ್ಯವಾದರೂ, ಪರಿಸರಕ್ಕೆ ಹೆಚ್ಚು ಧಕ್ಕೆ ಬರದಂತೆ ಮುಂಜಾಗ್ರತೆಗಳನ್ನು ವಹಿಸುವುದು ಅಗತ್ಯ ಮತ್ತು ಸಾಧ್ಯ.

■ **ಯು. ವೆಂಕಟ್ರಾಜ ರಾವ್ :**
೪೦೧, ಆಶಿಯಾನಾ, ಸೆಂಟ್ ಪಾಲ್ ರೋಡ್, ಬಾಂದ್ರಾ(ಪ), ಮುಂಬಯಿ-೪೦೦ ೦೫೦ ■

ನೀವೇ ಪ್ರಮಾಣು : (ಬಸವಣ್ಣನನ್ನು ಸ್ಮರಿಸಿ) – ಎಂ. ಡಿ. ಗೋಗೇರಿ

ದಕ್ಷಿಣ ಭಾರತ ಉತ್ತರ ಭಾರತ
ಬೇರಿಲ್ಲ ಕಾಣ ಭೋ
ಭ್ರಷ್ಟಾಚಾರವೇ ಸ್ವರ್ಗ ಕಾಣಯ್ಯ
ಶಿಷ್ಟಾಚಾರವೇ ನರಕ ಕಾಣಯ್ಯ
ಲಂಚ ತಿಂಬುದೆ ಸ್ವರ್ಗ
ತಿಂಬದಿರುವುದೆ ನರಕ
ಹೇ ವೆಂಕಟಾಚಲ ಎ. ಪಿ. ಜೆ. ಕಲಾಂ
ಹೇ ಸೃಷ್ಟಿಕರ್ತ ಯಾರಿಗೆ ದೂರಲಿ ?
ನೀವೇ ಪ್ರಮಾಣು. ■

■ ಎಂ. ಡಿ. ಗೋಗೇರಿ : ನವಅಯೋಧ್ಯಾನಗರ, ಹುಬ್ಬಳ್ಳಿ - ೫೮೦ ೦೩೪

ಬರೀ ಬಸ್ಸಲ್ಲೋ ಅಣ್ಣ....., ಇದು ಬ್ರಹ್ಮಾಂಡ !

— ಚಿದಾನಂದ ಸಾಲಿ

ನೀವು ಕೇಳಿರಲಿಕ್ಕೆ ಸಾಕು. ಕೇಳಿರುವುದಷ್ಟೇ ಏನು, ಅವರಿವರು ಹಾಗೆ ಅಂತಾರೆಂದು ನೀವೂ ಹಾಗೆ ಹೇಳಿರಲಿಕ್ಕೂ ಸಾಕು. ನೀವು ಕೇಳರ ಕೇಳಿರ್ರಿ, ಹೇಳರ ಹೇಳಿರ್ರಿ– “ ‘ಟ್ರೇನ್ ಜರ್ನಿ’ ಅಂಬೋದು ಬಸ್ ಪ್ರಯಾಣಕ್ಕಿಂತ ತುಂಬಾ ಕಂಫರ್ಟಬಲ್ ಮತ್ತು ಎಂಜಾಯಬಲ್” ಅನ್ನುವ ಮಾತಿದೆಯಲ್ಲ, ಅದನ್ನು ಅರ್ಧ ಮಾತ್ರವೇ ಒಪ್ಪುವ ಪೈಕಿ ಮನುಷ್ಯ ನಾನು. ಕಂಫರ್ಟಬಲ್ ಅನ್ನೋದು ಖರೇನೇ ಆದ್ರೂ ಎಂಜಾಯಬಲ್ ಅನ್ನುವ ಮಾತಿಗೆ ನನ್ನ ತಕರಾರಿದೆ. ಆ ವಿಷಯದಲ್ಲಿ ಬಸ್ಸು ನೀಡುವ ಥರಾವರಿ ಅನುಭವಗಳ ಮುಂದೆ even ವಿಮಾನ ಪ್ರಯಾಣವೂ ಸಮನಾಗಲಿಕ್ಕಿಲ್ಲ ಎಂಬುದು ನನ್ನ ಬಲವಾದ ನಂಬಿಕೆ !

ಬಸ್ ಪ್ರಯಾಣ ಎಂದರೆ– ಸೀಟಿಗಾಗಿ ಕಿಟಕಿ ಹತ್ತುವುದು, ಹಾಕಿದ ಕರವಸ್ತ್ರವನ್ನು ಯಾರೋ ಎಗರಿಸಿರುವುದು, ಕಂಡಕ್ಟರ್‌ನೊಂದಿಗೆ ಕಿತ್ತಾಟ, ಸಹಪ್ರಯಾಣಿಕರನ್ನು ಒತ್ತಿ ಸರಿಸುವ ಮುಸುಕಿನ ಗುದ್ದಾಟ, ಪೇಪರ್ ಕೊಟ್ಟು ಅದು ಹರಿದು ಹಂಚಿ ಹೋದವನ ಪರದಾಟ, ಸ್ಟಾಪ್ ಬಿಟ್ಟು ಎಲ್ಲೋ ದೂರ ಇಳಿಯಬೇಕಾಗಿ ಬಂದವನ ಗೊಣಗಾಟ, ಸೀಟುಗಳಿದ್ದರೂ ಹೆಂಗಸರಿಗೆ ಆತುಕೊಂಡು ನಿಂತು ಪರಮಾನಂದ ಅನುಭವಿಸುವ ಪಡ್ಡೆ ಹುಡುಗರ ಮುಟ್ಟಾಟ... ಮರೆತಿದ್ದೆ, ಇಂಜಿನ್ ಮೇಲೆ ಕಾಲಿಟ್ಟು ಡ್ರೈವರ್‌ನೊಂದಿಗೆ ಬೈಸಿಕೊಂಡವನ ತಿಣುಕಾಟ... ಇಂಥ ಅಪರೂಪದ ಸಾವಿರ ಅನುಭವಗಳ ಗಣಿ.

ಬಸ್ ಜರ್ನಿ ಎಂಬ ಈ ಪ್ರಯಾಣಪರ್ವ ಆರಂಭವಾಗುವುದೇ ಬಸ್ಟ್ಯಾಂಡಿಗೆ ಬಸ್ಸು ಬಂದು ನಿಲ್ಲುವ ದೃಶ್ಯದಿಂದ. ಅದು ಬರುವ ವರೆಗೆ ಬಸ್ಟ್ಯಾಂಡು ನಿಮಗೆ ದರ್ಶಿಸುವ ಸತ್ಯಗಳು, ವಿಚಿತ್ರಗಳು ಮತ್ತು ವಿಚಿತ್ರ ಆದರೂ ಸತ್ಯಗಳು ಮುಂತಾದವೆಲ್ಲ ನಿಮ್ಮನ್ನು ಎಷ್ಟು ಪರವಶ ಗೊಳಿಸುತ್ತವೆಂದರೆ ನಿಮಗೆ ಬಸ್ ಬಂದ ವಿಷಯವು ತಡವಾಗಿ ಗೊತ್ತಾಗಿ ಅಷ್ಟೊತ್ತಿಗಾಗಲೇ ಸೀಟಿಗಾಗಿ ಯುದ್ಧಪರ್ವ ಶುರುವಾಗಿರುತ್ತದೆ. ನುರಿತ ಹೈಜಂಪ್ ಪಟುಗಳಂತೆ ಕಿಟಕಿ ಸರಳು ಗಳನ್ನು ಹಿಡಿಹಿಡಿಯುತ್ತಲೆ ಚಂಗನೆ ಎಗರುವ ಮಂಗಕುಲಜರು ಥೇಟು ಯಂಗ್ ಮಂಗ ಗಳಂತೆಯೇ ಕಿಟಕಿಯಲ್ಲಿ ತಮ್ಮ ತಲೆಯನ್ನು(ಮೆದುಳಿರಬಹುದಾದ !) ತೂರಿ ಸೀಟು ಆಲ್‌ರೆಡಿ ಬುಕ್ ಆಗಿದೆಯೆ, ಇನ್ನೂ ಖಾಲಿ ಇದೆಯೇ ಎಂಬುದನ್ನು– ಸೀಟಿನ ಮೇಲೆ ವಸ್ತ್ರ, ಟಾವೆಲ್ಲು, ಚಪ್ಪಲಿಗಳಂಥ ಅಮೂಲ್ಯ ಐಟೆಮ್ಮುಗಳು ಬೇಕಾಬಿಟ್ಟಿಯಾಗಿ ಬಿದ್ದುಕೊಂಡಿರುವುದನ್ನು ಪರೀಕ್ಷಿಸುವ ಮೂಲಕ ಖಚಿತಪಡಿಸಿಕೊಳ್ಳುತ್ತಾರೆ. ಒಂದು ವೇಳೆ ಸೀಟು ಖಾಲಿ ಇತ್ತೆಂದರೆ ಇವರದೊಂದು ಅಂಥ ವಸ್ತು ಬಿತ್ತೆಂದೇ ಅರ್ಥಮಾಡಿಕೊಳ್ಳಬೇಕು ! ಇಲ್ಲವಾದರೆ ಹಿಂದೆ. ಮುಂದೆ ಅಲ್ಲಿಂದಲೆ ಹಣಕಿ ಹಾಕಿ ಆಚೆ ಸೀಟಿನ ವರೆಗೂ ಜಿರಾಫೆಯಂತೆ ಗೋಣು ಚಾಚಿ ಅಲ್ಲೂ ಖಾಲಿಯಿರದಿದ್ದರೆ ಕಿಟಕಿ ಹಾರಿದ ಶ್ರಮ ವ್ಯರ್ಥವಾಗಬಾರದೆಂದು ಹಾಕಿದವರ ಮೇಲೇ ಮತ್ತೊಮ್ಮೆ ಹಾಕಿ, ವಿಜಯದ ಹುಸಿನಗೆ ಬೀರುತ್ತ ಕೆಳಗಿಳಿಯುತ್ತಾರೆ.

ಒಳಗಿನಿಂದ ಕೆಳಗಿಳಿಯುತ್ತಿರುವವರ ಪಾಡಂತೂ ದೇವರಿಗೇ ಪ್ರೀತಿ. ಈ ಕಿಟಕಿ ಹತ್ತಿ ಅಂತರ ಮೇಲೆ ತೂರಾಡುತ್ತಿರುವ ಜನ, ಅಲ್ಲಿ ಸೀಟಿಲ್ಲವಾಗ, ಆಚೆ ಕಡೆ ಎಲ್ಲಾದರೂ ಇದ್ದರೆ

ಹಾಕಿ ಅಂತ ಕೆಳಗಿಳಿಯುತ್ತಿರುವವರಿಗೆ ಮುಂಬಾಲು ಬೀಳುತ್ತಾರೆ. ಅದೂ ಅತ್ತ ಮನವಿಯೂ ಅಲ್ಲದ ಇತ್ತ ಆದೇಶವೂ ಅಲ್ಲದ ವಿಚಿತ್ರ ತೆರನ ಶೈಲಿಯಲ್ಲಿ ಮಾತಾಡಿ, ಉತ್ತರಕ್ಕೂ ಕಾಯದೆ, ಒಳಗಿದ್ದವರ ಕೈಯಲ್ಲಿ ತಮ್ಮ ಕರವಸ್ತ್ರ ಯಾ ಟಾವೆಲ್ಲನ್ನು ಕೊಟ್ಟು ಕೆಳಗಿಳಿದೇ ಬಿಡುತ್ತಾರೆ. (ಪುಣ್ಯಕ್ಕೆ ಚಪ್ಪಲಿ ಕೊಡುವುದಿಲ್ಲವೆಂಬುದೊಂದೇ ಸಮಾಧಾನ !)

ಹೀಗೆ ಕಿಟಕಿ ಹತ್ತಿ ಅಂತರ ಮೇಲೆ ನಿಂತವರಿಗೆ ದಸ್ತಿ, ಟಾವೆಲ್ಲು, ಚೀಲ, ಚಪ್ಪಲಿ ಕೊಡಲೆಂದು ಕೆಳಗೆ ನಿಂತವರು ಅದನ್ನೇ ಮರೆತು ಮತ್ತ್ಯಾವ ಕಡೆಗೋ ಸೀಟಾನ್ವೇಷಣೆಗೆ ಹೊರಟುಬಿಡುವುದುಂಟು ! ಅಂಥ ಸಂದರ್ಭಗಳಲ್ಲೆಲ್ಲ ಕಿಟಕಿ ಹತ್ತಿ ನಿಂತಿರುವವರ ಪಿತ್ಥ ನೆತ್ತಿಗೇರಿ, ಮಂಡೆ ಬಿಸಿಯಾಗಿ ಕಟ್ಟಿದ್ದ ತಮ್ಮ ಪಂಚೆಯನ್ನೇ ದುಶ್ಶಾಸನನಂತೆ ಒಂದು ಕೈಯಲ್ಲಿ ಸರಸರಾಂತ ಸೆಳೆದುಕೊಂಡು ಮೂರೂ ಸೀಟುಗಳನ್ನು ಹಾಕಿಬಿಡುವ ಪ್ರಸಂಗಗಳಿಗೇನೂ ಬರವಿಲ್ಲ. ಅಂಥ ಒಬ್ಬ 'ಪಂಚೆಪೀಠಾಧೀಶ'ನನ್ನು ಈಚೆಗಷ್ಟೇ ಸ್ವತಃ ನಾನೇ ಕಂಡು ದಂಗಾಗಿ ಹೋದೆ. ಆ ಪುಣ್ಯಾತ್ಮ ಅವತ್ತು ಚಡ್ಡಿ ಹಾಕುವುದನ್ನೇನಾದರೂ ಮರೆತಿದ್ದರೆ ಬಸ್ಸ್ಟ್ಯಾಂಡಿನಲ್ಲಿದ್ದ ಜನ ನನ್ನಂತೆ ಸುಮ್ಮನೆ ದಂಗಾಗುವುದು ಬಿಟ್ಟು ದಂಗೆಯೇ ಏಳುತ್ತಿದ್ದರೇನೋ ಎಂದು ಈಗ ನನಗನಿಸುತ್ತಿದೆ. ಪುಣ್ಯಕ್ಕೆ ಹಾಗೆಲ್ಲ ಏನೂ ಅವಘಡವಾಗದೆ ಪಾಮರನಾದ ನಾನು ಬದುಕಿಕೊಂಡೆ !

ಅದಿರಲಿ ಈಗ ಒಳಗಿನಿಂದ ಇಳಿಯುತ್ತಿರುವವರ ಕಥೆ ಕೇಳಿ. ಅವರು ಕಿಟಕಿ ಮೂಲಕ ಕೊಡುವವರಿಂದ ಇಸಕೊಂಡು ಇಸಗೊಂಡು ಸೀಟುಗಳನ್ನೆಲ್ಲ ತಾವೇ ಕೈಯಾರ ಹಾಕಿ ಭರ್ತಿ ಮಾಡಿದ್ದರೆ ಅದು ಇನ್ನೂ ಇಂಟರೆಸ್ಟಿಂಗ್ ಆಗಿರುತ್ತೆ. ಆಗ ಶುರುವಾಗುತ್ತೆ ನೋಡಿ ಅವರಿಗೆ ಅಸಲಿ ಧರ್ಮಸಂಕಟ. ಎಲ್ಲ ಫುಲ್ ಆಗಿವೆ ಎಂದು ಹೇಳಿ ವಾಪಸ್ ಕೊಡೋಣವೆಂದರೆ ಕೊಟ್ಟ ಆಸಾಮಿ ಕಿಟಕಿ ಬಿಟ್ಟಿಳಿದು ಭೂಸ್ಪರ್ಶ ಮಾಡಿರುತ್ತಾನಲ್ಲದೆ, ಹಾಗೊಮ್ಮೆ ಹೇಳಿದರೂ ದೇಶಾವರಿ ನಗೆ ನಕ್ಕು 'ಅಲ್ಲೇ ಒಂದು ಎಲ್ಲ್ಯರ ಅಡ್ಜಸ್ಟ್ ಮಾಡ್ರಿ' ಅಂದು ಮುಖ ತಿರುಗಿಸಿ ಬಿಡುತ್ತಾನೆ. ಈಗ ಒಳಗಿನವನ ಮುಂದೆ ಎರಡು optionಗಳಿರುತ್ತವೆ. ಒಂದು– ಹಾಕಿದ ಸೀಟ್ ಮೇಲೇ ಹಾಕಿ ಇಳಿದುಬಿಡುವುದು; ಅವರ ಕರ್ಮ ಅವರವರು ಜಗಳವಾಡಿಕೊಳ್ಳುತ್ತಾರೆ ! ಎರಡು– ಸೀಟಿನ ಕೆಳಗೆ ಹಾಕಿ ಹೋಗುವುದು ಅಥವಾ ಇನ್ನೂ ಸ್ವಲ್ಪವೇ ಜಾಣರಾಗಿದ್ದರೆ– ಕರವಸ್ತ್ರವಾದರೆ ಕಿಸೆಯೊಳಕ್ಕೆ, ಟಾವೆಲ್ಲಾದರೆ ಚೀಲದೊಳಕ್ಕೆ ಇಳಿಸಿಕೊಂಡು ಬಂದು ಆತನಿಗೆ "ಹಾಕಿನ್ನೋಡ್ರಿ ಆ ಕಡೆ ಸೈಡು ಮೂರನೇ ಸೀಟಲ್ಲಿ ನಡುಕಿಂದು" ಅಂತ ಒಂದು ಗಾಳಿಯಲ್ಲಿ ಗುಂಡು ಹೊಡೆದು ಮಾಡಿರುವ ಘನಂದಾರಿ ಕೆಲಸಕ್ಕೆ ಆತನಿಂದ ಥ್ಯಾಂಕ್ಸ್ ಬೇರೆ ಪಡೆದುಕೊಂಡು ಹೋಗುವುದು !

ಇನ್ನು ಕೆಲವರದು ವಿಚಿತ್ರ ಆದರೂ ಸತ್ಯ ಮಾದರಿ ! ಅವರು ತಮ್ಮ ಮಕ್ಕಳನ್ನು ಅನಾಮತ್ತಾಗಿ ಎತ್ತಿ ಕಾಯಿಪಲ್ಲೆ ಚೀಲಕ್ಕಿಂತ ಕಡೆ ಎಂಬಂತೆ ಕಿಟಕಿ ಮೂಲಕ ತೂರಿಸಿ ಸ್ಟೈಟಾಗಿ ಸೀಟ್ ಮೇಲೇ ಇಳಿಸಿಬಿಡುತ್ತಾರೆ. ಅವು ಇಳಿಯುವವರನ್ನು ಪಿಳಿಪಿಳಿ ನೋಡುತ್ತ, ಕಿಟಕಿ ಮೂಲಕ ತಮ್ಮನ್ನು ಪಾರ್ಸಲ್ ಮಾಡಿದ ಪವಿತ್ರಾತ್ಮಗಳ ಕುರಿತು ಆಶ್ಚರ್ಯಾತಂಕಗಳನ್ನು ವ್ಯಕ್ತಪಡಿಸುತ್ತ ಹೇಳಿಕೊಳ್ಳಲು ಬಾರದ ಅನುಭವಿಸಲೂ ಆಗದ ವಿಚಿತ್ರ ಅನುಭೂತಿಗೆ ಸಿಕ್ಕು ಒದ್ದಾಡುತ್ತಿರುತ್ತವೆ. ಕೆಲವೊಮ್ಮೆ ಎಲ್ಲಿ 'ಬಾಲನಾಗಮ್ಮ' ಕಥೆಯಲ್ಲಿ ಅಪವೀಲಿ ಮಕ್ಕಳನ್ನು

ಮಲಗಿಸಿ ಎದ್ದು ಹೋದಂತೆ ತಮ್ಮನ್ನು ಕಿಟಕೀಲಿ ತೂರಿಸಿದ ಅಪ್ಪ-ಅಮ್ಮಂದಿರು ಹೊರಟೇಬಿಡುವ ರೇನೋ ಎಂಬ ಭಯವೂ ಕಾಕತಾಳೀಯವೆಂಬಂತೆ ಆ ಕ್ಷಣದಲ್ಲಿ ಹುಟ್ಟಿ ಇವು ಭಯದಿಂದ ಬಿಟ್ಟಿಬಿದ್ದು ಚಿಟ್ಟನೆ ಚೀರಿ ಅಳಲು ಶುರು ಮಾಡುವುದೂ ಉಂಟು. ಹೊರಗೆ ನಿಂತ ಅಪ್ಪನ ಪಾತ್ರ ಹೇಗೆ ವರ್ತಿಸುವುದೋ ಆಗ ನೋಡಬೇಕು ನೀವು. ಕಿಟಾರನೆ ಕಿರುಚುತ್ತಿರುವ ಕೂಸನ್ನು ಒಳಗೆ ಕಳಿಸಿದಷ್ಟು ಸಲೀಸಾಗಿ ಹೊರಗೆ ಕರೆದುಕೊಳ್ಳುವುದು ಸಾಧ್ಯವಿಲ್ಲ ಎಂಬ ಸತ್ಯದ ಅರಿವಿರುವ ಆತ, ಅದೇ ಕಾರಣಕ್ಕೆ ಆಗ ಹೆಂಡತಿ ಕ್ಯಾಕರಿಸಿ ಉಗಿದರೂ ಉಗಿಸಿಕೊಂಡು, ನಂತರ ಒರೆಸಿಕೊಂಡು ಸುಮ್ಮನಾಗಿ ಒಳಬಂದ ನಂತರ ಆ ಸಿಟ್ಟನ್ನು ಮಗುವಿಗೆ ವರ್ಗಾಯಿಸುತ್ತಾನೆ.

ಇನ್ನು, ಕೆಳಗೆ ಮಕ್ಕಳು ನಡೆದು ಹೋದರೂ ಕಾಣಿಸದಂಥ ಹಂಡೆಗಾತ್ರದ ಹೊಟ್ಟೆಯ ಪುಟ್ಟಾನೆಗಳು ಬುಸ್‌ಬುಸ್ ಉಸಿರುಬಿಡುತ್ತ, ತೇಕುತ್ತ, ಪ್ರವಾಹದೋಪಾದಿಯಲ್ಲಿ ಹರಿದು ಬರುತ್ತಿರುವ ಬೆವರನ್ನು ಕರವಸ್ತ್ರ ಸಾಲದೆ ಧೋತ್ರದಿಂದ ಒರೆಸಿಕೊಳ್ಳುತ್ತ, ಸರೀಸೃಪಗಳೋಪಾದಿ ಯಲ್ಲಿ ಸರಿದಾಡುತ್ತ ತಮ್ಮ ಕಾದಿರುವ ಸೀಟಿನೆಡೆಗೆ ನಡೆದುಬರುತ್ತಿರುವ ಸೊಬಗನ್ನು ನೋಡಲು ನಿಜಕ್ಕೂ ಎರಡು ಕಣ್ಣು ಸಾಲವು. ಹಾಸ್ಯಪ್ರಜ್ಞೆಯುಳ್ಳವರಿಗೆ ಅದೊಂದು ವರ್ಣನಾತೀತ ದೃಶ್ಯ ವೈಭವ.

ಇದರಲ್ಲೇ ಕುಯ್ಯೋ-ಮರ್ರೋ ಎಂದು ಕಿರುಚುವ ಮಕ್ಕಳು, ಸೆರಗನ್ನೇ ಬೀಸಣಿಕೆ ಮಾಡಿಕೊಂಡು ಗಾಳಿ ಹಾಕಿಕೊಳ್ಳುತ್ತಿರುವ ಮಾನಿನಿಯರ ಎದೆಗಾರಿಕೆಯನ್ನು ಮನದಲ್ಲೇ ಮೆಚ್ಚುತ್ತ, ಸೂರ್ಯಕಾಂತಿಯಂತೆ ತಮ್ಮ ಮುಖಪುಷ್ಪವನ್ನು ಸ್ತನಸೂರ್ಯದ್ವಯರೆಡೆಗೆ ಆಸೆಯಿಂದ ತಿರುಗಿಸುವ ಪಡ್ಡೆ ಹುಡುಗರು. ಆಹಾ ಬಸ್ಸೇ !

ಪ್ರಯಾಣಿಕರ ಪಾಡು-ಫಜೀತಿ ಹೀಗಾದರೆ ಡ್ರೈವರ್-ಕಂಡಕ್ಟರರದು ಇನ್ನೊಂದು ರೀತಿ. ಬಸ್ಸಿಗೆ ಬಸ್ಸೇ ಬೆಂಕಿಯ ಬಿಸಿಲಲ್ಲಿ ಕುದ್ದು ಕರಕಲಾಗಿ ಹೋಗುತ್ತಿರುವಾಗ ಎಲ್ಲರ ದೃಷ್ಟಿ ಡ್ರೈವರನ ಮೇಲೆ. ಅವನಾದರೋ ಸಾಕ್ಷಾತ್ ದೇವರಂತೆ, ನಿಧಾನವಾಗಿ ಆ ಬಿಸಿಲಲ್ಲೇ ಒಂದು ಬೀಡಿ ಎಳೆದು ಬಸ್ಸಿಗಿಂತ ಮೊದಲೇ ಹೊಗೆಯುಗುಳುತ್ತಿರುತ್ತಾನೆ. ಇನ್ನು ಕಂಡಕ್ಟರನ ನೋಡುತ್ತಿದ್ದರೆ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಶರಣ ಮನಸ್ಸಿನ ಯಾರಿಗಾದರೂ ಕರುಣೆಯುಕ್ಕದೇ ಇರದು. ಅರವತ್ತು ಸೀಟಿನ ಬಸ್ಸಿನಲ್ಲಿ ತುಂಬಿಕೊಂಡ ನೂರಿಪ್ಪತ್ತು ಜನರ ನಡುವೆ ಯಾರಿಗಾದರೂ ಸುರಳೀತ ಮುಂದೆ ಸಾಗಲು ದಾರಿ ಸಿಗುತ್ತದೆಂದರೆ ಅದು ನಿಸ್ಸಂಶಯವಾಗಿ ಕಂಡಕ್ಟರನೇ ಎಂದು ಕನಸಲ್ಲೂ ಕಣ್ಮುಚ್ಚಿಕೊಂಡು ಹೇಳಬಹುದು. ತೊಯ್ದು ತೊಪ್ಪೆಯಾದ, ಹರಿದು ತೇಪೆ ಹಚ್ಚಿಸಿಕೊಂಡ, ಚುಂಗು ಕಿತ್ತಿಹೋದ ಥರೇವಾಹಿ ನೋಟುಗಳನ್ನು ನೀಡಿ ತಲೆಗೊಂದರಂತೆ ತರಲೆ ಮಾತಾಡುವ ತರತರದ ಜನರನ್ನು ಕೂಡ ಸಮಾನಪ್ರೀತಿಯಿಂದ ಸ್ವೀಕರಿಸುವ ಆತನನ್ನು ನೋಡುತ್ತಿದ್ದರೆ, ಕೊಟ್ಟರೆ ಮಗಳನ್ನು ಕಂಡಕ್ಟರ್ ಅಳಿಯನಿಗೆ ಕೊಡಬೇಕು ಎಂದು ನನಗಂತೂ ತುಂಬಾ ಸಲ ಅನ್ನಿಸಿದೆ.

ಈ ಮಧ್ಯೆ ತಿಣುಕಾಡಿ ತಿಪ್ಪರಲಾಗ ಹಾಕಿ ಬಸ್ಸಿನ ಮಧ್ಯದ ಕಿಟಕಿ ಪಕ್ಕದ ಸೀಟು ಗಿಟ್ಟಿಸಿಕೊಂಡ ಪುಣ್ಯಾತ್ಮರಿಗೆ ಕಂಡಕ್ಟರನು ಬಂದು ಟಿಕೇಟು ಕೇಳಿದಾಗಲೆ ತಾವು ರಾಂಗ್ ಬಸ್ಸಿಗೆ ಹತ್ತಿರುವ ಜ್ಞಾನೋದಯವಾಗುವ ಪ್ರಸಂಗಗಳೂ ಇರುತ್ತವೆ. ಇಳಿಯಲೂ ಆಗದೆ,

ಕೂರಲೂ ಆಗದೆ ಅವರು ಅನುಭವಿಸುವ ಸಂಕಟ ಅವರವರ ಮನೆದೇವರಿಗೇ ಪ್ರೀತಿ. ಕಿಕ್ಕಿರಿದ ಜನಸಂದಣಿಯಲ್ಲಿ ದಾರಿ ಮಾಡಿಕೊಂಡು ಇಳಿಯುವುದೆಂದರೆ ಪುನರ್ಜನ್ಮ ಪಡೆದಷ್ಟೇ ಕಷ್ಟದ ಕೆಲಸ ಎಂದು ಯೋಚಿಸುವ ಇವರು ಇನ್‌ಸ್ಟಂಟ್ ಆಗಿ ತಮ್ಮ ರೂಟನ್ನೇ ಬದಲಿಸಿ ಯಾವುದೋ ಊರಿಗೆ ಟಿಕೇಟು ಕೊಂಡುಬಿಡುವುದನ್ನು ನಾನು ಕಂಡಿದ್ದೇನೆ.

'ಧೂಮಪಾನ ನಿಷೇಧಿಸಿದೆ' ಎಂಬ ಬೋರ್ಡು ಕೂಡ ಕಾಣಿಸದಂತೆ ವ್ಯಾಪಿಸಿಕೊಂಡಿರುವ ಧೂಮ, ಧಗೆ ತಾಳಲಾಗದೆ ಕೀರಲು ದನಿಯಲ್ಲಿ ಕಿರ್ರನೆ ಕಿರುಚುತ್ತ 'ಎದ್ವೋಡಿ' ರಾಗದಲ್ಲಿ ಹಾಡುತ್ತಿರುವ ಕಿರಿಕಿರಿ ಮಕ್ಕಳು, ಒಂದೇ ಸೀಟಿಗಾಗಿ ಕಿತ್ತಾಡುತ್ತಿರುವವರ ಸಂಸ್ಕೃತ ಭೂಯಿಷ್ಠ ಭಾಷೆಯ ಪರಸ್ಪರ ಸಹಸ್ರ ನಾಮಾರ್ಚನೆ, ಸೀಟು ಸಾಲದೆ ಒದ್ದಾಡುತ್ತಿರುವ ಪುಟ್ಟಾಣಿಗಳ ಪರದಾಟ, ಡಬ್ಬಲ್ ಸೀಟ್ ಆಕ್ರಮಿಸಿಕೊಂಡ ಅವರನ್ನು ದುಸುಮುಸು ನೋಡುತ್ತಿರುವ ಸಹಸೀಟಿಗರ ದುಮ್ಮಾನ... ಆಹಾಹಾ ಒಂದೇ ಎರಡೇ. ಬಸ್ಸೆಂದರೆ ಬರೀ ಬಸ್ಸಲ್ಲೋ ಅಣ್ಣಾ ಅದು ಬ್ರಹ್ಮಾಂಡ !!

ಆಹ್ ! ಡ್ರೈವರ್‌ಸಾಬ್ ಬಂದ, ಡ್ರೈವರ್‌ಸಾಬ್ ಬಂದ ಅಂತ ಜನರೆಲ್ಲ ಅನ್ನುತ್ತಿರುವಾಗ ಅರೆ ಏಟು ತಿಂದಿರುವ ಪ್ರಾಣಿಗೆ ಜೀವ ತಿರುಗಿದ ಭಾವ ಅವರ ಮುಖಗಳಲ್ಲಿರುತ್ತದೆ. ನಾಲ್ಕೈದು ಸಲ ಆ ಡಗ್ಗ ಬಸ್ಸು ಗುರ್ರ್ ಗುರ್ರ್ ಎಂದು ಒಗಲು ಮಾಡಿ ಕೊನೆಗೂ ಸ್ಟಾರ್ಟಾಗಿ ಮೂವ್ ಆಗುತ್ತಿದ್ದಂತೆ ಕಿಟಕಿ ಮೂಲಕ ಸಣ್ಣಗೆ ಹಾಯುವ ಗಾಳಿ ಜೀವಕ್ಕೆ ತಂಪೆರೆಯುತ್ತದೆ. ಇನ್ನು ಟಾಪ್ ಮೇಲೆ ಕೂತಿರುವವರ ಟಾಪ್‌ಗಳಂತೂ ಕೆಂಪಗೆ ಕಾದು ಮುಟ್ಟಿದರೆ ಕಾದ ಹೆಂಚು ಮುಟ್ಟಿದಂತಾಗುತ್ತಿರುತ್ತದೆ. ಮುಕುಳಿಯಂತೂ ಬಿಸಿಲಿಗೆ ಕೊಳೆತ ಟೊಮೆಟೊ ಹಣ್ಣಿನಂತೆ ಹಣ್ಣಣ್ಣಾಗಿ ಹೋಗಿರುತ್ತದೆಂಬುದನ್ನು ಹೇಳುವ ಆವಶ್ಯಕತೆಯೇ ಇಲ್ಲ.

ತುಂಬು ಗರ್ಭಿಣಿಯಂತೆ ಬಸ್ಸು ಒಳಗೊಂದು ನೂರಿಪ್ಪತ್ತು, ಮೇಲೊಂದು ಮೂವತ್ತು ಮಂದಿಯನ್ನು ತುಂಬಿಕೊಂಡು ಗಜಗಮನೆಯಂತೆ ನಿಧಾನವಾಗಿ ಚಲಿಸುತ್ತ, ತಗ್ಗುಗಳನ್ನು ಪಾರು ಮಾಡಿಕೊಂಡು, ಆಚೀಚೆ ವಾಲುತ್ತ, ಹತ್ತಿಪ್ಪತ್ತು ಜಂಪ್‌ಗಳನ್ನು ಹಾರಿಕೊಂಡು ಹೋದ ಮೇಲೆ ಅದ್ಯಾವ ಮಾಯೆಯೋ ಗೊತ್ತಿಲ್ಲ, ಇನ್ನು ಒಂದಿಪ್ಪತ್ತು ಜನ ಹಿಡಿಯುವಷ್ಟು ಸ್ಥಳಾವಕಾಶವಾಗಿರುತ್ತದೆ. ಕೂತವರು-ನಿಂತವರು ಒಂದೇ ಕುಟುಂಬದವರೇನೋ ಎಂಬಂತೆ ಯಾವ್ಯಾವುದೋ ಕಾಡುಹರಟೆಗಳಲ್ಲಿ ಮೈಮರೆತು ತಲ್ಲೀನರಾಗಿರುತ್ತಾರೆ.

ಹಾಗೆ ಹೀಗೆ ಮಾಡಿ ಅವರವರು ಅವರವರ ಊರಿಗೆ ಸೇಫ್ ಆಗಿ ಲ್ಯಾಂಡ್ ಆದಾಗ, ಮುಖದ ಮೇಲೆ ರಾಜ್ಯ ಗೆದ್ದ ಸಂಭ್ರಮ ಲಾಸ್ಯವಾಡುತ್ತಿರುತ್ತದೆ. ಮನೆ ಮುಟ್ಟಿ ಜೇಬಲ್ಲಿನ ಟಿಕೇಟು ನೋಡಿಕೊಂಡಾಗ ಅದರ ಹಿಂದೆ ಕಂಡಕ್ಟರರು ಬರಕೊಟ್ಟ ಆರು ರೂಪಾಯಿ ಚಿಲ್ರೆ ಅವನ ಹಿಂದೆಯೇ ಹೋಗಿದ್ದು ನೆನಪಾಗಿ ಮೈಯೆಲ್ಲ ಉರಿದರೂ, ಬಸ್ ಪ್ರಯಾಣದ ಮೇಲೆ ಮಾತ್ರ ಯಾರೂ ಯಾವ ಕಾರಣಕ್ಕೂ ಕೋಪ ಮಾಡಿಕೊಂಡ ಹಾಗೆ ನಾನು ಕಾಣೆ. ■

■ ಚಿದಾನಂದ ಸಾಲಿ : ಸಿರಿವಾರ-೫೮೪೧೨೯ (ರಾಯಚೂರು)

ಎರಡು ಕನಸುಗಳು

— ನಾ. ಮೊಗಸಾಲೆ

೧. ನರನಾಗಿರುವುದರಿಂದ

ಹೆಣ್ಣಿನ ನೆತ್ತಿಯ ಆಘ್ರಾಣಿಸಿದಾಗೆಲ್ಲ
ಅಲ್ಲಿ ಇಡೀ ಜಗದ ಸುಗಂಧ ಇರಲಿ.

ಹೆಣ್ಣಿನ ಎದೆಯ ಮೇಲೆ ಇದ್ದಾಗ
ಈ ಜಗದ ತಂದೆ ತಾಯಿಗಳು ನಾವೆನುವ
(ಸುಖ) ಭಾವ ಬರಲಿ.

ನೀವುತ್ತಿದ್ದರೆ ಹೆಣ್ಣಿನ ಬೆನ್ನನ್ನ
ಅಲ್ಲಿ ಅವಳ ಸರ್ವಾಂಗ ಸ್ಪರ್ಶವೆಲ್ಲ
ಕೇಂದ್ರೀಕೃತವಾಗಲಿ

ಸುಖದ ಮಡು ಹೆಣ್ಣಿನ ತೊಡೆನಡು
ವಿನಲ್ಲಿ ಇಳಿದಾಗಲೆಲ್ಲ
ಅದು ಇಹಪರವ ಮೀರಿ ನಿಲ್ಲಲಿ

ಹೀಗೆಂದು ಬೇಡಿಕೊಳಲಾರೆ ನಾರಾಯಣನ
ನಾನು ನರನಾಗಿರುವುದರಿಂದ!

೨. ಮಾರಮ್ಮ

ಎಲ್ಲ ಹೆಣ್ಮಕ್ಕಳ ನೋವು ಕ್ರೋಧವಾಗಿ
ಇವಳ ಕಣ್ಣುಗಳಾದಂತಿವೆ.

ಗಂಡಸರ ಕ್ರೌರ್ಯದ ಬೆಟ್ಟವನ್ನು
ತುಳಿದೂ ತುಳಿಯಲಾಗದೆ
ಪ್ರಾಣ ಬಲಿಯಲ್ಲಿ
ಇವಳು ನಾಲಗೆ ತಣಿಸಿಕೊಂಡಂತಿದೆ.

ಆದರೂ ಅವಳ ಎದೆಯಲ್ಲಿ
ಹೆಣ್ತನ ಹೇಗೆ ಮೇಲೆದ್ದಿದೆ.

ಸದಾ ಆರತಿ ಬೆಳಗುವ ನಮ್ಮ ಕೈ
ಒಮ್ಮೆಯಾದರೂ ತನ್ನ ಮೊಲೆಯನ್ನು ನೀವಿ
ಪುಳಕಗೊಳಿಸಬಾರದೇ ಎನ್ನುವ ಹಾಗೆ
ಅವಳ ಎದೆ ಕಂಪಿಸುವಂತಿದೆ.

ಮಾರಮ್ಮ, ಹೇಗೆ ಹೇಳಲಿ ನಿನ್ನ
ಮಾರಮ್ಮ ಎಂದು ?

■ ಡಾ. ನಾ. ಮೊಗಸಾಲೆ : ಕಾಂತಾವರ - ೫೭೪ ೧೨೯ (ಉಡುಪಿ) ■

ಒಂದು ಹೂ ಹೆಚ್ಚಿಗೆ ಇಡುತೀನಿ

— ಲಲಿತಾ ಸಿದ್ದಬಸವಯ್ಯ

ಮುದುಕಿಗೆ ಭಯ ಫೋನು ಝಣಗುಟ್ಟುತ್ತಿದೆ ಎಡಬಿಡದೆ
ಎತ್ತಿಕೊಳ್ಳಲೋ ಬೇಡವೋ ಏನೆನ್ನುವಳೋ ಸೊಸೆ ಜೊತೆಗೆ
ಮಗ ಗದರಬಹುದು 'ಎಷ್ಟು ಸಲವಮ್ಮ ಹೇಳುವುದು ನಿನಗೆ ?'
ಫೋನು ಮಣೆಯವರೆಗೂ ಬರುತ್ತಾಳೆ ನಿಂತು ನೋಡುತ್ತಾಳೆ
ಒಂದು ಸಲ ಕಿಚನ್ನಿನ ಕಡೆಗೆ ಇನ್ನೊಂದು ಸಲ ಸ್ಟಡಿರೂಮಿನೆಡೆಗೆ
ನಿಂತುಬಿಡುತ್ತೇನೋ ಇದು ಯಾರಾದರೂ ಬರಬಾರದೇ ಬೇಗ
ಆ ಕಡೆಗೆ ಮುದುಕನಿರಬಹುದು ಎಳೆಯುತ್ತಿದೆ ಅವಳ ಜೀವ

ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು ಅವರ ಯೋಗಕ್ಷೇಮವನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯ ತುರಿಕೆ ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು
ಕಿರಿಮಗ ಮತ್ತವನ ಹೆಂಡತಿ ಒಂಭತ್ತಕ್ಕೆ ಗುಡ್ಡದ ಕ್ವಾರ್ಟರ್ಸ್

ಬಿಟ್ಟರೆ ಮತ್ತೆ ಮನೆ ಸೇರುವುದು ಹೊತ್ತು ತಿರುಗಿದ ಮೇಲೇ
ಮಾತೇ ಮರೆತು ಹೋಗಿದೆ ಕಣೆ ಎನ್ನುತ್ತಾನೆ ಫೋನು ಮಾಡಿ
ದಾಗಲೆಲ್ಲ ಮಾತಾಡು ಮಾತಾಡು ಆಡು ಮಾತಾಡುತ್ತಿರು...
ನಿಲ್ಲಿಸಬೇಡ ಗೋಗರೆಯುತ್ತಾನೆ ಫೋನು ಗೂಡನ್ನೇ ತಬ್ಬಿ
ಹಿಡಿದಿದ್ದಾನೆನ್ನುವುದು ಇಲ್ಲಿಂದಲೇ ಗೊತ್ತಾಗುತ್ತದೆ ಮುದುಕಿಗೆ
ಮೆಲ್ಲಗೆ ಅಳುತ್ತಾಳೆ ಸುಯ್ಲು ಸೋರದ ಹಾಗೆ ಒಳಗೊಳಗೇ
ನುಂಗುತ್ತಾಳೆ ದಿಗಿಲು ಅವಳಿಗೆ ಅತ್ತ ಮುದುಕನಿಗೆ ಗೊತ್ತಾದರೆ
ಪಾಪ ಕೊರಗುತ್ತಾನೆ ಇತ್ತ ಮಗನಿಗೆ ಕೇಳಿಸಿದರೆ ಗದರುತ್ತಾನೆ
'ಸುಮ್ಮನಿರಮ್ಮ ಈಗ ಅಳುವಂಥದ್ದೇನಾಗಿದೆಯಮ್ಮ ನಿನಗೆ ?'

ಇನ್ನು ತಡೆಯಲಾಗದು ಸೋಪಾನಕದ್ದಿರುವ ಗಾಜುಬಿಲ್ಲೆ
ಯ ನುಣುಪು ಜಾರಿಸದ ಹಾಗೆ ಮೊಣಕಾಲ ಚಿಪ್ಪ ಮೇಲೆ
ಭಾರ ಹೇರುತ್ತ ಹೇರಿದ ಭಾರಕ್ಕೆ ಅದುರುವ ಮಂಡಿಗಳ
ಮೇಲೆ ಅಂಗೈ ಅದುಮುತ್ತ ಒಂದೊಂದೇ ಮಜಲು ಹತ್ತಿ
ಕಾಡಿ ಕರೆಯುತ್ತಾಳೆ ಮೊಮ್ಮಗಳನ್ನು; ಜಾಣೆ ಮೊಮ್ಮಗಳು
ಮೂಜಗವನ್ನೆ ಆವಾಹಿಸಿ ಕುಂತಿದ್ದಾಳೆ ಸ್ವಂತ ಕಂಪ್ಯೂಟರಿನ
ಯಜ್ಞಶಾಲೆಯೊಳಗೆ ಅವಳ ದಾಸವಾಳದ ಕುಡಿ ಬೆರಳಸರ
ಇಷ್ಟು ಇಷ್ಟೇಇಷ್ಟು ಆ ಇಲಿಯಬಾಲ ಹಿಡಿದೆಳೆದರೂ ಸಾಕು
ಓಂ ಐಂ ಶ್ರೀಂ ಓಂ ಬೀಜಾಕ್ಷರಕೆ ವಶಗೊಂಡ ಅಭಿಮಾನಿ
ದೇವತೆಯು ಆಕಾಶ ಮಾರ್ಗದಲಿ ಬಂದಿಳಿವಂತೆ ಅತಳ ವಿತಳ
ತಳಾತಳ ಪಾತಾಳ ರಸಾತಳಗಳೆದ್ದೆದ್ದು ಕುಣಿಯುತಿವೆ ಪರದೆ
ಮೇಲೆ; ನಡುವೆ ಈ ಅಜ್ಜಿ ಇಡಬಹುದೆ ಕಡುಬಿನ ಸೋರೆ
ಚಿಟುಗುಡುತ್ತಲೇ ಅಟ್ಟವಿಳಿದು ಬಂದವಳು ಫಟ್ಟನೆ ಫೋನೆತ್ತಿ
"ರಾಂಗ್ ನಂಬರ್" ಎತ್ತಿ ಕುಕ್ಕಿ ಕ್ಷಣಾರ್ಧದಲ್ಲಿ ಅಂತರ್ಧಾನ

ಮುದುಕಿಗೆ ಅನುಮಾನ ಈ ಹುಡುಗಿ ಸರಿಯಾಗಿ ಕೇಳಿಸಿ
ಕೊಂಡಳೋ ಗಡಿಬಿಡಿಯಲ್ಲಿ ಬಿಡುಗಡೆಗೆ ಹಾತೊರೆದು
ರೈಟನ್ನೆ ರಾಂಗೆಂದಳೋ ಬಚ್ಚಲಿಗೆ ಹೋಗಿ ನಿಮಿಷ ನಿಂತಿದ್ದು
ಮತ್ತೆ ಹೊರಗೆ ತಲೆಯಿಕ್ಕಿ ಅತ್ತಿತ್ತ ನೋಡಿ ಮೆತ್ತಗೆ ಫೋನಿನ
ಬಳಿಗೇ ಬರುತ್ತಾಳೆ; ಅಗೋ ಅದು ಮತ್ತೆ ಝಣಝಣತ್ಕರಿಸಿ
ಅವಳ ಜೀವ ಬಾಯಿಗೆ ಬಂದು ತಡವರಿಸಿ ಎರಡೂ ಕೈಯಲ್ಲಿ
ರಿಸೀವರನೆತ್ತಿ "ಹಲೋ ನಾನೇ ಕಣ್ರೀ ಮಾತಾಡ್ರಿ ಮಾತಾಡ್ರಿ"

ಮಗನ ಕಾರು ಸ್ಟಾರ್ಟಾಯಿತು ಹಿಂದೆಯೇ ಮೊಮ್ಮಗಳ ಸ್ಕೂಟಿ
ಮೊಮ್ಮಗನ ಪ್ಯಾನೂ ಬಂದಾಯಿತು ಸೊಸೆಯೊಬ್ಬಳಿಗೆ ಈಹೊತ್ತು
ದೇವರೇ ಹೊರಗಿನ ಕೆಲಸ ಸಮ್ಮಿಲಿಸಲಿ ಅಪ್ಪು ಮಾಡಪ್ಪ ನನ್ನಪ್ಪ
ಗುಟ್ಟೆಮಲ್ಲಪ್ಪ ಒಂದು ಹೂ ಹೆಚ್ಚಿಗೆ ಇಡುತೀನಿ ನಿನ್ನ ಗಟ್ಟಿಪಾದಕ್ಕೆ

ಇವರೆಲ್ಲ ಹೊರಟರೆ ಆಚೆಗೆ ಒಂದಿಷ್ಟು ಹೊತ್ತು ನಿರಾಳ ಮಾತಾಡು
ತ್ತೇನೆ ನನ್ನ ಮುದುಕನ ಕೂಡೆ ಒಳಗೊಳಗೆ ಪ್ರಾರ್ಥಿಸುತ್ತಿದೆ ಮುದುಕಿ
ಈಗಾಗಲೇ ಬಂದುಬಿದ್ದಿರುವ ಅಗಣಿತ ಮೊರೆಗಳ ಒಟ್ಟಿಲಿಗೆ ಈಗ
ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ!

■ ಲಲಿತಾ ಸಿದ್ದಬಸವಯ್ಯ :
ಗುರುಸನ್ನಿಧಿ, ೫೨೧೭, ೨ನೇ ತಿರುವು, ಅಶೋಕನಗರ, ತುಮಕೂರು - ೫೭೨ ೧೦೧ ■

ವೋಲ್ಕರ್ ವರದಿ
– ಎಂ. ಸುದರ್ಶನ ರಾಜ್

ಆಹಾರಕ್ಕಾಗಿ ತೈಲ ಒಪ್ಪಂದ
ಆಹಾರವಾಗಿ ಹೋಯ್ತು.

ಇರಾಕಿಗೆ ಆಹಾರ ತೈಲ ಭಾರತಕ್ಕೆ
ತೈಲಕ್ಕಾಗಿ ಮೋಸ ಮಾಡಿದರು ತೈಲಪರು
ಭುಂಜಿಸಿದರು ತೈಲವನ್ನೇ ಕುಡಿದರು
ಹೊಳೆಯಾಗಿ ಹರಿಯಿತು ತೈಲ
ಐಲುವೀರ ತೈಲಪರ ರಾಜ್ಯದಲ್ಲಿ

ಅವರ ತೈಲ ಇವರ ಆಹಾರ
ಆಯಿತು ಇನ್ನಾರಿಗೋ ಪುಷ್ಕಳ ಭೋಜನ
ವೋಲ್ಕರ್ ವರದಿ
ಎಲ್ಲೆಡೆ ಸರದಿ ಹಾಹಾಕಾರ.

ಎದ್ದಿತು ಕುರುಡು ಭಾರತ ಸರಕಾರ
ಪ್ರಶ್ನಿಸಿತು ತನಿಖಾ ವರದಿಯನ್ನೇ
ತೈಲ ಸಾಗರ ಆಪೋಶನ ಮಾಡಿದವರೆ.
ತೈಲ ಹಗರಣ ತಲೆದಂಡ ಪಡೆಯಿತು
ನಟವರ ಸಿಂಹ ತೈಲಪನ.

■ ಎಂ. ಸುದರ್ಶನ ರಾಜ್
ನಂ.೮, ೧ನೇ ಮಹಡಿ,
ರಚನಾ ಅಪಾರ್ಟಮೆಂಟ್,
ಟೋಲ್‌ನಾಕಾ, ಧಾರವಾಡ-೨ ■

ನೆಲತಾಯಿ ವಟ್ಟ್ಯಾಗಿನ ಮಾತು
–ಬಸವರಾಜ ಕೋಡಗುಂಟಿ

ನನ್ನ ಸುಡಬ್ಯಾಡಿರೊ ಯವ್ವ ನನ್ನ ಕಡಿಬ್ಯಾಡಿರೊ
ಕತಿ ಏಳತೀನಿ ಕೇಳಿರೊ ನನ್ನ ಕತಿ ಏಳತೀನಿ

ತಾಯಾಗೊ ಬಾಗ್ಗೇವೈತೆವ್ವ ನನಗ
ನೂರು ಸಾವಿರ ಲೆಕ್ಕವಿಲ್ಲದ ಅಡದೇನೊ ಮಕ್ಕಳ
ಕಳ್ಳ ಬಳ್ಳಿ ಬೆಳೆದು ಬಿಗದಾವ
ಒಡಲೀಗಿ ಬೆಂಕಿ ಇಟ್ಟರ
ಕಳ್ಳ ಕೂಸೆಲ್ಲ ಒಣಗತಾವ
ಕೈ ಮುಗದು ಬೇಡತೀನೊ ಯವ್ವ
ನನ್ನ ಸುಡಬ್ಯಾಡಿರೊ

ಎದಿ ತುಂಬ ಪ್ರೀತಿ ಉಕ್ಕಿ ಆರದಾವ
ಜಗವ ಕಟ್ಟಲಾಕ ಬೆಳಕಾಗಿ ನಿಂತಾವ
ಅದರ ನೆಳ್ಳಾಗ ನೂರೆಂಟು ಬಾಳ್ಯೇವು ಆಗ್ಯಾವ
ಸರಿಯೆಂಬ ಸೆಲಿಯು ಕಡದರ
ಎದಿ ಆಲೆಲ್ಲ ಬತ್ತತಾವ
ನಿಮ್ಮ ಕಾಲಿಗಾರ ಬಿದ್ದೇನೊ ಯವ್ವ
ನನ್ನ ಕಡಿಬ್ಯಾಡಿರೊ

■ ಬಸವರಾಜ ಕೋಡಗುಂಟಿ
ತಂ./ ಅಯ್ಯಪ್ಪ ಕೋಡಗುಂಟಿ,
ಹಳೇ ಬಸ್ ನಿಲ್ದಾಣ
ಮಸ್ಕಿ-೫೮೪ ೧೨೪ (ರಾಯಚೂರು) ■

ರಾಘವೇಂದ್ರ ಪಾಟೀಲರ 'ತೇರು' — ಹೊರೆಯಾಲ ದೊರೆಸ್ವಾಮಿ

ಊಳಿಗಮಾನ್ಯ ವ್ಯವಸ್ಥೆಯೊಂದರ ಧಾರ್ಮಿಕ ನಂಬಿಕೆ, ಆಚರಣೆ ಹಾಗೂ ಅವುಗಳೊಳಗಿಂದ ಮೂಡಿಬರುವ ಕ್ರೌರ್ಯ(ಹಿಂಸೆ) ಕಾಲಾಂತರದಲ್ಲಿ ರೂಪಾಂತರಗೊಳ್ಳುತ್ತ ಹೋಗುವ ಪರಿಯನ್ನು ಸುಮಾರು ಐದಾರು ತಲೆಮಾರುಗಳ ಅಂತರದಲ್ಲಿ ಬಿಡಿಸುತ್ತ ಹೋಗುವ ರಾಘವೇಂದ್ರ ಪಾಟೀಲರ 'ತೇರು' ನೀಳ್ಗತೆ ಅಥವಾ ಕಿರುಕಾದಂಬರಿ ಪುರಾಣಪ್ರತೀಕವಾಗಿ ಮೂಡಿಬಂದಿದ್ದು, ಒಂದು ಸಾಮಾಜಿಕ-ಸಾಂಸ್ಕೃತಿಕ ಘಟಕವಾಗಿ ನಿಲ್ಲುತ್ತದೆ. ಹಾಗೆಯೇ, ಕೃತಿಯು ಆಯಾ ಕಾಲ ಘಟ್ಟದ ಧಾರ್ಮಿಕ, ರಾಜಕೀಯ, ಸಾಮಾಜಿಕ-ಸಾಂಸ್ಕೃತಿಕ ನಡಾವಳಿಗಳ ಮೌಲ್ಯೀಕರಣದತ್ತ ತನ್ನ ನಿಲುವನ್ನು ಪ್ರತಿಪಾದಿಸುತ್ತ ಹೋಗುತ್ತದೆ.

'ತೇರು'ವಿಗೆ ಮುನ್ನ 'ದೇಸಗತಿ' ಎಂಬ ಕಥೆಯೊಂದನ್ನು ರಾಘವೇಂದ್ರ ಪಾಟೀಲರು ಬರೆದಿದ್ದು, ಅದರಲ್ಲೇ ಪ್ರಕೃತ ಕೃತಿಯು ಬೀಜರೂಪದಲ್ಲಿರುವುದನ್ನು ನಾವು ಗುರುತಿಸಬಹುದಾಗಿದೆ. ಆ ಕಥೆಯ ವಿಸ್ತೃತ ರೂಪವೇ 'ತೇರು' ಕೃತಿಯಾಗಿ ಹೊರಹೊಮ್ಮಿರುವುದನ್ನು ವಿಮರ್ಶಕ ಡಾ. ಸಿ. ಎನ್. ರಾಮಚಂದ್ರನ್, 'ದೇಸಗತಿ— ಎಂಬ ಒಂದು ರಾಜಕೀಯ ವ್ಯವಸ್ಥೆಯ ಆಳದಲ್ಲಿರುವ ಕಪಟ-ಸ್ವಾರ್ಥ-ಕ್ರೌರ್ಯಗಳನ್ನು—ದೇಸಗತಿ— ಕಥೆ ಪರಿಣಾಮಕಾರಿಯಾಗಿ ಬಯಲು ಮಾಡುತ್ತದೆ' ಎಂದು 'ತೇರು' ಕೃತಿಯ ಮುನ್ನುಡಿಯಲ್ಲಿ ಸರಿಯಾಗಿ ಗುರುತಿಸಿದ್ದಾರೆ.

ಧರಮನಟ್ಟಿ ದೇಸಗತಿಯ ರಂಗೋ ಪಟವರ್ಧನ ದೇಸಾಯಿ ತನ್ನ ಮನೆದೇವರಾದ ವಿಟ್ಠಲನಿಗಾಗಿ ಒಂದು ಗುಡಿಯನ್ನು ಕಟ್ಟಿಸುತ್ತಾನೆ. ಚಿತ್ರ ಶುದ್ಧ ತದಗಿಯ ದಿವಸ ವಿಟ್ಠಲ-ರುಕುಮಾಯಿ ತೇರನ್ನು ಎಳೆಯುವಾಗ ಅದು ಕದಲದೆ ನಿಂತಲ್ಲೇ ನಿಲ್ಲುತ್ತದೆ. ತೇರು ಹಾಗೆ ನಿಂತಿದ್ದಕ್ಕೆ ಕಾರಣವನ್ನು ಹುಡುಕಿಕೊಂಡು ಹೊರಟಾಗ ಶಾಸ್ತ್ರದ ಅಯ್ಯನವರು ಹೇಳುತ್ತಾರೆ, 'ಸ್ವಾಮಿಗೆ ಬೇಕಂತ ನರಮನಸ ಬಲಿಯು; ಕಾಟಕರ ಜಾತಿಯ ಮನಸಾ ಬೇಕಲ್ಲೋ' ಅಂತ. (ಇದು ಒಂದು ರೀತಿಯಲ್ಲಿ— ಬಡವರ ಮಕ್ಳನ್ನ ಬಾವಿಗೆ ತಳ್ಳಿ ಆಳ ನೋಡಿದ್ರಂತೆ— ಎಂಬ ಗಾದೆಯನ್ನು ನೆನಪಿಗೆ ತರುತ್ತದೆ. ದೈವವು ದುರ್ಬಲರನ್ನು ಘಾತಗೊಳಿಸುತ್ತದೆ— ಸಂಸ್ಕೃತ ಸುಭಾಷಿತ.) ತೇರಿಗೆ ಬಲಿಯಾಗಲು ದೇಸಾಯಿ ಸನಿಹದವರು ಯಾರೂ ಬರದೆ ಊರುಬಿಟ್ಟು ನಾಪತ್ತೆಯಾದಾಗ ಅವನು 'ಉತ್ತಮ ಕುಲದವರನ್ನು ಬಿಟ್ಟು ಯಾವದಾದರೂ ಕಾಟಕರ ಕುಲದ ಒಂದು ಇಸಮನ್ನು ಹಿಡಿದು ತೇರಿನ ಬಲಿಗೆ ತರಬೇಕು' ಅಂತ ಆಜ್ಞೆ ಮಾಡುತ್ತಾನೆ. ಆಗ ಕೂಳೆಂಬುದು ತತ್ವಾರ ಆಗಿರುವ ಸೂತಕದ ಗೊಂಬಿಯಾಟದ ಗೊಂಬಿರಾಮರ ದ್ಯಾವಯ್ಯನ ಐದನೆಯ ಪುತ್ರ ಚಂದ್ರನನ್ನು ತೇರಿಗೆ ಬಲಿ ಕೊಡುವುದೆಂದು ನಿರ್ಧರಿತವಾದಾಗ, ಅವನ ತಾಯಿ ಮಗನ ಮೇಲಿನ ವಾತ್ಸಲ್ಯದಿಂದ ಅಸಮ್ಮತಿ ಸೂಚಿಸಿ, ತಡೆಹಾಕುತ್ತಾಳೆ. ಆದರೂ ಅವಳನ್ನು ಧಿಕ್ಕರಿಸಿ ಚಂದ್ರನನ್ನು ತೇರಿಗೆ ಬಲಿ ನೀಡಿದಾಗ ಅದು 'ಇಳಕಲಿನ್ಯಾಗ ಉಳ್ಳುವ ಗೋಲಿಯ ಗುಂಡದ ಹಂಗ ಸುರಳೀತ ನಡೆದೀತಲ್ಲೋ.'

ಮಗನ ಬಲಿದಾನಕ್ಕೆ ಪ್ರತಿಯಾಗಿ ಧರಮನಟ್ಟಿ ಬಳಿಯ ಕಳ್ಳಿಗುದ್ದಿ ಎಂಬ ಊರಿನ ಸಮೀಪದಲ್ಲಿ ದ್ಯಾವಪ್ಪನು ದೇಸಾಯಿಯವರಿಂದ ಎಂಟು ಎಕರೆ ಜಮೀನನ್ನು ಉಂಬಳಿ ರೂಪದಲ್ಲಿ ಪಡೆದು, ಅಲ್ಲೇ ತನ್ನ ಕುಟುಂಬದೊಂದಿಗೆ ತಳವೂರುತ್ತಾನೆ. ರಥ ಮುನ್ನಡೆಯಲು

‘ಪ್ರತಿ ವರುಸ ಗೊಂಬಿರಾಮರ ದ್ಯಾವಯ್ಯನ ಮನೆತನದವರೆಂಬುವವರೂ.... ತಲೆಯೆಂಬುದ ಜಜ್ಜಿಕೊಂಡೂ, ಹಣೆಯಿಂದ ಬಸಿಯುವ ಬಿಸಿರಗುತದಿಂದ ಸ್ವಾಮಿಯ ತೇರಿನ ಮೂಡಣ ದಿಕ್ಕಿನ ಮುಖಕ್ಕೆ ರಗತದಾ ತಿಲಕ ಇಡಬೇಕು’ ಅಂತ ದೇಸಾಯರು ಕಟ್ಟು ವಿಧಿಸುತ್ತಾರೆ. ದ್ಯಾವಪ್ಪ ಅದನ್ನು ಶಿರಸಾವಹಿಸಿ ಪಾಲಿಸುತ್ತಾನೆ. ತನ್ನ ಮಗನನ್ನು ತೇರಿಗೆ ಬಲಿ ಕೊಡುವುದರ ಮೂಲಕ ತಾನು ಮಾಡಿದ ಹೀನ ಕೃತ್ಯದ ಬಗ್ಗೆ ಮಮ್ಮಲ ಮರುಗುವ ಗೊಂಬಿರಾಮರ ದ್ಯಾವಪ್ಪ ಲಿಂಗಟಸ್ವಾಮಿಗಳ ಅಪ್ಪಣೆಯಂತೆ ‘ರಗತದಾಗಿನ ಕಸರ ಕಳೆದುಕೊಳ್ಳಲು’ ನಿರ್ಧರಿಸುತ್ತಾನೆ. ಶಂಕರಜ್ಜನ ನಿರ್ದೇಶನದಂತೆ ಪ್ರತಿವರ್ಷ ತೇರಿಗೆ ಮುನ್ನ ‘ಯಾತ್ರಿ’ ಕೈಗೊಳ್ಳುವುದನ್ನು ರೂಢಿಸಿಕೊಂಡು ಗೂಗಿಕೊಳ್ಳ, ಸೊಗಲದ ಸೋಮೇಶ್ವರ, ಸುರೇಬಾನದ ಶರಬೆವ್ವ, ಸಿರಸಂಗಿಯ ಕಾಳಮ್ಮ, ಕಡಕೋಳ ಬಸವಣ್ಣ, ಎಲ್ಲಮ್ಮನ ಗುಡ್ಡಕ್ಕೆ ಹೋಗಿ ರಥ ನಡೆಯುವಲ್ಲಿನ ಧರಮನಟ್ಟಿಗೆ ಬಂದು, ಆ ದಿನ ರಗತದ ತಿಲಕ ಹಚ್ಚುವುದು ನಡೆಯುತ್ತದೆ.

ಗೊಂಬಿರಾಮರ ದ್ಯಾವಪ್ಪನ ನಂತರ ಅವನ ವಂಶಸ್ಥರು ಈ ಆಚರಣೆಗಳನ್ನು ಮುಂದುವರಿಸಿದರಾದರೂ ಧಾರ್ಮಿಕ ನಂಬಿಕೆ ಮತ್ತು ಅವರ ಆಚರಣೆಗಳಲ್ಲಿ ಬದಲಾವಣೆಗಳು ಕಾಣಿಸಿಕೊಳ್ಳುತ್ತ ಹೋಗುತ್ತವೆ. ಅನೇಕ ತಲೆಮಾರುಗಳ ನಂತರ ಮೂಲ ಗೊಂಬಿರಾಮರ ದ್ಯಾವಪ್ಪನ ವಂಶಸ್ಥನಾದ ಆಧುನಿಕ ದ್ಯಾವಪ್ಪ ತಲೆತಲಾಂತರದಿಂದ ತನ್ನ ಕುಟುಂಬದ ರಗತ ತಿಲಕದ ಆಚರಣೆಯಲ್ಲಿರುವ ಮೌಢ್ಯ, ಶೋಷಣೆ, ಅವೈಚಾರಿಕತೆಗಳನ್ನು ಧಿಕ್ಕರಿಸಿ, ಜಯಪ್ರಕಾಶ ನಾರಾಯಣರ ‘ನವನಿರ್ಮಾಣ’ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆವಾಸ ಅನುಭವಿಸುತ್ತಾನೆ. ಬಾಳವ್ವ ಎಂಬ ಚೆಲುವೆಯನ್ನು (ಎರಡು ಮಕ್ಕಳ ತಾಯಿ) ಹೆಂಡತಿಯಾಗಿ ಸ್ವೀಕರಿಸಿಯೂ ಸ್ವೀಕರಿಸಲಾಗದ ದ್ವಂದ್ವ ಮನಃಸ್ಥಿತಿಯಲ್ಲಿ ಬಾಬಾ ಆಮ್ಟೆಯವರ ಸೇವಾಶ್ರಮದಲ್ಲಿ ಉಳಿಯುತ್ತಾನೆ. ಅದೇ ಹೊತ್ತಿನಲ್ಲಿ ಧರಮನಟ್ಟಿ ದೇಸಗತಿಯ ದೇಸಾಯಿ ಮನೆತನದ ಕೊನೆಯ ಕುಡಿಯಾದ ಮಾಣಿಕರಾವ್ ದೇಸಾಯಿ ಸ್ವದೇಶದ ತನ್ನ ಸಂಬಂಧಗಳನ್ನು ಕಡಿದುಕೊಂಡು, ಅಮೆರಿಕದ ಹೆಣ್ಣೊಬ್ಬಳನ್ನು ಮದುವೆಯಾಗಿ, ನಂತರ ಅವಳಿಂದ ವಿಚ್ಛೇದನ ಪಡೆದು, ಅಲ್ಲೇ ಕೊನೆಯಾಗುತ್ತಾನೆ. ಒಂದು ಕಡೆ ದೇಸಗತಿಯ ದೇಸಾಯಿ ಮನೆತನ ಕೊನೆಗೊಂಡರೆ ಇನ್ನೊಂದು ಕಡೆ ಗೊಂಬಿರಾಮರ ದ್ಯಾವಪ್ಪನ ವಂಶ ಕೊನೆಗೊಳ್ಳುತ್ತದೆ. ಹೀಗೆ, ಒಂದುನೂರ ಐವತ್ತು ಮತ್ತು ಅದಕ್ಕೂ ಮಿಕ್ಕ ವರ್ಷಗಳ ಕಥಾಹಂದರವನ್ನು ಹೇಳಹೇಳುತ್ತಲೇ ಅವರ ಪತನವನ್ನೂ ಕೃತಿಕಾರರು ಸೂಚ್ಯವಾಗಿ ತಿಳಿಸುತ್ತಾರೆ.

ಎರಡು ವರ್ಗಗತಿಗಳನ್ನು ತಿಳಿಸುವ ‘ತೇರು’ವಿನ ಕಥಾಹಂದರ ಎರಡು ಹಂತಗಳಲ್ಲಿ ಹರಡಿಕೊಂಡಿದೆ. ಮೊದಲನೆಯದು ಧರಮನಟ್ಟಿ ದೇಸಗತಿಯ ರಂಗೋ ಪಟವರ್ಧನ ದೇಸಾಯಿ ಮತ್ತು ಮೂಲ ಗೊಂಬಿರಾಮರ ದ್ಯಾವಪ್ಪನ ಊಳಿಗಮಾನ್ಯ ಸಂಬಂಧ, ಧರ್ಮ, ಆಚರಣೆ, ನಂಬಿಕೆ, ಹಿಂಸೆ, ಅಸಹಾಯಕತೆ ಈ ಮುಂತಾದವುಗಳನ್ನು ಕುರಿತದ್ದಾಗಿದ್ದರೆ, ಎರಡನೆಯದು ಆಧುನಿಕ ದ್ಯಾವಪ್ಪನ ವೈಚಾರಿಕತೆ, ಬಂಡಾಯ, ಚಳುವಳಿ ಮತ್ತು ಬಾಬಾ ಆಮ್ಟೆಯವರ ಸೇವಾಶ್ರಮದಲ್ಲಿ ತನ್ನನ್ನು ತೊಡಗಿಸಿಕೊಂಡರೂ ನೆಮ್ಮದಿಯನ್ನು ಕಾಣಲಾಗದ ಬದುಕು ಹಾಗೂ ಮಾಣಿಕರಾವ್ ದೇಸಾಯಿಯ ವಿಕ್ಷಿಪ್ತ ಬದುಕು ಇವನ್ನು ಕುರಿತದ್ದಾಗಿದೆ.

ಧರಮನಟ್ಟಿ ದೇಸಗತಿ ಊಳಿಗಮಾನ್ಯ ವ್ಯವಸ್ಥೆಯ ಪ್ರತಿಷ್ಠೆ ಮತ್ತು ಪ್ರತಿನಿಧಿಯಾದ ದೇಸಾಯಿ ಅದನ್ನು ಸರ್ವವಿಧದಲ್ಲಿಯೂ ಪ್ರಯೋಗಿಸಿ ಯಶಸ್ವಿಯಾಗುತ್ತಾನೆ. ಊಳಿಗಮಾನ್ಯ ವ್ಯವಸ್ಥೆಯ ಕಬಂಧಬಾಹುಗಳಲ್ಲಿ ಸಿಕ್ಕ ಮೂಲ ದ್ಯಾವಪ್ಪ ತನ್ನ ಹೀನ ಪರಿಸ್ಥಿತಿಯ ಕಾರಣ ದಿಂದಾಗಿ ಅದನ್ನು ಇಡಿಯಾಗಿ ಸ್ವೀಕರಿಸುತ್ತಾನೆ. ಗೊಂದಲಿಗರ ಮೇಳದ ಮೂಲಕ ಅನಾವರಣ ಗೊಳ್ಳುವ ಧರಮನಟ್ಟಿಯ ದೇಸಗತಿ ವಿಟ್ಠಲ ಗುಡಿಯ ಪ್ರತಿಷ್ಠಾಪನೆ, ವಿಟ್ಠಲ-ರುಕುಮಾಯೀ ರಥದ ಮೂಲಕ ಮತ್ತಷ್ಟು ಸ್ಥಾಪನೆಗೊಳ್ಳುತ್ತದೆ. ಉತ್ತಮ ಕುಲದವರನ್ನು ಹೊರತುಪಡಿಸಿ, ಬಡತನವನ್ನೇ ಗಳಿಸಿದ ಆಸ್ತಿಯನ್ನಾಗಿ ಮಾಡಿಕೊಂಡ ಕಾಟಕರ ಜಾತಿಗೆ ಸೇರಿದ ಯಾರಾದರೊಬ್ಬ ನನ್ನು (ಇಲ್ಲಿ ಗೊಂಬಿರಾಮರ ದ್ಯಾವಪ್ಪನ ಐದನೆಯ ಮಗ ಚಂದ್ರನನ್ನು) ನಿಂತಿರುವ ತೇರಿನ ಚಾಲನೆಗೆ ಬಲಿ ಕೊಟ್ಟರಾಯಿತು ಎಂಬಲ್ಲಿಗೆ ಬಂದು ತಲುಪುತ್ತದೆ. ಅವರಂತೆ, ಪ್ರಶ್ನಿಸುವ ಮನೋಧರ್ಮವನ್ನು ಎಂದೂ ಸಹಿಸದ (ಊಳಿಗಮಾನ್ಯ ಪದ್ಧತಿಯ ಬಹುಮುಖ್ಯ ಲಕ್ಷಣಗಳಲ್ಲಿ ಒಂದು ವಿಧೇಯತೆ) ದೇಸಗತಿ, ತನ್ನ ಸ್ವಾಮಿತ್ವವನ್ನು ಒಪ್ಪಿಕೊಂಡ ಗೊಂಬಿರಾಮರ ದ್ಯಾವಪ್ಪನಿಗೆ ಕೇವಲ ಆಜ್ಞೆ ಮಾಡುತ್ತ ಹೋಗುತ್ತದೆ ಮತ್ತು ಅವನ ಹಾಗೂ ಅವನ ತಲೆಮಾರಿನ ಅಧೀನತೆಯನ್ನು ಮಾತ್ರ ಅಪೇಕ್ಷಿಸುತ್ತದೆ. ದೇಸಾಯಿಯ ಸುತ್ತ ಸುಳಿದಾಡುವ ತ್ರ್ಯಂಬಕ ಭಟ್ಟರು, ಡಂಣಾಯಕರು, ತಳವಾರ ಆದಿಯಾಗಿ ಎಲ್ಲವೂ ಇದಕ್ಕೆ ಪೂರಕವಾಗಿ ನಿಲ್ಲುತ್ತಾರೆ. (ತಳವಾರನು ಕೂಡ ಅದನ್ನು ಮೀರಲಾರ.) ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರಶ್ನಿಸದ ವಿಧೇಯನಾದ ದ್ಯಾವಪ್ಪನಿಗೆ ಅದರ 'ಔದಾರ್ಯ'– ಕಳ್ಳಿಗುದ್ದಿಯ ಬಳಿ ಉಂಬಳಿಯಾಗಿ ಸಿಗುವ ಎಂಟು ಎಕರೆ ಹೊಲ. ಅದು ಊಳಿಗಮಾನ್ಯ ವ್ಯವಸ್ಥೆಯ ಹಿಂಸೆಯನ್ನು (ಅಥವಾ ಕೃತಕ ಔದಾರ್ಯವನ್ನು) ಮಸುಕು ಮಾಡುವುದಕ್ಕೇ ಇರಬೇಕಲ್ಲವೆ?

ಅದೇ ವ್ಯವಸ್ಥೆಯ ಸ್ವಾಮಿತ್ವವನ್ನು ಒಪ್ಪಿಕೊಂಡು ನಡೆಯುವ ಮೂಲ ದ್ಯಾವಪ್ಪ ಎಂದೂ ಅದರ ವಿರುದ್ಧ ತಿರುಗಿ ಬಿದ್ದವನಲ್ಲ. ಅವನ ಹೆಂಡತಿ ಲಗುಮವ್ವ ತನ್ನ ಮಗ ಚಂದ್ರ ತೇರಿಗೆ ಬಲಿಯಾಗುವ ಸಂದರ್ಭದಲ್ಲಿ ತೋರಿಸುವ ಪ್ರೀತಿ ವಾತ್ಸಲ್ಯ, ಬಲಿಗೆ ಸೂಚಿಸುವ ಅಸಮ್ಮತಿ ಅಥವಾ ಪ್ರತಿಭಟನೆ ಅದೇ ಮೂಲ ದ್ಯಾವಪ್ಪನಲ್ಲಿ ಕಂಡುಬರದು. ಮಗನ ಬಲಿಯನ್ನು, ರಗತತಿಲಕದ ಸೇವೆಯನ್ನೂ, 'ದೈವ ಹಿಂತಿ ಸೇವಾ ಮಾಡುದನ್ನ ನಮ್ಮ ಮನಿತನಕ್ಕೆ ಕೊಟ್ಟೈತಿ' ಎಂದು ಒಂದು ಬಗೆಯ ಹೆಮ್ಮೆಯಿಂದ ಹೇಳುತ್ತಲೇ ವ್ಯವಸ್ಥೆಯನ್ನು ಇಡಿಯಾಗಿ ಸ್ವಾಗತಿಸು ತ್ತಾನೆ. ತನ್ನ ಸಮ್ಮತಿ ಸೂಚಕತೆಯನ್ನು ದಾಖಲಿಸುತ್ತಲೇ ದೇಸಾಯಿಯ ಕ್ರಮವನ್ನು ಪರೋಕ್ಷ ವಾಗಿ ಸಮರ್ಥಿಸಿಕೊಳ್ಳುತ್ತಾನೆ. ಮಗನು ಬಲಿಯಾದರ ಪ್ರತೀಕವಾಗಿ ಅಥವಾ ಬಲಿಯಾದುದಕ್ಕೆ ಪ್ರತಿಯಾಗಿ ಸಿಗುವ ಸನ್ನದಿನ ಬಗ್ಗೆ ತಾಯಿ ಲಗುಮವ್ವನ ಪ್ರತಿಭಟನೆ ಕಂಡುಬರುತ್ತದೆ. 'ತನ್ನ ಮಗನ ರಗತ ಕುಡದ ಕಾಗಜ ಅದು. ಅದು ರಾಗಸಸ ಐತಿ' ಎಂದು ಸಿಟ್ಟನ್ನು ವ್ಯಕ್ತಪಡಿ ಸುತ್ತಾಳೆ. ಊಳಿಗಮಾನ್ಯ ವ್ಯವಸ್ಥೆಯ ರಾಕ್ಷಸ ಪ್ರತಿನಿಧಿ– ಈ 'ಸನ್ನದು'– ಅವಳ ಪ್ರಕಾರ. ಆದರೆ, ಮೂಲ ದ್ಯಾವಪ್ಪ 'ರಾಗಸಸ'ನನ್ನು ತಲೆತಲಾಂತರದ ವರೆಗೂ ಹೊತ್ತುಕೊಂಡು ಮೆರೆಯುವ ಅಭಿಲಾಷೆಯನ್ನು ತನ್ನೊಳಗೆ ಮೈಗೂಡಿಸಿಕೊಂಡಿದ್ದಾನೆ; 'ನನ್ನ ತೆಲೀ ಬಿದ್ಯಮ್ಯಾಗ ಮುಂದಕನೂ ನಮ್ಮ ಮಕ್ಕಳು ಮೊಮ್ಮಕ್ಕಳೂ ಈ ಸೇವಾ (ರಗತ ತಿಲಕ ಸೇವೆ) ಅನ್ನೂದನ್ನ

ನಡೆಸಿಕೊಂಡು ಹೋಗಬೇಕು' ಎಂಬುದು ಅವನ ನಂಬಿಕೆ ಮತ್ತು ಅಪೇಕ್ಷೆ. ಬದುಕಿನಲ್ಲಿ ಯಾವುದೂ ಪುಗಸಟ್ಟೆ ಸಿಕ್ಕುವುದಿಲ್ಲ ಎಂದು ನಂಬಿರುವ ಅವನು 'ಏನರ ಸಿಗಲೇಬೇಕಂದರ ಏನಾದರ ಕಳಕೊಳ್ಳಾಕಃಬೇಕು' ಎಂಬ ನಿಶ್ಚಿತ ತಾರ್ಕಿಕ ನಿಲುವು ಅವನಲ್ಲಿರುವುದಾದರೂ, ಪಡೆದುಕೊಳ್ಳುವುದು ತನ್ನ ಮನೆತನಕ್ಕೆ ಕೇವಲ ಒಂದು ಹೆಸರನ್ನು ಮಾತ್ರ. ಈ ಒಂದು ಬಿರುದ ಬಾವಲಿಗಾಗಿಯೇ ಅಲ್ಲವೆ ಹಿಂದೆಲ್ಲ ಸತ್ತವರು– ಗರುಡರು, ಲೆಂಕರು, 'ವೀರಮರಣ'ದ ಹೆಸರಿನಲ್ಲಿ? ವ್ಯವಸ್ಥೆಯ ಸ್ವಾಮಿ-ಭೃತ್ಯ ಸಂಬಂಧವನ್ನು ಇಡಿಯಾಗಿ ಒಪ್ಪಿಕೊಂಡು ಅದರ ಅಡಿಯಾಳಾಗಿ ಐಕ್ಯವಾಗುತ್ತಾನೆ ಮೂಲ ದ್ಯಾವಪ್ಪ. ಆದರೆ, ಕಥೆಗಾರರ ಈ ಕುರಿತ ಧೋರಣೆ ಏನು?

ಸುಮಾರು ಒಂದುನೂರ ಐವತ್ತು ವರ್ಷಗಳ ನಂತರದ ಗೊಂಬಿರಾಮರ ದ್ಯಾವಪ್ಪನ ವಂಶಸ್ಥನಾದ ಆಧುನಿಕ ದ್ಯಾವಪ್ಪ ತನ್ನ ಹಿಂದಿನ ತಲೆಮಾರಿನವರಿಗಿಂತ ಬಲು ಭಿನ್ನ. ಅವನು ತಾನಿರುವ ಪರಿಸರವನ್ನು, ವ್ಯವಸ್ಥೆಯನ್ನು ಪ್ರಶ್ನಿಸುತ್ತಾನೆ. ಸಮಾಜದ ಭ್ರಷ್ಟತೆಗಳ ವಿರುದ್ಧ ಸಿಡಿದೇಳುತ್ತಾನೆ. ವೈಚಾರಿಕ ನಿಲುವುಗಳಿಂದ ಪರಂಪರೆ ಹಾಗೂ ವಾಸ್ತವಗಳೆರಡನ್ನೂ ಪ್ರಶ್ನಿಸುತ್ತಾನೆ. ತನಗೆ ಸರಿಯಲ್ಲ ಅಂಬುದುದೆಲ್ಲವನ್ನೂ ಪ್ರಶ್ನಿಸುತ್ತಲೇ ಸಾಗಿ ವ್ಯವಸ್ಥೆಯ ಎದುರಾಗುತ್ತಾನೆ. ತನ್ನ ನೋವು, ಕಷ್ಟ-ನಷ್ಟ, ವೇದನೆಗಳ ನಡುವೆಯೇ ತನ್ನನ್ನು ರೂಪಿಕೊಳ್ಳುತ್ತ ವ್ಯಕ್ತಿತ್ವವನ್ನು ಸಂಪಾದಿಸಿಕೊಳ್ಳುವ ದಾರಿಯಲ್ಲಿದ್ದಾನೆ. ಮೊದಲ ಬಾರಿಗೆ ಆಧುನಿಕ ದ್ಯಾವಪ್ಪನನ್ನು ಪತ್ರಕರ್ತ (ಕಥಾನಿರೂಪಕರಲ್ಲೂ ಒಬ್ಬ) ಭೆಟ್ಟಿಯಾದಾಗ, ಅದನ್ನು ಅವನು ಗುರುತಿಸುತ್ತಾನೆ. 'ಧಾರ್ಮಿಕ ದೃಷ್ಟಿಯ ಬೆಳಕಿನ್ಯಾಗಿಂದ ಅಂವ ಒಮ್ಮಿಲೇ ರಾಜಕೀಯದ ಬೆಳಕಿನ್ಯಾಗ ಹೋಗಿ ನಿಂತಿದ್ದ' ಎಂಬ ಪತ್ರಕರ್ತನ ನಿಲುವಿನಲ್ಲಿ ಆಧುನಿಕ ದ್ಯಾವಪ್ಪ ಪರಂಪರೆಯ ಮೌಢ್ಯದ ಸೆರಗಿನಿಂದ ತಿಳಿವಳಿಕೆಯ ಬನದ ಹಾಸಿಗೆ ಬಂದು ನಿಂತಿರುವುದರ ಮಾರ್ಮಿಕ ಚಿತ್ರಣವಿದೆ. ಪರಂಪರೆ, ಪರಿಸರ ಹಾಗೂ ತನ್ನೊಳಗನ್ನು ಶೋಧಿಸುತ್ತಲೇ ಹೋಗುವ ಅವನು ಪರಿಪೂರ್ಣ ವ್ಯಕ್ತಿತ್ವಕ್ಕಾಗಿ ಹಾತೊರೆಯುತ್ತಿರಬಹುದೆ? ತನ್ನ ಹಿಂದಿನ ತಲೆಮಾರಿನವರು ಆಚರಿಸಿಕೊಂಡು ಬರುತ್ತಿರುವ 'ರಗತತಿಲಕ'ದ ಆಚರಣೆ ಮತ್ತು 'ಯಾತ್ರಿ' ಇವುಗಳ ಬಗ್ಗೆ ನಂಬಿಕೆ ಮತ್ತು ನಿಷ್ಠೆ ಕರಗಿದ್ದಕ್ಕೆ ವ್ಯವಸ್ಥೆಯ ಭ್ರಷ್ಟತೆ ಹಾಗೂ ಆತನೊಳಗೆ ಸ್ಫುಟಗೊಳ್ಳುತ್ತಿರುವ ಜ್ಞಾನವಲ್ಲದೆ ಬೇರೇನೂ ಅಲ್ಲ. ಅಜ್ಞಾನ ಪರಂಪರೆಯದಲ್ಲ. ತನ್ನೊಳಗೆ ಹಾಗೂ ತನ್ನ ಪರಿಸರದಲ್ಲೇ ಉತ್ಪತ್ತಿಯಾಗುತ್ತಿರುವುದು. ಆದುದರಿಂದಲೇ ಅವನು ಹೇಳುತ್ತಾನೆ 'ಯಾತ್ರಾ ಎಲ್ಲಾನೂ ಅಗದೀ ನಿಷ್ಠಾದಿಂದ ನಡಿಸಿದಿನಿ, ಆದರ ನನ್ನ ಮನಸ್ಸಗೇ ಎಲ್ಲಾ ವ್ಯರ್ಥ ಅನಿಸಿತಿರಿ, ಗೂಗೀ ಕೊಳ್ಳದಾಗ ಈಗ ಯಾವನಿದ್ದರೂ ಕಾಣೂದಿಲ್ಲ. ಅಲ್ಲಿ ಈಗ ಕಳ್ಳರು ಅಡಗಿಕೊಂಡಿರತಾರಿರಿ. ನವಿಲುತೀರ್ಥದಾಗ ಗಂಗವ್ವ ಈಗ ಸೆಳೆವ ಕಳಕೊಂಡಾಳಿರಿ..... ಪಂಚಲಿಂಗೇಶ್ವರನ ಗುಡಿಯ ಅಂಗಳಕ್ಕೆ ಹೋಗೂ ಹಾದೀಗುಂಟ..... (ಈಗ ಕಾಣುವುದು) ಮಾವಿನ ಎಲಿಯ ತೋರಣ ಅಲ್ಲರೀ..... ತಂಬಾಕಿನ ಪಾಕೀಟುಗಳ ಸರಪಳೀ ತೂಗು ಹಾಕಿದ ತೋರಣಾ!' (ಪತ್ರಕರ್ತನಿಗೆ ಹೇಳುವ ಮಾತುಗಳು). ಹೀಗೆ ಅವನ ನಿಷ್ಠೆಗೆ ಪೆಟ್ಟು ಬಿದ್ದು,

ಅವನಲ್ಲಿ ನಿರಾಶೆ, ವಿಷಾದದ ಅಲೆಯನ್ನು ಎಬ್ಬಿಸುತ್ತದೆ. ತನ್ನ ಮೂಲ ಮುತ್ಯಾನಿಗೆ ಪವಿತ್ರವಾಗಿದ್ದ ಕ್ಷೇತ್ರಗಳು ಇಂದು ಅಪವಿತ್ರವಾಗಿ ಹೋಗಿವೆ.

ಆಧುನಿಕ ದ್ಯಾವಪ್ಪ ಇಂದಿನ ಜ್ಞಾನದಿಂದಾಗಿ ತನ್ನ ಹಿಂದಿನ ತಲೆಮಾರಿನವರು ಬದುಕಿದ ಬಗೆಯನ್ನು ಚಿಕಿತ್ಸಕ ಬುದ್ಧಿಯಿಂದಲೇ ವಿಶ್ಲೇಷಿಸುತ್ತಾನೆ. 'ನಮ್ಮ ಮೂಲ ಮುತ್ಯಾ ಏನೋ ಇಲ್ಲದ ಒಂದು ನಂಬಿಕೆ ಹುಟ್ಟಿಸಿಕೊಂಡು ಹೊಸಾದು ಒಂದು ಪದ್ಧತಿ ಹುಟ್ಟಿಸಿಕೊಂಡ..... ಆದರ ಆಮ್ಯಾಲ ಬಂದ ನಮ್ಮ ಅಜ್ಜ-ಮುತ್ಯಾಗಳಿಗೆ ಅದಃ ನಂಬಕೀ ಅದಃ ನಿಷ್ಠಾ ಇತ್ತಂತ ಹೆಂಗ ಹೇಳತೀರಿ?' ಎಂಬ ಸಂದೇಹವೂ ಅವನನ್ನು ಕಾಡಿಸದೆ ಇಲ್ಲ. ನಮ್ಮ ಇಂದಿನ ಎಷ್ಟೋ ಧಾರ್ಮಿಕ ಆಚರಣೆಗಳು ಹೀಗೆ ಆಗಿರಬಹುದಲ್ಲವೆ? ಅಥವಾ ಧಾರ್ಮಿಕ ಆಚರಣೆ ಗಳೆಂಬುದೇ ಅಜ್ಞಾನದ ಪ್ರತೀಕ; ಅವಿವೇಕದ ಪ್ರತಿನಿಧಿಗಳಾಗಿರಬಹುದೆ?

ಸಮಕಾಲೀನ ಬದುಕಿನ ವಿವೇಕ, ವಿವೇಚನೆಯ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವ ಆಧುನಿಕ ದ್ಯಾವಪ್ಪ ಒಮ್ಮೊಮ್ಮೆ ಬಂಡಾಯದ ಕಿಡಿಯಾಗಿಯೂ ಕಾಣಿಸಿಕೊಳ್ಳುತ್ತಾನೆ. '.....ದೇವರು ಅನ್ನುವುದು ಇದ್ದರೆ ಅದರ ವಿರುದ್ಧ ನನ್ನ ಬಂಡಾಯವಿದೆ. ಅದರ ವಿರುದ್ಧ ನನ್ನ ಧಿಃಕಾರವಿದೆ ಮತ್ತು ಅದರ ವಿರುದ್ಧ ನನ್ನ ಸತ್ಯಾಗ್ರಹವಿದೆ (ಬಾಳಪ್ಪನಿಗೆ ಬರೆದ ಪತ್ರದಲ್ಲಿ)' ಎಂಬಲ್ಲಿ ಅವನು ಕ್ರಾಂತಿಕಾರನಾಗೇ ಕಾಣಿಸಿಕೊಂಡರೂ ನೆಲೆಯೂರುವುದು ಮಾತ್ರ ಬಾಬಾ ಆಮ್ಟೆಯವರ ಸೇವಾಶ್ರಮದಲ್ಲಿ. ತನಗೆ, ತನ್ನ ಮನೆತನದವರಿಗಾದ ಹಿಂಸೆಗೆ (ಅನ್ಯಾಯಕ್ಕೆ) ಅವನು ಆರಿಸಿಕೊಳ್ಳುವುದು ಪ್ರತಿ ಹಿಂಸೆಯನ್ನಲ್ಲ. ಬದಲಾಗಿ, ಸತ್ಯಾಗ್ರಹದಂಥ ಸೌಮ್ಯ ಮಾರ್ಗವನ್ನು. ಅಥವಾ ಸ್ವಹಿಂಸಾ ಮಾರ್ಗವನ್ನು. ಅವನ ಹಿಂದಿನವರು ವ್ಯವಸ್ಥೆಗೆ ಶರಣಾಗಿದ್ದರೆ, ಆಧುನಿಕ ದ್ಯಾವಪ್ಪ ವ್ಯವಸ್ಥೆಯನ್ನು ಪ್ರಶ್ನಿಸುತ್ತಲೇ ಸೌಮ್ಯ ಮಾರ್ಗ ಹಿಡಿಯುವುದರಿಂದ ಅವನ ಮನಸ್ಸು ಪ್ರಜಾಪ್ರಭುತ್ವದ ಕಡೆ ಒಲಿಯುತ್ತದೆಯೇ ಹೊರತು (ಜಯಪ್ರಕಾಶ ನಾರಾಯಣರ 'ನವನಿರ್ಮಾಣ' ಚಳುವಳಿಯಲ್ಲಿ ಅವನು ಭಾಗಿ) ಕ್ರಾಂತಿಕಾರಕವಾದ ಮಾರ್ಕ್ಸ್‌ವಾದ ಅಥವಾ ಅನ್ಯ ಪ್ರಭೇದಗಳತ್ತಲ್ಲ. ಇದು ಲೇಖಕರ ಅಪೇಕ್ಷೆಯೊ ಅಥವಾ ಪಾತ್ರದ ಅನಿವಾರ್ಯ ಪರಿಸ್ಥಿತಿಯೊ? ಎಂಬ ಸಂದೇಹವೂ ಇಲ್ಲಿ ಬರುವುದುಂಟು. ಆದರೂ ಈ ಸಂದೇಹಗಳ ನಡುವೆಯೇ ಲೇಖಕರು ಅಸ್ಪಷ್ಟ ರಾಜಕೀಯ ಚಿಂತನೆಯತ್ತ ಹೆಜ್ಜೆ ಹಾಕಿ, ಅಸಹಾಯಕರಾಗಿ ನಿಂತಿರುವರು ಎಂಬ ಮತ್ತೊಂದು ನಿಲುವಿನಲ್ಲೂ ನಾವು ಚಿಂತಿಸುವ ಹಾಗಾಗಿದೆ.

ಈ ಕಿರುಕಾದಂಬರಿಯಲ್ಲಿ ಅನೇಕ ನಿರೂಪಕರು ಇರುವುದಾದರೂ ಧರಮನಟ್ಟಿಯ ಸಾಂವಜ್ಜ, ಪತ್ರಕರ್ತ ಈ ಇಬ್ಬರು ಮುಖ್ಯರಾಗುತ್ತಾರೆ. ಧರಮನಟ್ಟಿಯ ವಿಟ್ಠಲಮೇಳ ಮಾಡುವ ಗೊಂದಲಿಗರು ಕಥಾನಿರೂಪಣೆಯ ಒಂದು ಭಾಗವೇ ಆಗಿ ನಿಲ್ಲುತ್ತಾರೆ.

ತನ್ನೂರು, ಅದರ ಧಾರ್ಮಿಕ-ಸಾಮಾಜಿಕ-ಸಾಂಸ್ಕೃತಿಕ ಆಚರಣೆಗಳ ಪರಂಪರೆಯಲ್ಲಿ ಅಪಾರವಾದ ಆಸಕ್ತಿ ಮತ್ತು ನಿಷ್ಠೆ ಹೊಂದಿರುವ ಧರಮನಟ್ಟಿಯ ಸಾಂವಜ್ಜನಿಗೆ ಅವನ್ನೆಲ್ಲ ಯಾರೊಂದಿಗಾದರೂ ಹಂಚಿಕೊಳ್ಳುವ ತುಡಿತ ತೀವ್ರವಾದದ್ದೇ ಗೋಕಾಕ ಬಸ್ಸು ನಿಲ್ದಾಣದಲ್ಲಿ, ಬೆಟಗೇರಿ ಮೂಲದ ಬೆಂಗಳೂರಿನ ಪತ್ರಕರ್ತನನ್ನು ಎರಡನೆಯ ಬಾರಿ ಭೆಟ್ಟಿ ಆಗಲು ಸಾಧ್ಯವಾಗುವುದು; ಪತ್ರಕರ್ತನನ್ನು ಗೊಂದಲಿಗರ ಮೇಳಕ್ಕೆ ಕರೆದೊಯ್ಯುವುದು; ವಿಟ್ಠಲ-

ರುಗಮಾಯೀ ರಥೋತ್ಸವಕ್ಕೆಂದು ಧರಮನಟ್ಟಿಗೆ ಆಹ್ವಾನಿಸುವುದು; ಈ ಕುರಿತು ಬೆಂಗಳೂರಿಗೆ ಪತ್ರ ಹಾಕುವುದು ಇತ್ಯಾದಿ. ಅವನು ವಿಟ್ಠಲನ ಹಲುಬಿನಲ್ಲೇ ಕೊನೆಗೊಳ್ಳುವುದೂ— ಸಾಂವಜ್ಜನ ಧರಮನಟ್ಟಿಯ ಬಗೆಗಿರುವ ಆಸಕ್ತಿ ಅಭೀಪ್ಸೆಗಳನ್ನೇ ಪ್ರತಿನಿಧಿಸುತ್ತದೆ. 'ಅಂವ (ಸಾಂವಜ್ಜ) ಧರಮನಟ್ಟಿಯ ಜನರ ವಿವೇಕ, ಪ್ರಜ್ಞೆಯಂತಿದ್ದ' ಎಂಬ ಪತ್ರಕರ್ತನ(ನಿರೂಪಕನ) ಅನಿಸಿಕೆ ಸಾಂವಜ್ಜನ ಪ್ರಬುದ್ಧ ಮತ್ತು ವಿಚಕ್ಷಣ ವ್ಯಕ್ತಿತ್ವದ ಬಗೆಗಿನ ನೋಟ ಅನ್ನಬಹುದು.

ಬಹುಶಃ ಅದೇ ಮಾದರಿಯ ವ್ಯಕ್ತಿತ್ವವನ್ನು ಇನ್ನೊಬ್ಬ ನಿರೂಪಕನಾದ ಪತ್ರಕರ್ತ ಹೊಂದಿರುವುದರಿಂದಲೇ ಅವನನ್ನು ಧರಮನಟ್ಟಿಯ ದೇಸಗತಿಯ ಆಗುಹೋಗುಗಳು ಪದೇಪದೇ ಸೆಳೆಯುವುದು. ಅವನೊಳಗೊಬ್ಬ ಆಧುನಿಕ ದ್ಯಾವಪ್ಪನೂ ಅಡಗಿರುವನು. ಹಾಗಾಗಿಯೇ, ಅವನು ಧರಮನಟ್ಟಿಯ ಗತ ಇತಿಹಾಸವನ್ನು, ಆಧುನಿಕ ಕಾಲದ ದ್ಯಾವಪ್ಪನ ಬದುಕು ಮತ್ತು ಸಮಕಾಲೀನ ಸಮಾಜದ ನಡಾವಳಿಗಳನ್ನೂ ಅನುಕಂಪದಿಂದ ನೋಡಲು ಸಾಧ್ಯವಾಗುವುದು. ಅದರಂತೆ ದೇಶದ ವಾಸ್ತವತೆಯನ್ನು ವಿಶ್ಲೇಷಿಸುವ, ಅರ್ಥೈಸಿಕೊಳ್ಳುವ ವಿವೇಕ ಅವನಲ್ಲಿ ಜಾಗೃತವಾಗೇ ಇದೆ. ಆಧುನಿಕ ದ್ಯಾವಪ್ಪ ನಮ್ಮ ದೇಶದ ರಾಜಕೀಯ ಹಾಗೂ ವ್ಯವಸ್ಥೆಯ ಬಗ್ಗೆ ಹತಾಶೆಯಿಂದ ಮಾತನಾಡುವಾಗ ಪತ್ರಕರ್ತನಿಗೆ 'ನಮ್ಮ ದೇಶದಾಗಿನ ಒಂದೊಂದು ಸಂಸ್ಥಾನೂ ತಮತಮಗೆ ಹೊಂದೂಹಂಗ ಕರಪ್ಶನ್ನದ ಹಾದೀ ಹುಡುಕಿಕೊಂಡಾವ ಅಂತ ಅನಿಸಿತು.'

ಕೃತಿಯ ಭಾಷೆ ಉತ್ತರ ಕರ್ನಾಟಕ ಪರಿಸರದ ಕನ್ನಡ. ಅದರ ಇನಿಬನಿಗಳಲ್ಲಿ ಮೂಡಿಬಂದಿದ್ದು ಕಥಾ ಓಟಕ್ಕೆ ಪೂರಕವಾಗಿದೆ. ಕೃತಕವೆನಿಸಿದಷ್ಟು ಸಹಜ ಸುಭಗತೆಯಿಂದ ಗೊಂದಲಿಗರ ಧರಮನಟ್ಟಿಯ ತೇರಿನ ಕಥೆ (ಮಹಾತ್ಮೆ) ಓದುಗರನ್ನು ಹಿಡಿದಿಡಬಲ್ಲುದು. ಮೇಳ ದೇಸೀಯ ತನಿಯಿಂದ ಕೂಡಿದ್ದು, ಕನ್ನಡ ಜನಪದ ಗೀತ ಪರಂಪರೆಯನ್ನು ನೆನಪಿಸುತ್ತದೆ.

'ತೇರು'ವಿನ ಪ್ರಾರಂಭದ ಎರಡು ಭಾಗಗಳು(ಅಧ್ಯಾಯಗಳು) ಧರಮನಟ್ಟಿ ದೇಸಗತಿಯ ನಡಾವಳಿಗಳನ್ನು ಪುರಾಣಸದೃಶವಾಗಿ ಹಿಡಿದಿಟ್ಟಿದ್ದರೆ, ಆನಂತರದ ಭಾಗಗಳು ಸಮಕಾಲೀನ ನಡೆಯತ್ತ ಮುಖಮಾಡಿವೆ. ಪುರಾಣ ಸೃಷ್ಟಿಯ ಪ್ರಪಂಚದಿಂದ(ಕಾಲದಿಂದ) ಸುಮಾರು ಒಂದುನೂರ ಐವತ್ತು ವರ್ಷಗಳಿಗೂ ಮಿಕ್ಕು ಕಥೆ ನೆಗೆಯುವುದು. ಈ ಎರಡು ಕಾಲಘಟ್ಟಗಳನ್ನು ಓದುಗರು ಸಾಂವಜ್ಜ, ಗೊಂದಲಿಗರ ಮೇಳ, ಪತ್ರಕರ್ತ ನಿರೂಪಕನ ಮೂಲಕ ಕೂಡಿಸಿಕೊಳ್ಳ ಬೇಕು. ಅಥವಾ ಉಂಟಾಗಿರುವ ಕಂದರವನ್ನು ಮುಚ್ಚಿಕೊಳ್ಳಬೇಕು. ಈ ಕಾಲಘಟ್ಟಗಳ ಅಂತರ ಅಥವಾ ಕಂದರದ ಕಾರಣದಿಂದಾಗಿ ಬಹು ವಿಸ್ತಾರವಾದ ಕಥಾಹಂದರ ಒಂದು ನೀಳ್ಗತೆ ಅಥವಾ ಕಿರು ಕಾದಂಬರಿಯ ಸ್ವರೂಪದ ಮಿತಿಗೆ ಒಳಪಟ್ಟಿದೆ ಅನ್ನಬಹುದು. ಹಾಗಾಗಿ, ಕಥೆಯ ಸಮಗ್ರ ಅನುಭವ ಓದುಗನಿಗಾಗುವುದರಲ್ಲಿ ಕೊರತೆ ಆಗಬಹುದೇನೋ ಎಂಬ ಅನುಮಾನ ನಮ್ಮನ್ನು ಕಾಡದೆ ಇರದು.

■ **ಹೊರೆಯಾಲ ದೊರೆಸ್ವಾಮಿ** : # ೭, ಪೃಥ್ವಿನಿಲಯ, ೭ನೇ ಮುಖ್ಯ ರಸ್ತೆ (ಉತ್ತರ), ೯ನೇ ಅಡ್ಡ ರಸ್ತೆ, ವಿವೇಕಾನಂದ ನಗರ, ಮೈಸೂರು-೫೭೭ ೦೨೩
■

ನಾಲ್ಕು ಕವಿತೆಗಳು

– ಸುಮತೀಂದ್ರ ನಾಡಿಗ

೧. ಇಷ್ಟು ವರ್ಷ

ಮಳೆಗಾಲದ ನಡುವೆ ಇತ್ತು ನಮಗೆ ಬೆಂಕಿ ಸ್ಪರ್ಶ
ಹೇಗೆ ಕಳೆದೆವೇ ಜೊತೆಗೆ ನಾವು ಇಷ್ಟು ವರ್ಷ ?

ನಿನ್ನಹಂಕಾರ ಕೊಳ್ಳಿ ಉರಿಸುತಿದ್ದೆ ನೀನು
ನನ್ನಹಂಕಾರ ವರ್ಷ ಸುರಿಸುತಿದ್ದೆ ನಾನು.

ಬೆಂಕಿ ನೀರು ಹೇಗೋ ಸೇರಿ ಬೇಯುತಿತ್ತು ಅನ್ನ
ಹೇಗೆ ನೀನು ತಡಕೊಂಡೆಯೆ ನೀರಿನಂಥ ನನ್ನ ?

ನೀರೆ ನೀನು ನಾನು ಅಗ್ನಿ, ನೀರ ಹೇಗೆ ನಾನು ?
ನನಗೆ ಏನು ಗೊತ್ತಿಲ್ಲವೆ, ತಿಳಿಸಿ ಹೇಳು ನೀನು.

ನೀರಿನಲ್ಲಿ ಇರುವಂತಹ ಬಡಬಾಗ್ನಿಯೆ ನೀನು ?
ನೀರು ಅಗ್ನಿ ಇಬ್ಬರೂ ಸಖ ಸಖಿಯರೆ ಏನು ?

ಯಾರು ಸಖ ಯಾರು ಸಖಿ ? ನೀರು ಸಖನೊ ಸಖಿಯೊ ?
ಅಗ್ನಿ ಸಖನೊ ಅಗ್ನಿ ಸಖಿಯೊ ತಿಳಿವವರೇ ಸುಖಿಯೊ ?

ನಾನು ಸುಖಿ ಎಂದೇ ನಾನು ತಿಳಿದಿರುವೆನು ಸಖಿಯೆ,
ನೀ ರಹಸ್ಯ, ನೀ ನಿಗೂಢ, ಹೇಳು ನೀನು ಸುಖಿಯೆ ?

೨. ನಡೆಸಿದ್ದು ತಪ್ಪೆ ?

ಅಲ್ಲಯ್ಯ, ಮೊದಲು ಹುಟ್ಟಿದ ನಾನು ಕೈಹಿಡಿದು ನಡೆಸಿದೆ.
ನಡೆಸಿದ್ದು ತಪ್ಪೆ ? ನಡೆಸಿದ್ದಕ್ಕೆ ಒದೆಯಬೇಕೇ ಇವನು ?
ಮುಳ್ಳುಗಳ ಕಡಿದು, ತಗ್ಗುತೆವರುಗಳನ್ನು ಸಮಾ ಮಾಡಿ
ನನಗೇ ಅಂತ ದಾರಿ ಮಾಡಿದೆ ನಾನು. ಇವನಿಗೂ ಆಯ್ತಲ್ಲ ?
ಆ ದಾರಿ ಸರಿಯಿಲ್ಲೆಂದು ಟಾರು ಹಾಕಿದ ಇವನು
ಅದಕ್ಕೀಗ ಅವನ ಹೆಸರನ್ನಿಟ್ಟು ನಡೆಯಬೇಕಂತೆ !

ಈ ಕುಳ್ಳ, ಎತ್ತರದ ಆಸಾಮಿ ಹಾಗೆ ಕಾಣಲಿ ಎಂದು
ನನ್ನ ಹೆಗಲಿನ ಮೇಲೆ ನಿಲ್ಲಿಸಿದ್ದೇ ತಪ್ಪೆ ? ತೂಕ ತಪ್ಪದೆ ಇರಲಿ
ನನ್ನ ಕೈಯೆತ್ತಿ ಇವನ ಸೊಂಟವನು ಹಿಡಿದದ್ದು ತಪ್ಪೆ ?
ತಾನು ಎತ್ತರಕ್ಕೆ ಬೆಳೆದಿದ್ದೇನೆಂದು ತೋರಿಸಲಿಕ್ಕೆ
ನನ್ನ ಹೆಗಲಿನ ಮೇಲೆ ಧಿಮಿತಿಕ್ಕ ಕುಣಿಯುತ್ತಾನೆ.
ನಾನು ಹಿಂದೆ ಹುಟ್ಟಿದ ಕಿವಿ, ಇವನು ಆಮೇಲೆ ಬೆಳೆದ ಕೋಡು.

ತಲೆಗಿಂತ ಪಾದ ಕೀಳೆಂದು ನಾನು ತಿಳಿದಿಲ್ಲ.
ತಲೆಯನ್ನು ಎತ್ತಿ ಹಿಡಿಯುವುದಕ್ಕೆ ಪಾದ ಬೇಕಲ್ಲ !

೩. ಗೆಳೆತನ

ಗೆಳೆಯ ನೀನು ದೊಡ್ಡವನು ಗೆಳೆಯನಾದ್ದರಿಂದ
ಈ ಗೆಳೆತನ ಬೆಳೆಯುತ್ತಿದೆ ಎಂದೋ ಹಿಂದಿನಿಂದ

ಒಂದೆ ದಾರಿ ಹಿಡಿದಿದ್ದೆವು ಅದೇ ಒಂದು ಕಾರಣ
ಸ್ನೇಹದ ಈ ಕಡುಬಿಗಾಯ್ತು ಅದೇ ಒಂದು ಹೂರಣ.

ಒಮ್ಮೆ ಜಾಸ್ತಿ ಕರಿದೆವು, ಒಮ್ಮೆ ಕಡಿಮೆ ಕರಿದೆವು,
ಹೂರಣವೇ ಕಡಿಮೆಯಾಗಿ ಕಣಕ ಹೆಚ್ಚು ಎಂದೆವು.

"ಕೆಂಪಿನಲ್ಲೆ ತೆಗೆಯಬೇಕು, ಕರುಕಾಗಲು ಬಿಟ್ಟೆವು"
ಎಂದು ನಮ್ಮ ತಪ್ಪು ತಿಳಿದು ಸಮಾಧಾನಪಟ್ಟೆವು.

ಕರುಕಲಾದ ಕಣಕವನು ಬಿಡಿಸಿ ದೂರ ಇಟ್ಟೆವು,
ಒಳಗೆ ಇದ್ದ ಹೂರಣ ರುಚಿ ಕಂಡು ಸುಖವ ಪಟ್ಟೆವು.

ಗೆಳೆಯ ನೀನು ದೊಡ್ಡವನು ಗೆಳೆಯನಾದ್ದರಿಂದ
ಈ ಗೆಳೆತನ ಬೆಡಲಾರೆವು ಅದರ ಮೊದಲಿನಿಂದ.

೪. ದಿವಸ್ಪತಿ

ಗೆಳೆಯ ನೀನು ಸತ್ತೆಯೆಂದು ಮೃತ್ಯುಸುದ್ದಿ ಹರಡಲಿಕ್ಕೆ
ಕಾಯಲಿಲ್ಲ ನಾನು. ಮೃತ್ಯುದ್ವಾರದಿಂದ ನೀನು ಹಿಂದೆ
ಬಂದೆ ಬರುವಿಯೆಂದು ಕಾಯುತ್ತಿದ್ದೆ ನಾನು. ನೀನು ಹಿಂದೆ ಬರಬಹುದು
ಬಾರದೆಯೂ ಇರಬಹುದು, ಎಂದು ಕಾಯುತ್ತಿದ್ದೆ ನಾನು.

ನಿನ್ನ ಮೂಗು ಬಾಯಿಯಲ್ಲಿ ನಳಿಗೆಗಳನು ತೂರಿಸುತ್ತ
ಮಾತಾಡಲು ಬಾರದಂತೆ, ಕೃತಕ ಉಸಿರು ಆಡಿಸುತ್ತ
ನಾಲಗೆಯನು ಕಟ್ಟಿಹಾಕಿ ನರ್ಸಿಂಗ್ ಹೋಂ ಯಮದೂತರು
ದೇಹದಿಂದ ನಿನ್ನ ಪ್ರಾಣ ಬೇರೆ ಮಾಡಿಬಿಟ್ಟರು.

ಹುಟ್ಟು ಎಷ್ಟು ಸತ್ಯವೋ, ಮರಣವೂ ಅಷ್ಟೆ ಸತ್ಯ,
ಹುಟ್ಟಿದವರು ಸಾಯುತ್ತಾರೆ ಅದೂ ಕೂಡ ಸತ್ಯ,
ನೀನು ಸಾಯದಿರಲಿಕ್ಕೆ ನಮ್ಮ ಯತ್ನ ನಡೆಸಿದೆವು,
ಮೃತ್ಯು ಜೊತೆಗೆ ಹೋರಾಟವು ನಡೆಯಬೇಕು ನಿತ್ಯ.

ಮೃತ್ಯು ಗೆಲ್ಲುತ್ತಾನೆ ಕೊನೆಗೆ, ಅದೂ ನಮಗೆ ಗೊತ್ತು;
ಪೂರ್ವದಲ್ಲೆ ನಿರ್ಧಾರಿತ ಪ್ರತಿಯೊಂದೂ ಜೀವಿತ;

ಗೊತ್ತಿದ್ದರು ಅದೆಲ್ಲ ನಮಗೆ ವಿಫಲ ಯತ್ನ ಸತತ
ನಾವು ನಮ್ಮ ದರ್ದಿಗಾಗಿ ಮಾಡುತ್ತೇವೆ ಸತತ.

ನಾಳೆ ಬೆಳಗು ಆಗುತ್ತದೆ ಎಂದು ನಾವು ಕಾದೆವು
ಅಲೋಪತಿಯ ಮೃತ್ಯುವನ್ನು ನೀನು ಗೆಲ್ಲುತ್ತೀಯ ಎಂದು,
ನರ್ಸಿಂಗ್ ಹೋಂ ಹಣ ಮಾಡುವ ಬೇಲಿಯನ್ನು ದಾಟಿ ನೀನು
ಬದುಕಿ ಬರುವೆಯೆಂದು, ನಾವು ಕಾಯುತಿದ್ದೆವು.

ನರ್ಸಿಂಗ್ ಹೋಂ ನಡೆಸುವರು ಪರ್ಯಾಯ ವೈದ್ಯಕೀಯ
ಚಿಕಿತ್ಸೆಯನ್ನು ನಂಬದೆಯೇ ದುಡ್ಡು ಮಾಡುವವರು;
ಅಲೋಪತಿಯ ಕಣ್ಣುಪಟ್ಟೆ ಕಟ್ಟಿದಂಥ ಕುದುರೆಗಳು,
ತಾವು ನಡೆವ ದಾರಿಯಷ್ಟೆ ಸತ್ಯವೆನ್ನುವವರು.

ಸಾಯುತ್ತಿರುವ ಯಾರೇ ಇರಲಿ, ಕಡೆಯ ಗಳಿಗೆ ಹೆಂಡತಿ ಜೊತೆ
ಮಕ್ಕಳು ಮೊಮ್ಮಕ್ಕಳ ಜೊತೆಗೆ, ಏನೋ ಒಂದು ಮಾತನಾಡಿ
ಸಾಯುವಾಸೆ ಇರುತ್ತೆ. ಅದಕ್ಕೂ ಅವಕಾಶ ಕೊಡದೆ,
ನರ್ಸಿಂಗ್ ಹೋಂ ರಾಕ್ಷಸರು ಏನು ಸಾಧಿಸಿದರು ?

ನರ್ಸಿಂಗ್ ಹೋಂ ನಡೆಸಲಿಕ್ಕೆ ಹಣವ ಮಾತ್ರ ವಸೂಲ್ಮಾಡಿ
ಹೆಣವ ಹಿಂದೆ ಕೊಟ್ಟರು. ಸಾವು ಖಚಿತವೆಂದ ಮೇಲೂ
ಡೈಯಾಲಿಸಿಸ್ ಮಾಡಿಬಿಟ್ಟು ಬಿಲ್ಲು ಬೆಳೆಸಿಬಿಟ್ಟರು.
ಹೃದಯದ ಅಪಘಾತಕಿಂತ ನರ್ಸಿಂಗ್ ಹೋಂ ಅಪಘಾತವೆ ದೊಡ್ಡದಾಯಿತು.

ಇದಕ್ಕಿಂತ ಕ್ರೂರವಾದ ನರ್ಸಿಂಗ್ ಹೋಂ ಇದ್ದಾವಂತೆ,
ಬದುಕುವವರ ಮೂತ್ರಪಿಂಡ, ಹೃದಯ ಕದಿಯುವವರು.
ತಪ್ಪುತಪ್ಪು ಔಷಧಿಯನು ಕೊಟ್ಟುಕೊಟ್ಟು ರೋಗಿಯನ್ನು ದೀರ್ಘ ಕಾಲ ಇಡುವವರು,
ಸುಲಭವಾಗಿ ಸಾಯದಂತೆ ನಿಧಾನ ಕೊಲ್ಲುವವರು.

ಹೀಗೆ ಸಾಯಬೇಕು ಎಂದು ಹಣೆಬರಹವು ಇರುತ್ತದೆಯೆ ?
ಹಣೆಯ ಬರಹಕಿಂತಲೂ ಹಣದ ಬರಹ ದೊಡ್ಡದೆ !
ದುಡ್ಡಿದ್ದವನೆ ದೊಡ್ಡಪ್ಪ ಎಂದು ಗಾದೆ ಹೇಳುತ್ತದೆ
ನರ್ಸಿಂಗ್ ಹೋಂ ದೊಡ್ಡಪ್ಪನೆ ಯಮಧರ್ಮನ ದೂತನೆ ?

■ ಡಾ. ಸುಮತೀಂದ್ರ ನಾಡಿಗ : # ೩೮, ಅಪೂರ್ವ. ೧ ನೇ ಮೇನ್, ೩ ನೇ ಹಂತ, ೬ ನೇ ಬ್ಲಾಕ್,
ಬನಶಂಕರಿ, ೩ ನೇ ಸ್ಟೇಜ್, ಬೆಂಗಳೂರು-೫೬೦ ೦೮

ನನ್ನ ಗುರುಗಳು

— ಬಿ. ಎಂ. ರೋಹಿಣಿ

'ಕಲಿಸಿದಾತಂ ವರ್ಣ ಮಾತ್ರಂ ಗುರು' ಇದು ಕವಿವಾಣಿ. ಪ್ರತಿ ವ್ಯಕ್ತಿಯ ಜೀವನಾನುಭವಗಳಲ್ಲಿ ಇಂತಹ ಸಾವಿರಾರು ಗುರುಗಳಿಂದ ಪಾಠ ಕಲಿಯುವ ಸಂದರ್ಭಗಳಿವೆ. ಆದರೆ ಯುಕ್ತಾಯುಕ್ತ ವಿವೇಚನೆ, ಬಾಳಿಗೆ ನೈತಿಕ ಸ್ಥೈರ್ಯ, ಸಚ್ಚಾರಿತ್ರ್ಯ ನಿರ್ಮಾಣ, ಪ್ರತಿಭೆಗಳ ವಿಕಾಸ ಇತ್ಯಾದಿಗಳು ರೂಪುಗೊಳ್ಳುವುದು ವಿದ್ಯಾರ್ಥಿ ಜೀವನದಲ್ಲಿ ನಮಗೆ ಲಭಿಸಿದ ಪ್ರತ್ಯಕ್ಷ ಗುರುಗಳಿಂದ. ಸಣ್ಣ ಪುಟ್ಟ ವಿಷಯಗಳನ್ನು ಕಲಿಸಿದ 'ವರ್ಣ ಮಾತ್ರಂ' ಗುರುಗಳು ನಮ್ಮ ಚಿತ್ತ ಭಿತ್ತಿಯ ಮರೆಯಲ್ಲಿ ಅಡಗಿರಬಹುದು. ಕೆಲವೊಮ್ಮೆ ಈ ಪರೋಕ್ಷ ಗುರುಗಳೇ ನಮ್ಮ ಬಾಳಿನ ತಿರುವುಗಳಿಗೆ ತೋರುಗಂಬಗಳಾಗಿ, ಕಂದಕಗಳಿಗೆ ಸೇತುವೆಯಾಗಿ, ಸಾಧನೆಗಳಿಗೆ ಪ್ರಚೋದಕರಾಗಿ ಸಹಕರಿಸಿದವರೂ ಇದ್ದಾರೆ. ಹಾಗೆಯೇ ಕೆಲವೊಮ್ಮೆ ಕವಲುದಾರಿ, ಅಡ್ಡದಾರಿಗಳಲ್ಲಿ ಸುತ್ತಿಸಿ, ಸುಳಿ, ಸುಂಟರಗಾಳಿಗಳ ದರ್ಶನ ಮಾಡಿಸುವ ಗುರುಗಳೂ ಇಲ್ಲವೆಂದಲ್ಲ. ಇಂತಹ ಗುರುಗಳ ಸಮ್ಮೋಹಿನಿಗೆ ಒಳಗಾಗದಂತೆ ರಕ್ಷಿಸುವವರು ನಮ್ಮ ಬಾಲ್ಯ ಕಾಲದ ಪ್ರತ್ಯಕ್ಷ ಗುರುಗಳು. ಇವರ ನೆನಪುಗಳು ನಮ್ಮ ಸ್ಮೃತಿಕೋಶದ ನಿಧಿಗಳಂತೆ ರಕ್ಷಿಸಲ್ಪಟ್ಟಿರುತ್ತವೆ.

ಮನುಷ್ಯನ ಬಾಲ್ಯವೇ ಹೀಗೆ, ಎಲ್ಲವನ್ನು ಸ್ಪಂಜಿನಂತೆ ಹೀರಿಕೊಳ್ಳುತ್ತದೆ. ನೆನಪುಗಳು ಚಿತ್ತದಲ್ಲಿ ಕಾಂಕ್ರೀಟಿನಂತೆ ಗಟ್ಟಿಗೊಂಡಿರುತ್ತವೆ. ಸಾಮಾನ್ಯವಾಗಿ ಹೆಚ್ಚಿನವರಿಗೆ ಒಂದನೆಯ ತರಗತಿಯಲ್ಲಿ ಅಕ್ಷರ ತಿದ್ದಿದ ಗುರುಗಳ ನೆನಪೇ ಇರುವುದಿಲ್ಲ. ನೆನಪುಳಿಸಿಕೊಳ್ಳುವಂತೆ ಆ ಗುರುಗಳು ಇರುವುದೂ ಇಲ್ಲವೇನೋ? ೪೦ ರ ದಶಕದ ನನ್ನ ವಿದ್ಯಾರ್ಥಿ ಜೀವನದ ಆರಂಭ ಕಾಲದಲ್ಲಿ ಈಗಿನಂತೆ ಹಾಲುಗಲ್ಲದ ಹಸುಳೆಗಳನ್ನು ಶಾಲೆಗೆ ಸೇರಿಸುತ್ತಿರಲಿಲ್ಲ. ಆರೇಳು ವರ್ಷ ಕಳೆದ ಮೇಲೆಯೇ ಶಾಲಾ ದೇಗುಲಕ್ಕೆ ಪ್ರವೇಶ. ಒಂದಿಷ್ಟು ಅಕ್ಷರ ಸಂಸ್ಕೃತಿಯ ಬೆಳಕನ್ನು ಕಂಡ ನನ್ನ ತಂದೆ ನನ್ನನ್ನು ನಾಲ್ಕು ತುಂಬಿ ಐದು ಹಿಡಿಯುತ್ತಲೇ ಬಂಟ್ವಾಳ ತಾಲೂಕಿನ ತುಂಬೆಯ ಶಾಲೆಗೆ ಸೇರಿಸಿಬಿಟ್ಟರು. ಅದೂ ಹೇಗೆಂದರೆ ನಾನು ಶಾಲೆಗೆ ಸೇರುವ ಮೊದಲ ದಿನದಂದು ಶಾಲೆಯ ಮಕ್ಕಳಿಗೆಲ್ಲಾ ತಿಂಡಿ ಹಂಚಿ, ಉಪಾಧ್ಯಾಯರನ್ನೆಲ್ಲಾ ಖುಶಿಪಡಿಸಿ ನನ್ನ ಶಿಕ್ಷಣದ ಉದ್ಘಾಟನೆ ಮಾಡಿಸಿದರು. ಅದರಿಂದಾಗಿ ಶಾಲೆಯ ಮಕ್ಕಳು ಮತ್ತು ಶಿಕ್ಷಕರಿಗೆ ನಾನೊಬ್ಬ 'ಹೀರೊ' ಎಂಬಂತೆ ಅನಿಸಿಬಿಟ್ಟಿದ್ದೆ.

ಒಂದನೆಯ ತರಗತಿಗೆ ಕಲಿಸುತ್ತಿದ್ದ ಜುಟ್ಟಿನ ಭಟ್ ಮಾಸ್ತರು ನನ್ನನ್ನು ಉಳಿದವರಿಗಿಂತ ಭಿನ್ನವಾಗಿ ಕಂಡದ್ದನ್ನು ಗುರುತಿಸಿದ್ದೆ. ಬೆತ್ತದ ಬಲದಿಂದಲೇ ಚಿತ್ತದ ಚೆಲುವನ್ನು ಹೆಚ್ಚಿಸಬಹುದೆಂದು ಶಿಕ್ಷಕರು ನಂಬಿದ ಕಾಲವಾಗಿತ್ತದು. ನಾಗರಬೆತ್ತ ಅಲ್ಲಿ ಇಲ್ಲಿ ಅಕ್ಕಪಕ್ಕ ಛಟೀರೆಂದಾಗ ಮೊದಲೇ ಕೃಶ ಶರೀರದ ಕಪ್ಪು ಹುಡುಗಿಯಾದ ನಾನು ಹೆದರಿ ಗುಬ್ಬಚ್ಚಿಯಾಗುತ್ತಿದ್ದೆ. ನನ್ನ ದಯಾರ್ದ್ರ ನೋಟವೋ, ತಂದೆಯ ಪ್ರಭಾವವೋ, ಏನೋ ಕಾರಣವಾಗಿ ನನ್ನ ಭಟ್ ಮಾಸ್ಟ್ರು ಕೈ ಹಿಡಿದು ಅಕ್ಷರ ತಿದ್ದಿದರು. ಇಂದೂ ಯಾರಾದರೂ ನಿಮ್ಮ ಅಕ್ಷರ ಮುದ್ದಾಗಿದೆ ಎಂದು ಹೇಳಿದರೆ ನನಗೆ ತಟ್ಟನೆ ಆ ಜುಟ್ಟಿನ ಭಟ್ ಮಾಸ್ಟ್ರ ನೆನಪಾಗುತ್ತವೆ.

ಅವರ ಹೆಸರು ಏನಿತ್ತೋ ತಿಳಿಯದು. ಅವರ ನೀಳ, ಸಪೂರ, ಗೋದಿ ಮೈ ಬಣ್ಣ, ಸಿಡುಕಿದಾಗ ಕ್ರೂರವಾಗಿ ನಕ್ಕಾಗ ಸುಂದರವಾಗಿ ಕಾಣುವ ಅವರ ಮುಖ ಈಗಲೂ ನನ್ನ ಕಣ್ಣ ಮುಂದೆ ನಿಂತಿದೆ.

ಮುಂದೆ ಐದನೆಯ ತರಗತಿಯ ವರೆಗೆ ನನಗೆ ಶಿಕ್ಷಕಿಯರೇ ಪಾಠ ಕಲಿಸಿದರು. ಆ ಕಾಲದಲ್ಲಿ ಗಾಂಧೀಜಿಯ ಬುನಾದಿ ಶಿಕ್ಷಣ ಪಾಠಕ್ರಮವನ್ನು ಅಳವಡಿಸಿಕೊಂಡ ನಿಯಮವಿತ್ತು. ನಮಗೆ ತಕಲಿಯಿಂದ ನೂಲು ಮಾಡಲು ಜಾರಪ್ಪ ಮಾಸ್ತರು ಬರುತ್ತಿದ್ದರು. ಶಾಲೆಯ ವೆರಾಂಡ ದಲ್ಲಿ ಸಾಲಾಗಿ ಕೂತು ನಾವೆಲ್ಲಾ ತಕಲಿಯಲ್ಲಿ ನೂಲು ತೆಗೆಯುವ ಆಟದಲ್ಲಿ ತೊಡಗಿದ್ದನ್ನು ನೆನೆಯುವಾಗಲೇ ರೋಮಾಂಚನವಾಗುತ್ತದೆ. ನಾನು ಏಕಾಗ್ರಚಿತ್ತದಿಂದ ಒಂದಿಷ್ಟೂ ಹತ್ತಿ ಹಾಳು ಮಾಡದೆ ನೂಲು ತೆಗೆಯುತ್ತಿದ್ದುದನ್ನು ಕಂಡು ಜಾರಪ್ಪ ಮಾಸ್ತರು ಉಳಿದ ಮಕ್ಕಳಿಗೆ, 'ನೋಡಿ, ರೋಹಿಣಿ ಹೇಗೆ ನೂಲು ತೆಗೆಯುತ್ತಾಳೆಂಬುದನ್ನು ಅವಳಿಂದ ಕಲಿಯಿರಿ' ಎಂದಾಗ ನಾನು ನೆಲ ಬಿಟ್ಟು ಮೇಲೆ ಆಕಾಶದಲ್ಲಿ ತೇಲಿದಂತಹ ಅನುಭವವಾದದ್ದು ಸತ್ಯ. ನನ್ನ ತಂದೆಯ ಆಪ್ತ ಮಿತ್ರರೂ ಆದ ಅವರು ನನ್ನನ್ನು ಹೊಗಳಲೂ ಸಾಧ್ಯವಾಗದೆ ತೆಗಳಲೂ ಸಾಧ್ಯವಾಗದೆ ಅಂತಹ ಮಾತು ಆಡಿರಬಹುದೇನೋ. ಸಾಹಿತ್ಯ, ಸಂಗೀತ ಪ್ರೇಮಿಯಾಗಿದ್ದ ಅವರು ಮಕ್ಕಳಿಂದ ಹಾಡು, ಕುಣಿತ, ನಾಟಕ ಮಾಡಿಸುವುದರಲ್ಲಿ ತುಂಬಾ ಮುತುವರ್ಜಿ ವಹಿಸಿದರೂ ನನ್ನನ್ನು ಮಾತ್ರ ಯಾವುದಕ್ಕೂ ಸೇರಿಸಿಕೊಳ್ಳಲೇ ಇಲ್ಲ. ನನಗೇ ನಾನು ಹಾಡಬಲ್ಲೆ, ಕುಣಿಯಬಲ್ಲೆ ಎಂದೇ ಗೊತ್ತಿರಲಿಲ್ಲ. ನಾನು ಶಿಕ್ಷಕಿಯಾದ ಮೇಲೆ ನನ್ನ ಬಾಲ್ಯದ ಅನುಭವ ಗಳನ್ನು ಮರೆಯಲಿಲ್ಲ. ಯಾರು ನಾಟಕದಲ್ಲಿ ಪಾತ್ರ ವಹಿಸುತ್ತೀರಿ ಎಂದು ಕೇಳಿದೊಡನೆಯೇ ಮಕ್ಕಳು 'ನಾನು, ನಾನು' ಎಂದು ಮೇಲೆ ಬಿದ್ದು ನನ್ನ ಬಳಿ ಬರುತ್ತಿದ್ದರು. ಯಾವ ಪ್ರತಿಕ್ರಿಯೆ ಯನ್ನೂ ತೋರಿಸದ ಮಗುವಿನಲ್ಲೂ ಕೂಡಾ ಅಭಿಜಾತ ಕಲಾವಿದನೊಬ್ಬ ಅಡಗಿರಬಹುದು ಎಂದು ಅಂತಹವರನ್ನೇ ಆರಿಸಿ ಮುಂದೆ ಬರುವಂತೆ ಮಾಡಲು ನನ್ನ ಬಾಲ್ಯವೇ ಬಲವಾದ ಪುರಾವೆಯಾಯಿತು.

ಏಳನೆಯ ತರಗತಿಯಿಂದ ನಾನು ಕಾನ್ವೆಂಟ್ ಶಾಲೆಗೆ ಸೇರಿದ ಮೇಲೆ ಅಲ್ಲಿನ ಸಂನ್ಯಾಸಿನಿಯರಾದ ಶಿಕ್ಷಕಿಯರು ನನಗೆ ದೇವತೆಗಳಂತೆ ಕಂಡರು. ಕ್ರೈಸ್ತ ಮಕ್ಕಳೇ ಹೆಚ್ಚಿದ್ದ ಆ ಶಾಲೆಯಲ್ಲಿ 'ಅಳಿದ ಊರಿಗೆ ಉಳಿದವನೇ ಗೌಡ' ಎಂಬಂತೆ ಕನ್ನಡದ ಮಟ್ಟಿಗೆ ನನಗೆ 'ಪಂಡಿತ' ಪಟ್ಟವೇ ದೊರೆತದ್ದು ಸುಳ್ಳಲ್ಲ. ಪಾಠಗಳಲ್ಲಿ ಬರುವ ಸಾಂದರ್ಭಿಕ ಕಥೆಗಳು ರಾಮಾಯಣದ್ದಾಗಲೀ, ಮಹಾಭಾರತದ್ದಾಗಲೀ ಹೇಳಲು ನಾನೇ ಮುಂದಾಗುತ್ತಿದ್ದುದರಿಂದ ನನ್ನ ಗೌರವ ಹೆಚ್ಚಿತು. ಏನಾದರೂ ಕ್ಲಿಷ್ಟ ಶಬ್ದಗಳ ಅರ್ಥಕ್ಕಾಗಿ, ಸಮಸ್ಯೆಗಳಿಗಾಗಿ 'ನಿನ್ನ ತಂದೆಯಲ್ಲಿ ಕೇಳಿ ಬಾ' ಎಂಬಲ್ಲಿ ವರೆಗೆ ನನ್ನ ತಂದೆಯ ಗೌರವವೂ ಹೆಚ್ಚಿತು.

ಏಳನೆಯ ತರಗತಿಯ ವಾರ್ಷಿಕ ಪರೀಕ್ಷೆಯ ಸಮಯದಲ್ಲಿ ನನ್ನ ಕೌಟುಂಬಿಕ ಸಮಸ್ಯೆ ಬಿಗಡಾಯಿಸಿ, ತಂದೆಯ ತಾತ್ಕಾಲಿಕ 'ವಾಚ್‌ಮನ್' ಕೆಲಸ ಕಳಕೊಳ್ಳುವ ಪರಿಸ್ಥಿತಿಯುಂಟಾಗಿ 'ಮುಂದಿನ ವರ್ಷ ನಾನು ಶಾಲೆಗೆ ಬರುವುದಿಲ್ಲ' ಎಂದು ಗೆಳತಿಯರಲ್ಲಿ ಹೇಳಿದ್ದನ್ನು

ಕೇಳಿಸಿಕೊಂಡ ನನ್ನ ಶಿಕ್ಷಕಿ ಸಿಸ್ಟರ್ ಎಸ್ಪೀರಿಯವರು ಒಂದು ದಿನ ಎಲ್ಲಾ ಮಕ್ಕಳನ್ನು ಒಟ್ಟುಗೂಡಿಸಿ ನನ್ನ ತಂದೆಗೆ ಕೆಲಸ ಸಿಗಲಿ ಎಂದು ವಿಶೇಷ ಪ್ರಾರ್ಥನೆ ಮಾಡಿಸಿದರು. ಮಕ್ಕಳ ಪ್ರಾರ್ಥನೆ ದೇವರಿಗೆ ಮುಟ್ಟಿತೋ ಏನೋ ನಾನು ಮರುವರ್ಷ ಶಾಲೆಗೆ ಬರುವಂತಾಯಿತು. ಈ ಶಿಷ್ಯಪ್ರೀತಿಯನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವೇ? ಮುಂದಿನ ವರ್ಷ ನನಗೆ ಸ್ಕಾಲರ್‌ಶಿಪ್ ಕೊಡಿಸಲು ನೆರವಾದರು. ಹಿಂದೂ ಹೆಣ್ಮಕ್ಕಳು ಅದರಲ್ಲೂ ಶೂದ್ರ ಹೆಣ್ಮಕ್ಕಳು ಶಾಲೆಗೆ ಬರುವುದೇ ಕಡಿಮೆಯಾಗಿದ್ದ ಕಾಲದಲ್ಲಿ ಸಹಾಯದ ಕೈ ಚಾಚಿ ನನ್ನನ್ನು ಆದರಿಸಿ ಹೈಸ್ಕೂಲು ಮೆಟ್ಟಲೇರುವಂತೆ ಮಾಡಿದ ನನ್ನ ಶಿಕ್ಷಕಿ ಸಿಸ್ಟರ್ ಎಸ್ಪೀರಿಯವರನ್ನು ನಾನು ಹೇಗೆ ಮರೆಯಬಲ್ಲೆ? ನನ್ನ ಜೊತೆ ಓದುತ್ತಿದ್ದ ಒಬ್ಬಿಬ್ಬರು ಹಿಂದೂ ಹೆಣ್ಣುಮಕ್ಕಳು ಏಳನೆಯ ತರಗತಿ ಮುಗಿಸಿ ಎಂಟನೆಗೆ ಕಾಲಿಟ್ಟಂತೆ ಮೈನೆರೆದರೆ ಶಾಲೆಯ ಕನಸೇ ಅವರಿಗೆ ದುಃಸ್ವಪ್ನವಾಗಿತ್ತು. ಹಾಗಾಗಿಯೇ ಎಸ್.ಎಸ್.ಎಲ್.ಸಿ.ಯಲ್ಲಿ ನಾನೊಬ್ಬಳೇ ಹಿಂದೂ ಹುಡುಗಿಯಾಗಿ ಉಳಿದವರೆಲ್ಲರೂ ಕ್ರೈಸ್ತರಾಗಿ ಶಿಕ್ಷಣ ಪಡೆಯುವ ಭಾಗ್ಯ ನನಗೆ ಒದಗಿ ಬಂದಿತ್ತು.

ಹೈಸ್ಕೂಲಿಗೆ ಬಂದ ಮೇಲೆ ನಮ್ಮ ಪ್ರಪಂಚ ಕೊಂಚ ವಿಸ್ತಾರವಾಗುತ್ತದೆ. ಪ್ರಾಥಮಿಕ ಹಂತಕ್ಕಿಂತ ಮೇಲೇರಿದಂತೆ ನಮ್ಮ ಬುದ್ಧಿ ಬಲಿತಿರುತ್ತದೆ. ಮಗುವಿನ ಮುಗ್ಧತೆ ಮರೆಯಾಗಿ ಹದಿಹರೆಯ ದಾಂಗುಡಿಯಿಡುತ್ತದೆ. ಪ್ರಾಥಮಿಕ ಹಂತದಲ್ಲಿ ಎಲ್ಲರನ್ನೂ ಮೆಚ್ಚುವ, ಆರಾಧಿಸುವ ಮನೋಭಾವವಿದ್ದರೆ ಹೈಸ್ಕೂಲು ಮಟ್ಟಕ್ಕಾಗುವಾಗ ನಾವು ನಮ್ಮದೇ ಮಾದರಿಗಳನ್ನು ಆಯ್ಕೆ ಮಾಡಿಕೊಂಡು ಆರಾಧಿಸುವ ಹಂತ ತಲಪಿರುತ್ತೇವೆ. ಇಂತಹ ವೇಳೆಯಲ್ಲಿ ನನಗೆ ದೊರೆತ ಓರ್ವ ಆದರ್ಶ ಶಿಕ್ಷಕಿ ಜಾನಕಿಯವರು. ಇವರು ಇಂಗ್ಲಿಷ್ ಪಾಠ ಮಾತ್ರ ಕಲಿಸುತ್ತಿದ್ದರು. ಅವರಿಗೆ ಕನ್ನಡ ಬರುತ್ತಿರಲಿಲ್ಲ. ಆದರೂ ಆ ಜಾನಕಿ ಟೀಚರು ಇಂಗ್ಲಿಷ್ ಪಾಠ ಕಲಿಸುತ್ತಿದ್ದ ರೀತಿ ಇಂದೂ ನನ್ನಲ್ಲಿ ವಿಸ್ಮಯ ಹುಟ್ಟಿಸುತ್ತದೆ. ಕನ್ನಡ ಬಾರದಿದ್ದರೂ ಆಕೆ ಇಂಗ್ಲಿಷ್ ಪಾಠವನ್ನು ಎಷ್ಟು ರಸವತ್ತಾಗಿ ಮಾಡುತ್ತಿದ್ದರೆಂದರೆ ಯಾರೂ ಇಂಗ್ಲಿಷ್ ಪಾಠ ಕಷ್ಟವಾಗುತ್ತದೆ, ಅರ್ಥವಾಗುವುದಿಲ್ಲ ಎಂದು ಹೇಳುವ ಪ್ರಮೇಯವೇ ಉಂಟಾಗಲಿಲ್ಲ. ಇಂಗ್ಲಿಷನ್ನು ಕನ್ನಡದಲ್ಲಿ ಕಲಿಸುವ ಈ ಕಾಲದಲ್ಲಿ ಅವರನ್ನು ಒಮ್ಮೆ ಹೋಲಿಸಿ ನೋಡಿದಾಗ ಅವರ ಅದ್ವಿತೀಯ ಬೋಧನಾಕ್ರಮವನ್ನು ಮತ್ತೆ ನೆನಪಿಸಿಕೊಳ್ಳುತ್ತೇನೆ. ಪೌರನೀತಿ ಎಂಬ ಪಿರೇಡನ್ನು ಅವರೇ ತೆಗೆದುಕೊಳ್ಳುತ್ತಿದ್ದರು. ಆಕೆಯ ಉತ್ಸಾಹ, ಮಕ್ಕಳಲ್ಲಿ ಚೈತನ್ಯ ತುಂಬುವ ವೈಖರಿಯಲ್ಲಿ ಜಾನಕಿ ಟೀಚರಿಗೆ ಸಮನಾದವರನ್ನು ನಾನು ಈವರೆಗೂ ಕಂಡಿಲ್ಲ. ಪ್ರತೀ ಇಂಗ್ಲಿಷ್ ಪಿರೇಡನ್ನೂ ಒಂದು ಆಟದ, ನೋಟದ ಮಾದರಿಗಳಿಂದ ಉತ್ಸಾಹ ಕುಂದಿದ ಮಕ್ಕಳಲ್ಲೂ ಉತ್ಸಾಹ ತುಂಬುತ್ತಿದ್ದರು. ಇಡೀ ಕ್ಲಾಸಿನ ತುಂಬಾ ಓಡಾಡಿ, ಹಾವಭಾವ ಗಳಿಂದ ಮಕ್ಕಳ ಉತ್ಸಾಹವನ್ನು ಕೆರಳಿಸುವ ರೀತಿಯನ್ನು ಸ್ಮರಿಸಿ ಇಂದೂ ಕೂಡಾ ಅವರೋರ್ವ ಅಭಿಜಾತ ಶಿಕ್ಷಕಿಯೆಂದೇ ಗೌರವಿಸುತ್ತೇನೆ. ಜಾನಕಿಯವರಂತೆ ಟೀಚರಾಗಬೇಕು ಎಂದು ಮನದಲ್ಲೇ ಹಂಬಲಿಸುವಂತಹ ಶಿಷ್ಯವರ್ಗವೊಂದು ನಮ್ಮ ತರಗತಿಯಲ್ಲಿತ್ತು. ದುರದೃಷ್ಟವೆಂದರೆ ಅವರಿಗೆ ಕನ್ನಡ ಬಾರದು ಎಂಬ ಒಂದೇ ಕಾರಣಕ್ಕಾಗಿ ಮುಂದಿನ ವರ್ಷಗಳಲ್ಲಿ ಅವರನ್ನು

ಕೆಲಸದಿಂದ ತೆಗೆಯಲಾಯಿತು. ಮತ್ತೆ ಅವರು ತಮ್ಮ ತಾಯ್ನಾಡಾದ ಮದ್ರಾಸಿಗೆ ಹೋದುದರಿಂದ ಅವರ ಮುಖತಃ ಭೇಟಿ ತಪ್ಪಿದರೂ ನಮ್ಮ ನೆನಪಿನ ದೇಗುಲದಲ್ಲಿ ಶಾಶ್ವತವಾಗಿ ಪ್ರತಿಷ್ಠಾಪಿತರಾಗಿದ್ದಾರೆ.

ನನ್ನ ಹಿಂದೀ ಮಾಸ್ಟರು ಸಂಜೀವರಾಯರಂತೂ ನನಗೆ ಪ್ರಾತಃಸ್ಮರಣೀಯರು. ತುಂಡು ತೋಳಿನ ಬಿಳೀ ಶರ್ಟು, ಬಿಳೀ ಪಂಚೆ ತೊಟ್ಟು ಕೈಕಾಲು ಬೀಸಿ ರಭಸದಿಂದ ಕ್ಲಾಸ್‌ರೂಮಿನ ಪ್ಲ್ಯಾಟ್‌ಫ್ರೋರ್ಮಿನ ಮೇಲೆ ನಿಂತರೆಂದರೆ ಕ್ಲಾಸೆಲ್ಲಾ ಗಪ್‌ಚಿಪ್. ಮುಖದಲ್ಲಿ ಎದ್ದು ಕಾಣುವ ಚೂಪಾದ ಮೂಗು ಅವರ ದೂರ್ವಾಸ ಕೋಪಕ್ಕೆ ಪ್ರತೀಕ. ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ನಾಟಕಗಳಿಗೆ ಒಂದು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟವರು ನನ್ನ ಹಿಂದೀ ಮಾಸ್ಟರು. ನನಗಂತೂ ಅವರ ನಿರ್ದೇಶನದ ಎಲ್ಲಾ ನಾಟಕಗಳಲ್ಲೂ ಒಂದು ಖಾಯಂ ಪಾತ್ರವಿದ್ದೇ ಇರುತ್ತಿತ್ತು. ಹೆಚ್ಚಿನವು ಅಳುಬುರುಕಿ ಪಾತ್ರಗಳು. ನನ್ನ ಕೌಟುಂಬಿಕ ದಾರಿದ್ರ್ಯದ ಕಾರಣವೋ, ಕೀಳರಿಮೆಯೋ ಕಾರಣವಾಗಿ ಅಳು ನನಗೆ ಲೀಲಾಜಾಲ. ಏಕಲವ್ಯನ ತಂದೆ ಹಿರಣ್ಯಧನುವಿನ ಪಾತ್ರದಲ್ಲಿ ನಾನು ಮಗನ ದುರವಸ್ಥೆ ಕಂಡು ವೇದಿಕೆಯಲ್ಲೇ ಕಣ್ಣೀರು ಸುರಿಸಿದಾಗ ತೆರೆಮರೆಯಲ್ಲಿ ನನ್ನ ಮಾಸ್ಟರೂ ಸಂತೋಷದಿಂದ ಕಣ್ಣೀರು ತುಂಬಿಕೊಂಡರಂತೆ. ನಾಟಕ ಪ್ರ್ಯಾಕ್ಟೀಸು ಮಾಡುತ್ತಿದ್ದಾಗಲೆಲ್ಲಾ ತಪ್ಪಿದಾಗ ರೋಷಗೊಂಡು ಬೈಯುತ್ತಿದ್ದ ಅವರು ನಾನು ಮಾತಾಡತೊಡಗಿದಾಗ ಸುಮ್ಮನಾಗುತ್ತಿದ್ದರು. ಯಾಕೆಂದರೆ ಪಾತ್ರಧಾರಿಗಳ ಉಚ್ಚಾರ ದೋಷಗಳನ್ನು ತಿದ್ದಿಯೇ ಅವರಿಗೆ ಸಾಕಾಗಿ ಹೋಗುತ್ತಿತ್ತು.

ನಾನು ಎಸ್.ಎಸ್.ಎಲ್.ಸಿ. ಮುಗಿಸಿದ ಮೇಲೂ ಹಿಂದೀ ವಿಶಾರದ ಪರೀಕ್ಷೆಗೆ ಪಾಠ ಹೇಳಿಸಿಕೊಳ್ಳಲು ಅವರ ಮನೆಗೇ ಹೋಗುತ್ತಿದ್ದೆ. ಆಗಲೇ ಗೃಹಸ್ಥರಾಗಿ ಮಕ್ಕಳೂ ಆಗಿದ್ದ ಮಾಸ್ಟರು ಸಂಸಾರಿಯಾಗಿ ಮಾತ್ರ ಎಂದೂ ಸುಖ ಕಾಣಲೇ ಇಲ್ಲ. ಅವರದು ವಿರಸ ದಾಂಪತ್ಯ. ನಾನು ಮನೆಗೆ ಹೋದಾಗಲೆಲ್ಲಾ ಗುರುಪತ್ನಿ ನನ್ನಲ್ಲಿ ಮಾಸ್ಟರ ದೂರ್ವಾಸತನದ ಬಗ್ಗೆ ಹೇಳಿ ಕಣ್ಣೀರು ಹಾಕುತ್ತಿದ್ದರು. ಮಾಸ್ಟರು ಪತ್ನಿಯ ಮೂರ್ಖತನದ ಬಗ್ಗೆ ಹೇಳಿ ಬೈಯುತ್ತಿದ್ದರು. ಏನೇ ಇದ್ದರೂ ಶಾಲೆಯಲ್ಲಿ ಮಾತ್ರ ಮಾಸ್ಟರು ಶಿಸ್ತಿನ ಸಿಪಾಯಿ. ಅವರ ಪಾಂಡಿತ್ಯ, ಪ್ರತಿಭೆಗಳ ಬಗ್ಗೆ ಗೌರವವಿದ್ದಷ್ಟೇ ಮಾತೃಸಮಾನವಾದ ಅವರ ಪ್ರೀತಿಯ ಬಗ್ಗೆಯೂ ಮಕ್ಕಳು ಸಂತೋಷಪಡುತ್ತಿದ್ದರು. ಅಂತಹ ನನ್ನ ಮಾಸ್ಟರು ನಿವೃತ್ತರಾಗುವ ಐದಾರು ವರ್ಷ ಮೊದಲು ಮಾನಸಿಕ ಅಸ್ವಾಸ್ಥ್ಯಕ್ಕೊಳಗಾಗಿ ಕಂಕನಾಡಿ ಆಸ್ಪತ್ರೆಗೆ ಸೇರಿಸಲ್ಪಟ್ಟಾಗ ಇಂತಹ ಒಳ್ಳೆಯ ಮನುಷ್ಯರಿಗೂ ದೇವರು ಇಂತಹ ಸ್ಥಿತಿ ಯಾಕೆ ತಂದಿಟ್ಟ ಎಂದು ಕೊರಗಿದ್ದೇನೆ. ನನ್ನನ್ನು ಕಂಡಾಗ "ಯಾಕಮ್ಮ, ಇಲ್ಲಿಗೆ ಬಂದೆ? ಇದು ಯಮನೂ ಕಾಲಿಡಲು ಹೇಸುವ ಸ್ಥಳ" ಎಂದರು. ಅವರ ಕ್ಷೇಮ ವಿಚಾರಿಸಿದಾಗ, "ನಾನೊಂದು ಹಾಯಿ ಹರಿಗೋಲು ಹರಿದ ಹಡಗು, ಇತರರ ವಿಕಾರಗಳನ್ನು ತಿದ್ದಲು ಹೋಗಿ ನಾನೇ ವಿಕಾರಕ್ಕೊಳಗಾದೆ. ಈಗ ನನ್ನ ಮುಖವೇ ನನಗೆ ಭಯಾನಕವಾಗಿ ಕಾಣುತ್ತಿದೆ" ಎಂದು ನಿಟ್ಟುಸಿರು ಬಿಟ್ಟರು. ಮತ್ತೆ ಕೆಲವೇ ಸಮಯದಲ್ಲಿ ಅವರು ನಿವೃತ್ತಿಗಿಂತ ಮುಂಚೆಯೇ ನಿಧನರಾದ ವಿಷಯವೂ ತಿಳಿದು ಅತೀವ ದುಃಖವಾಯಿತು. ನನ್ನಲ್ಲಿ ಆತ್ಮವಿಶ್ವಾಸ ತುಂಬಿದ ಗುರುಗಳಲ್ಲಿ ಅವರು ಮುಖ್ಯರು. ಒಮ್ಮೆ ಅವರ ಮಿತ್ರರನ್ನು

ಜೊತೆಯಲ್ಲಿ ಕರೆದುಕೊಂಡು ನಮ್ಮ ಮನೆಗೆ ಬಂದು ನನ್ನ ತಂದೆಯವರಲ್ಲಿ ಮಾತಾಡುತ್ತಾ 'ನಾನು ಕಂಡ ನೂರಾರು ಶಿಷ್ಯೆಯರಲ್ಲಿ ನಿಮ್ಮ ಮಗಳು ಅತ್ಯಂತ ಪ್ರತಿಭಾವಂತೆ' ಎಂದು ಹೇಳಿದಾಗ ನನಗಿಂತಲೂ ಹೆಚ್ಚು ನನ್ನ ತಂದೆ ಉಬ್ಬಿ ಹೋಗಿದ್ದರು. ಅವರ ಹಿತನುಡಿಯಂತೆ ನನಗೆ ಸರಕಾರೀ ಶಾಲೆಯಲ್ಲಿ ಹಿಂದೀ ಶಿಕ್ಷಕಿಯಾಗಿ ಬೇಗನೇ ಕೆಲಸವೂ ಸಿಕ್ಕಿ ನನ್ನ ಕುಟುಂಬದ ತುತ್ತಿನ ಚೀಲ ತುಂಬಿತು. ಬವಣೆಗಳ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿದ್ದ ಬಾಳು ನಂದಾದೀಪದಂತೆ ಬೆಳಗಿತು. ಗುರುಗಳು ಶಿಷ್ಯರ ಬಾಳಿಗೆ ಬೆಳಕಾಗುವುದೆಂದರೆ ಇದೇ ಅಲ್ಲವೇ?

ನನ್ನ ಜಾನಕಿ ಟೀಚರ ಇಂಗ್ಲಿಷ್ ಶಿಕ್ಷಣದ ಮೋಡಿ ಒಂದು ಬಗೆಯದಾದರೆ ಸಿಸ್ಟರ್ ಅಗ್ನೆಲಾ ಅವರ ಇಂಗ್ಲಿಷ್ ಶಿಕ್ಷಣದ ವೈಖರಿಯೇ ಇನ್ನೊಂದು ಬಗೆಯದ್ದು. ೧೯೫೯ ನೆಯ ಇಸವಿಯ ಸಪ್ಟೆಂಬರ್ ತಿಂಗಳಿನ ಒಂದು ದಿನ ಇಂಗ್ಲಿಷ್ ವ್ಯಾಕರಣ ಕಲಿಸುತ್ತಾ ಸಿಸ್ಟರ್ ನಾಮಪದ ಅಂದರೇನು? ಕ್ರಿಯಾಪದ ಅಂದರೇನು? ಎಂದು ನಮ್ಮಲ್ಲಿ ಪ್ರಶ್ನಿಸಿದರು. ತರಗತಿಯ ೩೫ ಮಂದಿಯಲ್ಲಿ ಯಾರೊಬ್ಬರಿಗೂ ಇಂಗ್ಲಿಷಿನಲ್ಲಿ ಉತ್ತರಿಸಲಾಗಲಿಲ್ಲ. ಸಿಟ್ಟು ಏರಿದ ಸಿಸ್ಟರ್ ಇಡೀ ಕ್ಲಾಸಿಗೇ ಇಂಪೋಸಿಷನ್ ಕೊಟ್ಟರು. ಅದೂ ಎಷ್ಟು ಸಲ ಅನ್ನುತ್ತೀರಿ? ನಾಮಪದ, ಕ್ರಿಯಾಪದ, ನಾಮ ವಿಶೇಷಣ, ಕ್ರಿಯಾ ವಿಶೇಷಣ ಹೀಗೆ ಪ್ರತಿಯೊಂದನ್ನು ೧೦೦ ಸಲ. ಒಟ್ಟು ೪೦೦ ಸಲ. ಅದೂ ಸಂಜೆ ಮನೆಗೆ ಹೋಗುವ ಮೊದಲು ಬರೆದು ತೋರಿಸಬೇಕೆಂಬ ಆಜ್ಞೆ. ಸಂಜೆಯ ವರೆಗೂ ಊಟ ತಿಂಡಿ ಬಿಟ್ಟು ಬರೆದದ್ದೇ ಬರೆದದ್ದು. ಶಾಲೆ ಬಿಟ್ಟ ಮೇಲೆ ಸಿಸ್ಟರೂ ನಮ್ಮ ಜೊತೆಯಲ್ಲೇ ಕೂತು ಮುಖ ಕೆಂಪು ಮಾಡಿಕೊಂಡು ಕೂತಿದ್ದರು. ಅಷ್ಟರಲ್ಲಿ ಅವರಿಗೆ ಒಂದು ಫೋನ್ ಕರೆ ಬಂತು. ತಟ್ಟನೇ ಎದ್ದು ಹೋದರು. ಅವರು ಆಗ ಮುಖ್ಯೋಪಾಧ್ಯಾಯಿನಿಯೂ, ಬೆಥನಿ ಸಂಸ್ಥೆಯ ಕಾರ್ಯದರ್ಶಿಯೂ ಆಗಿದ್ದುದರಿಂದ ಅವರಿಗೆ ಬಹಳಷ್ಟು ಕೆಲಸದ ಒತ್ತಡಗಳಿದ್ದುವು. ನಾವು ಕೆಲವರು ನಿಟ್ಟುಸಿರು ಬಿಡುತ್ತಾ, ಕೆಲವರು ಕಣ್ಣೀರು ಹಾಕುತ್ತಾ, ಕೆಲವರು ಶಪಿಸುತ್ತಾ ಬರೆದೆವು. ಸೂರ್ಯ ಅಂದು ಬೇಗನೇ ಪಡುಗಡಲಲ್ಲಿ ಕಂತಿದ. ಕತ್ತಲಾಗುತ್ತಿದ್ದಂತೆ ಕಾನ್ವೆಂಟಿನ ಮದರ್ ಬಂದು ನಮ್ಮನ್ನು ಮನೆಗೆ ಹೋಗಲು ಒತ್ತಾಯಿಸಿದರು. ಆಗಲೇ ನಮ್ಮ ಕೈ ಸೋತಿತ್ತು. ಮನಸ್ಸು ರುಷ್ಟಗೊಂಡಿತ್ತು. ಸಿಸ್ಟರ್ ಬಾರದೇ ಯಾರೂ ಹೋಗುವುದಿಲ್ಲವೆಂದು ಹಠಕ್ಕೆ ಅಂಟಿಬಿಟ್ಟಿದ್ದರು.

ಕತ್ತಲಾವರಿಸುತ್ತಿದ್ದಂತೆಯೇ ಒಬ್ಬೊಬ್ಬರೇ ಹೆತ್ತವರು ಶಾಲೆಯ ಆವರಣದಲ್ಲಿ ಜಮಾಯಿಸಿ ಸಹಸ್ರನಾಮಾರ್ಚನೆಗೆ ಪ್ರಾರಂಭಿಸಿದ್ದರು. ಈ ಮಧ್ಯೆ ನಾನೂ ಫ್ಲೋರಿನ್ ಎಂಬ ನನ್ನ ಬೆಂಚ್‌ಮೇಟ್ ಶಾಲೆಯಿಂದ ಹೊರಗೆ ಹೊರಡಬೇಕಾದರೆ ಗೇಟಿನಿಂದಲೇ ನಮ್ಮನ್ನು ಒಳಕ್ಕೆ ಅಟ್ಟಿದರು. ಎಲ್ಲರೂ ಒಳಗಿರುವಾಗ ನೀವಿಬ್ಬರು ಹೇಗೆ ಜಾರಿಕೊಳ್ಳುತ್ತೀರಿ? ಸಿಸ್ಟರ್ ಬಾರದೆ ನೀವು ಯಾರೂ ಕದಲಬಾರದೆಂದು ತಾಕೀತು ಮಾಡಿದರು. ಆಗಲೇ ಸುದ್ದಿ ಊರಿಡೀ ಹಬ್ಬಿತ್ತು. ಸಿಸ್ಟರ ಕಾರು ಬಂದಾಗ ಆ ಜನಸಂದಣಿಯನ್ನು ಹೇಗೆ ನಿಭಾಯಿಸಿದರೋ ನಮಗೆ ತಿಳಿಯದು. ಅಂತೂ ಸುಮಾರು ಎಂಟೂವರೆ ಒಂಬತ್ತರ ನಂತರ ನಾವೆಲ್ಲಾ ನಮ್ಮ ನಮ್ಮ ಹೆತ್ತವರ ಜೊತೆ ಮನೆಗೆ ಸೇರಿದೆವು.

ಮರುದಿನದ ನಮ್ಮ ಪರಿಸ್ಥಿತಿ ದೇವರಿಗೇ ಪ್ರೀತಿ. ತರಗತಿಯಲ್ಲಿ ಬಾಲ ಸುಟ್ಟ ಬೆಕ್ಕಿನಂತೆ ಕೂತೆವು. ಆದರೆ ಯಾವ ಉಪಾಧ್ಯಾಯರೂ ಪಾಠಕ್ಕೆ ಬರಲಿಲ್ಲ. ಲೀಜಿ ಟೀಚರು ನಾವೆಲ್ಲಾ ಸಿಸ್ಟರಲ್ಲಿ ಕ್ಷಮೆ ಕೇಳಬೇಕೆಂದೂ ನಮ್ಮ ದುಷ್ಕೃತ್ಯದಿಂದಾಗಿ ಶಾಲೆ, ಶಿಕ್ಷಕರು ಮುಖ ಎತ್ತಿ ತಿರುಗದಂತಾಗಿದೆಯೆಂದೂ ಹೇಳಿದಾಗ ಎಲ್ಲರೂ ಒಂದು ಗುಂಪಾಗಿ ಸಿಸ್ಟರಿದ್ದ ಆಫೀಸ್ ಕೋಣೆಗೆ ಹೋಗಿ ಮೊಣಕಾಲೂರಿ ನಮ್ಮದು ತಪ್ಪಾಯಿತೆಂದೂ ಇನ್ನು ಮುಂದೆ ಹಾಗೆ ಮಾಡಲಾರೆವೆಂದೂ ಬೇಡಿಕೊಂಡೆವು. ಆಗ ಸಿಸ್ಟರ ಮೂಗು, ಕಣ್ಣು ಕೆಂಪಾಯಿತು, ಧ್ವನಿ ನಡುಗಿತು. "ನಾನು ನನಗಿಂತ ಹಿರಿಯರ ಮಾತಿಗೆ ವಿಧೇಯಳಾಗಿ ವರ್ತಿಸಲು ನಿಮ್ಮನ್ನು ಮರೆತು ಹೋಗಿಬಿಟ್ಟೆ. ಆದರೆ ನೀವು ನನಗಿಂತ ಹಿರಿಯರ ಮಾತಿಗೂ ಅವಿಧೇಯರಾಗಿ ವರ್ತಿಸಿದಿರಿ, ನಿಮ್ಮನ್ನು ಕ್ಷಮಿಸಲು ನಾನ್ಯಾರು? ಸಾಧ್ಯವಾದರೆ ನನ್ನ ಮರೆವಿಗಾಗಿ ಕ್ಷಮಿಸಿರಿ, ಮುಂದೆ ಜೀವನದಲ್ಲಿ ಹಿರಿಯರ ಮಾತಿಗೆ ವಿಧೇಯರಾಗುವುದನ್ನು ರೂಢಿಸಿಕೊಳ್ಳಿ" ಎಂದು ಹೇಳಿದಾಗ ಅವರ ಕಣ್ಣೂ, ನಮ್ಮ ಕಣ್ಣುಗಳೂ ತುಳುಕಿದವು. ಆ ದಿನದ ಸಂಜೆಪತ್ರಿಕೆ ಸಂಧ್ಯಾದೀಪದಲ್ಲಿ ಮೊದಲ ಪುಟದಲ್ಲೇ ಈ ನಮ್ಮ ಸ್ಟ್ರೈಕಿನ ಸುದ್ದಿ ಪ್ರಕಟವಾಗಿ ಊರಿಡೀ 'ಟಾಂ ಟಾಂ' ಆಯಿತು.

ಆ ವರ್ಷದ ಕೊನೆಯಲ್ಲಿ ವಿದಾಯ ಸಮಾರಂಭಕ್ಕೆ ಎಲ್ಲಾ ಶಿಕ್ಷಕ ಶಿಕ್ಷಕಿಯರೂ ಮಕ್ಕಳ ಸಮೇತ ಕೂತು ಭಾವಚಿತ್ರ ತೆಗೆಸುವ ಕಾರ್ಯಕ್ರಮದಲ್ಲಿ ಯಾವೊಬ್ಬ ಶಿಕ್ಷಕರೂ ಭಾಗವಹಿಸ ಲಿಲ್ಲ. ಪೆಚ್ಚು ಮೋರೆ ಹಾಕಿಕೊಂಡು ಕೂತ ನಮ್ಮ ಎಸ್.ಎಸ್.ಎಲ್.ಸಿ.ಯ ಗುಂಪಿನ ಭಾವಚಿತ್ರವನ್ನು ಕಂಡಾಗ ೪೫ ವರ್ಷಗಳ ಹಿಂದಿನ ಮಕ್ಕಳಾದ ನಮಗೆ ಸಾತ್ವಿಕ ರೋಷವುಂಟು ಮಾಡಿದ ಕೋಲಾಹಲಗಳ ಸಾಲುಸಾಲು ನೆನಪುಗಳು ಮೆರವಣಿಗೆ ಹೊರಡುತ್ತವೆ. ವಿಶೇಷವೆಂದರೆ ಅದೇ ಸಿಸ್ಟರು ನಾನು ಪಂಡಿತ್ ಪರೀಕ್ಷೆ ಕಟ್ಟುತ್ತಿದ್ದಾಗಲೇ ಸರಕಾರಿ ಕೆಲಸಕ್ಕೆ ರಾಜೀನಾಮೆ ಕೊಟ್ಟಾಗ ನನ್ನನ್ನು ಕರೆದು ಅದೇ ಶಾಲೆಯಲ್ಲಿ ನನಗೆ ಕಾಯಂ ಉದ್ಯೋಗ ಕೊಡಿಸಿದ್ದು. ಅದಕ್ಕೇ ಸುಭಾಷಿತದಲ್ಲಿ ಹೇಳಿದ್ದು 'ಅತಿ ಹೆಚ್ಚಿನ ಸೇಡೆಂದರೆ ಕ್ಷಮೆಯೇ'. ಅವರೂ ದೇವತ್ವಕ್ಕೇರಿ ನಮ್ಮನ್ನು ಎತ್ತರಿಸಿ ನಮ್ಮ ವ್ಯಕ್ತಿತ್ವಕ್ಕೊಂದು ಕ್ಷಮೆಯ ಕವಚವನ್ನೇ ತೊಡಿಸಿಬಿಟ್ಟರು. ಕ್ಷಮೆ ಮತ್ತು ಸಹನೆಗಳು ಧೀರರ ಲಕ್ಷಣವೂ ಹೌದು ಎಂಬುದನ್ನು ಆಡದೇ ಮಾಡಿ ತೋರಿಸಿ ಮಾದರಿಯಾದರು.

ಇನ್ನು ನನ್ನ ಹೆಲೆನ್ ಟೀಚರ ಬಗ್ಗೆ ಬರೆದರೆ ಒಂದು ಅಧ್ಯಾಯವೇ ಬೇಕಾದೀತು. ಕೆಲವೇ ತಿಂಗಳು ನನ್ನ ಶಿಕ್ಷಕಿಯಾಗಿ, ವೃತ್ತಿಜೀವನದುದ್ದಕ್ಕೂ ನನ್ನ ಸಹೋದ್ಯೋಗಿಯಾಗಿ ಅವರೊಂದಿಗೆ ಬೆರೆತು ನಾನು ಕಲಿತ ಪಾಠಗಳು ವೃತ್ತಿಬದುಕಿನ ಯಶಸ್ಸಿಗೆ ಕಾರಣಗಳಾಗಿವೆ. ಬಿಸಿಲ ಬೇಗೆಯಿಂದ ಬಳಲಿದವನಿಗೆ ವಿಶಾಲ ವೃಕ್ಷದ ನೆರಳಿನಂತೆ, ಹಸಿದ ಮಗುವಿಗೆ ತಾಯ ಎದೆಹಾಲು ದೊರೆತಂತೆ, ತಪ್ಪು ಮಾಡಿ ತಪ್ಪಿಸಿಕೊಳ್ಳಲು ಮಕ್ಕಳು ತಾಯಿಯ ಸೆರಗಿನಾಶ್ರಯ ಪಡೆದಂತೆ, ಕತ್ತಲೆಯಲ್ಲಿ ತಡಕಾಡುತ್ತಿದ್ದವನಿಗೆ ಹಣತೆಯ ದೀಪ ಕೈಗಿತ್ತಂತೆ ಅವರ ಸಹವಾಸ ಮತ್ತು ಪಾಠಪ್ರವಚನಗಳು ನನ್ನಲ್ಲಿ ಪ್ರಭಾವ ಬೀರಿವೆ. ಶಾಲೆ ಬಿಟ್ಟು ಹೋದ ಬಳಿಕವೂ ಕೂಡಾ ಎಷ್ಟೋ ವರ್ಷದ ನಂತರವೂ ಅವರನ್ನು ನೋಡಿ ಮಾತಾಡಲಿಕ್ಕಾಗಿಯೇ ಬರುವ

ಒಂದು ದೊಡ್ಡ ಶಿಷ್ಯಸಮೂಹವೇ ಅವರಿಗೆ ಇದೆ ಎಂದರೆ ಅವರ ಅಧ್ಯಾಪನದ ವೈಶಿಷ್ಟ್ಯ ಗೊತ್ತಾದೀತು. ಅವರ ಪ್ರೀತಿಯ ಶಕ್ತಿಯೂ ತಿಳಿದೀತು.

ಪರೋಕ್ಷ ಗುರುಗಳೂ ನಮ್ಮ ಜೀವನದ ಏಳಿಗೆಗೆ ಕಾರಣರಾಗುತ್ತಾರೆ ಎಂದು ಪ್ರಾರಂಭದಲ್ಲಿ ಹೇಳಿದೆನಷ್ಟೆ. ಅಂಥ ಒಬ್ಬ ಗುರುವಿನ ಬಗ್ಗೆ ಹೇಳಲೇಬೇಕು. ಏಳನೆಯ ತರಗತಿಯಲ್ಲಿ ನಾವು ಎಲ್ಲರೂ ನಮ್ಮ ಊಟದ ಬುತ್ತಿಗಳನ್ನು ಒಂದು ಪ್ರತ್ಯೇಕ ಕೋಣೆಯಲ್ಲಿ ಇಡುತ್ತಿದ್ದೆವು. ಒಂದು ದಿನ ಅವಸರದಲ್ಲಿ ಊಟ ಮುಗಿಸಿ ಬಂದು ಕೂತು ಚಿತ್ರ ಬಿಡಿಸುತ್ತಿದ್ದ ನನಗೆ ಕ್ಲಾಸ್ ಲೀಡರ್ ಲೀಟನಿಂದ ಬುಲಾವ್ ಬಂತು. ಹೋದಾಗ ಅಲ್ಲಿ ಎಂಟನೆಯ ತರಗತಿಯ ಜಯಂತಿ ಸಿಟ್ಟಿನಿಂದ ಕುದಿಯುತ್ತಾ ನಿಂತಿದ್ದಳು. ನನ್ನಿಂದೇನು ಅಪರಾಧವಾಗಿದೆ ಎಂದೇ ತಿಳಿಯದೆ ನಾನು ಕಕ್ಕಾಬಿಕ್ಕಿ. ಖಾಲಿ ಬುತ್ತಿಯನ್ನು ತೋರಿಸಿ 'ಯಾಕೆ ನನ್ನ ಬುತ್ತಿಯನ್ನು ಖಾಲಿ ಮಾಡಿದೆ?' ಎಂದಾಗ ನಾನು ಭೂಮಿಗಿಳಿದು ಹೋದೆ. ಒಂದೇ ಗಾತ್ರದ ಬುತ್ತಿಯಾದುದರಿಂದ ನಾನು ತಿಳಿಯದೆ ಅವಳ ಬುತ್ತಿಯನ್ನು ಖಾಲಿ ಮಾಡಿದ್ದೆ. 'ತಪ್ಪಾಯಿತು' ಎಂದು ಕಣ್ಣೀರು ಹಾಕಿ ಬೇಡಿದೆ. ನನ್ನ ದುರದೃಷ್ಟಕ್ಕೆ ಪಲ್ಯವೂ ಎರಡೂ ಬುತ್ತಿಗಳಲ್ಲಿ ಒಂದೇ ಆಗಿರಬೇಕೆ? ಆಕೆ ನನ್ನ ಬುತ್ತಿಯ ಅನ್ನವನ್ನು ಉಣ್ಣದೆ ನನ್ನ ಮುಂದೆಯೇ ತೆಂಗಿನ ಬುಡಕ್ಕೆ ಚೆಲ್ಲಿ ಬುಸುಗುಡುತ್ತಾ ಹೋದಾಗ ನನ್ನ ಹೊಟ್ಟೆಯೊಳಗಾದ ಸಂಕಟ ವರ್ಣಿಸಲಸಾಧ್ಯ. ಆ ಕಾಲದಲ್ಲಿ ಅವರ ಮನೆಯಲ್ಲಿ ನೀರು ಮುಟ್ಟುವ ಕ್ರಮವಿರಲಿಲ್ಲ, ಆದರೂ ಅವಳ ಸ್ವಾಭಿಮಾನ ನನ್ನನ್ನು ಕೆರಳಿಸಿದರೂ ಮನಸ್ಸು ಅರಳಿಸಿತು.

ಅಂದಿನಿಂದ ನಾನು ಬುತ್ತಿ ಊಟಕ್ಕೆ ವಿದ್ಯಾರ್ಥಿ ಜೀವನದುದ್ದಕ್ಕೂ ಶಾಶ್ವತ ವಿದಾಯ ನೀಡಿದೆ. ಆ ಸಮಯದಲ್ಲಿ ವಾಚನಾಲಯದಲ್ಲಿ ಕೂತು ಪುಸ್ತಕಗಳನ್ನು ಓದುವ ಗೀಳು ಹಚ್ಚಿಕೊಂಡು ಪುಸ್ತಕದ ಹುಳುವೆಂಬ ಬಿರುದೇ ಅಂಟಿಸಿಕೊಂಡು ಬಿಟ್ಟೆ. ಮಾತ್ರವಲ್ಲ ಮುಂದೆ ಸಣ್ಣಪುಟ್ಟ ಕವನ ಹೊಸೆಯುವ ಕಾಯಕಕ್ಕೂ ತೊಡಗಿದೆ. ಈ ಘಟನೆ ಸಂಭವಿಸದಿದ್ದರೆ ಇಂದು ನಾನಿಷ್ಟು ಬರೆಯಲು ಸಾಧ್ಯವಾಗುತ್ತಿತ್ತೇ? ಖಂಡಿತಾ ಸಾಧ್ಯವಿರಲಿಲ್ಲ. ಇಂದಿಗೂ ನಾನವಳನ್ನು ನನಗೆ ಪ್ರೇರಣೆ ನೀಡಿದ ಪರೋಕ್ಷ ಗುರುವೆಂದೇ ಗೌರವಿಸುತ್ತೇನೆ. ಅವಳು ಎಲ್ಲಿಯೇ ಇರಲಿ ಇಂದು ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ. ಪ್ರತ್ಯಕ್ಷ ಗುರುಗಳು ವರ್ಷವಿಡೀ ಮಾಡಲಾರದಷ್ಟು ಮಹತ್ತರವಾದ ಬದಲಾವಣೆಯನ್ನು ಆ ನನ್ನ ಆತ್ಮೀಯ ಗೆಳತಿ ಮಾಡಿದ್ದಾಳೆ. ಅವಳಿಗೆ ನಮೋ ಎನ್ನುತ್ತೇನೆ. ನಮ್ಮ ಪುಣ್ಯ ಪಕ್ವವಾದಾಗ ಮಾತ್ರ ಇಂತಹ ಗುರುಗಳ ಸಾನ್ನಿಧ್ಯ ನಮಗೆ ಲಭಿಸುತ್ತದೆ.

ವಿದ್ಯಾರ್ಥಿಗಳು ಸದ್ಗುಣವಂತರಾಗಿ, ಶುಭ್ರವಾದ ಬಾಳನ್ನು ಬಾಳಿದಾಗಲೇ ಅದು ಗುರುವಿಗೆ ಕೊಡುವ ಗುರುದಕ್ಷಿಣೆಯಲ್ಲವೇ? ಇಂತಹ ಗುರುಗಳ ಪ್ರಭಾವದಿಂದ ಬೆಳೆದ ನನಗೆ ನನ್ನ ವೃತ್ತಿಜೀವನದಲ್ಲಿ ಒಂದು ಶಿಸ್ತು, ನಿಯತ್ತು, ಶ್ರದ್ಧೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತೆಂದೇ ಭಾವಿಸಿದ್ದೇನೆ.

'ತಸ್ಮೈ ಶ್ರೀ ಗುರವೇ ನಮಃ'.

■ ಬಿ. ಎಂ. ರೋಹಿಣಿ : ಪಂಚಾಯತ್ ಕಛೇರಿ ಬಳಿ, ಕುಡುಪು, ಮಂಗಳೂರು - ೫೭೫ ೦೨೮ ■

ಮೂರು ಕವಿತೆಗಳು

– ಸತೀಶ ಕುಲಕರ್ಣಿ

೧. ಉಳಿದ ನೆನಪು

ಕೆಂಬೆಂಕಿ,
ಸುಡುವ ಒಲೆಯ ಮುಂದೆ
ಕೂತ ಅವ್ವನ, ಅದೆಷ್ಟು ಕನಸುಗಳು ಹಾಗೆಯೆ
ಉರಿದು ಬೂದಿಯಾಗಿ ಹೋಗಿರಲಿಕ್ಕಿಲ್ಲ.
ಈ ಒಲೆಯಲ್ಲಿ
ಹೊರಗೆ ಹಿರಿದು ಬಿದ್ದ, ಉರವಲನ್ನು ಒಳದೂಡಿದ
ಕೈ ಬಳೆಗಳ ಅದೆಷ್ಟು ಹಾಡುಗಳು ಪುಡಿ ಪುಡಿಯಾಗಿರಲಿಕ್ಕಿಲ್ಲ.
ಕಾದ ರೊಟ್ಟಿಯ ಹಂಚ
ಮೇಲೆ ಚಿಮುಕಿದ ಚುರುಪುರು ಬೆವರಿನ ಹಾಗೆ
ಅವಳ ಕಣ್ಣೀರೆಷ್ಟು ಬೆಂಕಿಯಲ್ಲಿ ಕಳೆದುಹೋಗಿರಲಿಕ್ಕಿಲ್ಲ.
ಕಸಬರಿಗೆ ಕೈ
ಮುಂಗೈ ನರಗಳ ಒಣಗಿದೆಲೆಗಳೆಷ್ಟು
ಸುಟ್ಟು ಕಮರಿ ಹೋಗಿರಲಿಕ್ಕಿಲ್ಲ.
ಕೋಟಿ ಅವ್ವಂದಿರ
ತೇರುಗಳದೆಷ್ಟೊ ಮಕ್ಕಳ ನೆನಪಿನ ದೋಣಿಯಲ್ಲಿ
ಸಾಗಿ ಹೋಗಿರಲಿಕ್ಕಿಲ್ಲ.
ಉಳಿದದ್ದು ಈಗ ನೆನಪು ಮಾತ್ರ
ಇದು ಅವ್ವನೆದೆಯ ಪ್ರೀತಿ ಸೂತ್ರ.

೨. ಮತ್ತೆ ಮಳೆ ಸುರಿಯುತ್ತಿದೆ

ಮತ್ತೆ ಮಳೆ ಸುರಿಯುತ್ತಿದೆ
ಮತ್ತೆ ಹೊಳೆ ಹರಿಯುತ್ತಿದೆ
ಸತ್ತ ಸಮುದ್ರದಲೆಗಳು
ಮುಗಿಲ ಹೆಗಲೇರಿ ಕುಣಿಯುತ್ತಿವೆ.

ನುರಿಗೊಂಡ ಮುಗಿಲೆದೆಯ ನೋವೊ
ಹದಗೊಂಡ ನೆಲದೆದೆಯ ಕಾವೊ
ಯಾವ ಸೆಳೆತ, ಯಾವ ಮೊರೆತವೊ
ಜೀವ ಬೇರು ಚಿಗಿಯುತ್ತಿದೆ.

ಕಾಡ, ಕಾಲೊಂಟಿದಾರಿಯೋ
ಮರುಳಗಾಡ ಸುಂಟರಗಾಳಿಯೋ
ಯಾವ ದಾಳಿಯೋ, ಯಾವ ದಾರಿಯೋ,
ತವಕ ತಲ್ಲಣ, ಕುಣಿಯುತ್ತಿವೆ.

ಸೂರ್ಯ ಚಂದ್ರರ ಚೆಲ್ಲಾಟ
ಬೆಳಕು ಕತ್ತಲೆಯ ಕೂಟ
ನಿಂತ ಮರದ ಕಾಲ್ಕೆಳಗೆ
ಸೂಜಿ ಮಲ್ಲಿಗೆ ಸುರಿಯುತ್ತಿವೆ.

ದೂರ ಬೆಟ್ಟದ, ಸಾಲು ಬೆಟ್ಟದ,
ಸತ್ತ ಬಂಡೆ ಬೆಟ್ಟದೆದೆಯ ಮೇಲೆ,
ಕರಕಿ ಹಾಸುಗೆ ಹಾಸುತಿದೆ.
ಬೆಳಕ ಮುಡಿದು, ತಂಗಾಳಿ ಸೂಸುತಿದೆ.

೩. ಅಮೃತಾಗೆ, ಸಾಹಿರ್ ಬರೆಯದ ಕವಿತೆ

೧

ಇಂದು ಮರೆಯಲು, ನಾಳೆ ಕಳೆಯಲು
ನೋವು ತೊರೆಯಲು,
ನೀನೊಂದು ಸೆರೆ ಮನದ ಹಕ್ಕಿಗೆ ಆಸರೆ,

ತಾಪ ತಲ್ಲಣ, ಶಾಪ ಲೋಕದಲ್ಲಿ
ರಾಕ್ಷಸ ರಾತ್ರಿಗಳು
ಹೇಗೆ ದೂಕಲಿ ಶೂಲಸಂತೆಗಳ.

ಏನು ಹೇಳಲಿ, ಹೇಗೆ ಹೇಳಲಿ,
ಇರಿವ ಇವಕೆಲ್ಲ,
ಇಲ್ಲ ಉತ್ತರ, ನನ್ನ ಹತ್ತಿರ,

ಹಸಿದ ಕಾಮ, ಕರೆವ ಕನಸು
ತಾಪ ಕೊಪ್ಪರಿಗೆ ಜಿನಸು
ಹುತ್ತ ಹಾದಿಗಳಲ್ಲಿ ಸುಡುವ ಮೈಮನಸು.

ನಿನ್ನ ದನಿಯ ಕಣ್ಣ ಹನಿಯ
ನಜರು ಬೆಳಕಿಗೆ
ತಣ್ಣಗಾಗುವವು ಹಣ್ಣಣ್ಣ ನೋವುಗಳು.

ನಕ್ಷತ್ರ ರಾತ್ರಿಯ ಛತ್ತರಿಯ ಕೆಳಗೆ
ಸಮುದ್ರದೆದೆಯ ಮೇಲೆ
ಜೀಕುವುದು ನಿತ್ಯ ಜೀವ ನಾವೆ.

ಜನ್ಮ ಜನ್ಮಗಳ ಲೆಕ್ಕಗಳಿಲ್ಲ
ಎದೆಗಡಲಾಳದ
ಪ್ರಶ್ನೆಗಳಿಗೆ ಉತ್ತರಗಳಿಲ್ಲ

ನೆನಪ ನದಿಗೆ ಬಾಂದಾರು ಕಟ್ಟಿ
ಹಾಡ ಬಳ್ಳಿಯ ಹಬ್ಬಿ
ನಾಳೆ ನಾಳೆಗಳ ಆಸರೆ ಏರಬೇಕಲ್ಲ

ಮಾಗದಾ ಗಾಯಕ್ಕೆ ಮಾಯದಂಥ ಮಳೆ
ಸುರಿ ಸುರಿವ ಬೆಳ್ಳಿ
ಕಾಳುಗಳ ಆಲಿಕಲ್ಲು ಮಳೆ ಹಿಡಿಯಬೇಕಲ್ಲ.

೨

ಒಮ್ಮೆ
ಬರಿದಾದ ನೀಲಿ ಆಕಾಶವಿತ್ತು.
ಹಾರಿ ಬಂದವು
ಸಾವಕಾಶ ಪ್ರೀತಿಯ ಹಿಂಡು ಹಕ್ಕಿ

ಬಂದವು
ನೂರಾರು ಕಾಡಾನೆ ಮೋಡ ಮೆರವಣಿಗೆ
ತುಂಬಿತು
ನೀಲಿ ಆಕಾಶದ ತುಂಬ ನೀರ ಬಸಿರು

ಬೆಟ್ಟಗಳ
ದಟ್ಟ ಕಾಡ ಕೊರಳೊಳಗೆ
ಮಳೆಗಾಳಿ ಮಿಂಚಿ ಹಾಡೊಳಗೆ
ಪ್ರೀತಿ ನದಿಯಾಗಿ ಹರಿಯಿತು
ಹಾಸಿತು ಹರೆಯ ಹಸಿರು ಹಾದಿ.

ಇದೆಲ್ಲ ಇಲ್ಲಿದ್ದ ಎದೆಯಾಳ ಸತ್ಯ.

೩

ಮುಟ್ಟಿದರೆ ಬೆಳಕು ನೀನು
ಮೂಸಿದರೆ ತಂಗಾಳಿ ನೀನು
ಬಿದ್ದೆದ್ದಾಗ ಎತ್ತಿ ಹಿಡಿವ,
ನನ್ನ ನೆಲತಾಯಿ ನೀನು.

■ ಸತೀಶ ಕುಲಕರ್ಣಿ : ೨೭೨, ಬಸವೇಶ್ವರ ನಗರ, ಹಾವೇರಿ - ೫೮೧ ೧೧೦ ■

ನನ್ನ ಅಪ್ಪ ನನ್ನ ಅಮ್ಮ

— ಮಿರ್ಜಾ ಬಷೀರ್

ಸತ್ತು ಹೋಗಿ ಇಲ್ಲಿಗೆ ಸರಿಯಾಗಿ ಹದಿನೇಳು ವರ್ಷಗಳಾಗಿರುವ ನನ್ನ ಅಮ್ಮನ ನೆನಪಿನ ಜೊತೆಜೊತೆಗೆ ಅವಳ ಇಬ್ಬರು ಜೊತೆಗಾತಿಯರು ನೆನಪಾಗುತ್ತಾರೆ. ನನ್ನಮ್ಮನ ಆಪ್ತರಾಗಿದ್ದ ಆ ಸ್ನೇಹಿತೆಯರಿಬ್ಬರೂ ಅರೆಹುಚ್ಚರು. ನಾನಿನ್ನೂ ಆಗ ಒಂದನೇ ತರಗತಿಯಲ್ಲಿದ್ದೆ– ಚಳ್ಳಕೆರೆಯಲ್ಲಿ. ಅಲ್ಲಿಯೇ ನನ್ನ ತಂದೆಯವರು ಮುನಿಸಿಪಲ್ ಪ್ರೌಢಶಾಲೆಯಲ್ಲಿ ಸಹಾಯಕ ಅಧ್ಯಾಪಕರಾಗಿದ್ದರು. ನಮ್ಮ ಮನೆಯ ಪಕ್ಕದ ಬೀದಿಯಲ್ಲಿ ದಿನವೂ ಗಂಡನ ಹೊಡೆತಕ್ಕೆ ನಲುಗಿ ನಜ್ಜುಗುಜ್ಜಾಗಿದ್ದ ಹೆಂಗಸೇ ನನ್ನಮ್ಮನ ಸ್ನೇಹಿತೆ. ಗಂಡನ ಹಿಂಸೆಗೆ ಬಲಿಯಾಗಿ ಆಕೆ ಅರೆಹುಚ್ಚಿಯಾಗಿದ್ದಳು. ಯಾವಾಗಲೂ ಕಣ್ಣಿನಲ್ಲಿ ಭಯ, ನೀರು ತುಂಬಿಕೊಂಡು, ಮಾತುಗಳನ್ನು ಕಳೆದುಕೊಂಡು, ಕೊಂಚ ಬಾಗಿ ನಡೆಯುತ್ತಿದ್ದ ಮಧ್ಯವಯಸ್ಕಳಾದ ಬಿಳಿಬಣ್ಣದ ಆ ಹೆಂಗಸನ್ನು ಕಂಡಕೂಡಲೆ ಚಿಕ್ಕ ಮಕ್ಕಳಾಗಿದ್ದ ನಾವೆಲ್ಲ ದಿಗಿಲು ಬಿದ್ದು ಓಡುತ್ತಿದ್ದೆವು. ನನ್ನಮ್ಮನನ್ನು ಕಂಡ ಕೂಡಲೆ ಆಕೆ ಕರುವಿನಂತೆ ಹಿಂಬಾಲಿಸಿಕೊಂಡು ಸೀದ ಅಡಿಗೆ ಮನೆಗೆ ಬಂದು ಕೂತು ಹೊಟ್ಟೆ ತುಂಬ ಊಟ ಮಾಡಿ ಹೋಗುತ್ತಿದ್ದಳು. ಅವಳ ಗಂಡ ಮತ್ತು ಮನೆಯವರೆಲ್ಲರೂ ಸೇರಿ ಆಕೆಗೆ ದೆವ್ವ ಹಿಡಿದವರಂತೆ ಹೊಡೆಯುತ್ತಿದ್ದರೆ ಅಕ್ಕಪಕ್ಕದ ಮನೆಯ ಮಕ್ಕಳೆಲ್ಲ ಉಚ್ಚೆ ಹೊಯ್ದುಕೊಳ್ಳುತ್ತಿದ್ದರು. ಹೊಡೆಸಿಕೊಂಡು ಸಾಕಾಗಿ ಓಡಿಹೋದರೆ ಅವಳನ್ನು ಹುಡುಕಿಕೊಂಡು ಅವಳ ಗಂಡ (ಯಾವುದೋ ಸರ್ಕಾರಿ ನೌಕರಿಯಲ್ಲಿದ್ದ) ಬೀದಿ ಬೀದಿ ಅಲೆಯುತ್ತಿದ್ದ. ಅದಾವುದೋ ಜಾತಿಯವರಾಗಿದ್ದ ಅವರ ಮನೆಯವರಾರೂ ನಮ್ಮ ಮನೆಯ ಒಳಕ್ಕೆ ಬರುತ್ತಿರಲಿಲ್ಲ. ಸದಾ ಭಯ ಮತ್ತು ನೀರು ತುಂಬಿದ ಆಕೆಯ ಕಣ್ಣುಗಳು ಹಾಗೂ ಆಕೆಯನ್ನು ಹೊಡೆಯಲು ಹುಡುಕುತ್ತ ಅಲೆಯುತ್ತಿದ್ದ ಅವಳ ಗಂಡನ ಚಿತ್ರ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ನನ್ನಮ್ಮನ ಮತ್ತೊಬ್ಬ ಪರಮಾಪ್ತೆಯೆಂದರೆ ತನ್ನ ತವರೂರಾದ ಚನ್ನಗಿರಿ ತಾಲೂಕಿನ ನವಿಲೇಹಾಳು ಗ್ರಾಮದ ದೂರದ ಸಂಬಂಧಿ. ಆಕೆಯೂ ಸಹ ಕೌಟುಂಬಿಕ ಕಾರಣಗಳಿಂದ ನಲುಗಿ ಗಂಡನನ್ನು ಬಿಟ್ಟು ಬಂದು ತವರಾದ ನವಿಲೇಹಾಳು ಸೇರಿ ತಲೆ ಕೆಟ್ಟಂತಾಗಿ, ಗೌರವಸ್ಥ ಮನೆಯವಳಾದರೂ ಹೋಟೆಲ್‌ಗಳಲ್ಲಿ ಚಹ ಕುಡಿಯುತ್ತ ಬೀಡಿ ಸೇದುತ್ತ ಕೂತಿರುತ್ತಿದ್ದಳು. ನಾವು ಚಿಕ್ಕವರಾಗಿದ್ದಾಗ ಯಾವಾಗ ನವಿಲೇಹಾಳಿಗೆ ಹೋದರೂ ಎಲ್ಲಿಂದಲೋ ಪ್ರತ್ಯಕ್ಷವಾಗಿ ನನ್ನಮ್ಮನ ಜೊತೆ ದಿನಗಟ್ಟಲೆ ಇದ್ದುಬಿಡುತ್ತಿದ್ದಳು. ಅಮ್ಮನ ಜೊತೆ ಇರುವತನಕ ಹುಚ್ಚೆಲ್ಲ ರಿಪೇರಿಯಾದಂತಾಗಿ ಸಣ್ಣ ಧ್ವನಿಯಲ್ಲಿ ಮಾತನಾಡುತ್ತ ನಕ್ಕು ನಲಿಯುತ್ತಿದ್ದಳು.

ಯಾವುದೇ ಗರ್ವ, ಸೋಗುಗಳಿಲ್ಲದ ಸಹಜ ವ್ಯಕ್ತಿತ್ವದ ಸ್ನೇಹಜೀವಿಯಾಗಿದ್ದ ನನ್ನಮ್ಮನ ಹೆಸರು ಅಖ್ತರ್ ಬಿ. ಆದರೆ ಅವಳನ್ನು ಯಾರೂ ಆ ಹೆಸರಿನಿಂದ ಕರೆಯದೆ 'ಬುಡ್ಡಮ್ಮ' ಎಂದೇ ಕರೆಯುತ್ತಿದ್ದರು. ಮದುವೆಯಾಗಿ ಚಳ್ಳಕೆರೆಗೆ ಹೋದ ಮೇಲೆ 'ಚಳ್ಳಕೆರೆ ಬುಡ್ಡಮ್ಮ' ಎಂದು ಕರೆಯಲ್ಪಡುತ್ತಿದ್ದಳು. ಗಿಡ್ಡಕ್ಕೆ, ಬೆಳ್ಳಗೆ, ಚಂದ್ರನಿಗಿಂತಲೂ ದುಂಡಾಗಿದ್ದ ಮುಖದ ಅಮ್ಮನನ್ನು ನಾನು 'ಬುಡ್ಡಮ್ಮ-ಗಿಡ್ಡಮ್ಮ' ಎಂದು ಕೊನೆತನಕವೂ ರೇಗಿಸುತ್ತಿದ್ದೆ.

ಸದಾ ಎಲೆ ಅಡಿಕೆ ಜಗಿಯುತ್ತ, ನೀಲಿ ಅಥವ ಹಸಿರು ಬಣ್ಣದ ಸೀರೆ ಮತ್ತು ಬಳೆಗಳನ್ನು ಹಾಕಿಕೊಂಡು, ಎಂದೂ ಭರ್ಜರಿ ಸೀರೆ ಒಡವೆಗಳಿಗೆ ಆಶಿಸದ ಅಮ್ಮನ ಸುತ್ತ ಒಂದು ವಿಶಿಷ್ಟ ಪರಿಮಳವಿರುತ್ತಿತ್ತು. ಚಿಕ್ಕವನಾದ ನಾನು ಯಾವಾಗ ಮುಖ ತೊಳೆದುಕೊಂಡರೂ ಅಮ್ಮ ತನ್ನ ಸೆರಗಿನಲ್ಲಿಯೇ ನನ್ನ ಮುಖ ಒರೆಸುತ್ತಿದ್ದಳು. ಆಗ ಅವಳ ವಿಶಿಷ್ಟ ಪರಿಮಳ ಸೆರಗಿನಿಂದಲೂ ಜಿನುಗಿ ನನ್ನ ಮುಖವೆಲ್ಲ ಸ್ವಚ್ಛವಾದಂತೆನಿಸುತ್ತಿತ್ತು. ನಾನು ಅತ್ಯಂತ ಸುರಕ್ಷಿತನೆನಿಸುತ್ತಿತ್ತು.

ಧಾರಾಳ ಗುಣದ ನನ್ನಮ್ಮ ಭಿಕ್ಷುಕರನ್ನು ಎಂದೂ ಹಿಂದಕ್ಕೆ ಕಳುಹಿಸುತ್ತಿರಲಿಲ್ಲ. ನಾವು ಹೊಳಲ್ಕೆರೆಯಲ್ಲಿದ್ದಾಗ ಒಬ್ಬ ಭಿಕ್ಷುಕ ದಿನವೂ ಬರುತ್ತಿದ್ದ. ಅವನಿಗೆ ದಿನವೂ ಏನಾದರೂ ಸಿಗುತ್ತಿತ್ತು. ಆ ಭಿಕ್ಷುಕ ಬಹಳ ಪ್ರಾಮಾಣಿಕನೆಂದು ತೋರುತ್ತದೆ. ಏನಾಯಿತೆಂದರೆ, ನನ್ನಮ್ಮ ಅವನಿಗೆ ಏನಾದರೂ ತಿನ್ನಲು ಅಥವ ಉಡಲು ಹೊದೆಯಲು ಹಳೆಯ ಬಟ್ಟೆ ಕೊಟ್ಟ ಕೂಡಲೆ ಒಂದು ಈಚಲು ಪೊರಕೆಯನ್ನು ಮನೆಯೊಳಗೆ ಎಸೆದು ಹೋಗುತ್ತಿದ್ದ. ಪ್ರಾರಂಭದಲ್ಲಿ ಸುಮ್ಮನಿದ್ದ ನಾವೆಲ್ಲ ಬರುಬರುತ್ತ 'ಪೊರಕೆ ಬೇಡ' ಎಂದು ಭಿಕ್ಷುಕನಿಗೆ ಹೇಳತೊಡಗಿದೆವು. ಎಷ್ಟು ಹೇಳಿದರೂ ಅವನು ಒಪ್ಪಿಕೊಳ್ಳುತ್ತಿರಲಿಲ್ಲ. ನಾವೆಲ್ಲ ಉಪಾಯ ಮಾಡಿ ಭಿಕ್ಷೆ ನೀಡಿದ ಕೂಡಲೇ ಬಾಗಿಲು ಹಾಕಿ ಒಳಸೇರುತ್ತಿದ್ದೆವು. ಭಿಕ್ಷುಕ ಹೊರಗೇ ಕಾದಿದ್ದು ಬಾಗಿಲು ತೆಗೆದ ಕೂಡಲೆ ಅಥವ ಮನೆಯ ಯಾವುದಾದರೊಂದು ಕಿಟಕಿಯೊಳಗಿಂದಲೇ ಪೊರಕೆಯನ್ನು ಮನೆ ಒಳಗೆಸೆದು ನಾಪತ್ತೆಯಾಗುತ್ತಿದ್ದ. ನಾವೆಲ್ಲ ಹೊಟ್ಟೆ ನೋಯುವಂತೆ ನಗುತ್ತಿದ್ದೆವು. ಆದರೆ ನಕ್ಕು ಸುಮ್ಮನಾಗುವಂತಿರಲಿಲ್ಲ. ಯಾಕೆಂದರೆ ನಮ್ಮ ಮನೆಯ ಮೂಲೆಮೂಲೆಯಲ್ಲಿ ವಿವಿಧ ಗಾತ್ರ-ಆಕಾರದ ಪೊರಕೆಗಳು ಕೆಲಸವಿಲ್ಲದೆ ಬಿದ್ದಿರುತ್ತಿದ್ದವು. ಕೊನೆಗೆ ಅಮ್ಮನೇ ಭಿಕ್ಷುಕನಿಗೆ ಬೈದು ಪೊರಕೆ ಸರಬರಾಜು ನಿಲ್ಲಿಸಬೇಕಾಯ್ತು.

ಮುಸಲ್ಮಾನರಾದರೂ ಪಿಂಜಾರರಾದ ನಮ್ಮ ಮಾತೃಭಾಷೆ ಕನ್ನಡ. ಪಕ್ಕದ ರಾಜ್ಯಗಳಾದ ತಮಿಳುನಾಡು, ಆಂಧ್ರ, ಕೇರಳದಲ್ಲಿ ಮುಸ್ಲಿಮರು ತಮ್ಮ ರಾಜ್ಯ ಭಾಷೆಯನ್ನೇ ಆಡುತ್ತಾರೆ. ಆದರೆ ಕರ್ನಾಟಕದಲ್ಲಿ ಮುಸ್ಲಿಮರು ಉರ್ದು ಭಾಷಿಕರಾಗಿದ್ದು, ಕನ್ನಡ ಮಾತೃಭಾಷೆಯಾಗಿರುವ ಮುಸ್ಲಿಮರು ಇರಬಹುದೆಂಬುದೂ ಸಹ ಅಸಹಜವಾಗಿ ಕಾಣುತ್ತದೆ. ಕರ್ನಾಟಕದ ಮಟ್ಟಿಗೆ ಕನ್ನಡವು ಹಿಂದೂಗಳ ಭಾಷೆ ಎಂದೂ, ಉರ್ದು ಮುಸ್ಲಿಮರ ಭಾಷೆ ಎಂದೂ ಧರ್ಮಕ್ಕೂ ಭಾಷೆಗೂ ತಳುಕು ಹಾಕಿರುವುದರಿಂದ, ಶತಮಾನಗಳಿಂದ ಇದು ಹೀಗೇ ನಡೆದುಕೊಂಡು ಬಂದಿರುವುದರಿಂದ, ಉರ್ದು ಭಾಷಿಕ ಮುಸ್ಲಿಮರ ಮುಗ್ಧತನ, ಅಜ್ಞಾನಗಳಿಂದ ಹಾಗೂ ಪಿಂಜಾರರ ಅತ್ಯಲ್ಪ ಜನಸಂಖ್ಯೆ ಮತ್ತು ಕೀಳರಿಮೆ ಇವೆಲ್ಲವೂ ಸೇರಿ 'ಮುಸ್ಲಿಮರ ಭಾಷೆ ಉರ್ದು' ಮಾತ್ರ ಎಂಬಂತಾಗಿದೆ. ಇತಿಹಾಸದ ಯಾವುದೋ ಘಟ್ಟದಲ್ಲಿ ಯಾವ್ಯಾವುದೋ ಇಕ್ಕಟ್ಟುಗಳಿಗೆ ಸಿಲುಕಿ ಮತಾಂತರಗೊಂಡ ಪಿಂಜಾರರು ಅಲ್ಲಿಯೂ ಸಲ್ಲದೆ ಇಲ್ಲಿಯೂ ಸಲ್ಲದೆ ಎಡಬಿಡಂಗಿಗಳಾಗಿದ್ದಾರೆ. ಹಿಂದೂಗಳಿಗೆ ಮುಸಲ್ಮಾನರಂತೆ ಕಾಣುವ ಪಿಂಜಾರರು, ಉರ್ದು ಮುಸಲ್ಮಾನರಿಗೆ ಸ್ವಧರ್ಮದ ಭಾಷೆ, ಆಚಾರ ವಿಚಾರ ಪಾಲಿಸದ ಪಾಷಂಡಿಗಳಂತೆ ಕಾಣುತ್ತಾರೆ. ಪಿಂಜಾರರ ಎದುರು ಉರ್ದು ಸಾಹೇಬರುಗಳು ತಾವೇ ಶುದ್ಧ ಮುಸಲ್ಮಾನರಂತೆ ಪೋಸ್ ಕೊಡುವುದು, ತಾವೇ ಶ್ರೇಷ್ಠರಂತೆ ವರ್ತಿಸುವುದು, ಪಿಂಜಾರ ಜನಾಂಗದವರನ್ನು ಲೆಕ್ಕಕ್ಕೇ

ತೆಗೆದುಕೊಳ್ಳದೆ ಕಡೆಗಣಿಸುವುದು ಸರ್ವೇಸಾಮಾನ್ಯ. ಇದರ ಪರಿಣಾಮವೆಂದರೆ ಪಿಂಜಾರರು ಜೀವನಪರ್ಯಂತ ಕೀಳರಿಮೆಯಿಂದ ನರಳುವುದು, ತಮ್ಮನ್ನು ನೋಡಿ ನಗುವ ಉರ್ದು ಭಾಷಿಕರಿಂದ ಆದಷ್ಟೂ ಅಂತರವಿಟ್ಟುಕೊಳ್ಳುವುದು.

ನಮ್ಮ ಅಪ್ಪ ಅಮ್ಮರಿಗೆ ನಾವು ಐದು ಜನ ಮಕ್ಕಳು. ಇಬ್ಬರು ಹೆಣ್ಣುಮಕ್ಕಳು ಹಾಗೂ ಮೂರು ಜನ ಗಂಡುಮಕ್ಕಳು. ಚಳ್ಳಕೆರೆ-ಹೊಳಲ್ಕೆರೆ-ಹಿರಿಯೂರು-ಜಗಳೂರು ಹೀಗೆ ತಂದೆಯವರಿಗೆ ವರ್ಗವಾದಲ್ಲೆಲ್ಲ ನಮ್ಮೆಲ್ಲರ ವಾಸ - ವಿದ್ಯಾಭ್ಯಾಸ. ನಾವುಗಳೆಲ್ಲ ಮನೆಯಲ್ಲಿ ಕನ್ನಡ ವಾತಾವರಣದಲ್ಲೆ ಬೆಳೆದದ್ದು. ಸರ್ಕಾರಿ ಕನ್ನಡ ಶಾಲೆಗಳಲ್ಲಿ ವಿದ್ಯಾಭ್ಯಾಸ. ಉರ್ದು ಭಾಷೆಯ ಗಂಧ-ಗಾಳಿಯಿಲ್ಲದೇ ಬೆಳೆದ ನಾವು ಉರ್ದು ಮುಸ್ಲಿಮರಿಂದ ಅನುಭವಿಸಿದ ಅವಮಾನ ಭಯಂಕರ. ನಮಗೆಲ್ಲ ಉರ್ದು-ಅರೇಬಿಕ್ ಕಲಿಸುವಂತೆ ನೇಮಿಸಿದ್ದ ಎಲ್ಲ ಪಂಡಿತರೂ ಕೈಕೊಟ್ಟು ಹೋಗುತ್ತಿದ್ದರು. ಆ 'ಹಜರತ್'ಗಳ ವೇಷ ಭಾಷೆ ನೋಡಿ ನಾವು ಹೆದರಿದಂತೆ ಅವರೂ ಸಹ ನಮ್ಮ ಕನ್ನಡ ಭಾಷೆ, ಸಂಸ್ಕೃತಿಗಳನ್ನು ಕಂಡು ಕಂಗಾಲಾಗಿ ಹೋಗುತ್ತಿದ್ದರೋ ಏನೋ? ಕೊನೆಕೊನೆಗೆ ಬೇಸರವಾಗಿ ಉರ್ದು ಅರೇಬಿಕ್ ಭಾಷೆಗಳಿಗೆ ಗುಡ್‌ಬೈ ಹೇಳಬೇಕಾಯಿತು. ಆದರೂ ನಮ್ಮ ತಂದೆಯವರ ಒತ್ತಾಯಕ್ಕೆ ಮಣಿದು ಮಸೀದಿಗೆ ಹೋದರೆ ಉರ್ದು ಹುಡುಗರು ನಮ್ಮನ್ನು ಕಂಡಕೂಡಲೆ ಕಿಚಾಯಿಸಲು ಪ್ರಾರಂಭಿಸುತ್ತಿದ್ದರು. ಉರ್ದು ಭಾಷೆಯ ಅಶ್ಲೀಲ ಪದಗಳನ್ನು ಕಲಿಸಲು ಪ್ರಯತ್ನಿಸುತ್ತಿದ್ದರು. ನಮ್ಮ ಮನೆ ಪಕ್ಕದಲ್ಲಿದ್ದ ಒಬ್ಬ ಮುಸ್ಲಿಂ ಉಪಾಧ್ಯಾಯನಂತೂ (ನಮ್ಮ ತಂದೆಯ ಸಹೋದ್ಯೋಗಿ!) ನಮ್ಮನ್ನು ಕೀಟಲೆ ಮಾಡುವುದರಲ್ಲಿ ಪರಮಾನಂದವನ್ನು ಪಡೆಯುತ್ತಿದ್ದ. ತರಗತಿಯಲ್ಲಿ ಓದು ಬರಹದಲ್ಲಿ ಮೊದಲಿಗನಾಗಿದ್ದ ನನ್ನನ್ನು ಕಂಡರೆ ಉರ್ದು ಪಂಡಿತರೊಬ್ಬರಿಗೆ (ಉರ್ದು ಮುಸ್ಲಿಂ ಆದರೂ!) ಮಾತ್ರ ಬಹಳ ಪ್ರೀತಿ ಮತ್ತು ಅಭಿಮಾನವಿತ್ತು. ಅದು ಹೇಗೋ ಏನೋ ನನ್ನಮ್ಮ ಉರ್ದು ಭಾಷೆಯಲ್ಲಿ ಚೆನ್ನಾಗಿ ಮಾತನಾಡುತ್ತಿದ್ದಳು. ನಮಗೆ ಗೊತ್ತಿರುವ ಅಲ್ಪಸ್ವಲ್ಪ ಉರ್ದು ಅಮ್ಮನಿಂದಲೇ ಕಲಿತದ್ದು. ಬುರ್ಕಾಗಳು ಪಿಂಜಾರ ಪ್ರಪಂಚದಲ್ಲಿ ಪ್ರವೇಶ ಪಡೆದೇ ಇಲ್ಲವಾದ್ದರಿಂದ ನನ್ನ ಅಮ್ಮನಾಗಲೀ ಅಕ್ಕನಾಗಲೀ ಎಂದೂ ಬುರ್ಕಾ ಧರಿಸಿದವರಲ್ಲ.

ನಾನು ಐದನೇ ತರಗತಿಯಲ್ಲಿದ್ದಾಗಲೇ ನನ್ನ ಅಕ್ಕನ ಮದುವೆ ಆಯಿತು.

ಇತರೆ ಯಾವುದೇ ಮೂಲದ ಆದಾಯವಿಲ್ಲದೆ ಸರ್ಕಾರಿ ಸಂಬಳವನ್ನು ಮಾತ್ರ ನೆಚ್ಚಿಕೊಂಡು ಅತ್ಯಂತ ಪ್ರಾಮಾಣಿಕರಾಗಿದ್ದ ನನ್ನ ತಂದೆ ಬಿಗಿಮುಷ್ಟಿಯಿಂದ ಮನೆ ನಡೆಸುತ್ತಿದ್ದರು. ಸತ್ಯ, ಪ್ರಾಮಾಣಿಕತೆ, ಸರಳತೆ, ಯಾರನ್ನೂ ಹಿಯಾಳಿಸದೇ ಇರುವುದು ಮತ್ತು ದೇವರಲ್ಲಿ ಅಖಂಡ ಭಕ್ತಿ ಇವು ನನ್ನ ತಂದೆಯವರ ಪ್ರಧಾನ ಗುಣಗಳು. ಜೀವನದುದ್ದಕ್ಕೂ ದಿನಕ್ಕೈದು ಸಲ ನಮಾಜು ಮಾಡುತ್ತ, ರಂಜಾನ್ ಪೂರ್ತಿ ಉಪವಾಸ ಮಾಡುತ್ತ, ಸಮಯ ಸಿಕ್ಕಾಗಲೆಲ್ಲ ಕುರಾನ್ ಓದುತ್ತ ಬಂದವರು. ನಿಷ್ಠೆಯಿಂದ ಸರ್ಕಾರಿ ಕೆಲಸ ನಿರ್ವಹಿಸಿ ನಿವೃತ್ತರಾದವರು. ನನ್ನ ತಂದೆಯ ಪೂರ್ವಿಕರು ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದವರಂತೆ. ಹಾಗಾಗಿ ತಂದೆಯ ಮನೆಯವರಿಗೆಲ್ಲ ತೆಲುಗು ಬರುತ್ತಿತ್ತು. ನನ್ನ ತಂದೆಯವರ ತಂದೆ ವ್ಯಾಪಾರಸ್ಥರಿದ್ದು ಸಾಕಷ್ಟು ಸ್ಥಿತಿವಂತರಾಗಿದ್ದ ಅವರು ಚಿತ್ರದುರ್ಗ ಜಿಲ್ಲೆಯ ಬೆಳಘಟ್ಟದಿಂದ

ಚಳ್ಳಕೆರೆಗೆ ವಾಸ್ತವ್ಯ ಬದಲಿಸಿ ಅಲ್ಲಿ ವ್ಯಾಪಾರದಲ್ಲಿ ಸೋಲಾಗಿ, ಮನೆಯಲ್ಲಿ ಸಾವು ನೋವುಗಳಾಗಿ ಕೈಯಲ್ಲಿಯ ಕಾಸು ಕರಗಿ ಬಡತನ ಎದುರಿಸಬೇಕಾಯಿತಂತೆ. ಆಗ ಬಡತನದಲ್ಲಿ ಚಳ್ಳಕೆರೆ-ಬೆಳಘಟ್ಟ-ಚಿತ್ರದುರ್ಗದ ನಡುವೆ ಎಷ್ಟೋ ಬಾರಿ ಬಸ್ ಚಾರ್ಜ್‌ಗೂ ದುಡ್ಡಿಲ್ಲದೆ ನಡೆದೇ ಓಡಾಡುತ್ತಿದ್ದರಂತೆ ನನ್ನ ತಂದೆ.

ಕಡುಬಡತನದಲ್ಲಿ ಆಗಿನ ಕಾಲಕ್ಕೆ ಬಿಎಸ್‌ಸಿ., ಬಿಎಡ್ ಪದವಿಗಳನ್ನು ಪಡೆದುಕೊಂಡು, ದೊರೆತ ಅತ್ಯುತ್ತಮ ಸರ್ಕಾರಿ ಹುದ್ದೆಗಳನ್ನು ತಿರಸ್ಕರಿಸಿ, ಮನೆ ನಡೆಸುವ ಉದ್ದೇಶದಿಂದ ಚಳ್ಳಕೆರೆಯಲ್ಲಿಯೇ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಸಹಾಯಕ ಉಪಾಧ್ಯಾಯರಾಗಿ ಸೇವೆಗೆ ಸೇರಿ, ಅದೇ ಊರಿನಲ್ಲಿದ್ದ ಐದು ಎಕರೆ ಕಪ್ಪೆಯನ್ನು ನೋಡಿಕೊಂಡು, ಒಬ್ಬ ತಮ್ಮನನ್ನು ವೈದ್ಯಕೀಯ ಓದಿಸಿದರು. ತಮ್ಮ ಮಕ್ಕಳಾದ ನಮ್ಮೆಲ್ಲರ ವಿದ್ಯಾಭ್ಯಾಸಕ್ಕೆ ಅವರು ಕೊಟ್ಟ ಗಮನ, ಪಟ್ಟಪರಿಶ್ರಮ ಹಾಗೂ ಸಾಧಿಸಿದ್ದು ಗಮನಾರ್ಹ. ನನ್ನ ದೊಡ್ಡ ಅಣ್ಣ ಪಿ.ಯು.ಸಿ ಮುಗಿದ ಮೇಲೆ ಬೆಂಗಳೂರಿನಲ್ಲಿ ಪಶುವೈದ್ಯಕೀಯ ಸೇರಿದನು. ಮರುವರ್ಷ ನನ್ನ ಎರಡನೆಯ ಅಣ್ಣ ಬೆಂಗಳೂರಿನಲ್ಲಿ ದಂತವೈದ್ಯಕೀಯ ಸೇರಿದನು. ಅದಾದ ನಂತರ ನಾನು ಹತ್ತನೇ ತರಗತಿ ಮುಗಿಸಿ ಪಿ.ಯು.ಸಿ.ಗೆ ಬೆಂಗಳೂರಿಗೆ ಹೋಗಿ ಸೇರಿದೆ. ಆಗ ತಂದೆಯವರು ಜಗಳೂರಿ ನಲ್ಲಿ ಸೇವೆಯಲ್ಲಿದ್ದರು. ಮೂರು ಜನ ಬೆಂಗಳೂರು ಸೇರಿದ ಮೇಲೆ ನನ್ನ ತಂದೆಯವರು ಬೆಂಗಳೂರಿನಲ್ಲಿಯೇ ಮನೆ ಮಾಡಿದರು. ಅಮ್ಮ ಮತ್ತು ನಾವು ನಾಲ್ಕು ಜನ ಮಕ್ಕಳು ಬೆಂಗಳೂರಿನಲ್ಲಿ ಹಾಗೂ ತಂದೆಯವರು ಜಗಳೂರಿನಲ್ಲಿಯೇ ಇರತೊಡಗಿದೆವು. ಬೆಂಗಳೂರಿ ನಲ್ಲಿ ನರಸಿಂಹರಾಜಾ ಕಾಲೋನಿಯಲ್ಲಿ ಮನೆ. ನಾನು ಬಸವನಗುಡಿ ನ್ಯಾಷನಲ್ ಕಾಲೇಜ್ ಸೇರಿದ್ದೆ. ತಂಗಿಯನ್ನು ಆಚಾರ್ಯ ಪಾಠಶಾಲೆಯಲ್ಲಿ ಪ್ರೌಢಶಾಲೆಗೆ ಸೇರಿಸಿದ್ದೆವು. ಅಲ್ಲಿಂದ ಆರೇಳು ವರ್ಷ ನನ್ನ ತಂದೆ ತಾಯಿಯರದ್ದು ತಪಸ್ಸು! ಬೆಂಗಳೂರಿನಲ್ಲಿ ಮನೆ ಮಾಡಿ ಮಕ್ಕಳನ್ನೆಲ್ಲ ಶಾಲಾ ಕಾಲೇಜುಗಳಲ್ಲಿ ಓದಿಸುತ್ತ, ಕೇವಲ ಮಾಸ್ತರಿಕೆ ಸಂಬಳದ ಮೇಲೆ ಹಲವು ವರ್ಷಗಳನ್ನು ದೂಡಿದ್ದು ನಿಜಕ್ಕೂ ಆಶ್ಚರ್ಯ.

ನನ್ನ ತಂದೆ ಎಲ್ಲೂ ಸಾಲ ಮಾಡಲಿಲ್ಲ, ಯಾವ ನೆಂಟರಿಷ್ಟರಿಂದಲೂ ಸಹಾಯ ಯಾಚಿಸಲಿಲ್ಲ. ಆದರೂ ನನ್ನ ತಂದೆ ತಣ್ಣಗೆ ಏಕಾಂಗಿಯಾಗಿ ದಡ ಮುಟ್ಟಿಸಿದರು. ಆಗ ತಿಂಗಳಿಗೊಮ್ಮೆ ಜಗಳೂರಿನಿಂದ ಬಂದು ತಿಂಗಳಿಗಾಗುವಷ್ಟು ಸಾಮಾನುಗಳನ್ನು ಲೆಕ್ಕ ಹಾಕಿ ಕೊಡಿಸಿ ಹೋದರೆ ಅಷ್ಟರಲ್ಲಿಯೇ ಸರಿದೂಗಿಸುವುದು ಅಮ್ಮನ ಜವಾಬ್ದಾರಿಯಾಗಿತ್ತು. ಯಾವುದೋ ಒಂದು ಸಣ್ಣ ಮನೆ. ತಿಂಗಳಿಗೆ ಎಪ್ಪತ್ತು ರೂಪಾಯಿ ಬಾಡಿಗೆ. ಬೀದಿ ನಲ್ಲಿ ನೀರು. ಬೆಳಗಿನ ಜಾವಕ್ಕೇ ಎದ್ದು ಅಮ್ಮ ನಾಲ್ವರಿಗೆ ಶಾಲಾ ಕಾಲೇಜುಗಳಿಗೆ ಹೋಗಲು ತಿಂಡಿ-ಊಟ ಸಿದ್ಧಪಡಿಸುತ್ತಾ ಸುಟಿಸುಟಿಯಾಗಿರುತ್ತಿದ್ದಳು. ಮಕ್ಕಳಾದ ನಾವೆಲ್ಲ ನಮ್ಮ ಬಟ್ಟೆಗಳನ್ನು ನಾವೇ ಒಗೆದು ಇಸ್ತ್ರಿ ಮಾಡಿಕೊಳ್ಳುತ್ತಿದ್ದೆವು. ನಿಗಿ ನಿಗಿ ಕೆಂಡಗಳನ್ನು ಹಾಕಿ ಇಸ್ತ್ರಿ ಮಾಡುವ ಒಂದು ಕಬ್ಬಿಣದ ಇಸ್ತ್ರಿ ಪೆಟ್ಟಿಗೆ ಇತ್ತು. ಈಗಲೂ ಮನೆಯ ಯಾವುದೋ ಮೂಲೆಯಲ್ಲಿರ ಬಹುದಾದ ಈ ಇಸ್ತ್ರಿ ಪೆಟ್ಟಿಗೆ ಅನೇಕ ನೆನಪುಗಳನ್ನು ಉಕ್ಕಿಸುತ್ತದೆ. ನಾವೆಲ್ಲರೂ ನೆಲದ ಮೇಲೆ ಜಮಖಾನ ಹಾಸಿಕೊಂಡು ಗಂಟೆಗಟ್ಟಲೆ, ದಿನಗಟ್ಟಲೆ ಓದುತ್ತಿದ್ದೆವು. ಆಗ ನಮಗೆಲ್ಲ

ಒಂದು ಅಥವ ಎರಡು ಜೊತೆ ಬಟ್ಟೆ ಇದ್ದು, ಯಾವುದಕ್ಕೇ ಕೊರತೆ ಇದ್ದರೂ ನಮ್ಮ ಪುಸ್ತಕ ಪೆನ್ನು ಪೆನ್ಸಿಲ್ ಎಕ್ಸರ್‌ಸೈಜ್‌ಗಳಿಗೆ ಕೊರತೆ ಬಾರದ ಹಾಗೆ ನೋಡಿಕೊಳ್ಳುತ್ತಿದ್ದರು ನಮ್ಮ ತಂದೆ.

ಅಮ್ಮನ ಸಹಾಯಕ್ಕೆ ಅಡಿಗೆಮನೆಯಲ್ಲಿ ಮುದ್ದೆ ಕೋಲು, ಕೈಬಟ್ಟಲು, ಕೆರಂಚು, ಮಸಿಅರಿವೆ ಗಳನ್ನು ಬಿಟ್ಟರೆ ಮಿಕ್ಸರ್ ಗ್ರೈಂಡರ್, ಗ್ಯಾಸ್ ಒಲೆ ಸಿಲೆಂಡರ್‌ಗಳು, ವಾಷಿಂಗ್ ಮೆಷಿನ್, ಫ್ರಿಜ್ ಈ ಯಾವುದೂ ಇರಲಿಲ್ಲ. ಒಮ್ಮೆ ಯಾವುದೋ ಕಾರಣಕ್ಕೆ ತಿಂಗಳ ಕೊನೆಯಲ್ಲಿ ದಿನಸಿ ಪದಾರ್ಥಗಳೆಲ್ಲ ಮುಗಿದು ತುಂಬಾ ಧಾರಾಳಿಯಾಗಿದ್ದ ಅಮ್ಮನಿಗೆ ತೀರಾ ಹಿಡಿತ ಸಾಧಿಸಲು ಸಾಧ್ಯವಾಗದೆ ಜೋರಾಗಿ ಅತ್ತದ್ದು, ನಿಂಬೆಹಣ್ಣು ಸೊಪ್ಪು ಸಾಂಬಾರ ಪುಡಿ ಮುಂತಾದ ವಸ್ತುಗಳನ್ನು ತಾಜಾ ಆಗಿರುವಂತೆ ತೆಗೆದಿಡಲು ಬೇಕಾದ ಪ್ಲಾಸ್ಟಿಕ್ ಜಾರು, ಬುಟ್ಟಿಗಳನ್ನು ಖರೀದಿಸಲು ಕೈಯ್ಯಲ್ಲಿ ಕಾಸಿಲ್ಲದೆ ಪರದಾಡಿದ್ದು, ಇವುಗಳೆಲ್ಲ ನನ್ನಲ್ಲಿ ವಿಷಾದಮಯ ನೆನಪುಗಳಾಗಿ ಉಳಿದಿವೆ.

ಬೆಂಗಳೂರಿನಲ್ಲಿ ಒಮ್ಮೆ ಅಮ್ಮನಿಗೆ ಹೊಟ್ಟೆನೋವು ಕಾಣಿಸಿಕೊಂಡಿತು. ವೈದ್ಯರಲ್ಲಿ ತೋರಿಸಿ ಮಾತ್ರೆ ತಂದೆವು. ಖರೀದೀಸಿ ತಂದಿದ್ದ ಮಾತ್ರೆಯ ಬೆಲೆ ೪-೫೦ ರೂಪಾಯಿಯಾಗಿತ್ತು. ಅದರ ತುಟ್ಟಿ ಬೆಲೆಗೆ ಹೆದರಿ ಅಮ್ಮ ಆ ಮಾತ್ರೆಯನ್ನು ನುಂಗಲೇ ಇಲ್ಲ. ಅಷ್ಟು ಮುಗ್ಧಳಾಗಿದ್ದಳು ನಮ್ಮಮ್ಮ.

ಅಮ್ಮನ ಗೈರುಹಾಜರಿಯಲ್ಲಿ ಮೂರು ವರ್ಷ ಜಗಳೂರಿನಲ್ಲಿ ತಾವೇ ಅಡಿಗೆ ಮಾಡಿಕೊಂಡಿದ್ದ ತಂದೆಯವರು ಬೆಂಗಳೂರು ಜಿಲ್ಲೆ ನೆಲಮಂಗಲ ತಾಲೂಕಿಗೆ ವರ್ಗ ಮಾಡಿಸಿಕೊಂಡು ಬಂದರು. ಮನೆಯಿಂದ ದಿನವೂ ಸ್ಕೂಲಿಗೆ ರೈಲಿನಲ್ಲಿ ಹೋಗಿ ಬರುತ್ತಿದ್ದರು. ಬೆಳಗಿನ ಜಾವಕ್ಕೆ ಸಿದ್ಧರಾಗಿ ರೈಲಿಗೆ ಹೊರಟರೆ ಬರುವುದು ಕತ್ತಲಾಗುತ್ತಿತ್ತು. ಎಷ್ಟೇ ಕಷ್ಟ ಬಂದರೂ ಒಂದೇ ಒಂದು ಸಲ 'ಕಷ್ಟ' ಎಂದು ಅವರು ಬಾಯ್ಬಿಟ್ಟು ಹೇಳಿದ್ದೇ ಇಲ್ಲ. ತಂದೆಗೆ ಹೆಗಲೆಣೆಯಾಗಿ ಅಮ್ಮ.

ಮಕ್ಕಳಾದ ನಾವೆಲ್ಲರೂ ನಿಗದಿತ ಸಮಯದಲ್ಲಿ ಉತ್ತಮ ದರ್ಜೆಯಲ್ಲಿ ಪದವಿ ಪಡೆದೆವು. ದೊಡ್ಡಣ್ಣನಿಗೆ ಸರ್ಕಾರಿ ಕೆಲಸ ಸಿಕ್ಕಿತು. ಎರಡನೆಯ ಅಣ್ಣ ಬೆಂಗಳೂರಿನಲ್ಲಿಯೇ ಸ್ವಂತ ದಂತ ಚಿಕಿತ್ಸಾಲಯ ಪ್ರಾರಂಭಿಸಿದನು. ನಾನೂ ಸಹ ಪಶುವೈದ್ಯಕೀಯ ಪದವಿ ಪಡೆದು ಸರ್ಕಾರಿ ಸೇವೆಗೆ ಸೇರಿದೆ. ಹೀಗೆ ಎಲ್ಲ ಗಂಡುಮಕ್ಕಳು ಸ್ವತಂತ್ರವಾಗಿ ತಮ್ಮ ಪಾಡಿಗೆ ತಾವಿರುವಂತೆ ಮಾಡಿ, ಇಬ್ಬರು ಹೆಣ್ಣುಮಕ್ಕಳಿಗೆ ಮದುವೆ ಮಾಡಿಕೊಟ್ಟು, ಮೊಮ್ಮಕ್ಕಳು, ಮರಿಮೊಮ್ಮಕ್ಕಳನ್ನು ಕಂಡಿರುವ ನನ್ನ ತಂದೆಗೆ ಈಗ ವಯಸ್ಸು ಎಂಭತ್ತು ಮೀರಿದ್ದರೂ ಕಿಲೋಮೀಟರ್‌ಗಟ್ಟಲೆ ನಡೆದಾಡಿಕೊಂಡು ಇದ್ದಾರೆ. ಇವರ ಆರೋಗ್ಯದ ಗುಟ್ಟು ಸರಳ ಆಹಾರ ಮತ್ತು ಅಪಾರ ನಡಿಗೆ ಎಂದು ನಾನು ಭಾವಿಸಿದ್ದೇನೆ. ರಾಗಿ ಮುದ್ದೆ ಮತ್ತು ಬದನೆಕಾಯಿ ಬಜ್ಜಿ ಎಂದರೆ ಇವರಿಗೆ ಪಂಚಪ್ರಾಣ. ಅಥವ ರಾಗಿ ಮುದ್ದೆಯ ಜೊತೆ ಮೆಣಸಿನಕಾಯಿ-ಬೆಳ್ಳುಳ್ಳಿ-ಉಪ್ಪು ಹಾಕಿ ಚಟ್ನಿ ಮಾಡಿಕೊಟ್ಟರೂ ಸಂತೋಷದಿಂದ ನಿಧಾನವಾಗಿ ಗಂಟೆಗಟ್ಟಲೆ ಪ್ರೀತಿಯಿಂದ ಊಟ ಮಾಡುತ್ತಾರೆ. ಪ್ರಚಾರವಿಲ್ಲದ ಏನನ್ನೂ ಅಪೇಕ್ಷಿಸದ, ಯಾರ ತಂಟೆಗೂ ಹೋಗದ

ಅಚ್ಚುಕಟ್ಟಾದ ಬದುಕನ್ನು ಕಟ್ಟಿಕೊಂಡು ಸದ್ಯಕ್ಕೆ ದಾವಣಗೆರೆಯಲ್ಲಿ ನನ್ನ ದೊಡ್ಡಣ್ಣನ ಮನೆಯಲ್ಲಿದ್ದಾರೆ. ಈಗಲೂ ಬೆಳಗಿನ ಜಾವಕ್ಕೆ ಐದಕ್ಕೇ ಎದ್ದು, ಓದುವ ಮಕ್ಕಳನ್ನು ನಿದ್ದೆಯಿಂದ ಎಚ್ಚರಿಸುತ್ತ, ಸ್ನಾನ ಮಾಡಿ, ಮಸೀದಿಗೋ ವಾಕಿಂಗಿಗೋ ಹೊರಡುವ ಇವರನ್ನು ನೋಡಿದರೆ ಗಡಿಯಾರವನ್ನು ನೋಡುವ ಆವಶ್ಯಕತೆಯೇ ಇಲ್ಲ! ಅಷ್ಟು ಸಮಯಬದ್ಧ. ಇವರು ತಮ್ಮ ಮದುವೆಯಲ್ಲಿ ಕೊಂಡ ಕೈಗಡಿಯಾರ (ಸುಮಾರು ೬೦ ವರ್ಷಗಳಾಗಿರಬಹುದು!) ಇಂದಿಗೂ ಮನೆಯ ಯಾವುದೋ ಕಪಾಟಿನಲ್ಲಿದ್ದು, ಕೀ ಕೊಟ್ಟರೆ ಈಗಲೂ ಸರಿಯಾದ ಸಮಯ ತೋರಿಸುತ್ತದೆ. ಇವರು ಶರ್ಟು ಪೈಜಾಮ ತಿಂಗಳುಟ್ಟರೂ ಗಲೀಜಾಗುವುದಿಲ್ಲ, ಮಡಿಕೆ ಹಾಳಾಗುವುದಿಲ್ಲ. ಇವರ ಬಟ್ಟೆಗಳು ಹರಿಯುವುದಿಲ್ಲ, ಚಪ್ಪಲಿ ಸವೆಯುವುದಿಲ್ಲ, ಶೇವಿಂಗ್ ಬ್ಲೇಡ್ ಮಂಡಾಗುವುದಿಲ್ಲ, ಮೈಸೋಪು ಕರಗುವುದಿಲ್ಲ, ಕನ್ನಡಕ ಒಡೆಯುವುದಿಲ್ಲ, ಜೇಬಿನಲ್ಲಿಯ ಹಣ ಒಂದು ಪೈಸೆಯೂ ಅನಾವಶ್ಯಕವಾಗಿ ಖರ್ಚಾಗುವುದಿಲ್ಲ, ಇವರ ಮನಸ್ಸು ಚಂಚಲಗೊಳ್ಳುವುದಿಲ್ಲ, ಗಲಿಬಿಲಿಯಾಗುವುದಿಲ್ಲ. ಇವರನ್ನು ಕಂಡಕೂಡಲೆ ವಾಂಛಲ್ಯಗಳು ದಿಕ್ಕಾಪಾಲಾಗಿ ಓಡುತ್ತವೆ.

ಬಿ. ಕೆ. ಮಹಮ್ಮದ್ ಹುಸೇನ್ ಎಂದು ಪೂರ್ತಿ ಹೆಸರಾದರೂ ಬಿ.ಕೆ.ಎಮ್. ಎಂದೇ ಕರೆಯಲ್ಪಡುತ್ತಿದ್ದ ನನ್ನ ತಂದೆಯವರು ಎಂದೂ ಮನೆ ಪಾಠ ಮಾಡಿದವರಲ್ಲ. ಮಕ್ಕಳಾದ ನಮ್ಮನ್ನು ಎಂದೂ ಮನೆಪಾಠಕ್ಕೆ ಕಳುಹಿಸಿದವರಲ್ಲ. ಎಂದೂ ನಮ್ಮ ಓದಿನ ನಡುವೆ ಮೂಗು ತೂರಿಸಿಕೊಂಡು ಬಂದವರಲ್ಲ. ಒಮ್ಮೆ ಮಾತ್ರ ನನ್ನಕ್ಕ ಮನೆಪಾಠ ಹೇಳಿಕೊಡಲು ಒಪ್ಪಿಸಿ ಒಂದು ವರ್ಷ ಮನೆಪಾಠ ಮಾಡಿದ್ದು ನೆನಪಿದೆ. ಆಗ ನಾವು ಹೊಳಲ್ಕೆರೆಯಲ್ಲಿದ್ದೆವು. ಆ ವರ್ಷ ನನ್ನ ಅಕ್ಕನ ಸ್ನೇಹಿತೆಯರೆಲ್ಲ (ಪುಷ್ಪ, ಶೋಭ, ಸೌಭಾಗ್ಯ ಮತ್ತಿತರರು) ನಮ್ಮ ಮನೆಯಲ್ಲಿ ಶಾರದಾ ಪೂಜೆ ಮಾಡಿದ್ದರು. ನಾವಿದ್ದ ಬಾಡಿಗೆ ಮನೆಯ ಹಾಲ್‌ನಲ್ಲಿ ಟೇಬಲ್ ಬೆಂಚುಗಳನ್ನೆಲ್ಲ ಜೋಡಿಸಿ, ದೊಡ್ಡದೊಂದು ಶಾರದಾ ಫೋಟೋ ಇಟ್ಟು ಅಲಂಕರಿಸಿ ಎಲ್ಲ ಉಪಾಧ್ಯಾಯರನ್ನು ಓಣಿಯವರನ್ನು ಆಹ್ವಾನಿಸಿ ಹಾಡು ಕುಣಿತ ಪೂಜೆ ಎಲ್ಲ ಮಾಡಿ ಪ್ರಸಾದ ಹಂಚಿ ನಕ್ಕು ನಲಿದದ್ದು ನನ್ನ ಬಾಲ್ಯದ ಸುಂದರ ನೆನಪುಗಳಲ್ಲೊಂದಾಗಿದೆ. ಕೋಮು ಸಾಮರಸ್ಯದ ಅಮೃತ ಘಳಿಗೆಯಾಗಿ ನೆಲೆ ನಿಂತಿದೆ.

ನಮ್ಮ ಮನೆಯ ಇನ್ನೊಂದು ವಿಶೇಷ ಎಂದರೆ– ಹಬ್ಬಗಳದ್ದು. ಮುಸ್ಲಿಂರ ಹಬ್ಬಗಳಾದ ರಂಜಾನ್, ಬಕ್ರೀದ್, ಮೊಹರಂ ಇತ್ಯಾದಿಗಳ ಜೊತೆಜೊತೆಗೆ ನಮ್ಮ ಮನೆಯಲ್ಲಿ ಉಗಾದಿ, ದೀಪಾವಳಿ ಮುಂತಾದ ಹಿಂದೂ ಹಬ್ಬಗಳ ದಿನಗಳಂದು ಇರುತ್ತಿದ್ದ ಸಂಭ್ರಮ. ಆ ದಿನಗಳಲ್ಲಿಯೂ ವಿಶೇಷ ಅಡಿಗೆ ನಮ್ಮ ಮನೆಯಲ್ಲಿ. ಜೊತೆಗೆ ಅಕ್ಕಪಕ್ಕದ ಮನೆಯ ಅನೇಕ ಹಿಂದೂ ಸ್ನೇಹಿತರು ನಮಗೆ ಕಳುಹಿಸಿಕೊಡುತ್ತಿದ್ದ ತಿಂಡಿ ತಿನಿಸುಗಳು. ಸಣ್ಣವರಿದ್ದ ನಮಗೆ ಆಗೆಲ್ಲ ಹಿಂದೂ ಹಬ್ಬಗಳಲ್ಲಿ ಡಬಲ್ ಬೆನೆಫಿಟ್!

ನಾವೆಲ್ಲ ಸಣ್ಣವರಿದ್ದಾಗ ನಮ್ಮ ಮನೆಯ ಇನ್ನೊಂದು ಕಚಗುಳಿ ಇಡುವಂಥ ವಿಷಯವೆಂದರೆ– ನಮ್ಮ ತಂದೆಯವರ ಜೇಬಿನಿಂದ ಆಗಾಗ ಕಣ್ಮರೆಯಾಗುತ್ತಿದ್ದ ಚಿಲ್ಲರೆ ದುಡ್ಡು! ಸ್ವಲ್ಪ ಮರೆಗುಳಿ ಸ್ವಭಾವದ ತಂದೆಯವರು ಹೊರಗಿನಿಂದ ಬಂದು ಶರ್ಟ್ ಪ್ಯಾಂಟ್

ಬಿಚ್ಚಾಕಿ ಮುಖ ತೊಳೆಯಲು ಹೋದ ಕೂಡಲೆ ಅದಾವ ಮಾಯೆಯಲ್ಲೋ ಜೇಬಿನಲ್ಲಿನ ಚಿಲ್ಲರೆ ಹಣ ನಾಪತ್ತೆಯಾಗುತ್ತಿದ್ದವು. "ದುಡ್ಡು ನಾಪತ್ತೆಯಾಗಿದೆ" ಎಂದು ತಂದೆಯವರು ಅನೌನ್ಸ್ ಮಾಡುತ್ತಿದ್ದರು, ಹಾಗೂ ಜೋರಾಗಿ ನಗುತ್ತಿದ್ದರು. ಅವರ ಜೊತೆ ಮನೆ ಮಂದಿಯೆಲ್ಲ ದೊಡ್ಡದಾಗಿ ನಗುತ್ತಿದ್ದೆವು. ಯಾಕೆಂದರೆ ದುಡ್ಡನ್ನು ಕದಿಯುತ್ತಿದ್ದುದು ಅಮ್ಮನೇ ಆಗಿರುತ್ತಿದ್ದಳು! ಕದ್ದ ದುಡ್ಡನ್ನು ಕೂಡಿ ಹಾಕಿ ಅಮ್ಮನೇನು ಸೀರೆ ಬಳೆ ಪೌಡರ್‌ಗಳನ್ನು ಕೊಳ್ಳುತ್ತಿರಲಿಲ್ಲ. ಆ ದುಡ್ಡು ವಿನಿಯೋಗವಾಗುತ್ತಿದ್ದದ್ದು ಮನೆ ಖರ್ಚಿಗೆ ಅಥವ ಸಿನಿಮಾಕ್ಕೆ. ಅಮ್ಮನ ಜೊತೆ ಮಕ್ಕಳಾದ ನಾವೆಲ್ಲ ಖುಷಿಯಿಂದ ಕುಣಿಯುತ್ತ ಸಿನಿಮಾಕ್ಕೆ ಹೋಗುತ್ತಿದ್ದೆವು. ತಂದೆಯವರು ಯಾವತ್ತೂ ಸಿನಿಮಾ ನೋಡಿದವರಲ್ಲ. ಸಿನಿಮಾ ಎಂದರೆ ಸಮಯ ದುಡ್ಡು ಹಾಳು ಎಂಬುದರ ಜೊತೆಗೆ ಅಶ್ಲೀಲ ಎಂಬುದು ಅವರ ಖಡಾಖಂಡಿತವಾದ ಅಭಿಪ್ರಾಯ ವಾಗಿತ್ತು. ಸಿನಿಮಾ ಇಷ್ಟಪಡುತ್ತಿದ್ದ ಮಕ್ಕಳಾದ ನಾವೆಲ್ಲ ಅಮ್ಮನ ಪಾರ್ಟಿಯಲ್ಲಿರುತ್ತಿದ್ದೆವು. ಸಿನಿಮಾಕ್ಕೆ ಹೊರಟಾಗ ನಾವೆಲ್ಲ ಸಾವಿರಾರು ಸುಳ್ಳುಗಳನ್ನು ಕಲ್ಪಿಸಿಕೊಂಡು ತಂದೆಯವರಿಗೆ ಹೇಳುತ್ತಿದ್ದೆವು. ಅವೆಲ್ಲ ಸುಳ್ಳು ಕಾರಣಗಳೆಂದು ತಂದೆಯವರಿಗೆ ಗೊತ್ತಾದರೂ ಸುಮ್ಮನಿರು ತ್ತಿದ್ದರು. ನಮ್ಮ ಸುಳ್ಳುಗಳು ಅವರಿಗೆ ಗೊತ್ತು ಎಂದು ನಮಗೆ ಅರ್ಥವಾದರೂ ಸುಳ್ಳುಗಳನ್ನು ನಾವು ಮುಂದುವರಿಸುತ್ತಿದ್ದೆವು! ಜೇಬಿನಿಂದ ಹಣ ಮಾಯವಾಗುವ ಪ್ರಕರಣಗಳು ನಾವೆಲ್ಲ ದೊಡ್ಡವರಾದಂತೆ ನಿಂತುಹೋದವು, ಮರೆತೇ ಹೋದವು!

ನಾವೆಲ್ಲ ಸಣ್ಣವರಿದ್ದಾಗ ನನ್ನಮ್ಮ ತವರಿನಲ್ಲಿ ತನ್ನ ತಾಯಿಯ ಜೊತೆ ಬೆಳಗಿನ ಜಾವಕ್ಕೇ ಎಚ್ಚರವಾಗಿ ನಡೆಸುತ್ತಿದ್ದ ಸಂಭಾಷಣೆಗಳು ಬಹಳ ಮಜವಾಗಿರುತ್ತಿದ್ದವು. ಊರಿನಲ್ಲಿಯ ನೆಂಟರಿಷ್ಟರ ಬಗ್ಗೆ ಗಂಟೆಗಟ್ಟಲೇ ಮಾತನಾಡುತ್ತಿದ್ದರು. ನಾವೆಲ್ಲ ಮಕ್ಕಳೂ ಹಾಸಿಗೆಯಲ್ಲಿ ಮಲಗಿದ್ದಂತೆಯೇ, ಹೊದಿಕೆಗಳನ್ನು ತೆಗೆಯದೇ ಆ ಮಾತುಗಳನ್ನು ಸಂಪೂರ್ಣವಾಗಿ ಕೇಳಿಕೊಳ್ಳುತ್ತಿದ್ದೆವು. ನಬಿಯಣ್ಣ, ಬಜಾರ್‌ಸಾಬ್, ಮದ್ದಣ್ಣ, ಹಂಪಜ್ಜ, ಚಮ್ಮಪ್ಪ, ಹೊಂಡ್ರಣ್ಣ, ಕೆಂಗಜ್ಜ, ಜಿನ್ನಿ, ಇಲ್ಕಾನವ್ವ, ಅಳುಲೆ, ಹೊನ್ನೂರವ್ವ ಮುಂತಾದ ಹೆಸರಿನ ಬಂಧು ಬಳಗದವರ ಮನೆತನದ ಆಗುಹೋಗುಗಳನ್ನು ಕಣ್ಣಿಗೆ ಕಟ್ಟುವಂತೆ ಅಜ್ಜಿ ವರ್ಣಿಸುತ್ತಿದ್ದಳು. ಈ ಅಜ್ಜಿ ಅತ್ಯಂತ ಅಶ್ಲೀಲ ಪದಗಳನ್ನು ಬಳಸಿ ಬಾಯಿಗೆ ಬಂದಂತೆ ಬೈಯುತ್ತ ಒಬ್ಬೊಬ್ಬರ ವ್ಯಕ್ತಿಚಿತ್ರಣಗಳನ್ನು ಯಾವ ಕವಿ-ಕಾದಂಬರಿಕಾರನಿಗೂ ಕಡಿಮೆ ಇಲ್ಲದಂತೆ ಚಿತ್ರಿಸುತ್ತಿದ್ದಳು. ನನ್ನಜ್ಜಿಯ ಬಾಯಲ್ಲಿ ಕನ್ನಡ ಭಾಷೆ ತನ್ನೆಲ್ಲ ಪೋಲಿ ಶಬ್ದಗಳೊಂದಿಗೆ ರಾರಾಜಿಸುತ್ತಿತ್ತು. ಈಕೆ ಬೈಯಲುಪಕ್ರಮಿಸಿದಳೆಂದರೆ ವ್ಯಕ್ತಿಗಳ ಹೆಸರುಗಳು, ಗಿಡ್ಡ ಹೆಸರುಗಳು, ಅಡ್ಡ ಹೆಸರುಗಳು ಕಲಸುಮೇಲೋಗರವಾಗಿ ಬೈಗುಳಗಳಿಗೆ ಈಡಾದ ವ್ಯಕ್ತಿಯ ಬುದ್ಧಿಯೇ ಜೋಮು ಹಿಡಿದಂತಾಗುತ್ತಿತ್ತು. ಈಕೆಯ ಬುದ್ಧಿಗೆ ನೆನಪಿಗೆ ಎಟುಕುತ್ತಿದ್ದದ್ದು ಅಡ್ಡ ಹೆಸರುಗಳೇ ವಿನಃ ನಿಜನಾಮಧೇಯಗಳಲ್ಲ. ಕೆಮ್ಮು ದಮ್ಮಿನ ಸಿಪ್ಪೆಯಂಥ ಮೈಕಟ್ಟಿನ ಅಜ್ಜಿಯ ಶರೀರದಲ್ಲಿ (ಈಕೆಯ ಅಡ್ಡ ಹೆಸರೇ ರೋಸಜ್ಜಿ) ಯಾರನ್ನಾದರೂ ಬೈಯುವಾಗ ಮಾತ್ರ ಅಗಾಧ ಶಕ್ತಿಯ ಸಂಚಯನವಾಗುತ್ತಿತ್ತು. ಇಂಥವಳ ಒಬ್ಬಳೇ ಮಗಳಾದ ನನ್ನಮ್ಮ ಮಾತ್ರ ಎಂದೂ ಯಾರನ್ನೂ ಕೆಟ್ಟದ್ದಾಗಿ ಮಾತಾಡಿಸಿದ್ದು ನಾನು ನೋಡಲೇ ಇಲ್ಲ.

ಡಿ.ವಿ.ಜಿ.ಯವರ 'ವನಸುಮ' ಹಾಗೂ ಬಿ.ಎಂ.ಶ್ರೀ.ಯವರ 'ಕರುಣಾಳು ಬಾ ಬೆಳಕೆ' ಪದ್ಯಗಳನ್ನು ಬಹಳ ಇಷ್ಟಪಟ್ಟಿದ್ದ ನನ್ನ ತಂದೆ ಆ ಪದ್ಯಗಳನ್ನೇ ಬದುಕಿದ್ದಾರೆ ಎನಿಸುತ್ತದೆ. ಇತ್ತೀಚೆಗೆ ಹಜ್ ಯಾತ್ರೆಯನ್ನು ಮಾಡಿ ಬಂದಿರುವ ಇವರಿಗೆ ಸದಾ ಅಲೌಕಿಕದ ತುಡಿತ.

ಐದು ಜನ ಮಕ್ಕಳಲ್ಲಿ ನನ್ನದೇ ಕೊನೆ ಮದುವೆ ೧೯೮೮ ರಲ್ಲಿ ಆಯಿತು. ಅದನ್ನೇ ಕಾಯುತ್ತಿದ್ದಳೋ ಎಂಬಂತೆ ನನ್ನ ಮದುವೆಯಾದ ಎರಡೇ ತಿಂಗಳಲ್ಲಿ ಆರೋಗ್ಯವಾಗಿಯೇ ಇದ್ದ ಅಮ್ಮ ಅಸುನೀಗಿದಳು. ಯಾರಿಗೂ ಕಷ್ಟ ಕೊಡದೆ ತಾನೂ ಕಷ್ಟ ಪಡದೆ ಮಕ್ಕಳಿಗೆ ಮೊಮ್ಮಕ್ಕಳಿಗೆ ಊಟ ನೀಡುತ್ತಲೆ ಎಲ್ಲರೆದುರು ಇದ್ದಕ್ಕಿದ್ದಂತೆ ಪ್ರಾಣ ಬಿಟ್ಟಳು. ಅಲೌಕಿಕದ ಕಡೆ ಗಮನವನ್ನೇ ಕೊಡದ ಅಮ್ಮನಿಗೆ ಧಾರ್ಮಿಕ ಆಚರಣೆಗಳ ಹಿಂದಿನ ಟೊಳ್ಳುತನ ಹೊಳೆದಿತ್ತೇ? ಕನ್ನಡ ಓದಲು ಬರೆಯಲು ಬಾರದ ಅಮ್ಮನಿಗೆ ನಾನು ಓದಿ ಹೇಳಿದ್ದ 'ಕಾನೂರು ಹೆಗ್ಗಡಿತಿ', 'ಅಳಿದ ಮೇಲೆ', 'ಚೋಮನದುಡಿ', 'ಮೂಕಜ್ಜಿಯ ಕನಸುಗಳು', 'ಮರಳಿ ಮಣ್ಣಿಗೆ', 'ಬಾಳ್ವೆಯೇ ಬೆಳಕು' (ಆಯ್ದ ಭಾಗಗಳನ್ನು ಮಾತ್ರ ಓದಿ ಹೇಳಿದ್ದೆ), 'ಉಮರನ ಒಸಗೆ' ಮುಂತಾದವು ತಮ್ಮ ಪ್ರಭಾವ ಬೀರಿದ್ದವೇ? ಮತ್ತೆ ಮತ್ತೆ ಓದಿಸಿಕೊಂಡು ಮೆಚ್ಚುತ್ತಿದ್ದ ಲಂಕೇಶರ 'ಅವ್ವ' ನನ್ನಮ್ಮನಿಗೆ ಆದರ್ಶವಾಗಿದ್ದಳೇ?

■ **ಡಾ. ಮಿರ್ಜಾ ಬಷೀರ್ :**
ಸಹಾಯಕ ನಿರ್ದೇಶಕ, ಪಶುವೈದ್ಯ ಆಸ್ಪತ್ರೆ, ಧರ್ಮಸ್ಥಳ-೫೭೪ ೨೧೬ (ದ.ಕ.) ■

ವಿಂದಾ ಕರಂದೀಕರ್ ಅವರ ಐದು ವಿರೂಪಿಕಾ ಪದ್ಯಗಳು

ಬಿ. ಎ. ಸನದಿ

ಇತ್ತೀಚೆಗೆ ಮರಾಠೀ ಸಾಹಿತ್ಯಕ್ಕೆ ಮೂರನೆಯ ಜ್ಞಾನಪೀಠ ಪ್ರಶಸ್ತಿಯ ಗರಿ ಮುಡಿಸಿದ ಪ್ರಖ್ಯಾತ ಕವಿ ಪ್ರೊ. ವಿಂದಾ ಕರಂದೀಕರ್ (೧೯೧೮) ೧೯೫೦ ರ ದಶಕದಿಂದಲೇ ಆಧುನಿಕ ಮರಾಠೀ ಕಾವ್ಯವನ್ನು ಶ್ರೀಮಂತಗೊಳಿಸುತ್ತ ಬಂದವರು. ತಮ್ಮ ಕಾವ್ಯದ ವಸ್ತು-ವಿನ್ಯಾಸಗಳಲ್ಲಿ ನಾವೀನ್ಯದ ಪ್ರಖರ ಕಳೆ ಬರುವಂತೆ ನೋಡಿಕೊಂಡವರು. ಅವರು ತಮ್ಮ ಕಾವ್ಯರಚನೆಯಲ್ಲಿ ಮಾಡಿದ ನವೀನ ಪ್ರಯೋಗಗಳಲ್ಲಿ 'ವಿರೂಪಿಕಾ' ಎಂಬುದೂ ಒಂದು. ಅದೊಂದು ಬಗೆಯ ಅಸಂಗತ ಕಾವ್ಯ. ಭಾವ, ಅರ್ಥ, ರಸ–ರೂಪಗಳ ಸಂಯೋಜನೆಯ ಶಿಸ್ತನ್ನು ಬದಿಗಿಟ್ಟು ಒಂದು ಆಂತರಿಕ ವ್ಯಂಗ್ಯಾರ್ಥವನ್ನು ಸೂಸುವಂಥಾದ್ದು. ಇಲ್ಲಿ ಮಾದರಿಗಾಗಿ ಅಂಥ ಐದು ಪದ್ಯಗಳನ್ನಾಯ್ದು ಅನುವಾದಿಸಿ ಕೊಡಲಾಗಿದೆ.

೧. ಮೂಲಭೂತ ಹಕ್ಕು

ನೀವು ಚಾಟಿಯೇಟು ಕೊಡುವ ಮೊದಲು
ಅವರು ಕೊಟ್ಟಿರುವ ಏಟುಗಳ ಗುರುತಾದರೂ
ಅಳಿಸಿ ಹೋಗುವನಿತು ಕಾಲಾವಧಿ ಕೊಡಬೇಕು;

ಅವನ ಪಾಲಿಗಿದೆ
ಅವನ ಮೂಲಭೂತ ಹಕ್ಕು.

೨. ಒಬ್ಬಂಟಿ

ಮನೆಯಲಿ ಮಡದಿಯಿಲ್ಲದ ಸಮಯವೆ
ಸುಸಂಧಿಯೆಂದು
ಸಂಸಾರದ ಸಮಸ್ತ ವಸ್ತು-ಒಡವೆಗಳ
ನನ್ನ ಕೋಣೆಯಲಿ ಕೂಡುಹಾಕಿದೆ
ಒಂದರ ಮೇಲೊಂದು,
ಸುಖಾಸನದಲಿ ಹಾಯಾಗಿ ಕೂತು
ಎದುರಿನ ರಾಶಿಯ ನಿಟ್ಟಿಸಿದೆ
ಕಡ್ಡಿ ಪೆಟ್ಟಿಗೆಯ ಕಡ್ಡಿಯ ಹಾಗೆ;
ನೋಡುನೋಡುತ ಒಮ್ಮೆಲೆ ಬೆಚ್ಚಿದೆ
ರಾಶಿಯ ಮೇಗಡೆ
ಕೂತಿರಲೊಂದು ಹುಲು ಜಿರಲೆ!
ತಕ್ಷಣ ಎದ್ದೆ
ಎಲ್ಲ ವಸ್ತುಗಳ ಮೊದಲಿದ್ದಲ್ಲಿಯೆ
ಮೊದಲಿಗಿಂತಲೂ ನೀಟಾಗಿಯೆ ಇಟ್ಟೆ!

೩. ನಡೆದದ್ದಿಷ್ಟೆ

ಅವರು ಸೆರಗನೆಳೆದರು
ಆಕೆ ಸೀರೆಯನೆ ಬಿಚ್ಚಿದಳು
ನಡೆದದ್ದಿಷ್ಟೆ;
ನಾನೆಂದೆ: ಎಳೆದವರಪರಾಧಿಗಳು,
ನೀನೆಂದೆ: ಅಪರಾಧಿ ಬಿಚ್ಚಿದವಳು,
ಯಾರೋ ಅಂದರು : ಇದೊಳ್ಳೆ ಮೋಜು
ಅಪರಾಧದ ಶೋಧದಲಿ
ತೊಡಗಿದವರೆ ಅಪರಾಧಿಗಳು;
ಮೊದಲನೆಯ ವಕೀಲ : ೧೯೧೫ ಅ, ೧೯೫೦ ಬ, ೧೯೭೫ ಕ್ಷ
ಎರಡನೆಯ ವಕೀಲ : ೧೯೧೫ ಬ, ೧೯೫೦ ಅ, ೧೯೭೫ ಜ್ಞ
ಮೊದಲನೆಯ ಜಡ್ಜ್ : ಕೈ ಅಪರಾಧಿ, ಮನುಷ್ಯನಲ್ಲ
ಎರಡನೆಯ ಜಡ್ಜ್ : ಸೆರಗು ಎಲ್ಲಿ ಮುಗಿವುದೋ
ಸೀರೆ ಎಲ್ಲಿ ಶುರುವಾಗುವುದೋ
ಹೇಳುವುದೇ ಕಠಿಣ
ಗಾಳಿಯನೆ ಕೇಳಬೇಕು.
ಒಟ್ಟಿನಲ್ಲಿ ನಡೆದಿದ್ದಿಷ್ಟೆ
ಅವರು ಸೆರಗು ಎಳೆದರು, ಆಕೆ ಸೀರೆ ಬಿಚ್ಚಿದಳು.

೪. ಭವಿಷ್ಯ

ಎಲೆ ಭಗವಂತಾ,
ಛತ್ರಿಯ ಹಾಗೆ
ಅಂತರಿಕ್ಷವನೆ ಮಡಿಸುವ ತೆರೆಯುವ
ನಿನ್ನ ಅಂಗೈಯಲಿ
ಒಡೆದು ಕಾಣುವುದು
ಆಕಾಶಗಂಗೆಯ ದಿಗಂತ ಧನರೇಷೆ
ಅಂತೆಯೆ ಶುಕ್ರನ ಉಬ್ಬು;
ಅದೆಲ್ಲಾ ಸರಿ, ಆದರೆ–
ನಿನಗೆ ವಿದೇಶಪಯಣದ ಯೋಗವೆ ಇಲ್ಲ!

೫. ಅತಿಶಯ ಆತ್ಮನಿಷ್ಠೆ

ಕೊನೆಗೂ
ಆತನ ಆತ್ಮನಿಷ್ಠೆ
ಯಾವ ಹಂತ ತಲುಪಿತೆಂದರೆ
ಒಂದು ದಿನ
ಆತ ನನ್ನ ಗಡ್ಡವನೆ
ತನ್ನ ಉಗುಳುಬಟ್ಟಲೊಳು ಅದ್ದಿ
ತನ್ನ ಹೊಟ್ಟೆಯ ಮೇಲೆ
ತನ್ನದೇ ಚಿತ್ರ ಬರೆದ.

■ ಡಾ. ಬಿ. ಎ. ಸನದಿ :
'ಮಿಲನ', ಸಾ ಮಿಲ್ ಎದುರು, ಹೆರವಟ್ಟಾ,
ಕುಮಟಾ-೫೮೧ ೩೩೨ (ಉ.ಕ.) ■

ದ್ರಾವಿಡಸಂಬಂಧ-೪ ***ಶಂಗಂ ಕಾಲದ ಕನ್ನಡ ನಾಡು*** — ಷ. ಶೆಟ್ಟರ್

ಎರುಮೈಊರವರ್ : ಕ್ರಿಸ್ತಪೂರ್ವ ಕಾಲದ ಕನ್ನಡನಾಡಿನ ಅರಸರು

ಶಂಗಂ ಸಾಹಿತ್ಯವನ್ನು ಇಲ್ಲಿಯವರೆಗೂ ಬಹುತೇಕ ತಮಿಳರ ದೃಷ್ಟಿಕೋನದಿಂದ ಅಭ್ಯಸಿಸಲಾಗಿದೆ, ಆದರೆ ಇದನ್ನು ಸ್ವಲ್ಪ ವಿಸ್ತರಿಸಿ ನೋಡಿದರೆ 'ತಮಿಳಗಂ' ಉತ್ತರಕ್ಕಿದ್ದ ಹಲವಾರು ರಾಜಸತ್ತೆಗಳ ಬಗ್ಗೆ ವಿವರಗಳನ್ನು ಪಡೆದುಕೊಳ್ಳಲು ದಕ್ಷಿಣ ಭಾರತ ಇತಿಹಾಸದ ಆರಂಭ ಕಾಲದ ಬಗ್ಗೆ ನಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗುವುದು. ಕಳೆದ ನೂರು ವರ್ಷಗಳಲ್ಲಿ 'ವಡುಗ' ಪದವನ್ನು ತಮಿಳು ಮತ್ತು ತಮಿಳೇತರ (ಪಾಶ್ಚಾತ್ಯ) ವಿದ್ವಾಂಸರು ಒಂದೇ ಬಗೆಯಲ್ಲಿ ಅರ್ಥೈಸಿ, ಅದು ವೇಂಕಟದ ಉತ್ತರಕ್ಕಿರುವ ಇಂದಿನ ಆಂಧ್ರ ಪ್ರದೇಶವನ್ನು ಸೂಚಿಸುವುದೆಂದು ಪ್ರತಿಪಾದಿಸುತ್ತಾ ಬಂದಿರುವರು. ತಮಿಳಗಂ ಉತ್ತರಕ್ಕಿದ್ದ ಭೂಪ್ರದೇಶವನ್ನೆಲ್ಲಾ ಇದು ಒಳಗೊಳ್ಳದಿರುವುದರಿಂದ, ಈ ವ್ಯಾಖ್ಯೆಯನ್ನು ನಾವಿಂದು ಪ್ರಶ್ನಿಸಬೇಕಾಗಿದೆ.

ಸೆನ್‌ತಮಿಳ್ ಮತ್ತು ತಿಶೈಶ್ಯೊಳ್: ತಮಿಳು ಭಾಷಿಕರನ್ನು ಎರಡು ಗುಂಪುಗಳಡಿ ತೊಲ್ಕಾಪ್ಪಿಯಾರ್ ತಂದದ್ದನ್ನೂ ಇವುಗಳಲ್ಲಿ ಹದಿಮೂರು ನಾಡುಗಳನ್ನೊಳಗೊಂಡ 'ಸೆನ್‌ತಮಿಳ್' ಮತ್ತು ಇದನ್ನು ಸುತ್ತುವರಿದಿದ್ದ ಹನ್ನೆರಡು ನಾಡುಗಳ 'ತಿಶೈಶ್ಯೊಳ್'ನ್ನು ಅವನು ಹೆಸರಿಸಿದ್ದನ್ನೂ ಈ ಹಿಂದೆ ಕಂಡಿದ್ದೇವೆ.[೧] ವಾಸ್ತವವಾಗಿ, 'ಸೆನ್‌ತಮಿಳ್' ಎಂಬುದು ವೈಗೈ ನದಿಯನ್ನು ಉತ್ತರದ ಗಡಿ ಮಾಡಿಕೊಂಡು ಮರುತರು(ದ), ಕರವೂರು(ಪೂ) ಮತ್ತು ಮರವೂರ್(ಪ)ಗೆ ಸೀಮಿತಗೊಂಡ ಪ್ರದೇಶವಾಗಿತ್ತು; ವೈಗೈ ನದಿಯಿಂದ ಸರಿಸುಮಾರು ವೇಂಕಟಾದ್ರಿವರೆಗಿನ (ಅಂದಿನ ಚೋಳ ಮತ್ತು ಅವರ ಸಾಮಂತರ ಅಂಕಿತದಲ್ಲಿದ್ದ) ಪ್ರದೇಶವು ತಿಶೈಶ್ಯೊಳ್‌ನಲ್ಲಿ ಸೇರಿಕೊಂಡಿತ್ತು. ತಮಿಳಗಂ ಉತ್ತರ ಭಾಗವನ್ನೆಲ್ಲ ಒಳಗೊಂಡ ಈ ತಿಶೈಶ್ಯೊಳ್ ಆದರ ಪಶ್ಚಿಮ ಮತ್ತು ವಾಯವ್ಯ (ಅಂದರೆ ಚೇರ ರಾಜ್ಯಕ್ಕೆ ಹೊಂದಿಕೊಂಡ ಉತ್ತರ ಮತ್ತು ಪೂರ್ವೋತ್ತರ) ಪ್ರದೇಶವನ್ನು ಯಾವ ಬಗೆಯಲ್ಲಿ ಪ್ರಸ್ತುತಗೊಳಿಸಿ ಕೊಂಡಿತ್ತೆಂಬುದನ್ನು ಅಂದಿನ ಕವಿಗಳಾಗಲೀ ಇಂದಿನ ಸಂಶೋಧಕರಾಗಲೀ ಎಲ್ಲಿಯೂ ಸ್ಪಷ್ಟಪಡಿಸಿಲ್ಲ. ಕನ್ನಡ ಜನಾಂಗಕ್ಕೆ ಸಂಬಂಧಪಟ್ಟ ಈ ಪ್ರಶ್ನೆಗೆ ಉತ್ತರ ಹುಡುಕುವುದು ಮತ್ತು ಶಂಗಂ ಕಾಲದ ಕನ್ನಡ ನಾಡಿನ ಬಗ್ಗೆ ತಿಳಿದುಕೊಳ್ಳಬೇಕಾದುದು ನಮ್ಮ ಹೊಣೆಗಾರಿಕೆಯಾಗಿ ರುವುದರಿಂದ ಈ ಪ್ರಶ್ನೆಯನ್ನು ಇಲ್ಲಿ ಕೈಗೆತ್ತಿಕೊಳ್ಳಬೇಕಾಗಿದೆ. ಇಲ್ಲಿ ಮೊದಲು ಗಮನಿಸ ಬೇಕಾದ ಒಂದು ಅಂಶವೆಂದರೆ ತಮಿಳಗಂ ನೆತ್ತಿಯ ಮೇಲಿನ ಪೂರ್ವಾರ್ಧ ಮತ್ತು ಪಶ್ಚಿಮಾರ್ಧದಲ್ಲಿದ್ದ ಅಂತರದ ಬಗ್ಗೆ. ವೈಗೈಯಿಂದ ಕಾವೇರಿಯ ಮೂಲಕ ವೇಂಕಟವನ್ನು ಮುಟ್ಟುವ ಪೂರ್ವಾರ್ಧ ಪ್ರದೇಶದಲ್ಲಿ ಶಂಗಂ ಕಾಲದಲ್ಲಿ ತಮಿಳಿನ ಏಕಸ್ವಾಮ್ಯವಿತ್ತು; ಉಳಿದರ್ಧವು (ತಮಿಳಗಂನ ನೇರ ಉತ್ತರ ಮತ್ತು ವಾಯವ್ಯ ಭಾಗದಲ್ಲಿ, ಅಂದರೆ ಸ್ಥೂಲ ವಾಗಿ ನೀಲಗಿರಿ ಬೆಟ್ಟಸಾಲಿನಿಂದ ಉತ್ತರಕ್ಕೆ) ಈ ಏಕಸ್ವಾಮ್ಯವನ್ನು ಪ್ರಶ್ನಿಸುವ ತಮಿಳೇತರ ಜನಾಂಗಗಳ ಪ್ರದೇಶವಾಗಿತ್ತು. ಇದನ್ನು ಒಪ್ಪುವುದಾದರೆ, ತಮಿಳರ ಏಕಸ್ವಾಮ್ಯವನ್ನು ಪ್ರಶ್ನಿಸಿದ ಜನಾಂಗಗಳಾವುವು? ಅವರು ತಮಿಳೇತರರಾಗಿದ್ದರೆನ್ನಲು ಇರುವ ಆಧಾರಗಳಾವುವು? ಎಂಬ ಪ್ರಶ್ನೆಗಳಿಗೆ ನಾವು ಉತ್ತರಗಳನ್ನು ಕೊಡಬೇಕಾಗುತ್ತದೆ.

ಶಂಗಂ ಕಾಲದ ರಾಜಮನೆತನಗಳು: ತಮಿಳಗಂ ಹಂಚಿಕೊಂಡು ಶಂಗಂ ಕಾಲದಲ್ಲಿ ಆಳುತ್ತಿದ್ದ ಪ್ರಧಾನ ಅರಸು ಮನೆತನಗಳಲ್ಲಿ ಪಾಂಡ್ಯ, ಚೋಳ ಮತ್ತು ಚೇರರನ್ನು ಸುಲಭವಾಗಿ ಗುರುತಿಸಬಹುದು; ಆದರೆ ಉಪಪ್ರಧಾನ ಅಥವಾ 'ವೇಳಿರ್' ಎಂಬ ಸ್ವತಂತ್ರ ಅರಸು ಮನೆತನಗಳನ್ನು ಗುರುತಿಸುವುದು ಇದರಷ್ಟು ಸುಲಭವಲ್ಲ. ಇದಕ್ಕೆ ಎರಡು ಕಾರಣಗಳುಂಟು: ಶಂಗಂ ಕಾಲಾವಧಿಯು (ಕ್ರಿ.ಪೂ ೩ರಿಂದ ಕ್ರಿ.ಶ. ೩ರ ವರೆಗೆ) ಸುದೀರ್ಘವಾಗಿದ್ದುದು ಇದರಲ್ಲಿ ಒಂದಾದರೆ, ಅಂದಿನ ರಾಜಕೀಯದಲ್ಲಿ ಮೇಲಿಂದ ಮೇಲೆ ಸ್ಥಿತ್ಯಂತರಗಳಾಗುತ್ತಿದ್ದುದು ಮತ್ತೊಂದಾಗಿರುವುದು. ಕಳೆದ ಶತಮಾನದ ಆರಂಭದ ದಶಕಗಳಲ್ಲಿ ಮಾಡಿದ ಒಂದು ಅಂದಾಜಿನಂತೆ, ಇದು ಮೂವರು ಕಿರೀಟಧಾರಿ ಅರಸರನ್ನೂ ನೂರಿಪ್ಪತ್ತು ಅಧಿರಾಜರನ್ನೂ ಒಳಗೊಂಡಿತ್ತು.[೨] ಆದರೆ ಇದೇ ಶತಮಾನದ ಕೊನೆಯ ದಶಕದಲ್ಲಿ ಮಾಡಿದ ಮತ್ತೊಂದು ಅಂದಾಜಿನಂತೆ, ಈ ಸಂಖ್ಯೆ ನೂರಾಎಪ್ಪತ್ತೈದಕ್ಕಿಂತ ಕಡಿಮೆ ಇರಲಿಲ್ಲ.[೩] ಇದರಲ್ಲಿ ಮೂವೇಂದಾರರು, ವೇಳಿರ್‌ಗಳು, ಅಲ್ಲದೆ ಚಿರ್‍ರರಸರ್, ವೇಂತರ್, ಕುರುನೀಲಮನ್ನಾರ್, ಕೋಮಕರ್, ಕುರುಂಪುಗಳ್, ಕೀಲರ್ ಮುಂತಾದ ವರ್ಗಗಳು ಒಳಗೊಂಡಿದ್ದವು. ಶಂಗಂ ಕಾಲದ ಹಲವಾರು ಪ್ರಾದೇಶಿಕ ಜನಾಂಗಗಳನ್ನು ಪ್ರತಿನಿಧಿಸುತ್ತಿದ್ದ ಅವು ತಮಿಳಗಂ ಒಳಹೊರಗಿನ ಪ್ರದೇಶವನ್ನೆಲ್ಲಾ ವ್ಯಾಪಿಸಿಕೊಂಡಿದ್ದವು. ಈ ಕಾಲದ ಜನಾಂಗಗಳಲ್ಲಿ ಮಲವರ್, ಪರತವರ್, ವಡುಕರ್, ಕೋಸರ್, ಕೊಂಕರ್, ಎರುಮೈಊರವರ್, ಕೊಂಗರ್, ಕುಡುನಾಡವರ್, ಕೊಂಕಾಣರ್ ಅಥವಾ ಕರ್ಕನಾಡವರ್ ಮುಂತಾದವುಗಳಿದ್ದವು. ಇಂದಿನ ಕರ್ನಾಟಕ, ಕೇರಳ ಮತ್ತು ತಮಿಳು ನಾಡುಗಳನ್ನು ಬೆಸೆದಿದ್ದ ಇವರಲ್ಲಿ ಕೊಂಕಣ, ಕೊಡವ, ತುಳು ಮತ್ತು ಕನ್ನಡ ಜನಾಂಗಗಳ ಪಾತ್ರ ಮಹತ್ವದ್ದಾಗಿತ್ತೆಂದು ಕಂಡುಬರುವುದು.

'ವಡುಗರು' ಎಂದರೆ ಯಾರು? 'ವಡುಗರು' ಮತ್ತು 'ವಡುಮೋಳಿಯಾಳರ್' ಎಂಬ ಪದಗಳನ್ನು ಯಾವ ಯಾವ ಅರ್ಥದಲ್ಲಿ ಶಂಗಂ ಕವಿಗಳು ಬಳಸಿರುವರೆಂಬುದನ್ನು ಹಿಂದೊಮ್ಮೆ ಸಂಕ್ಷಿಪ್ತವಾಗಿ ಚರ್ಚಿಸಿರುವುದರಿಂದ ಅದರ ಪುನಃ ಪ್ರಸ್ತಾಪವಿಲ್ಲಿ ಅನಾವಶ್ಯಕವೆನಿಸುವುದು.[೪] ಆದರೆ ತಮಿಳಗಂ ಗಡಿಯಾಚೆ ಇದ್ದ ತಮಿಳೇತರರಾಗಿದ್ದ ಈ ವಡುಗರನ್ನು ನಾವಿನ್ನೂ ಸ್ಪಷ್ಟವಾಗಿ ಗುರುತಿಸಿ ಅವರ ಬಗ್ಗೆ ಹೆಚ್ಚು ಅರಿತುಕೊಳ್ಳಬೇಕಾಗಿದೆ. ಅಗನಾನೂರಿನಲ್ಲಿ ಕನಿಷ್ಠ ಏಳು ಬಾರಿ, ಪುರನಾನೂರು, ಕುರುಂತೊಕೈ ಮತ್ತು ನಟ್ರಿನೈಗಳಲ್ಲಿ ಕನಿಷ್ಠ ಒಂದೊಂದು ಬಾರಿ ಪ್ರಸ್ತಾಪ ಮಾಡಿ, ವಡುಗರ ಬಗ್ಗೆ ಕುತೂಹಲಕಾರೀ ಮಾಹಿತಿಯನ್ನು ಕೆಲವು ಶಂಗಂ ಕವಿಗಳು ಒದಗಿಸಿರುವರು.[೫] ಕವಿ ಕುತವಾಯಿಲ್ ಕೀರತ್ತನಾರ್ ಪ್ರಕಾರ ವಡುಗರ ಪ್ರದೇಶವು ಬಹುದೂರದ ವರೆಗೆ ಚಾಚಿಕೊಂಡ ಉನ್ನತ ಗಿರಿಶಿಖರಗಳ ನಾಡಾಗಿತ್ತು; ಅಬ್ಬರ ಮಾಡುವ ಮದ್ದಳೆಗಳನ್ನು ಬಾರಿಸುತ್ತಾ ಉಗ್ರಭಯಂಕರ ಸಡೆನಾಯಿಗಳೊಡನೆ ಬೇಟೆಯಾಡುವ ಜನಾಂಗಗಳು ಇಲ್ಲಿಯ ನಿವಾಸಿಗಳಾಗಿದ್ದರು. ಅಲ್ಲದೆ ಅಪಾರ ಪ್ರಮಾಣದ ಬರಡು ಭೂಪಟ್ಟಿಯು ವಡುಗ ಮತ್ತು ತಮಿಳಗಂವನ್ನು ಬೇರ್ಪಡಿಸಿತ್ತು.[೬] ಕವಿ ಮಾಮುಲನಾರ್ ಈ ಚಿತ್ರವನ್ನು ಇನ್ನಷ್ಟು ವಿಸ್ತರಿಸಿ ತಮಿಳಗಂ ವಾಯವ್ಯ ಮತ್ತು ಈಶಾನ್ಯ ಪ್ರದೇಶಗಳಲ್ಲಿದ್ದ ಎರಡು ವಡುಗ ವರ್ಗಗಳನ್ನು ಪರಿಚಯಿಸಿಕೊಟ್ಟಿರುವನು. ಮಂಜುಮುಚ್ಚಿ ಆಕಾಶವನ್ನು ಚುಂಬಿಸುತ್ತಿದ್ದ ಗಿರಿಶಿಖರಗಳಲ್ಲಿ ನೆಲಸಿದ್ದ 'ಮುರನ್ ವಿಗುವಡುಗ'ರು ಬಿಲ್ಲುವಿದ್ಯೆಯಲ್ಲಿ ಅತ್ಯಂತ ಪರಿಣತರಾಗಿದ್ದರೆಂದು ಒಂದು ಕವನದಲ್ಲಿ ಅವನು ತಿಳಿಸುವನು.

ತಮಿಳಗಂ ಸಮೃದ್ಧ ಪ್ರದೇಶದಿಂದ ದೂರ, 'ಬಹು-ಬರ್ಜಿ'ಗಳ ವೀರನಾದ ಚೇರಕಟ್ಟುಂವನ್ ರಾಜ್ಯದ ಗಡಿಯಾಚೆ (ಚೇರ ಅಥವಾ ಇಂದಿನ ಕೇರಳ ರಾಜ್ಯದ ಉತ್ತರಕ್ಕೆ)ಗಿದ್ದ ವಡುಗರನ್ನು ಇನ್ನೊಂದು ಕವನದಲ್ಲಿ ಇವನು ಪ್ರಸ್ತಾಪಿಸುತ್ತಾ ಅವರು ತುಳಸೀ ಪುಷ್ಪಮಾಲೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರೆಂದೂ ತಮಿಳರಿಗೆ ಅರ್ಥವಾಗದ ಬೇರೊಂದು ಭಾಷೆ (*ಮೊಳಿ ವೇಯುರ್ ತೇಯಂ*)ಯನ್ನಾಡುತ್ತಿದ್ದರೆಂದೂ ಹೇಳುವನು.[೮] ಈ ಎರಡು ಉಲ್ಲೇಖಗಳೂ ನೀಲಗಿರಿಯಾಚೆಯ ಇಂದಿನ ಕನ್ನಡ ಪ್ರದೇಶದವರನ್ನು ಸೂಚಿಸುತ್ತಿದ್ದವೆಂದು ತೋರುವುವು.

ಎರಡು ದಿಕ್ಕಿನಲ್ಲಿದ್ದ ವಡುಗ ಪಂಗಡಗಳು: ಮಾಮುಲನಾರ್ ಒಳಗೊಂಡು ಇನ್ನೂ ಕೆಲವು ಶಂಗಂ ಕವಿಗಳು ವೇಂಕಟದಾಚೆಗಿದ್ದ ವಡುಗರನ್ನು ಉಲ್ಲೇಖಿಸಿರುವರು. ವೇಂಕಟದಾಚೆಗಿದ್ದ ಪುಲ್ಲಿನಾಯಕನ 'ಪರಭಾಷಾ (ತಮಿಳೇತರ ಭಾಷಾ) ಪ್ರದೇಶ'ವನ್ನು ಮತ್ತು ಯಥೇಚ್ಛವಾಗಿ ಮದ್ಯ ಸೇವಿಸಿ, ಬಿಲ್ಲುಗಳಿಗೆ ಅಂಬುಗಳನ್ನು ಹೂಡಿ ಆರ್ಭಟಿಸುತ್ತಿದ್ದ ವಡುಗರನ್ನು ಮಾಮುಲನಾರ್ ಒಂದೆಡೆ ಉಲ್ಲೇಖಿಸುವನು. ಬಹುಶಃ ಇವರನ್ನೇ 'ವಂಬ ವಡುಗರ್' ಎಂದು ಇಡೆಯನ್ ಶೇಂದನ್ ಕೊಟ್ರಣಾರ್ ಗುರುತಿಸಿದನೆಂದು ಕಾಣುವುದು. ಈ ಪ್ರದೇಶದ ಭದ್ರಕೋಟೆಯಾಗಿದ್ದ 'ಪಾಳಿ'ಯನ್ನು ಚೋಳನು ನೆಲಸಮ ಮಾಡಿ, ವಡುಗರ ತಲೆಗಳನ್ನು ತೆರೆದು ಹಾಕಿ, ದಂತ ತೆರೆದುಕೊಂಡಿದ್ದ ಆನೆಗಳ ರುಂಡಗಳಿಂದ ಈ ಪ್ರದೇಶವನ್ನು ಹೊದಿಸಿದನೆಂದು ಇವನು ವರ್ಣಿಸಿರುವನು.[೯] ವಡುಗರ ಭದ್ರಕೋಟೆಯಾಗಿತ್ತೆನ್ನಲಾದ ಈ 'ಪಾಳಿ'ಯ ಬಗ್ಗೆ ನಾವು ಹೆಚ್ಚು ವಿವರಗಳನ್ನು ಸಂಗ್ರಹಿಸಬೇಕಾಗಿದೆ. ತಾಯಂ ಕಣ್ಣಣಾರ್ ಎಂಬ ಚೋಳನಾಡಿನ ಮತ್ತೊಬ್ಬ ಕವಿಯು ವೇಂಕಟದಾಚೆಯ ವಡುಗನಾಡನ್ನು ಮತ್ತು ಅಲ್ಲಿಯ ವಡುಗರನ್ನು ತುಂಬಾ ನೈಜ ನುಡಿಗಳಲ್ಲಿ ಪರಿಚಯಿಸಿ ಕೊಟ್ಟಿರುವನು. ಗಜಕಾಳಗದಲ್ಲಿ ಸಿದ್ಧಹಸ್ತನಾದ ತೊಂಡೈ ಅಧಿಪತಿಯು ವೇಂಗಡವನ್ನು ದಾಟಿ ತುರುಗಳನ್ನು ಅಪಹರಿಸಿದ ಘಟನೆಯೊಂದನ್ನು ವಿವರಿಸುತ್ತಾ ಅದು ನೀರಿಲ್ಲದ, ರಣರಣ ಬಿಸಿಲಿನ, ಪ್ರದೇಶವಾಗಿತ್ತೆಂದೂ ಅಲ್ಲಿಯ ನಿವಾಸಿಗಳು ಬೆಳ್ಳಕ್ಕಿಯ ಅನ್ನವನ್ನು ಕೊಬ್ಬಿ (ಮಾಂಸ)ನಲ್ಲಿ ಮಿಶ್ರಣ ಮಾಡಿ ತಿನ್ನುತ್ತಿದ್ದರೆಂದೂ ಅವನು ತಿಳಿಸುವನು.[೧೦] ವೇಂಕಟಾದ್ರಿಯ ಉತ್ತರಕ್ಕಿರುವ ಆಂಧ್ರ ಪ್ರದೇಶದ ಪ್ರಕೃತಿ ಚಿತ್ರವನ್ನು ಮತ್ತು ಬದುಕಿನ ಬಗೆಯನ್ನು ಇದಕ್ಕಿಂತಲೂ ಹೆಚ್ಚು ನೈಜವಾಗಿ ವಿವರಿಸುವುದು ಕಷ್ಟ. ಇಂತಹ ನೀರಿಲ್ಲದ ಸುಡುಬಿಸಿಲಿನ ವಡುಗನಾಡಿನ ಮೇಲೆ ದಾಳಿ ಮಾಡಲು ಹೋದ ನಾಯಕನನ್ನು ಸದಾ ತುಳುಕುವ ಕಾವೇರಿ ನದಿಯ ತಂಪು ನೆಲದಲ್ಲಿದ್ದ ಅವನ ಪ್ರಿಯತಮೆಯು ನೆನೆಪಿಸಿಕೊಂಡು ಪರಿತಪಿಸುವುದನ್ನು ಈ ಕವಿಯು ಸೊಗಸಾಗಿ ಚಿತ್ರಿಸಿರುವನು. ಕರ್ವೇರಿಯ ಕಪ್ಪು ಮರುಳಿನ ವರ್ಣವನ್ನು ಹೋಲುವ ಕೂದಲಿನ, ಚೇರನ ಕೊಲ್ಲಿಮಲೈಯಲ್ಲಿ ಸೊಂಪಾಗಿ ಬೆಳವ ಎಳೆ ಬಿದುರಿನಂತಹ ಬಾಹುಗಳ ಈ ನಾಯಕಿಯ ಅಳಲನ್ನು ಪರಿಚಯಿಸುವಾಗ, ಈ ಎರಡು ಪ್ರದೇಶಗಳ ಭೌಗೋಳಿಕ ಹಾಗೂ ಜನಾಂಗೀಯ ವೈವಿಧ್ಯತೆಯನ್ನೂ ಅವನು ಪರಿಚಯಿಸಿಕೊಟ್ಟಿರುವುದು ಗಮನಾರ್ಹ.

ಹೀಗೆ ವೇಂಕಟಾದ್ರಿ ಮತ್ತು ನೀಲಗಿರಿಗಳ ಉತ್ತರಕ್ಕಿದ್ದ ವಡುಗ ಜನಾಂಗಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಚಯಿಸುವುದಲ್ಲದೆ ಅವರಲ್ಲಿದ್ದ ಕೆಲವು ಸಮಾನ ಗುಣಧರ್ಮಗಳನ್ನು ಶಂಗಂ ಕವಿಗಳು ಸೆರೆಹಿಡಿದಿರುವರು. ಕಾವಿರಿಪ್ಪೂಂಪಟ್ಟಿಣತ್ ಕಾರಿಕಣ್ಣನಾರ್ 'ಯುದ್ಧವಿದ್ಯೆಯನ್ನು ಬಿಟ್ಟು ಬೇರೇನನ್ನೂ ಕಲಿಯದ ಈ ವಡುಗರು ಭಯಾನಕ ಬೇಟೆ ನಾಯಿಗಳನ್ನು

ಸಂಗಾತಿಗಳನ್ನಾಗಿ ಮಾಡಿಕೊಂಡ, ಸುದೀರ್ಘ ಹಾಗೂ ಸುಸ್ಪಷ್ಟ ನುಡಿಗಳ ಗಂಡುಗಲಿ' ಗಳಾಗಿದ್ದರೆಂದು ತಿಳಿಸುವನು.[೧೧] ನಡುಕ ಹುಟ್ಟಿಸುವ ಬೇಟೆನಾಯಿಗಳು ಇವರ ಪ್ರೀತಿಯ ಸಂಗಾತಿಗಳಾಗಿದ್ದವೆಂಬುದನ್ನು ಮದುರೈ ಇಳಂ ಗೌಸಿಕಣಾರ್ ಬಹಿರಂಗಪಡಿಸಿರುವನು. ದನಕರುಗಳ ಚರ್ಮವನ್ನು ಹೊದಿಸಿ ಕಟ್ಟಿದ ಗುಡಿಸಲುಗಳಲ್ಲಿ ಅಡಗಿಸಿಟ್ಟ ಸಡೆನಾಯಿಗಳನ್ನು ಬಾಣಬಿಡುವಂತೆ ಛೂ ಬಿಟ್ಟು ದಾರಿಹೋಕರನ್ನು (ತಮ್ಮ ನಾಡನ್ನು ಪ್ರವೇಶಿಸಿದ ಪರಕೀಯರನ್ನು) ಈ ವಡುಗರು ಪೀಡಿಸುತ್ತಿದ್ದರು, ಎಂದು ಇವನು ತಿಳಿಸುವನು.[೧೨].

ವಡುಗರಾದ ಎರುಮೈಊರವರು: 'ವಡುಗರು' ಎಂಬ ಸಾಮಾನ್ಯ ಪದದಿಂದ ತಮಿಳಗಂ ಉತ್ತರ ದಿಕ್ಕಿನ ಜನಾಂಗಗಳನ್ನು ಸ್ಥೂಲವಾಗಿ ಗುರುತಿಸಿ ಅವರ ಪ್ರಾದೇಶಿಕ ಲಕ್ಷಣಗಳನ್ನು ಆಗೊಮ್ಮೆ ಈಗೊಮ್ಮೆ ಸೂಚಿಸಿದರೂ ಈ ಜನಾಂಗಗಳನ್ನಾಗಲೀ ಅವರ ಆಡುಭಾಷೆಗಳನ್ನಾಗಲೀ ಶಂಗಂ ಕವಿಗಳು ಸ್ಪಷ್ಟವಾಗಿ ಹೆಸರಿಸುವುದಿಲ್ಲ. ಇದಕ್ಕೆ ಒಂದೇ ಒಂದು ಅಪವಾದ ಕವಿ ನಕ್ಕೀರರ್ ಎಂದೆನಿಸುವುದು.[೧೩] 'ಎರುಮೈಊರವನು ವಡುಗನಾಗಿದ್ದ ನೆಂದು ಸ್ಪಷ್ಟವಾಗಿ ಹೇಳಿ, ತುರುಗೋಳ್ ಕಾಳಗದಲ್ಲಿ ನಿಷ್ಣಾತನಾದ ಈ ನಾಯಕನು ಕ್ಷೇತ್ರಗಳಲ್ಲಿ ತಂಗಿದ್ದ ದನಕರುಗಳನ್ನು ಸೆರೆಹಿಡಿದೆಳೆದು ತಂದು, ಅವುಗಳನ್ನು ತನ್ನ ಗ್ರಾಮದ ದೊಡ್ಡಿಯಲ್ಲಿ ಕೂಡಿಹಾಕಿದ, ಒಂದು ಚಿತ್ರವನ್ನು ಕೊಡುವನು. ಇದು ತುರುಗೋಳ್ ಪ್ರಸಂಗ ವನ್ನು ಸೂಚಿಸುವುದನ್ನು ಮತ್ತು ಇದರ ಉದ್ದೇಶವು ಎದುರಾಳಿಯನ್ನು ಕದನಕ್ಕೆ ಆಹ್ವಾನಿಸುವು ದಾಗಿತ್ತೆಂಬುದನ್ನು ಹೆಚ್ಚಿಗೆ ವಿವರಿಸಿ ಹೇಳಬೇಕಾಗಿಲ್ಲ. ಅತ್ಯಂತ ಬಲಶಾಲಿಯಾದ (ಪೋರ್ವೈಕ್ಕೋಪ್ಪೆರುವರ್‌ಕಿಳ್ಳಿ) ಒಬ್ಬ ವೀರನನ್ನು ಶಂಗಂ ಕಾಲದಲ್ಲಿ 'ಎರುಮೈಮಜಿಮ್' (ಎಮ್ಮೆಯ ಬಲದವನು ಅಥವಾ ಕೋಣದ ಕಸುವಿನವನು) ಎಂದೇ ಗುರುತಿಸಲಾಗು ತ್ತಿತ್ತೆಂಬುದು ಇಲ್ಲಿ ಗಮನಾರ್ಹ.[೧೪] ಎರುಮೈಯವರಿಂದ ಈ ನುಡಿಯು ಲೋಕಾರೂಢಿ ಯಾಯಿತೋ ಅಥವಾ ಅದಕ್ಕೆ ಬೇರೊಂದು ಕಾರಣವಿತ್ತೋ ಎಂಬುದನ್ನು ಊಹಿಸಿ ಮಾತ್ರ ಗ್ರಹಿಸಲು ಸಾಧ್ಯ.

ಶಂಗಂ ಕಾಲದ ರಾಜಕೀಯದಲ್ಲಿ ಎರುಮೈಯವರ ಸ್ಥಾನ : ವಡುಗನಾಯಕರೆಂದು ಸ್ಪಷ್ಟವಾಗಿ ಗುರುತಿಸಿಕೊಂಡ ಏಕಮೇವ ರಾಜಮನೆತನದವರು ಇವರಾಗಿರುವುದರಿಂದ ಮತ್ತು ಇವರು ಕನ್ನಡ ನಾಡಿಗೆ ನೇರವಾಗಿ ಸಂಬಂಧಪಟ್ಟಿರುವುದರಿಂದ, ಎರುಮೈನಾಯಕರ ಬಗ್ಗೆ ದೊರಕುವ ಮಾಹಿತಿಗಳನ್ನೆಲ್ಲಾ ಸಂಗ್ರಹಿಸಿ, ಅವರ ರಾಜಕೀಯ ಅಂತಸ್ತನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ತಮಿಳಿನ 'ಎರುಮೈ' ಪದದ ಕನ್ನಡ ಅರ್ಥ 'ಎಮ್ಮೆ'; ಇದರಿಂದಾಗಿ 'ಎರುಮೈನಾಡು' ಎರುಮೈಊರು' ಎಂಬ ಪದಗಳು 'ಎಮ್ಮೆಯನಾಡು' 'ಎಮ್ಮೆಯಊರು' ಎಂಬ ಅರ್ಥವನ್ನು ಸಹಜವಾಗಿ ಪಡೆದುಕೊಳ್ಳುವುವು. ಕರ್ನಾಟಕದಲ್ಲಿ ಇಂದಿಗೂ ಪ್ರಚಲಿತವಿರುವ 'ಎಮ್ಮಿಗನೂರು'ಗಳಿಗೆ ಮತ್ತು ತಮಿಳುನಾಡಿನಲ್ಲಿರುವ 'ಎರುಮೈ ನಾಯಕನ್ ಪಟ್ಟಿ' ಮುಂತಾದವುಗಳಿಗೆ ಇವು ಸಮಾನ ಪದಗಳಾಗಿವೆ. ಶಂಗಂ ಕವಿಗಳು 'ಎರುಮೈನಾಟು' ಎಂದು ಗುರುತಿಸಿದ ಪ್ರದೇಶವು ಇಂದಿನ ಮೈಸೂರು ವಲಯ ವಾಗಿತ್ತೆಂದು ಸಂಶೋಧಕರೆಲ್ಲರೂ ಒಮ್ಮತದಿಂದ ಅಂಗೀಕರಿಸಿರುವರು; ಕಾರಣ ಇದರ ಬಗ್ಗೆ ಯಾವ ಬಗೆಯ ವಾದಕ್ಕೂ ಎಡೆ ಇಲ್ಲ. ಮೌರ್ಯರ ಕಾಲದಲ್ಲಿ ಇದನ್ನು ಮಹಿಷಮಂಡಲ ವೆಂದು ಕರೆಯಲಾಗುತ್ತಿತ್ತೆಂಬುದು ಇತಿಹಾಸದಲ್ಲಿ ಇಷ್ಟೇ ಸುಸ್ಪಷ್ಟಗೊಂಡ ಅಂಶ.

ಎರುಮೈ ಅರಸರು ತುರುಕಾಳಗದಲ್ಲಿ ನಿಷ್ಣಾತರಾಗಿದ್ದರೆಂಬುದನ್ನು ಈಗಾಗಲೇ ನಿದರ್ಶಿಸಿದ ನಕ್ಕೀರರ್ ಕವನವು ಸಾಬೀತುಪಡಿಸುವುದು. ಆದರೆ ಅವರು ಈ ಬಗೆಯ ಚಿಕ್ಕಪುಟ್ಟ ಸಾಹಸ ಕೃತ್ಯಗಳಿಗೆ ಮಾತ್ರ ತಮ್ಮನ್ನು ತಾವು ಸೀಮಿತಗೊಳಿಸಿಕೊಳ್ಳದೆ, ಸಂಗಂ ಕಾಲದ ತಮಿಳು ರಾಜಕೀಯದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿ, ದೊಡ್ಡ ದೊಡ್ಡ ಯುದ್ಧಗಳನ್ನು ಮಾಡಿದ ಕಲಿಗಳಾಗಿದ್ದರೆಂಬುದರ ಬಗ್ಗೆ ಸ್ಪಷ್ಟ ಸಾಕ್ಷ್ಯಾಧಾರಗಳು ದೊರಕುವುವು.

ಇಂತಹ ಒಂದು ಮಹಾಯುದ್ಧವು ಮದುರೈ ಪಾಂಡ್ಯರಾಜನಾದ ನೆಡುಂಚೆಳಿಯನ್ ಮತ್ತು ತಮಿಳಗಂನ ಉಳಿದೆಲ್ಲ ಏಳು ರಾಜ್ಯಶಕ್ತಿಗಳ ನಡುವೆ ಆದದ್ದನ್ನು ಕನಿಷ್ಠ ಹದಿಮೂರು ಪಾಂಡ್ಯಕವಿಗಳು ಉಲ್ಲೇಖಿಸಿ, ಈ ಯುದ್ಧದ ಯಶಸ್ವೀ ವೀರನಾದ ನೆಡುಂಚೆಳಿಯನ್ ಪ್ರತಾಪವನ್ನು ಕೊಂಡಾಡಿದ್ದಾರೆ.[೧೫] ಈ ಯುದ್ಧ ನಡೆದದ್ದು ಅಲಂಕಾಣಾಮ್ ಅಥವಾ ತಲೈಯಾಲಂಕಾಣತ್ತುವಿನಲ್ಲಿ. ಇದು ನಡೆದಾಗ ನೆಡುಂಚೆಳಿಯನ್ ಇನ್ನೂ ಬಾಲಕನಾಗಿದ್ದು, ಹಾಲುಬಿಟ್ಟು ಬಾನ ಉಣ್ಣಲು ಆಗ ತಾನೇ ತೊಡಗಿದ್ದನೆಂದು ಕವಿ ಇಡೈಕುಣ್ರುಕೀಬಾರ್ ತಿಳಿಸುವನು.[೧೬] ಹಗುರು ಮಾತಿನಿಂದ ಈ ಪೋರನನ್ನು ಜರಿಯುತ್ತಾ ದೊಡ್ಡ ದೊಡ್ಡ ರಥ, ಆನೆ, ಅಶ್ವ ಮತ್ತು ಕಾಲ್ಬಳಗಳೊಡನೆ ಎರಿಬಂದ ಸಪ್ತಕೂಟದ ಅಪಾರ ದಳವನ್ನು ಕಂಡು, 'ನನ್ನ ಛತ್ರದಡಿಯ ಪ್ರಜೆಗಳು ಬೇಕಾದರೆ ನನ್ನನು ಮಹಾ ಕ್ರೂರಿಯೆಂದು ಬಗೆದು ನನ್ನ ವಂಶವನ್ನು ಮೂದಲಿಸಲಿ, ಕವಿಶ್ರೇಷ್ಠನಾದ ಮಾಂಗುಡಿ ಮರದನ್ ಕೂಡಾ ನನ್ನನ್ನು ಹೊಗಳಿ ಹಾಡುವುದನ್ನು ನಿಲ್ಲಿಸಲಿ, ನಾನು ಮಾತ್ರ ಅವರೆಲ್ಲರ ಸೊಲ್ಲನ್ನಡಗಿಸದೆ ಬಿಡೆನು', ಎಂದು ಪ್ರತಿಜ್ಞೆ ಮಾಡುತ್ತಾ ಯುದ್ಧರಂಗಕ್ಕಿಳಿದದ್ದನ್ನು ಸ್ವತಃ ಕವಿಯಾದ ನೆಡುಂಚೆಳಿಯನ್ ರಚಿಸಿದ ಒಂದು ಕವನದಿಂದ ಅರಿತುಕೊಳ್ಳುವೆವು.[೧೭] ಇವನ ವಿರುದ್ಧ ಹರಿಹಾಯ್ದು ಬಂದವರಲ್ಲಿ ಸಂಗಂ ಕಾಲದ ಹೆಸರಾಂತ ಇಬ್ಬರು ಕಿರೀಟಧಾರಿ ಅರಸರು (ಚೇರ ಮತ್ತು ಚೋಳ), ಮಹಾಪರಾಕ್ರಮಿಗಳಾದ ಐವರು ಪೆರುವೇಳಿರ್‌ಗಳು ಇದ್ದರು.[೧೮].

ಈ ಯುದ್ಧದಲ್ಲಿ ತೊಡಗಿಸಿಕೊಂಡ 'ಏಳುನಾಯಕರ'ನ್ನು ಸುಮಾರು ಅರ್ಧ ಡಜನ್ ಕವನಗಳಲ್ಲಿ ಉಲ್ಲೇಖಿಸಲಾಗಿದ್ದರೂ ಅವರಾರನ್ನೂ ಈ ಕವಿಗಳು ಹೆಸರಿಸುವುದಿಲ್ಲ. ಇವರೆಲ್ಲರನ್ನು ಗುರುತಿಸಿ ಹೆಸರಿಸಿದ ಕೀರ್ತಿಯು ಕವಿ ಮದುರೈ ನಕ್ಕೀರರ್‌ಗೆ ಮಾತ್ರ ಸಲ್ಲುವುದೆನ್ನಬಹುದು.[೧೯] ಚೇರ, ಚೋಳರಲ್ಲದೆ, ತಿದಿಯನ್, ಎಜಿನಿ, ಎರುಮೈಊರನ್, ಇರಂಕೋವೇಣ್ಮಾನ್ ಮತ್ತು ಪೊರುವನ್ ಎಂಬ ಐವರು ನಾಯಕರುಗಳು ಈ ಒಕ್ಕೂಟದಲ್ಲಿ ಸೇರಿದ್ದರೆಂದು ಅವನು ಸ್ಪಷ್ಟಗೊಳಿಸಿರುವನು. ಅಂದಿನ ಆಳರಸರಾದ ಚೇರನನ್ನಾಗಲೀ ಚೋಳನನ್ನಾಗಲೀ ಈ ಕವಿ ಹೆಸರಿಸುವುದಿಲ್ಲ. ಆದರೆ ಉಳಿದವರನ್ನು ಅವರ ವ್ಯಕ್ತಿನಾಮದಿಂದಲೋ ಇಲ್ಲವೇ ವಂಶನಾಮದಿಂದಲೋ ಗುರುತಿಸಿ ಅವರ ಪ್ರಮುಖ ಗುಣಗಳನ್ನು ಪರಿಚಯಿಸಿಕೊಡುವನು. ತಿದಿಯನ್ ವೀರರಲ್ಲಿಯೇ 'ಅತ್ಯುಗ್ರ'ನೆನಿಸಿದ್ದನು; ಎಜಿನಿ 'ಗಜಪಡೆಯನ್ನು ವಶಮಾಡಿಕೊಳ್ಳುವುದರಲ್ಲಿ ನಿಷ್ಣಾತನೂ ಕನಕಾಭರಣ ಪ್ರಿಯನೂ' ಆಗಿದ್ದನು; ಎರುಮೈಊರವನ್ 'ನಾರಿನ ಜರಡಿ(ಪನ್ನಾಡೆ)ಯಿಂದ ಸೋಸಿ ಸಿದ್ಧಪಡಿಸಿದ ಸಿಹಿಸೇಂದಿಯಸೇವನಾಸಕ್ತ'ನಾಗಿದ್ದನು; ಇರುಂಕೋವೇಣ್ಮಾರ್ 'ಜೇನುತುಪ್ಪದ ಕಂಪುಸೂಸುವ ಎದೆಯಮೇಲೆ ಚಂದನ ಲೇಪಿಸಿಕೊಳ್ಳುವ ಹವ್ಯಾಸಿ'ಯಾಗಿದ್ದನು;

ಪೊರುವಣ್ 'ಶ್ರೇಷ್ಠ ರಥಗಳನ್ನೇರಿ ಕಾಳಗ' ಮಾಡಲು ಆತುರನಾಗಿದ್ದನು ಎಂದು ನಕ್ಕೀರರ್ ತಿಳಿಸುವನು.

ಈ ಐವರು 'ಪೆರುವೇಳಿರ್'ಗಳಲ್ಲಿ ಯಾರು ತಮಿಳಗಂ ಪ್ರದೇಶದವರಾಗಿದ್ದರು ಮತ್ತು ಯಾರು ಅದರಾಚೆಯ ವಡುಗರಾಗಿದ್ದರು ಎಂಬುದನ್ನು ಇನ್ನೂ ದೃಢಪಡಿಸಿಕೊಳ್ಳಬೇಕಾಗಿದೆ. ಇವರಲ್ಲಿ ಕೆಲವರನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದ್ದರೂ ವಡುಗಪ್ರದೇಶಕ್ಕೆ ಅವರನ್ನು ಪ್ರಸ್ತುತಗೊಳಿಸಿರುವ ವಿವರಗಳಾವೂ ನನಗೆ ಸಿಗುತ್ತಿಲ್ಲ. ಈ ಬಗ್ಗೆ ನನ್ನ ಅಭ್ಯಾಸದಲ್ಲಿ ದೊರಕಿರುವ ಕೆಲವು ವಿವರಗಳು ಇಂತಿವೆ:

ಈ ಐವರು 'ಪೆರುವೇಳಿರ್'ಗಳಲ್ಲಿ ಎರುಮೈಯೂರವರು ಮೈಸೂರು ಪ್ರದೇಶದವರೆಂಬುದರಲ್ಲಿ ಅನುಮಾನವಿಲ್ಲ, ಆದರೆ ಇವರ ಕಾರ್ಯಕ್ಷೇತ್ರ ಅಥವಾ ಕದನಕ್ಷೇತ್ರವನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ, ಶಂಗಂ ಕಾಲದ ವೇಳಿರ್‌ಗಳಿಗೆ ತಮ್ಮದೆಂಬ ಪ್ರಾದೇಶಿಕ ಕ್ಷೇತ್ರಗಳಿದ್ದಿರಲು ಸಾಧ್ಯ, ಆದರೆ ಅವರಿಗೆ ನಿಶ್ಚಿತವಾದ ಕದನಕಾರ್ಯದ ಗಡಿಗಳಿರಲಿಲ್ಲವೆಂದು ತೋರುವುದು, ಏಕೆಂದರೆ ಒದಗಿ ಬಂದ ಅವಕಾಶಗಳನ್ನೆಲ್ಲಾ ಬಳಸಿಕೊಂಡು ತಮ್ಮ ರಾಜಕೀಯ ಹಾಗೂ ಸಾಮಾಜಿಕ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದು, ಅದಕ್ಕೆ ತಕ್ಕಂತೆ ತಮ್ಮ ರಾಜಕೀಯ ಮಿತ್ರತ್ವವನ್ನೂ ಶತ್ರುತ್ವವನ್ನೂ ಬದಲಿಸಿಕೊಳ್ಳುವುದು, ಅವರ ಪ್ರವೃತ್ತಿಯಾಗಿತ್ತು.

ಒಂದು ಕಾಲದಲ್ಲಿ 'ಅಯಿರಿ' ನದಿಯು ಎರುಮೈಯೂರವರ ರಾಜ್ಯದ ಗಡಿಯನ್ನು ಗುರುತಿಸುತ್ತಿತ್ತೆಂದು ತಿಳಿದುಬರುವುದು.[೨೦] ದಟ್ಟಕಾಡಿನ ಮಧ್ಯದಲ್ಲಿದ್ದ ಈ ಪ್ರದೇಶವು ನವಿಲುಗಳ ತಾಣವಾಗಿತ್ತೆಂಬುದನ್ನು ಬಿಟ್ಟರೆ 'ಅಯಿರಿಯಾಱು'ವಿನ ಬಗ್ಗೆ ಹೆಚ್ಚಿನ ವಿವರಗಳು ನಮಗೆ ದೊರಕುವುದಿಲ್ಲ. ಈ ನದಿಗೂ ಅಯಿರೈ (ಚೇರನಾಡಿನ ಉತ್ತರಕ್ಕೆ, ಪಳನಿಯ ಪಶ್ಚಿಮಕ್ಕೆ, ಇರುವ ಐವಾರುಮಲೈ) ಬೆಟ್ಟಪ್ರದೇಶಕ್ಕೂ ಏನಾದರೂ ಸಂಬಂಧವಿದ್ದರೆ, ಅದನ್ನು ಇಂದಿನ ದಿಂಡಿಗಲ್ ಜಿಲ್ಲೆಯ ವಾಯವ್ಯ ಭಾಗದಲ್ಲಿ ಗುರುತಿಸಬೇಕಾಗುವುದು. ಶಂಗಂ ಕಾಲದ ಈ ನದಿ ಎಲ್ಲೇ ಹರಿದಿರಲಿ, ದಿಂಡಿಗಲ್ ಪ್ರದೇಶದ ವರೆಗೂ ಎರುಮೈ ನಾಯಕರು ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದರೆಂಬುದಕ್ಕೆ ಬಲವಾದ ಸಾಂದರ್ಭಿಕ ಸಾಕ್ಷಿಗಳು ನೆರವಿಗೆ ಬರುವವು. ಪಳನಿಯ ಸಮೀಪ, ಸತ್ತಂ ಮತ್ತು ದಿಂಡಿಗಲ್‌ಗಳ ನಡುವೆ, 'ಎರುಮೈನಾಯಕನ್ ಪಟ್ಟಿ' ಎಂಬ ಗ್ರಾಮವು ಇಂದಿಗೂ ಉಳಿದು ಬಂದಿರುವುದು ಇದಕ್ಕೊಂದು ನಿದರ್ಶನ.[೨೧] ಎರುಮೈ ರಾಜ್ಯವು ದಿಂಡಿಗಲ್ ವರೆಗೂ ವಿಸ್ತರಿಸಿತ್ತೋ ಇಲ್ಲವೋ ತಿಳಿಯದು, ಆದರೆ ಅವರ ಕಾರ್ಯ(ಕದನ)ಕ್ಷೇತ್ರವು ಅದನ್ನು ತಲುಪಿತ್ತೆಂಬುದರಲ್ಲಿ ಅನುಮಾನವಿಲ್ಲ. ಉಳಿದ ಅರಸರೊಡಗೂಡಿ ಇವನು ಪಾಂಡ್ಯನ ವಿರುದ್ಧ ಹೋರಾಡಿದ್ದು ತಲೈಯಾಲಂಕಾಣಂನಲ್ಲಿ ಈಗಾಗಲೇ ಗಮನಿಸಿದ್ದೇವೆ. ಇದು ತಂಜಾವೂರು ಜಿಲ್ಲೆಯ ನಿಟಾಮಂಗಳ ಎಂದು ಗುರುತಿಸಲಾಗಿರುವುದರಿಂದ ಎರುಮೈನಾಯಕರ ಕಾರ್ಯಕ್ಷೇತ್ರವು ತಂಜಾವೂರು ಜಿಲ್ಲೆಯವರೆಗೂ ವಿಸ್ತರಿಸಿತ್ತೆನ್ನಲು ಯಾವ ಆತಂಕವೂ ಇಲ್ಲ.[೨೨]

ಶಂಗಂ ಕಾವ್ಯದಲ್ಲಿ ಬರುವ ಎಲ್ಲ ವೇಳಿರ್‌ಗಳ ಚರ್ಚೆ ನಮಗಿಲ್ಲಿ ಅಪ್ರಸ್ತುತ, ಆದರೆ ಪಾಂಡ್ಯನನ್ನು ವಿರೋಧಿಸಿ ನಿಂತ 'ಎೞಿನಿ'ಯನ್ನು ಮಾತ್ರ ಹೀಗೆ ನಿರ್ಲಕ್ಷಿಸುವಂತಿಲ್ಲ. ಇವನು ಪ್ರಸಿದ್ಧ ನಾಯಕನೂ ಕವಯಿತ್ರಿ ಅವ್ವೈಯಾರ್ ಪೋಷಕನಾದ ಅಂಚಿಯ ಪುತ್ರನೂ ಮಾತ್ರನಾಗಿರದೆ ಕನ್ನಡ ನಾಡಿಗೆ ಅಂಟಿಕೊಂಡ ಪ್ರದೇಶದವನಾಗಿದ್ದನು. ಇವನ ಮತ್ತೊಂದು

ಹೆಸರು ಅತಿಯಮಾನ್ ನೆಡುಮಾನ್ ಅಂಜಿ...

ಹೆಸರು ಅತಿಯಮಾನ್ ಪೊಕುಟ್ಟೆಳಿಣ ಎಂದು.[೧೮] ಶಂಗಂ ಕಾಲದ ಅತ್ಯಂತ ಖ್ಯಾತ ಕವಯಿತ್ರಿಯಾದ ಅವ್ವೈಯ್ಯಾರ್ ಇವನನ್ನು ಕುರಿತು ಹದಿನೇಳು ಕವನಗಳನ್ನು ಬರೆದಿರುವಳು.[೧೯] ಅತಿಯಮಾನರು ದಿಂಡಿಗಲ್ ಜಿಲ್ಲೆಯ ಕುದುರೆಮಲೈ ಪ್ರದೇಶದ ಮಳವರ ನಾಯಕರಾಗಿ, ತಕಡೂರನ್ನು (ಧರ್ಮಪುರಿಯನ್ನು) ಕೇಂದ್ರವನ್ನಾಗಿಸಿಕೊಂಡು, ಬಹುಕಾಲ ಆಳಿದ ವಿವರಗಳು ನಮಗೆ ದೊರಕುವುವು.[೨೦]

ಬಹುಭಾಷಾ ಪ್ರದೇಶವಾದ ತಕಡೂರು: ತಮಿಳುನಾಡಿನ ವಿಲುಪ್ಪುರಂ ಜಿಲ್ಲೆಯ ತಿರುಕ್ಕೋವಲೂರ್ ಬಳಿ ಜಂಬೈ ಎಂಬಲ್ಲಿ ಕ್ರಿ.ಪೂ. ೧ನೆಯ ಶತಮಾನದ ಒಂದು ತಮಿಳು ಬ್ರಾಹ್ಮೀ ಶಾಸನ ದೊರಕಿದ್ದು ಈ ಶಾಸನದ ಆಧಾರದ ಮೇಲೆ ಅಂಜಿ ಮತ್ತು ಅವನ ಪುತ್ರ ಎಜಿನಿ ಅತಿಯಮಾನ ವಂಶಜರಾಗಿದ್ದರೆಂದೂ ಅವರ ಆಡಳಿತ ಕೇಂದ್ರವು ತಕಡೂರು (ಇಂದಿನ ಧರ್ಮಪುರಿ) ಆಗಿತ್ತೆಂದೂ ತೀರ್ಮಾನಿಸಲಾಗಿದೆ.[೨೧] 'ಸತಿಯಪುತ'ರೆಂದು ಹೆಸರಾಂತರಾದ ಇವರು ಶಂಗಂ ಕಾಲದ ಪ್ರಧಾನ 'ವೇಳಿರ್'ಗಳಲ್ಲಿ ಒಬ್ಬರಾಗಿದ್ದರೆನ್ನುವುದರಲ್ಲಿ ಅನುಮಾನವಿಲ್ಲ.

ನೆಡುಂಚೆಳಿಯನ್ ಮತ್ತು ಸಪ್ತದಳಕೂಟದ ನಡುವೆ ಕಾಳಗವು ಸಂಭವಿಸಿದಾಗ ತಕಡೂರಿನ (ಧರ್ಮಪುರಿ) ಸುತ್ತಮುತ್ತಲ ಪ್ರದೇಶವು ತಮಿಳರ ಏಕಸ್ವಾಮ್ಯದಲ್ಲಿರದೆ 'ಬಹುಭಾಷಿಕರ ಪ್ರದೇಶ'ವಾಗಿತ್ತೆಂದು ಶಂಗಂ ಕಾಲದ ಸುಪ್ರಸಿದ್ಧ ಕವಿಗಳಲ್ಲಿ ಒಬ್ಬನಾದ ಪರಣರ್ ತಿಳಿಸುವನು.[೨೨] ಇಂದಿನ ತಮಿಳುನಾಡಿನ ಗಡಿಜಿಲ್ಲೆಯಾದ ಧರ್ಮಪುರಿಯು ಕರ್ನಾಟಕದ ಗಡಿಜಿಲ್ಲೆಯಾದ ಚಾಮರಾಜನಗರಕ್ಕೆ ಹೊಂದಿಕೊಂಡಿದ್ದು, ಈ ಎರಡು ಪ್ರಾದೇಶಿಕ ಘಟಕಗಳನ್ನು ಕಾವೇರಿ ನದಿಯು ಬೆಸೆದಿರುವುದು ಇಲ್ಲಿ ಗಮನಾರ್ಹ. ಅಂದರೆ ಧರ್ಮಪುರಿಯಿಂದ ಪಶ್ಚಿಮದ ಅರಬ್ಬೀಸಾಗರದ ವರೆಗೆ ಚಾಚಿರುವ (ಇಂದಿನ ಚಾಮರಾಜ ನಗರ, ಮಂಡ್ಯ-ಮೈಸೂರು, ಮಡಿಕೇರಿ ಮತ್ತು ಅದರಿಂದಾಚೆಯ ಕೇರಳ ಮತ್ತು ದಕ್ಷಿಣ ಕನ್ನಡದ) ಪ್ರದೇಶಗಳು ಆ ಕಾಲದಲ್ಲಿ ಬಹು ಭಾಷಾ ಜನಾಂಗಗಳ ವಾಸಸ್ಥಾನಗಳಾಗಿದ್ದವೆಂದೂ ಇಂತಹ ಜನಾಂಗಗಳ ನಾಯಕರುಗಳಲ್ಲಿ ಎರುಮೈ ಮತ್ತು ಅತಿಯಮಾನರು ಹೆಸರಾಂತ ವೇಳಿರ್‌ಗಳಾಗಿದ್ದರೆಂದೂ ನಾವು ಭಾವಿಸಬಹುದು. ತಮಿಳು ರಾಜಕೀಯ ದೊಡನೆ ಗುರುತಿಸಿಕೊಂಡ ಈ ತಮಿಳೇತರ ಪ್ರದೇಶದ (ವಡುಗ) ನಾಯಕರು ತಮಿಳಿಗೆ ಕೊಟ್ಟ ಸ್ಥಾನವನ್ನು ತಮ್ಮ ತಾಯ್ನುಡಿಗೂ ಅಲ್ಲದೆ ಸುತ್ತಮುತ್ತಲಲ್ಲಿ ಪ್ರಸಾರದಲ್ಲಿದ್ದ ಜನಾಂಗ ನುಡಿಗಳಿಗೂ ಕೊಟ್ಟಿದ್ದರೆಂಬುದು ಇಲ್ಲಿ ಸ್ಪಷ್ಟಗೊಳ್ಳುವುದು.

ಶಂಗಂ ಸಾಹಿತ್ಯಕ್ಕೆ ಎರುಮೈಯವರ ಕೊಡುಗೆ: ಚೇರ ಮತ್ತು ಚೋಳರಲ್ಲದೆ 'ಸತಿಯಪುತ'ರಂಥವರಿಗೆ ಸಮಾನರೆನಿಸಿ, ಪಾಂಡ್ಯರ ವಿರುದ್ಧ ಹೋರಾಡಿದ ಎರುಮೈ ನಾಯಕರ ರಾಜಕೀಯ ಅಂತಸ್ತು, ಶಂಗಂ ಕಾಲದ 'ಪೆರುವೇಳಿರ್'ಗಳಲ್ಲಿ ಯಾರಿಗೂ ಕಡಿಮೆಯದಾಗಿರಲಿಲ್ಲವೆಂಬುದನ್ನು ಗಮನಿಸುವುದವಶ್ಯ. ಶ್ವೇತಛತ್ರ ಮತ್ತು ರಾಜಡಿಂಡಿಮದ ಗೌರವವನ್ನು ಪಡೆದಿದ್ದ ಇವರು ತಮ್ಮ ಕದನ ಕಲಾಪವನ್ನು ತಮಿಳಗಂ ಹೃದಯಭಾಗವಾದ ಕಾವೇರಿ ಮತ್ತು ವೈಗೈ ನದಿಯುವರೆಗೂ ವಿಸ್ತರಿಸಿಕೊಂಡಿದ್ದರು ಮಾತ್ರವಲ್ಲ, ಶಂಗಂ ಕಾಲದ ಪ್ರಸಿದ್ಧ ರಾಜಮನೆತನಗಳಂತೆ ಇವರೂ ಶಂಗಂ ಕವಿಗಳನ್ನು ಪೋಷಿಸಿ ತಮ್ಮ ಜೇಷ್ಠತೆಯನ್ನು ಮೆರೆದಿದ್ದರು. ಈ ನೆಲದವರೇ ಆದ 'ಎರುಮೈವೆಳಿಯನಾರ್' ಮತ್ತು ಅವನ ಪುತ್ರ

(ಮರ್ಕಣಾರ್) 'ಕಟಲಣಾರ್' ಎಂಬ ಇಬ್ಬರು ಕವಿಗಳು 'ಎರುಮೈವೆಳಿ' ಗ್ರಾಮದಲ್ಲಿ ಜನಿಸಿದ್ದರು. ಈ ತಂದೆ ಮಗ ರಚಿಸಿದ ನಾಲ್ಕು ಕವನಗಳು ಶಂಗಂ ಭಂಡಾರದಲ್ಲಿ ಪ್ರವೇಶ ಪಡೆದುಕೊಂಡಿರುವುವು. ಇವುಗಳಲ್ಲಿ ಮೂರು ಕವನಗಳನ್ನು ರಚಿಸಿದ ಕೀರ್ತಿಯು ತಂದೆಗೆ ಸಂದರೆ, ಉಳಿದೊಂದನ್ನು ರಚಿಸಿದ ಕೀರ್ತಿಯು ಮಗನಿಗೆ ಸಲ್ಲುವುದು. ಹಿರಿಯನ ಒಂದು ಗೀತೆಯು ಪ್ರೇಮಪ್ರಕರಣಕ್ಕೂ ಎರಡು ಗೀತೆಗಳು ಶೌರ್ಯಪ್ರದರ್ಶನಕ್ಕೂ ಸಂಬಂಧಿಸಿದ್ದರೆ ಕಿರಿಯನ ಗೀತೆಯು ಪ್ರೇಮಪ್ರಕರಣಕ್ಕೆ ಸೀಮಿತಗೊಂಡಿದೆ.[೨೮] ಇವರಿಬ್ಬರ ಕಾವ್ಯಗಳ ಹಿಂತೆರೆಯಲ್ಲಿ ಕಂಡುಕೊಂಡಿರುವವು ಕಾನನದ ಸಂಪತ್ತು ಮತ್ತು ಬರಡುಭೂಮಿಯ ಬೇಗುದಿ; ಕಾವ್ಯರಂಗದಲ್ಲಿ ಕಾಣಿಸಿಕೊಂಡು ಕಣ್ಮರೆಯಾಗುವ ಪಾತ್ರಗಳು - ಕಾಡುಬೆಕ್ಕು, ಕಾಡುಕರಡಿ, ಹುತ್ತದ ಸುತ್ತ ಝೇಂಕರಿಸುವ ಮಿನುಗುಹುಳುಗಳು, ಮಳೆಗಾಲದ ಮಿಂಚು, ಕಮ್ಮಾರನ ತಿದಿ ಮತ್ತು ಅವನ ಬಡಿಗಲ್ಲು.

ಒಳನುಡಿ-ಹೊರನುಡಿ: ತಮಿಳು ಸಾಹಿತ್ಯಕ್ಕೆ ವಡುಗರು ಕೊಟ್ಟ ಪ್ರೋತ್ಸಾಹದ ಬಗ್ಗೆ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಏಕೆಂದರೆ ಲಿಪಿಮೂಲಕ ಗುರುತಿಸಿಕೊಂಡಿದ್ದ ಸಾಹಿತ್ಯಿಕ ಹಾಗೂ ಸಂಪರ್ಕಮಾಧ್ಯಮದಲ್ಲಿ ಅಂದಿಲ್ಲಿ ತಮಿಳಿಗೆ ಏಕಸ್ವಾಮ್ಯವಿದ್ದು, ಆಸ್ಥಾನ ಭಾಷೆಯಾಗಿದ್ದ ತಮಿಳಿನಲ್ಲಿ ಸ್ಪಂದಿಸುವುದು ತಮಿಳು ರಾಜ್ಯಗಳೊಡನೆ ಸಂಪರ್ಕದಲ್ಲಿದ್ದ ಅಂದಿನ ವಡುಗರಿಗೆ ಅನಿವಾರ್ಯವಾಗಿತ್ತು. ವ್ಯವಹಾರಿಕ ಮತ್ತು ಸಾಹಿತ್ಯಿಕ ಭಾಷೆಗಳು ಕೈಕೈ ಹಿಡಿದು ಸಹಬಾಳ್ವೆ ಮಾಡಿರುವುದನ್ನು ಇತಿಹಾಸದುದ್ದಕ್ಕೂ ನಾವು ಕಾಣುವೆವು. ಸ್ಥಳೀಯ ವ್ಯವಹಾರ, ಆಂತರಿಕ ಆಡಳಿತ, ಕೌಟುಂಬಿಕ, ಗ್ರಾಮೀಣ ಮತ್ತು ಜನಪದೀಯ ಕಲಾಪ, ಮುಂತಾದವುಗಳು ಸಾಮಾನ್ಯವಾಗಿ ದೇಸೀ ಮಾಧ್ಯಮಗಳನ್ನು ಹೆಚ್ಚು ಅವಲಂಬಿಸಿದ್ದರೆ, ಸಾಹಿತ್ಯಿಕ ಹಾಗೂ ಅಂತರ-ಪ್ರಾದೇಶಿಕ ಸಂಪರ್ಕಕ್ಕೆ ಸಾಮಾನ್ಯವಾಗಿ ಮಾರ್ಗೀ ಮಾಧ್ಯಮವನ್ನು ಬಳಸಿಕೊಳ್ಳಲು ಹೆಚ್ಚು ಒಲವನ್ನು ತೋರಿಸಿರುವುದನ್ನು ನಾವು ಇತಿಹಾಸದ ಅನೇಕ ಘಟ್ಟಗಳಲ್ಲಿ ಕಾಣುವೆವು. ಇದೊಂದು ಕಡ್ಡಾಯದ ನಿಯಮವಾಗಿರಲಿಲ್ಲ, ಸಹಜವಾಗಿ ಬೆಳೆದುಕೊಂಡ ಒಲವಾಗಿತ್ತು. ಕನ್ನಡದ ನೆಲದಲ್ಲಿ ರಾಜ್ಯ ಕಟ್ಟಿ ಸಮ್ರಾಟ ಹಂತಕ್ಕೇರಿದ ಕದಂಬ, ಬದಾಮಿ ಚಾಳುಕ್ಯ ಮತ್ತು ರಾಷ್ಟ್ರಕೂಟರು ಸಂಸ್ಕೃತಕ್ಕೆ ಕೊಟ್ಟ ಸ್ಥಾನವನ್ನು ಅರ್ಥ ಮಾಡಿಕೊಂಡರೆ ಇವರೆಲ್ಲರಿಗಿಂತ ಪೂರ್ವಕಾಲದಲ್ಲಿದ್ದ ಕನ್ನಡ ಪ್ರದೇಶದ ರಾಜಕೀಯ ಶಕ್ತಿಯಾದ ಎರುಮೈಯವರು ತಮಿಳಿಗೆ ಕೊಟ್ಟ ಸ್ಥಾನವನ್ನು ಹೆಚ್ಚು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದು.

ಎರುಮೈಯವರು ಮತ್ತು ತಮಿಳುಬ್ರಾಹ್ಮೀ: ಕ್ರಿಸ್ತಪೂರ್ವಕಾಲದ ದಕ್ಷಿಣ ಭಾರತದಲ್ಲಿ ಲಿಪಿರಹಿತ ಜನಾಂಗಗಳಿಗೆ ತಮ್ಮ ಬದುಕಿನ ಬಗೆಯನ್ನೂ ಭಾವನೆಯನ್ನೂ ಮೌಖಿಕವಾಗಿ ಅಭಿವ್ಯಕ್ತಿಗೊಳಿಸಲು ಅವರವರ ತಾಯ್ನುಡಿಗಳಿದ್ದುವು, ಆದರೆ ತಮ್ಮ ಸಾಧನೆಗಳನ್ನು ದಾಖಲಿಸಿಡಲು, ರಕ್ಷಿಸಲು ಮತ್ತು ಅವನ್ನು ಶಾಶ್ವತಗೊಳಿಸಲು ಅವರಿಗಿದ್ದ ಏಕಮೇವ ಮಾಧ್ಯಮವೆಂದರೆ ಪ್ರೌಢಾವಸ್ಥೆ ಮುಟ್ಟಿದ್ದ ತಮಿಳು. ಎರಮೈಯವರು ಕೂಡಾ ಆಂತರಿಕ ವ್ಯವಹಾರಗಳನ್ನು ತಮ್ಮ ತಾಯ್ನುಡಿಯಲ್ಲಿ ನಡೆಸುತ್ತಾ ತಮಿಳನ್ನು ಸಂಪರ್ಕಭಾಷೆಯನ್ನಾಗಿ ಮಾಡಿಸಿಕೊಂಡ ಸಾಧ್ಯತೆಗಳುಂಟು. ತಮಿಳೇತರರಾದ ಇವರ ತಾಯ್ನುಡಿಯ ಸ್ಪಷ್ಟ ಸುಳಿವು ನಮಗೆ ದೊರಕುವುದಿಲ್ಲ - ಕಾರಣ ಅದು ಯಾವುದಾಗಿತ್ತು ಎಂಬುದನ್ನು ನಿರ್ಧರಿಸಲು

ಹೆಚ್ಚಿನ ಮಾಹಿತಿಗಾಗಿ ಕಾಯಬೇಕಾಗಿದೆ. ಆದರೆ ತಮಿಳಗಂ ಕಾರ್ಯಕ್ಷೇತ್ರದಲ್ಲಿಯು ತಮ್ಮ ವ್ಯವಹಾರಕ್ಕೆ ಅವರು ತಮಿಳುಬ್ರಾಹ್ಮೀ ಬಳಸಿಕೊಂಡರೆಂಬುದಕ್ಕೆ ಅವರು ಕೊರೆಸಿದ ಶಾಸನವೊಂದು ಸಾಕ್ಷಿ ಒದಗಿಸುವುದು. ಪ್ರಾಗೈತಿಹಾಸ ಕಾಲದ ಕೊನೆಯ ಅಂಚಿನಲ್ಲಿ, ತಮಿಳಗಂ ಪ್ರದೇಶದ ಹೊರಾಂಚಿನಲ್ಲಿದ್ದ ಲಿಪಿರಹಿತ ವಡುಗ ಜನಾಂಗವೊಂದು ಮಾಡಿದ ಪ್ರಪ್ರಥಮ ಸಾಧನೆ ಇದೆನ್ನಬಹುದು. ಇದರಿಂದಾಗಿ ಎರುಮೈಯರವರಿಗೆ ಲಿಖಿತ ಇತಿಹಾಸದಲ್ಲಿ ಶಾಶ್ವತ ಸ್ಥಾನವು ದೊರಕಿದ್ದು ಮಾತ್ರವಲ್ಲದೆ, ಕನ್ನಡ ಪ್ರದೇಶದ ಅತಿಪೂರ್ವ ಕಾಲದ ರಾಜಮನೆತನದ ಬಗ್ಗೆ ತಿಳಿದುಕೊಳ್ಳಲು ನಮಗೆ ಶಾಸನಿತ ಆಧಾರವೂ ದೊರಕುವಂತಾಗಿದೆ.

ಕನ್ನಡ ನಾಡಿನ ಇತಿಹಾಸದ ಮೈಲುಗಲ್ಲಾದ ಈ ತಮಿಳುಬ್ರಾಹ್ಮೀ ಶಾಸನದ ಪೂರ್ಣ ಪಾಠವನ್ನೂ, ಅದರಿಂದ ಹೊರಹೊಮ್ಮುವ ಕನ್ನಡದ ಸೊಡರನ್ನೂ ಪರಿಚಯಿಸಿಕೊಳ್ಳಬೇಕಾದ ಆವಶ್ಯಕತೆ ಇದೆ. ಈ ಶಾಸನವಿರುವುದು ಪುದುಕ್ಕೊಟ್ಟೈ ಜಿಲ್ಲೆಯ ಸಿತ್ತನ್‌ವಾಸಲ್‌ನ ಏಳಾಟಿಪಟ್ಟಂ ಗುಹೆಯಲ್ಲಿ. ಇದರ ಕಾಲ, ಕ್ರಿ.ಪೂ. ೧ನೆಯ ಶತಕ. ಇದಕ್ಕೆ ಬಳಸಿದ ಭಾಷೆ-ಲಿಪಿ, ತಮಿಳುಬ್ರಾಹ್ಮೀ. ಈ ಶಾಸನದ ಕನ್ನಡ ರೂಪಾಂತರ ಇಂತಿದೆ:

ಎರುಮಿನಾಟ ಕುಮುಟಿೂರಿನಲ್ಲಿ ಜನಿಸಿದ (ಪಿಱಂತು) ಕುವಟಿ (ಕುವಟಿ ಎಂಬ ಹೆಸರಿನ; ಅಥವಾ ಗವುಡಿ=ಗೌಡಿ). ತೆಣ್ಕು-ಶಿಱುಪೊಶಿಲ್‌ನ ಇಳಯರ್ ಮಾಡಿ(ಸಿ)ದ ಅತಿಟಣಮ್ (ಅಧಿಷ್ಠಾನ; ವೇದಿಕೆ).[೧] ಅಂದರೆ ಮೈಸೂರು ಪ್ರದೇಶದ ಕುಮಳೂರಿನಲ್ಲಿ (ಕುಂಬಳೂರು=ಕುಂಬ್ಳೂರು) ಜನಿಸಿದ [ಜಿನಭಕ್ತೆಯಾದ] ಕುವಟಿ [ಗೌಡತಿ]ಯೊಬ್ಬಳ [ಸಮಾಧಿ ಆಚರಣೆಗೆ] ಒಂದು ಅಧಿಷ್ಠಾನ (ಶಿಲಾ ವೇದಿಕೆ ಅಥವಾ ಹಾಸಿಗೆ)ವನ್ನು ಗುಡ್ಡದ ಹೊಸ್ತಿಲ ಪ್ರದೇಶದವನಾದ ಇಳಯಾರ್ [ಎಂಬ ವೀರನು ಅಥವಾ ನಾಯಕನು] ಮಾಡಿ(ಸಿ) ಕೊಟ್ಟನು, ಎಂದು ಅರ್ಥ.

ಶಂಗಂ ತಮಿಳಿನ ಮೇಲೆ ಕನ್ನಡದ ಪ್ರಭಾವ: ಈ ಶಾಸನದ ಪಾಠವನ್ನು ಅರ್ಥೈಸುವಾಗ ಇದರೊಂದಿಗೆ 'ತಿರುಪ್ಪರಂಕುನ್ರಮ್', 'ಅದಕಲ್-ಅ' ಮತ್ತು 'ನೆಡನೂರ್‌ಪತ್ತಿ'ಯಲ್ಲಿ ದೊರೆತ ಮೂರು ತಮಿಳುಬ್ರಾಹ್ಮೀ ಶಾಸನಗಳನ್ನು ಹಿನ್ನೆಲೆಯನ್ನಾಗಿಸಿಕೊಂಡು, ಕ್ರಿ.ಪೂ. ೧ರಿಂದ ಕ್ರಿ.ಶ. ೪ನೆಯ ಶತಮಾನದ ಕಾಲಾವಧಿಯಲ್ಲಿ ತಮಿಳಿನ ಮೇಲೆ ಹಳೆಗನ್ನಡವು ಬೀರಿದ ಪ್ರಭಾವವನ್ನು ತಮಿಳುನಾಡಿನ ಗೌರವಾನ್ವಿತ ಶಾಸನತಜ್ಞರಾದ ಡಾ॥ ಐರಾವತಂ ಮಹದೇವನ್ ಗುರುತಿಸಿದ್ದಾರೆ. ಅದು 'ಇಲ್ಲಿಯವರೆಗೂ ಯಾರೂ ಶಂಕಿಸಲಾರದಂತಹ' ಅದ್ಭುತವೆಂಬುದನ್ನು ಅವರೇ ಸ್ಪಷ್ಟಪಡಿಸಿದ್ದಾರೆ. ಕ್ರಿಸ್ತಪೂರ್ವ ಕಾಲದ ಕೊನೆಯ ಎರಡು-ಮೂರು ಶತಮಾನಗಳಲ್ಲಿ ಕನ್ನಡ ಪದಕೋಶ, ವ್ಯಾಕರಣಪ್ರಯೋಗ, ಸಂಬೋಧಕ ಪ್ರಕ್ರಿಯೆ, ಎಷ್ಟರಮಟ್ಟಿಗೆ ಬೆಳೆದಿದ್ದವು ಮತ್ತು ಇವೆಲ್ಲವೂ [ಜೈನ ವಲಸೆಗಾರರ ಮೂಲಕ] ಸಮಕಾಲೀನ ತಮಿಳುಬ್ರಾಹ್ಮೀ ಮೇಲೆ ಯಾವ ಬಗೆಯಲ್ಲಿ ಪರಿಣಾಮ ಬೀರಿದ್ದವು ಎಂಬುದನ್ನು ಅವರು ಅನಾವರಣಗೊಳಿಸಿದ್ದಾರೆ. ಸಂಕ್ಷಿಪ್ತವಾಗಿ ಅವರ ವಾದ ಇಂತಿವೆ :

೧. 'ಎರುಮಿನಾಟು' ಎಂಬ ಕನ್ನಡ ಪದದ ತಮಿಳು ರೂಪಾಂತರ, 'ಎರುಮೈನಾಟು'. ಇವುಗಳಲ್ಲಿ 'ಎರುಮಿ' ಎಂಬುದೇ (ತಮಿಳಿನ ಎರುಮೈ, ತುಳುವಿನ 'ಎರ್ಮೆ', ಗೋಂಡಿಯ 'ಎರ್ಮ') ಮೂಲ ನುಡಿಗಟ್ಟು

೨. ‘ಕವುಟಿ’ ಎಂಬುದು ಒಬ್ಬ ವ್ಯಕ್ತಿಯ ಅಥವಾ ಮನೆತನದ ಹೆಸರು. ಇದು ‘ಗವುಡಿ’, ‘ಗೌಡ’ಗೆ ಸಮಾನ.

೩. ‘ಪ್ರೂತಿಲ್’ ಎಂದರೆ ದ್ವಾರ ಅಥವಾ ಬಾಗಿಲು. ‘ತೆಣ್ಕ-ತಿರು-ಪ್ರೂತಿಲ್’ ಎಂಬುದು ಒಂದು ಪ್ರದೇಶವನ್ನು ನಿರ್ದೇಶಿಸುವ ಪದ. ‘ಪ್ರೂತಿಲ್’ ಎಂಬ ಪದವು ತಮಿಳಿನಲ್ಲಿ ರುಜುವಾತನ್ನು ಪಡೆದಿರುವುದಿಲ್ಲ; ಇದು ಕನ್ನಡ ಮೂಲದ ‘ಹೊಸಿಲು’ವಿನಿಂದ ಪಡೆದುಕೊಂಡಿದ್ದು. ಅನಂತರದ ತಮಿಳು ಶಾಸನಗಳಲ್ಲಿ ‘ವಾಯಿಲ್’ ರುಜುವಾತು ಪಡೆದುಕೊಳ್ಳುವುದು, ‘ಪ್ರೂತಿಲ್’ ಅಲ್ಲ.

೪. ತಮಿಳುಬ್ರಾಹ್ಮೀ ಶಾಸನವೊಂದರಲ್ಲಿ ‘ತಾಯಿಯರ್’ (ಎಂಬ ಗೌರವಸೂಚಕ ಪದ) ಬಳಕೆಯಾಗಿರುವುದು. ಈ ಪದವು ನಿಸ್ಸಂಶಯವಾಗಿಯೂ ಕನ್ನಡ ಮೂಲದ್ದು. ಹಳೆಗನ್ನಡ ದಾಖಲೆಗಳಲ್ಲಿ ಇದು ಕಾಣಿಸಿಕೊಳ್ಳದಿರಬಹುದು, ಆದರೆ ಅವಶ್ಯವಾಗಿ ಆ ಕಾಲದ ಆಡುನುಡಿಯಲ್ಲಿ ಅದು ಪ್ರಚಾರದಲ್ಲಿತ್ತೆಂಬುದರಲ್ಲಿ ಅನುಮಾನವಿಲ್ಲ.

೫. ವ್ಯಕ್ತಿನಾಮ ಮತ್ತು ಗೌರವ ಸೂಚಕ ತಮಿಳು ಪದಗಳ ಮೇಲೆ ಆದ ಕನ್ನಡದ ಪ್ರಭಾವವನ್ನೂ ಗುರುತಿಸಬಹುದು. ಅಯ(ಶ್)ಶ [ಅಯಶ್ಶ], ಪೊಲಾಲ್(ಅ) [ಪೊಲಾಲ] ಮತ್ತು ಆದಿ ಪ್ರತ್ಯಯಗಳಾದ ‘ಅಣ್ಣ’, ಅ(ಪ್)ಪ [ಅಪ್ಪ] ಮತ್ತು ಅ(ಯ)ಯಣ [ಅಯ್ಯಣ]ಗಳು ಹಳೆಗನ್ನಡದ ಧ್ವನ್ಯನುಕರಣದ ನಿಯಮಕ್ಕೆ ಹೆಚ್ಚು ಸಲೀಸಾಗಿ ಹೊಂದಿಕೊಳ್ಳುವುವೇ ಹೊರತು ತಮಿಳಿನದಕ್ಕಲ್ಲ.

೬. ವ್ಯಾಕರಣ ಪ್ರಯೋಗಗಳಲ್ಲಿ ‘-ಆ’ (ದೀರ್ಘ) ಷಷ್ಠೀ ವಿಭಕ್ತಿಯ ಆದಿಪ್ರತ್ಯಯವು ‘-ಅ’ (ಹ್ರಸ್ವ) ಪ್ರತ್ಯಯಕ್ಕಿಂತ ಪೂರ್ವಕಾಲದ್ದಾಗಿದ್ದು ಇದರ ಬಳಕೆಯನ್ನು ಹಳೆಗನ್ನಡದ ಶಾಸನಗಳಲ್ಲಿ ಮೊಟ್ಟಮೊದಲು ಕಾಣುವೆವು; ತಮಿಳಿನಲ್ಲಿ ಇದಕ್ಕೆ ಸ್ಥಾನಾವಕಾಶವಿಲ್ಲ. ಇದರಂತೆ ಮೃದುಧ್ವನಿ ಮೇಳದಿಂದ ಅಂತ್ಯಗೊಳ್ಳುವ ಮಧುರಾದಿಪ್ರತ್ಯಯಕ್ಕೆ (ಉದಾ. ‘ಈದು’) ಪುರಾತನ ತಮಿಳಿನಲ್ಲಿ ಅವಕಾಶವಿಲ್ಲ; ಹಳೆಗನ್ನಡದಲ್ಲಿ ಇದಕ್ಕೆ ಬರವಿಲ್ಲ.

೭. ಭಾಷೆ, ವ್ಯಾಕರಣ, ಪದಕೋಶ ಮತ್ತು ಪದಬಳಕೆಗೆ ಸಂಬಂಧಿಸಿದವುಗಳಲ್ಲದೆ, ತಮಿಳಗಂ ಮೇಲೆ ಕನ್ನಡನಾಡು ಬೀರಿದ ಪ್ರಭಾವವನ್ನು ಆರಂಭಕಾಲದ ಜೈನರ ಒಡನಾಟದಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಜೈನರು ಸಾಕಷ್ಟು ಸಂಖ್ಯೆಯಲ್ಲಿ ಕರ್ನಾಟಕದಿಂದ ತಮಿಳುನಾಡಿಗೆ ವಲಸೆ ಹೋಗಿ ಅಲ್ಲಿ ಕೆಲವು ಕೇಂದ್ರಗಳನ್ನು ಸ್ಥಾಪಿಸಿದರೆಂಬುದಕ್ಕೆ ತಮಿಳುನಾಡಿನ ಗುಹಾಲಯಗಳಲ್ಲಿರುವ ತಮಿಳು ಬ್ರಾಹ್ಮೀ ಶಾಸನಗಳೇ ಸಾಕ್ಷಿ ಒದಗಿಸುವುವು. ೨೮ ಕೇಂದ್ರಗಳಲ್ಲಿ ಕೊರೆಸಿದ ೮೪ ಜೈನ ಶಾಸನಗಳು ಇಲ್ಲಿಯವರೆಗೂ ದೊರಕಿದ್ದು ಇವುಗಳ ಪಾಠಗಳಲ್ಲಿ ಹಲವಾರು ಕನ್ನಡ (ಪ್ರಾಕೃತ, ಸಂಸ್ಕೃತ ಪದಗಳು ಕನ್ನಡ ಪ್ರದೇಶದ ಮೂಲಕ) ಪದಗಳು ತಮಿಳುನಾಡನ್ನು ತಲುಪಿದ್ದನ್ನು ತೋರಿಸಿಕೊಡುವವು.[೩೭] ಈ ಶಾಸನಗಳಲ್ಲಿ ಬರುವ ಹಳೆಗನ್ನಡದ ಪದಗಳಲ್ಲಿ ‘ಕಣಿ’ (ಗಣಿ), ‘ಅಮಣನ್’ (ಪ್ರಾ. ಸಮಣ-ತಮಿಳಿನಲ್ಲಿ ‘ಶ’ ಲುಪ್ತಗೊಂಡಿರುವುದು), ‘ಉಪಶನ್’ (ಪ್ರಾ. ಉಪಜ್ಝಾಯ (ಕ) ಉವಜ್ಜರ್=ಓಜರ್), ‘ಆಶಾರಿಯರ್’ (ಸಂ. ಆಚಾರ್ಯರು); ‘ಕಂತಿ’ (ಕ. ಗಂತಿ, ಕಂತಿ; ನಾಮಪದವಾದಾಗ ಕವುಂತಿ) ಗಮನಾರ್ಹವಾದವುಗಳು.

ಈ ಎಲ್ಲಾ ಆಧಾರಗಳ ಮೇಲೆ ಲಿಪಿರಹಿತವಾಗಿದ್ದರೂ ಸಂಗಂ ಕಾಲಕ್ಕಾಗಲೇ ಕನ್ನಡವು ಬೆಳೆದ ಭಾಷೆಯಾಗಿತ್ತೆಂಬುದು ಮತ್ತು ಪ್ರಬುದ್ಧಾವಸ್ಥೆಯನ್ನು ಮುಟ್ಟಿದ್ದ ತಮಿಳಿನ ಮೇಲೆ ಪ್ರಭಾವ ಬೀರಬಲ್ಲ ಜಿಗುಟುತನವನ್ನು ಅದು ಗಳಿಸಿಕೊಂಡಿತ್ತೆಂಬುದು ಸ್ಪಷ್ಟಗೊಳ್ಳುವುದು.

ಮಹಾದೇವನ್ ಗಮನವನ್ನು ವಂಚಿಸಿದ ಒಂದೆರಡು ಪದಗಳನ್ನಿಲ್ಲಿ ಪ್ರಸ್ತಾಪಿಸಿ, ಅವುಗಳ ಮೂಲವನ್ನು ಶೋಧಿಸಲು ನಾವಿಲ್ಲಿ ಪ್ರಯತ್ನಿಸಬಹುದು. ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿರುವ ‘ನಾಡು’ ಎಂಬ ಆಡಳಿತಾ ಘಟಕಕ್ಕೆ ಮಧ್ಯಕಾಲದ ವರೆಗಿನ ತಮಿಳು, ಕನ್ನಡ, ತೆಲುಗು ಶಾಸನಗಳಲ್ಲಿ ಸಾಕಷ್ಟು ಉಲ್ಲೇಖಗಳು ದೊರೆಯುವುವು. ಇದರ ಬಗ್ಗೆ ಇತ್ತೀಚಿಗೆ ಆಳವಾದ ಸಂಶೋಧನೆಯನ್ನೂ ಮಾಡಲಾಗಿದೆ. ಆದರೆ ಈ

ಪದವನ್ನು ಸೃಷ್ಟಿಸಿ ಜಾರಿಗೆ ತಂದವರು ಯಾರು ಮತ್ತು 'ನಾಡು' ಎಂಬ ಆಡಳಿತಾ ಘಟಕವು ಮೊದಲು ಪ್ರಾರಂಭವಾದದ್ದು ಎಲ್ಲಿ? ಎಂಬುದರ ಬಗ್ಗೆ ಮಾಡಿದ ನಿರ್ಣಯವು ನನಗೆ ನಿಲುಕುತ್ತಿಲ್ಲ. ಇತಿಹಾಸಕಾರರೆಲ್ಲರೂ ಈಗ ನಂಬಿರುವಂತೆ ಇದು ತಮಿಳುನಾಡಿನ ಆಡಳಿತಾ ಇತಿಹಾಸದಲ್ಲಿ ಹಾಸುಹೊಕ್ಕಾದ ಪದ. 'ನಾಟು', 'ನಾಟ್ಟು' ಪದಗಳು ಶಂಗಂ ಸಾಹಿತ್ಯದಲ್ಲಿ ಬರುವುವಾದರೂ[೨೧] ಕಾಲದ ಬಗ್ಗೆ ವಿವಾದವಿರುವ ಈ ಸಾಹಿತ್ಯಿಕ ಆಕರವನ್ನೇ ಆಧರಿಸಿ ಈ ಆಡಳಿತಾ ಘಟಕದ ಮೂಲವನ್ನು ನಿರ್ಧರಿಸುವುದು ಕಷ್ಟಸಾಧ್ಯ. ಆದರೆ ಮೊಟ್ಟಮೊದಲ ಬಾರಿಗೆ 'ನಾಟು' ಪದವನ್ನು ದಾಖಲಿಸಿದವರು ಎರುಮಿನಾಟವರು ಎಂಬುದರಲ್ಲಿ ಅನುಮಾನವಿಲ್ಲ.[೨೨] ಈಗಾಗಲೇ ಕಂಡಂತೆ ಈ 'ಎರುಮಿನಾಟು' ಎಂಬುದು ತಮಿಳಗಂ ಉತ್ತರಕ್ಕಿದ್ದ ಮೈಸೂರು ಪ್ರದೇಶ. ಅವರನ್ನು 'ಕುಡನಾಡ' ಎರುಮೈಗಳೆಂದು ಶಂಗಂ ಕವಿ ಮಾಮುಲನಾರ್ ಒಂದೆಡೆ ತಿಳಿಸುವನು.[೨೩] ಈ ಕುಡನಾಡನ್ನು 'ಕೊಡಗು'ನಾಡು ಎಂದು ಗುರುತಿಸಲಾಗಿದೆ. ಇದು ಏನೇ ಇರಲಿ, ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಪ್ರಥಮ 'ನಾಡು' ಘಟಕವು ಮೈಸೂರು ಪ್ರದೇಶದಲ್ಲಿ ಸ್ಥಾಪನೆಗೊಂಡಿತ್ತೆಂಬುದನ್ನು ಇದು ಸ್ಪಷ್ಟಪಡಿಸುವುದು. ಇದಕ್ಕೆ ಬೆಂಬಲವನ್ನು ಆರಂಭಕಾಲದ ತಮಿಳು ಮತ್ತು ಕನ್ನಡ ಶಾಸನಗಳು ಒದಗಿಸುವುವು. ಸಿತ್ತನ್‌ವಾಸಲ್ ಶಾಸನದ 'ಎರುಮಿನಾಟಿ'ನ ಉದಾಹರಣೆಯನ್ನು ಹೊರತುಪಡಿಸಿದರೆ, ಕ್ರಿ.ಪೂ. ೨ನೆಯ ಶತಮಾನದಿಂದ ಕ್ರಿ.ಶ. ೬ನೆಯ ಶತಮಾನದ ವರೆಗಿನ ಎಂಟುನೂರು ವರ್ಷಕಾಲಾವಧಿಯ ತಮಿಳುಬ್ರಾಹ್ಮೀ ಮತ್ತು ವಟ್ಟೆಳುತ್ತು ಶಾಸನಗಳಲ್ಲೆಲ್ಲಿಯೂ 'ನಾಟು, ನಾಟ್ಟು ನಾಡು' ಪದಗಳು ಕಾಣಿಸಿಕೊಳ್ಳುವುದಿಲ್ಲ ಎಂಬುದು ಗಮನಾರ್ಹ.[೨೪] ಅಂದರೆ ಶಂಗಂ ಕಾವ್ಯದಲ್ಲಿ ಬರುವ ಉಲ್ಲೇಖಗಳು ಅಂದಿನ ವಾಸ್ತವಿಕ ಆಡಳಿತಾ ಘಟಕಗಳನ್ನು ಪ್ರತಿನಿಧಿಸುತ್ತಿದ್ದರೆ ಅವುಗಳಲ್ಲಿ ಒಂದಾದರೂ ಐತಿಹಾಸಿಕ ದಾಖಲೆಗಳಲ್ಲಿ ಏಕೆ ಸ್ಥಾನಪಡೆದು ಕೊಳ್ಳಲಿಲ್ಲ, ಎಂಬ ಪ್ರಶ್ನೆ ಉದ್ಭವಿಸುವುದಲ್ಲವೆ? ಕ್ರಿ.ಶ. ೬ನೆಯ ಶತಕದ ವಟ್ಟೆಳುತ್ತು ಶಾಸನವು ತಮಿಳುನಾಡಿನ ಪರಯನ್‌ಪತ್ತು ಗುಹಾಲಯದಲ್ಲಿದ್ದರೂ ಇದು 'ಪಾಣಾಟ' ಜೈನ ಮುನಿಯ ಆರಾಧನಾ ನಿಶಿದಿಕೆಯಾಗಿರುವುದೆಂಬುದನ್ನು ನಿರ್ಲಕ್ಷಿಸುವಂತಿಲ್ಲ. ಎರುಮಿನಾಟಿನಂತೆ ಈ 'ಪಾಣಾಟ'ವೂ (ಕಾವೇರಿ-ಕಬಿನೀ ಪ್ರದೇಶದ) ಪುನ್ನಾಟದ ಪರಿಸರದಲ್ಲಿತ್ತೆಂದು ಕಾಣುವುದು. ತಮಿಳುನಾಡಿನಲ್ಲಿ ದೊರೆಯುವ ಈ ಚಿತ್ರಕ್ಕೆ ಬದಲಾಗಿ ಕ್ರಿ.ಪೂ. ೨ನೆಯ ಶತಕದಿಂದ 'ನಾಟು' ಎಂಬ ಆಡಳಿತಾ (ರಾಜ್ಯ) ಘಟಕವು ಕನ್ನಡ ಪ್ರದೇಶ ದಲ್ಲಿ ಅವಿಚ್ಛಿನ್ನವಾಗಿ ಮುಂದುವರಿದಿತ್ತು ಎನ್ನಲು ಹಲ್ಮಿಡಿಯ ಪ್ರಪ್ರಥಮ ಕನ್ನಡ ಶಾಸನವು ಸಹಾಯಕ್ಕೆ ಬರುವುದು.[೨೫] ಮೈಸೂರು ಪರಿಸರದಲ್ಲಿಯೇ ಇರುವ ಈ ಶಾಸನವು 'ನರಿದಾವಿ[ಳೆ]ನಾಡ'ನ್ನು ಉಲ್ಲೇಖಿಸುವುದರಿಂದ, ಈ ಪದಬಳಕೆ ಮತ್ತು ಈ ಪದ ಸೂಚಿಸುವ ಆಡಳಿತಾ ಘಟಕಗಳು 'ತಮಿಳಗಂ'ಗಿಂತ ಹೆಚ್ಚು ಆಳವಾಗಿ ಇಲ್ಲಿ ಬೇರುಬಿಟ್ಟಿದ್ದ ವೆನ್ನಬಹುದು. ವಲಸೆ ಹೋದ ಜೈನರು ತಮ್ಮ ತವರೂರಿನಲ್ಲಿದ್ದ 'ನಾಟು' ಘಟಕಗಳನ್ನು ಸಿತ್ತನ್‌ವಾಸಲ್‌ನಂತೆ ಉಳಿದೆಡೆ ತಮಿಳರಿಗೆ ಪರಿಚಯಿಸಿ ಕೊಟ್ಟಿರಲು ಸಾಧ್ಯವಲ್ಲವೇ, ಎಂಬ ಅನುಮಾನ ಬಾರದಿರದು. ಈ ಆಧಾರದ ಮೇಲೆ, ಕನ್ನಡ ಪ್ರದೇಶದಲ್ಲಿ ಹೆಚ್ಚು ಬೇರುಬಿಟ್ಟಿದ್ದ 'ನಾಟು=ನಾಡು' ಪದವನ್ನು ಕಾಲಾನಂತರದಲ್ಲಿ ತಮಿಳರು ಪಡೆದುಕೊಂಡರೆಂದೂ ಕ್ರಿ.ಶ. ೬ನೆಯ ಶತಮಾನದ ನಂತರ ಇದನ್ನು ತಮ್ಮದನ್ನಾಗಿಸಿಕೊಂಡು ಹೆಚ್ಚು ಪ್ರಸಾರಕ್ಕೆ ಅವರು

ತಂದರೆಂದೂ ವಾದ ಮಾಡಲು ಅನುವು ದೊರೆಯುವುದು. ಇದು ಏನೇ ಇರಲಿ, ತಮಿಳರ ಪ್ರದೇಶವು 'ತಮಿಳಗಂ' (ತಮಿಳುನಾಡು ಎಂದಲ್ಲ) ಎಂದೇ ಪ್ರಚಾರದಲ್ಲಿದ್ದ ಕಾಲದಲ್ಲಿ 'ನಾಡು' ಪ್ರತ್ಯಯವನ್ನು ಹೊಂದಿದ 'ಕರು-ನಾಡು' ಘಟಕವು ಅದರ ಉತ್ತರದಲ್ಲಿ ಅಸ್ತಿತ್ವದಲ್ಲಿದ್ದುದು ಇಲ್ಲಿ ಗಮನಾರ್ಹ.[೩೬]

ಸಿತ್ತನ್‌ವಾಸಲ್ ತಮಿಳುಬ್ರಾಹ್ಮಿ ಶಾಸನದಲ್ಲಿ ಉಲ್ಲೇಖಗೊಂಡಿರುವ 'ಇಳಯರ್' ಪದದ ಬಗ್ಗೆಯೂ ಒಂದು ಅಡಿಟಿಪ್ಪಣಿ ಅವಶ್ಯವೆನಿಸುವುದು. ಮಹಾದೇವನ್ ಈ ಪದವನ್ನು 'ಯುದ್ಧವೀರರ ಬಿರುದು' ಎಂದು ಅರ್ಥೈಸಿ, ಅವರನ್ನು 'ಇಳಾಮಕ್ಕಳ್' ಎಂದೂ ಕರೆಯಲಾಗುತ್ತಿತ್ತೆಂದು ತಿಳಿಸಿರುವರು.[೩೭] ಇದರಂತೆ 'ತೆಣ್ಕು-ಶಿಋ-ಪೊತಿಲ್' ಎಂಬುದು ಬೆಟ್ಟದ ಹೊಸಲಿನಲ್ಲಿದ್ದ ಒಂದು 'ಪುರಾತನ ಆಡಳಿತಾ ಘಟಕ' ಎಂದು ಅವರು ಅರ್ಥೈಸಿರುವರು. ಆದರೆ ಈ ಯುದ್ಧವೀರರು ಯಾರು ಮತ್ತು ಆ ಬೆಟ್ಟ ಪರಿಸರವು ಯಾವುದಾಗಿತ್ತು, ಎಂಬ ಪ್ರಶ್ನೆಗಳನ್ನು ಅವರು ಎತ್ತಿರುವುದಿಲ್ಲ. ಶಂಗಂ ಕಾವ್ಯದ ಆಧಾರದ ಮೇಲೆ ಈ ಪ್ರಶ್ನೆಗಳಿಗೆ ಉತ್ತರ ಕೊಡಬಹುದೆನಿಸುತ್ತದೆ. ಅಗನಾನೂರಿನ ಕವಿ ಕಲ್ಲಡನಾರ್ ಒಂದೆಡೆ ಇಳೆಯರ್‌ರನ್ನು 'ಅನಕ್ಷರಸ್ಥರು' ಎಂಬ ಅರ್ಥದಲ್ಲಿ ಸಂಬೋಧಿಸಿರುವನು.[೩೮] ಇದನ್ನು ತಮಿಳು ಭಾಷೆಯನ್ನು ಅರಿಯದವರೆಂದು ಅರ್ಥೈಸಬಹುದೆಂದು ನಾನು ಹಿಂದೊಮ್ಮೆ ಸೂಚಿಸಿರುವುದನ್ನು ನೆನಪಿಸಿಕೊಡಬಯಸುವೆ.[೩೯] ಗಿರಿಪ್ರದೇಶದಲ್ಲಿ ನೆಲಸಿದ್ದ ತಮಿಳೇತರ ವೀರ(ಇಳವರ್) ಮನೆತನದ ಜೈನನೊಬ್ಬನು ಈ ಶಾಸನವನ್ನು ಕೊರೆಸಿದನೆಂದೂ ಅವನು ಮತ್ತಾರೂ ಆಗಿರದೆ ಘಟ್ಟದ ಆಚೀಚೆ ಚಾಚಿಕೊಂಡಿದ್ದ ಎರುಮಿನಾಟನವನಾಗಿದ್ದನೆಂದೂ ನಾವು ನಿರ್ಣಯಿಸಬಹುದು.

ಆಕರಟಿಪ್ಪಣಿ:

೧. *ಸಂಕಲನ ೨೧, ಪು.೨೮ರಿಂದ*
೨. *ಸ್ಮಿತ್, ವಿ.ಎ. ಅರ್ಲಿ ಹಿಸ್ಟರಿ ಆಫ್ ಇಂಡಿಯ, ಪು.೪೫೭*
೩. ತಿರುನಾವಕ್ಕರಸು, ಕೆ.ಡಿ. *ಚೀಫ್ಟನ್ಸ್ ಆಫ್ ದಿ ಸಂಗಂ ಏಜ್*, (ಮದ್ರಾಸು, ೧೯೭೪), ಪು.೭೭-೮೫
೪. ನೋ. *ಸಂಕಲನ ೨೧, ಪು.೩೧ರಿಂದ.*
೫. *ಅಗನಾ. ೧೦೭, ೨೧೩, ೨೫೩, ೨೮೧, ೨೯೫, ೩೭೫, ೩೮೧; ಕುರುಂ. ೧೧; ನಟ್ರಿಣೈ. ೨೧೨; ಪುರನಾ. ೩೭೮*
೬. *ನಟ್ರಿಣೈ ೨೧೨*
೭. *ಅಗನಾ. ೨೮೧* ಮತ್ತು *ಕುರುಂ. ೩.೭೨.* ಎರಡನೆಯ ಕವನದ ಸರಳ ಕನ್ನಡ ರೂಪಾಂತರ ಇಂತಿದೆ: *ಧವಳ ಶಂಖವ ಕೊರೆದು ಮಾಡಿದ ಕಂಕಣಗಳು ನನ್ನ ಮಣಿಕಟ್ಟಿನಿಂದ ಕಳಚಿಕೊಳ್ಳುತ್ತಲಿವೆ। ನಿದೆಯಿಲ್ಲದೆ ಕಣ್ಣೀರ ಹರಿಸಿ ದಿನ ನೂಕುತ್ತಿರುವೆ ಒಂಟಿಯಾಗಿ। ಓ ನನ್ನ ಹೃದಯವೇ! ಏಳು ಅವನಿರುವಲ್ಲಿಗೆ ದಾರಿ ತೋರಿಸು, ಇದರಿಂದ ಮುಕ್ತಿ ಪಡೆಯೋಣ। ಈ ಸಮೃದ್ಧ ನಾಡಿನಿಂದ ಬಹುದೂರ, ಹಲವು ಕಾಟಿಗಳ ಕಟ್ಟೇಯ ಗಡಿಯಾಚೆ, ಎಲ್ಲಿ ತುಳಸಿ ಹೂಮಾಲೆ ಧರಿಸಿ ವಟುಕರು ಅರಿಯದ ಭಾಷೆಯಾಡುತ್ತಿರುವರೋ ಅಲ್ಲಿಗೆ ಹೋಗಿ ಅವನನ್ನು ಹಿಂಬಾಲಿಸೋಣ.*
೮. *ಅಗನಾ. ೨೯೫*
೯. *ಅಗನಾ. ೩೭೫*
೧೦. *ಅಗನಾ. ೨೧೩*
೧೧. *ಅಗನಾ. ೧೦೭.* ಅಲ್ಲದೆ ನೋ. *ಪುರಂ. ೩೭೮*
೧೨. *ಅಗನಾ. ೩೮೧*
೧೩. *ಅಗನಾ. ೨೫೩*
೧೪. *ಪುರಂ. ೮೦.* ಅಲ್ಲದೆ ನೋ. ೭೪-೭೫

೧೫. ಪುರಂ. ೧೮-೧೯, ೨೫-೨೬, ೭೨, ೭೬-೭೯; ೩೭೧-೩೭೨. ಸ್ವತಃ ಕವಿಯಾದ ನೆಡುಂಚೆಳಿಯನ್ ಒಂದು ಕವನದಲ್ಲಿ ಈ ಪ್ರಸಂಗವನ್ನು ವರ್ಣಿಸಿರುವನು (ಪುರಂ ೭೨). ಈ ಘಟನೆಯನ್ನು ಇನ್ನೂ ಹಲವಾರು ಸಂಗಂ ಕವಿಗಳು ಪ್ರಸ್ತಾಪಿಸಿರುವರು. ಇವರಲ್ಲಿ ಕುಡಪುಲವಿಯನಾರ್ (ಪುರಂ. ೧೮-೧೯), ಕಲ್ಲಾಟನಾರ್ (ಅದೇ. ೨೩, ೨೫, ೩೭೧), ಮಾಂಕುಡಿ ಕಿಳಾರ್ (೨೪, ೨೬, ೩೭೨), ಇಡೈಕುಣ್ರೂರ್ ಕಿಳಾರ್ (ಅದೇ. ೭೬-೭೯) ಹೆಸರಾರ್ಹರು.

೧೬. ಪುರಂ. ೨೩, ೭೭

೧೭. ಪುರಂ. ೭೨

೧೮. ಪುರಂ. ೧೯

೧೯. ಅಗನಾ. ೩೬

೨೦. ಅಗನಾ. ೧೭೭, ೨೫೩ ಅಲ್ಲದೆ ನೋ. ಸಂಕಲನ ೨೬, ಪು.೭೦.

೨೧. ಈ ವಿಷಯವನ್ನು ನನ್ನ ಗಮನಕ್ಕೆ ತಂದವರು ಡಾ॥ ಮೀನಾಕ್ಷಿ ಸುಂದರಮ್, ಐ.ಎ.ಎಸ್. ನಿಯಾಸ್‌ನಲ್ಲಿ ಈಗ ಸಂದರ್ಶಕ ಪ್ರೊಫೆಸರ್ ಆಗಿರುವ ಇವರಿಗೆ ನಾನು ಉಪಕೃತ.

೨೨. ಶಿವರಾಜ ಪಿಳ್ಳೈ, ಕೆ.ಎಸ್. ಕ್ರೋನಾಲಾಜಿ ಆಫ್ ದಿ ಅರ್ಲೀ ತಮಿಳ್ಸ್, (ಮದ್ರಾಸು, ೧೯೩೨), ಪು. ೧೨೮-೨೯

೨೩. ಮಾರ್ರ್, ಜಾ.ರಾ. ದಿ ಎಯ್ಟ್ ಆಂಥೋಲಜೀಸ್, (ಮದ್ರಾಸು, ೧೯೮೫), ಪು. ೧೮೬-೧೮೭

೨೪. ಪುರಂ. ೧೦೫-೧೨೧; ೨೩೬

೨೫. ಪುರಂ. ೧೫೮; ಅಗನಾ. ೧೪೩; ಪುರಂ. ೮೮, ೨೩೦

೨೬. ಮಹಾದೇವನ್, ಐ. ಅರ್ಲಿ ತಮಿಳ್ ಎಪಿಗ್ರಫಿ (ಚೆನ್ನೈ, ೨೦೦೩), ಪು. ೧೧೯-೧೨೦, ಶಾ.ಸ. ೫೯

೨೭. ಅಗನಾ. ೨೧೨; ಪತಿಟ್ರು. V

೨೮. ಅಗನಾ. ೭೩, ಪುರಂ. ೨೭೩, ೩೦೩; ಅಗನಾ. ೭೨. 'ಎರುಮೈ' ಪ್ರತ್ಯಯ ಹೊಂದಿದ ಕವಿಗಳಂತೆ 'ವಡುಗ' ಪ್ರತ್ಯಯವನ್ನು ಹೊಂದಿರುವ ಕೆಲವು ಸಂಗಂ ಕವಿಗಳನ್ನೂ ಗಮನಿಸಬಹುದು. ಇದಕ್ಕೆ ನಿದರ್ಶನ: ವಡಮವಣ್ಣಕ್ಕಮ್ ಪೆರುಂಶಾತ್ತನ್ (ಪುರಂ. ೧೨೫), ವಡುಮವಣ್ಣಕ್ಕನ್ ದಾಮೋದರನ್ (ಪುರಂ. ೧೭೨), ವಡನೆಡುಂತತ್ತನಾರ್ (ಪುರಂ. ೧೭೯), ವಡುಮವಣ್ಣಕ್ಕನ್ ಪೆರಿಶಾತ್ತನ್ (ಪುರಂ. ೧೯೮). ಈ ಪದಗಳನ್ನಲ್ಲದೆ, ಈ ಲೇಖನದಲ್ಲಿ ಬಳಸಿರುವ ಉಳಿದ ತಮಿಳು ಪದಗಳನ್ನೆಲ್ಲ ಮೂಲಪಾಠಗಳೊಡನೆ ಹೋಲಿಸಿ ನೋಡಲು ನನಗೆ ನೆರವು ನೀಡಿದ ಶ್ರೀ ಎಂ.ಗೋವಿಂದರಾಜು ಅವರಿಗೆ ನಾನು ಉಪಕೃತ.

೨೯. ಮಹಾದೇವನ್, ಅದೇ, ಶಾ.ಸಂ. ೪೯, ಪು.೩೮೫

೩೦.. ಅದೇ. ಪು.೧೨೮

೩೧. ವಿವರಕ್ಕಾಗಿ ನೋ. ಸಂಕಲನ ೨೩, ಪು.೪೫ರಿಂದ.

೩೨. ಮಹದೇವನ್, ಅದೇ. ಶಾ.ಸಂ. ೪೯, ಪು.೩೮೫

೩೩. ಅಗನಾ. ೧೧೫, ೯೧

೩೪. ಮಹಾದೇವನ್, ಅದೇ. ಶಾ.ಸಂ. ೧-೧೨೧ಗಳಲ್ಲಿಯ ಪಾಠಗಳನ್ನು ಗಮನಿಸಿರಿ.

೩೫. ಎಕ ೯ (ಮೈಸೂರು, ೧೯೯೦), ಬೇಲೂರು ೨೩೬

೩೬. ಸಂಕಲನ ೨೬, ಪು. ೬೯

೩೭. ಮಹದೇವನ್, ಅದೇ. ಪು.೩೮೫, ಅ.ಟಿ. ೯

೩೮. ಅಗನಾ. ೮೩

೩೯. ಸಂಕಲನ ೨೩, ಪು.೫೫, ಅ.ಟಿ. ೨೨

■ ಡಾ. ಷ. ಶೆಟ್ಟರ್ : ಗೌರವ ನಿರ್ದೇಶಕರು, ಇಂದಿರಾ ಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ದಕ್ಷಿಣ ಪ್ರಾದೇಶಿಕ ಕೇಂದ್ರ, ನಂ. ೧೦೯, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

email : igncasrc@hotmail.com / profssettar@yahoo.co.in ■

ಪುಸ್ತಕ ಪರಿಶೀಲನೆ

೧. ಸಮಚಿತ್ತ : ಡಾ. ವಿಶ್ವನಾಥ ಕಾರ್ನಾಡ

ಶ್ರೀ ರಾಘವೇಂದ್ರ ಪ್ರಕಾಶನ, ಅಂಬಾರಕೊಡ್ಲ, ಅಂಕೋಲಾ (ಉ.ಕ.). ಪ್ರಮು. ೨೦೦೪. ಪು. ೧೯೬, ರೂ. ೧೨೫/-

ಡಾ. ವಿಶ್ವನಾಥ ಕಾರ್ನಾಡರು ಮುಂಬಯಿ ಕನ್ನಡಿಗರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಎದ್ದು ತೋರುವ ಹೆಸರು. ಪ್ರಾಧ್ಯಾಪಕರಾಗಿ, ಮುಂಬಯಿ ಕನ್ನಡದ ಸಾಹಿತ್ಯಿಕ ಬದುಕಿನಲ್ಲಿ ತಮ್ಮದೇ ಆದ ಕಸುವನ್ನು ಪಡೆದ ಕಾರ್ನಾಡರ ಆಸಕ್ತಿಯ ಹರವು ಸಾಹಿತ್ಯಿಕವಲ್ಲದ ಇತರ ವಲಯಗಳಲ್ಲೂ ಪಸರಿಸಿದೆ. ಬಹಳ ವರ್ಷಗಳಿಂದ ಮುಂಬಯಿಯಲ್ಲಿ ನೆಲೆಸಿರುವ ಕಾರ್ನಾಡರು ಮುಂಬಯಿಯ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬದುಕನ್ನು ಹತ್ತಿರದಿಂದ ಕಂಡಿದ್ದಾರೆ. 'ಸಮಚಿತ್ತ' ಇದಕ್ಕೆ ಉತ್ತಮ ಉದಾಹರಣೆ.

'ಸಮಚಿತ್ತ' ಒಟ್ಟು ೨೦ ಲೇಖನಗಳ ಸಂಕಲನ. ಬಹಳಷ್ಟು ಲೇಖನಗಳು ಕನ್ನಡ ಸಾಹಿತ್ಯಿಕ ಪರಿಗ್ರಾಹಿ ಮನಸ್ಸಿನ ಮುಖಗಳಾದರೆ, ಇನ್ನು ಕೆಲವು ಜಾನಪದೀಯ ಮುಖಗಳ ಪರಿಚಯಾತ್ಮಕ ಲೇಖನಗಳು. ಕೆಲವು ಲೇಖನಗಳು ಮುಂಬಯಿಯ ಬದುಕನ್ನು ಶ್ರೀಮಂತಗೊಳಿಸಿದ ಕನ್ನಡಿಗರ ಬದುಕಿಗೆ ಸಂಬಂಧಪಟ್ಟವು. ಈ ಎಲ್ಲಾ ಇಪ್ಪತ್ತು ಲೇಖನಗಳನ್ನು ಕಾರ್ನಾಡರು ಮೂರು ವಿಭಾಗಗಳನ್ನಾಗಿ ಮಾಡಿ 'ಸಾಹಿತ್ಯಿಕ', 'ಜಾನಪದ' ಮತ್ತು 'ವಿಚಾರ' ಎಂಬ ಶೀರ್ಷಿಕೆಗಳಡಿ ಸರಿಯಾಗಿದ್ದಾರೆ.

ಇಲ್ಲಿನ ಬಹುತೇಕ ಲೇಖನಗಳು ಸಾಹಿತ್ಯಿಕ ಚರ್ಚೆಗಳಲ್ಲೋ, ಅಥವಾ ಇನ್ನಾವುದೇ ಕಾರ್ಯಕ್ರಮಗಳಲ್ಲಿ ಪ್ರಸ್ತುತಪಡಿಸುವ ಮಾದರಿಯವು. ಕಾರ್ನಾಡರು ನಿರ್ಲಿಪ್ತರಾಗಿ ಈ ಲೇಖನಗಳಲ್ಲಿ ಮುಂಬಯಿಯ ಸಾಂಸ್ಕೃತಿಕ, ಸಾಹಿತ್ಯಿಕ ಸನ್ನಿವೇಶಗಳಲ್ಲಿ ಅನುಭವಿಸಿದ ಅಥವಾ ತನ್ನ ವಿಚಾರಕ್ಕೆ ಸರಿಯಾಗಿ ಕಂಡ ವಿಚಾರಗಳನ್ನು ಪ್ರಾಮಾಣಿಕವಾಗಿ ಪ್ರಸ್ತುತಪಡಿಸುವ ಪ್ರಯತ್ನ ಮಾಡಿದ್ದಾರೆ. ನಿಮ್ಮನ್ನು ಕರೆದು ಕುಳ್ಳಿರಿಸಿ ಮನೆಯಲ್ಲಿ ಪಟ್ಟಾಂಗ ಹೊಡೆಯುವ ಶೈಲಿಯ ಭಾಷೆ, ತಳಸ್ಪರ್ಶಿಯಾಗಲೊಲ್ಲದ, ಆದರೆ ನಿಮ್ಮ ವಿಚಾರಕ್ಕೆ ಒಂದಿಷ್ಟು ಇಂಬು ಕೊಡುವ ಇಲ್ಲಿನ ಬಹುತೇಕ ಸಾಹಿತ್ಯಿಕ ಲೇಖನಗಳು ಮುಂಬಯಿಗೆ ಸಂಬಂಧಪಟ್ಟಿರುವುದರಿಂದ ಮುಂಬಯಿ ಕನ್ನಡಿಗರಿಗೆ ಮಹತ್ವದ್ದೆನಿಸಿಕೊಳ್ಳುತ್ತದೆ.

ಕೆಲವು ಲೇಖನಗಳನ್ನು ಇಲ್ಲಿ ಉದ್ಧರಿಸಲೇಬೇಕು. 'ಕನ್ನಡ ಸಾಹಿತ್ಯದ ಉಜ್ವಲ ಸಹಸ್ರಮಾನ' ಎಂಬ ಲೇಖನದಲ್ಲಿ ಇಡೀ ಸಾಹಿತ್ಯ ಸಂದರ್ಭ ನಡೆದುಬಂದ ದಾರಿಯನ್ನು ಪರಿಚಯಿಸುವ ಕೆಲಸ ಮಾಡುತ್ತಾರೆ. ಕವಿರಾಜಮಾರ್ಗದಿಂದ ಹಿಡಿದು ಇತ್ತೀಚಿನ ಸಾಹಿತ್ಯದ ವರೆಗಿನ ಎಲ್ಲ ನೆಲೆ ಜಲೆಗಳನ್ನು ಗುರುತಿಸುತ್ತಾರೆ. ಸಹಸ್ರಮಾನದ ಮೊದಲ ಮತ್ತು ಕೊನೆಯ ಶತಮಾನಗಳನ್ನು ಸುವರ್ಣಯುಗಗಳೆಂದು ಗುರುತಿಸುತ್ತಾರೆ. ಕೊನೆಯ ಶತಮಾನವನ್ನು ಪ್ರಶಸ್ತಿ ಪುರಸ್ಕಾರಗಳ ಸುವರ್ಣಕಾಲವೆಂದೂ ಹೆಸರಿಸುತ್ತಾರೆ. ಈ ಲೇಖನ ಪರಿಚಯಾತ್ಮಕ ನೆಲೆಯಲ್ಲಿ ಸಾಹಿತ್ಯದ ಬಗ್ಗೆ ಮಾಹಿತಿ ನೀಡುವ ಕೆಲಸ ಮಾಡುತ್ತದೆ. ಇದು ಸಾಹಿತ್ಯ ಪರಂಪರೆಯ ಮಾಹಿತಿ ಇಲ್ಲದ ಸಾಮಾನ್ಯ ಓದುಗರಿಗೆ ಬಹಳ ಉಪಯುಕ್ತವಾದ ಲೇಖನ. 'ಪ್ರಾಚೀನ ಸಾಹಿತ್ಯ ನಮಗಿಂದು ಎಷ್ಟು ಪ್ರಸ್ತುತ?' ಎನ್ನುವ ಲೇಖನದಲ್ಲಿ ಕಾರ್ನಾಡರು ಛಂದಸ್ಸು, ಶಬ್ದಮಣಿದರ್ಪಣ, ವ್ಯಾಕರಣ ಶಾಸ್ತ್ರಕ್ಕೆ ಸಂಬಂಧಪಟ್ಟ, ಭಾಷಾಶಾಸ್ತ್ರಕ್ಕೆ ಸಂಬಂಧಪಟ್ಟ ಅಧ್ಯಯನಗಳು ಇಂದಿನ ಜ್ಞಾನ ಮತ್ತು ಜೀವನಮೌಲ್ಯದ ಅಭಿವೃದ್ಧಿಗೆ ಪ್ರಯೋಜನವಾಗಲಾರದೆಂದು, ಅವುಗಳನ್ನು ನಿರ್ಜೀವ ಸಾಹಿತ್ಯ ಅಥವಾ ಜಡ ಸಾಹಿತ್ಯವೆಂದು ತೀರ್ಮಾನ ಕೊಡುತ್ತಾರೆ. ಅವು ಕೇವಲ ಸಾಹಿತ್ಯ ಪದವಿಗಾಗಿ ಬೇಕಾದ ಪರಿಕರಗಳೆನ್ನುತ್ತಾರೆ. ಸಾಹಿತ್ಯದ ಶಿಷ್ಟ ಅಭ್ಯಾಸಕಾರರಿಗೆ (puritans) ಒಂದು ದೊಡ್ಡ ಸವಾಲು. ಇಂತಹ ಶಾಸ್ತ್ರಗಳ ಓದುವಿಕೆಯ ಬಗ್ಗೆ ಹಲವು ವಿದ್ಯಾರ್ಥಿಗಳು ಜಿಜ್ಞಾಸೆಗೆ ಒಳಪಟ್ಟದ್ದುಂಟು. ಕಾರ್ನಾಡರು ಕನ್ನಡ ಪ್ರಾಧ್ಯಾಪಕರಾಗಿ, ಈ ವಿದ್ಯಾರ್ಥಿಗಳ ವಿಚಾರವನ್ನು ಮಂಡಿಸಿದ್ದಾರೆ ಎನಿಸುತ್ತದೆ. ಆದರೆ ಜಡವಾದ ಈ ಸಾಹಿತ್ಯ ಶಾಸ್ತ್ರಗಳ ತಳಹದಿಯ ಮೇಲೆ ನಡೆದಂತಹ ಸಾಹಿತ್ಯ ಪ್ರಕಾರದ ಪ್ರಯೋಗಗಳನ್ನು ಕಾರ್ನಾಡರು ಏಕೆ ಮರೆತರೋ ಗೊತ್ತಾಗುವುದಿಲ್ಲ.

‘ಅಪಾತ್ರೇ ರಮತೇ ನಾರಿ’ ಈ ಸಂಕಲನದ ಒಳ್ಳೆಯ ವಿಮರ್ಶಾ ಲೇಖನ. ಈ ಲೇಖನದಲ್ಲಿ ಕಾರ್ನಾಡರು ತಮಗೆ ತಕ್ಕವರಲ್ಲವಿದ್ದರೂ ‘ಅಪಾತ್ರ’ರಾದರೂ ವರಿಸಿಕೊಳ್ಳುವ ಇತಿಹಾಸಕ್ಕೆ ಸೇರಿದ ಜನ್ನನ ‘ಯಶೋಧರ ಚರಿತೆ’ಯ ಅಮೃತಮತಿ, ಷೇಕ್ಸಪಿಯರನ ‘ಒಥೆಲೋ’ದ ಡೆಸ್ಡಮೋನಾ ಮತ್ತು ಮೊಗಲರ ಮೊದಲ ದೊರೆ ಅಲ್ತಮಶ್‌ಶಹನ ಮಗಳು ‘ರಜಿಯಾ’ ಬಗ್ಗೆ ಸಾಮ್ಯವೈಷಮ್ಯಗಳ ಚರ್ಚೆ ನಡೆಸುತ್ತಾರೆ. ಜನ್ನನ ಅಮೃತಮತಿ ರೂಪವಂತನಾದ ಗಂಡ ಪ್ರಿಯಕರ ಯಶೋಧರನನ್ನು ಪ್ರೀತಿಸಿದರೂ ಕುರೂಪನಾದ ಮಾವುತ ಅಷ್ಟಾವಂಕನ ಸಂಗೀತಕ್ಕೆ ಮರುಳಾಗಿ ತನ್ನನ್ನೆ ಸಮರ್ಪಿಸಿಕೊಳ್ಳುತ್ತಾಳೆ. ಲೇಖಕರು ಅಪಾತ್ರನಾದ ಅಷ್ಟಾವಂಕನನ್ನು ವರಿಸಲು ಸಿದ್ಧಳಾದ ಅಮೃತಮತಿಯ ಮನಸ್ಸಿನ ಹಿಂದೆ ಕೆಲಸ ಮಾಡಿದ ಸಾಧ್ಯತೆಗಳನ್ನು ಸೋದಾಹರಣವಾಗಿ ಚರ್ಚಿಸುತ್ತಾರೆ. ಅಮೃತಮತಿಯನ್ನು ಅವಳ ಕೆಟ್ಟ ನಡತೆಗೆ ಕೊಲ್ಲದೇ, ಜೈನ ಧರ್ಮವನ್ನು ಪಾಲಿಸುವ ಯಶೋಧರ ಪಾಪಪ್ರಜ್ಞೆಯಿಂದ ಮುಕ್ತನಾಗಲು ಹಿಟ್ಟಿನ ಹುಂಜವನ್ನು ಬಲಿ ಕೊಡುತ್ತಾನೆ. ಮನದ ದೌರ್ಬಲ್ಯಕ್ಕೆ ಒಳಗಾದ ಅಮೃತಮತಿಯ ಕಾಮವಾಸನೆಯ ಜೊತೆಜೊತೆಗೆ ಯಶೋಧರನ ಉದಾತ್ತತೆಯ ಹಿಂದೆ ಜನ್ನನ ಜೈನ ಕಾವ್ಯಧರ್ಮ ಕೆಲಸ ಮಾಡಿದೆಯೆಂದು ಚರ್ಚಿಸಿರುವುದು ಸರಿಯಾಗಿಯೇ ಇದೆ. ‘ಒಥೆಲೋ’ದ ನಾಯಕಿ ಡೆಸ್ಡಮೋನಾ ತನಗೆ ಅಪಾತ್ರನಾದ ಆದರೆ ಸಾಹಸಕ್ಕೆ ಹೆಸರಾದ ಸೇನಾಧಿಪತಿ ದಪ್ಪತುಟಿಯ ಕರಿಮೋತ ಒಥೆಲೋನನ್ನು ಜನಾಂಗ, ಮತಧರ್ಮ, ಸಂಸ್ಕೃತಿಯನ್ನು ಕಡೆಗಣಿಸಿ ವರಿಸುತ್ತಾಳೆ. ಲೇಖಕರು ಇದನ್ನು ಅಗಾಧವಾದ ಪ್ರೀತಿ ಅಥವಾ ಲೈಂಗಿಕ ಆಕರ್ಷಣೆಯಾಗದೆ ಒಥೆಲೋನ ಸಾಹಸಮಯ ವ್ಯಕ್ತಿತ್ವಕ್ಕೆ ಆಕರ್ಷಿತವಾದ ಸುಕುಮಾರ ಭಾವನೆ ಎಂದು ತರ್ಕಿಸುತ್ತಾರೆ. ಆದರೆ ಒಥೆಲೋ ಸಂಶಯದಿಂದ ಡೆಸ್ಡಮೋನಾಳನ್ನು ಕೊಲ್ಲುತ್ತಾನೆ. ಅಮೃತಮತಿಯಂತೆ ದುರಂತ ನಾಯಕಿಯಾಗುತ್ತಾಳೆ. ಮೊಗಲ ದೊರೆ ಅಲ್ತಮಶ್‌ಶಹನ ಮಗಳು ಉತ್ತರಾಧಿಕಾರಿಯಾದ ರಜಿಯಾ ತನ್ನ ಅಂಗರಕ್ಷಕನಾದ ಯಾಕೂಬನನ್ನು ಮದುವೆಯಾಗುತ್ತಾಳೆ. ಅದಕ್ಕಾಗಿ ಸಿಂಹಾಸನವನ್ನು ತ್ಯಾಗ ಮಾಡಲೂ ಸಿದ್ಧಳಾಗುತ್ತಾಳೆ. ಲೇಖಕರು ರಜಿಯಾಳಲ್ಲಿ ನಿರ್ಮಲ ಭಾವದ ಮಿಲನಾಪೇಕ್ಷೆಯನ್ನು ಕಾಣುತ್ತಾರೆ. ಈ ಮೂವರು ನಾಯಕಿಯರಲ್ಲಿ ಅವರ ಮಿಲನಗಳಲ್ಲಿ ಸಾಮಾನ್ಯವಾದ ಕೊಂಡಿಯಾಗಿ ಲೇಖಕರು ಕಂಡದ್ದು ಅಪಾತ್ರರಾದ ವರನನ್ನು ವರಿಸಿದ ಮೂವರು ಕನ್ಯೆಯರ ಪ್ರಣಯಗಳನ್ನು. ಈ ಮೂವರು ನಾಯಕಿಯರ ಪ್ರಣಯದಲ್ಲಿರುವುದು ತನ್ನ ಹಿಡಿತದಲ್ಲಿಲ್ಲದ ಅವ್ಯಕ್ತವಾದ ಶಕ್ತಿ, ಪ್ರೀತಿಗೆ ಮಿಗಿಲಾದ ಹೃದಯವಂತಿಕೆ ಎಂದು ಚೆನ್ನಾಗಿ ವಿವರಿಸಿದ್ದಾರೆ. ವರ್ತಮಾನಕ್ಕೆ ಕನ್ನಡಿ ಹಿಡಿಯಲು ಪ್ರಯತ್ನಿಸಿದ್ದಾರೆ. ಲೇಖಕರು ತಮ್ಮ ತಾರ್ಕಿಕ ನೆಲೆಗೆ ಜೀವಂತಿಕೆ ತಂದುಕೊಡುವುದು ಮಾನವಸಹಜ ಗುಣಗಳ ಮೂಲಕವೇ ನೋಡುವ ಸಾಧ್ಯತೆಗಳಿಂದ ಎನ್ನುವುದು ಮುಖ್ಯವಾಗುತ್ತದೆ. ಲೇಖಕರ ಈ ಲೇಖನ ಬರೆಯುವ ಹಿಂದಿನ ಚಿಂತನೆ, ದುಡಿಸಿಕೊಂಡ ಭಾಷೆ ಮರುಚಿಂತನೆಗೆ ಅನುವು ಮಾಡಿಕೊಡುವಂತಹುವು.

ಈ ಸಂಕಲನದ ಇನ್ನೊಂದು ಮುಖ್ಯ ಲೇಖನ ‘ಮುಂಬಯಿ ರಂಗಯಾತ್ರೆ.’ ಈ ಲೇಖನ ಸ್ವಾರಸ್ಯಕರವಾಗಿ, ಅಥೆಂಟಿಕ್ ಎನ್ನಬಹುದಾದ ವಿವರಗಳಿಂದ ಮಹತ್ವದ್ದೆನಿಸುತ್ತದೆ. ಮುಂಬಯಿಯ ಕನ್ನಡ ರಂಗಪರಂಪರೆಯ ಜೊತೆಜೊತೆಗೆ ಮರಾಠೀ ರಂಗಪರಂಪರೆ ಪಾರಸೀ ರಂಗಪರಂಪರೆಗಳನ್ನು ಪರಿಚಯಿಸಿರುವುದರಿಂದ ತೌಲನಿಕ ಅಧ್ಯಯನಕ್ಕೆ ಸಹಕಾರಿಯಾಗುತ್ತದೆ. ಮುಂಬಯಿ ರಂಗ ಪರಂಪರೆಯಲ್ಲಿ ಅತ್ಯಂತ ಉಪಯುಕ್ತ ಮಾಹಿತಿ ನೀಡುವ ಲೇಖನ ಮುಂಬಯಿಯ ವರ್ತಮಾನದ ಕನ್ನಡ ರಂಗಭೂಮಿಯ ಬೆಳವಣಿಗೆಯ ಬಗ್ಗೆ ಲವಲವಿಕೆಯಿಂದ ಕಾಯುವಂತೆ ಮಾಡುತ್ತದೆ.

ಈ ಸಂಕಲನದಲ್ಲಿ ಮುಂಬಯಿಯನ್ನು ಹಲವು ಸಾಂಸ್ಕೃತಿಕ ಮಗ್ಗುಲುಗಳಲ್ಲಿ ನೋಡುವ ಹಲವಾರು ಉಪಯುಕ್ತ ಲೇಖನಗಳಿವೆ. ದಕ್ಷಿಣ ಕನ್ನಡದಲ್ಲಿ ಪ್ರಚಲಿತ ಜನಪದ ದೈವಿಕ ಆರಾಧನೆಯಾದ ‘ಮೈಮೇಲೆ ದೈವ ಬರುವಿಕೆ’ ಮುಂತಾದ ಆಚರಣೆಗಳು ಬಹಳ ಸಂಖ್ಯೆಯಲ್ಲಿರುವ ದಕ್ಷಿಣ ಕನ್ನಡದಿಂದ ವಲಸೆ ಬಂದ ಕನ್ನಡಿಗರಲ್ಲಿ ಈಗಲೂ ಪರಂಪರೆಯಾಗಿ ಬಂದಿರುವ ವಿವರಣೆಯನ್ನು ಚೆನ್ನಾಗಿ ನೀಡಿದ್ದಾರೆ. ‘ಮುಂಬಯಿ ಕನ್ನಡಿಗರು’ ಮತ್ತು ‘ಕನ್ನಡಿಗರ ಬ್ಯಾಂಕಿಂಗ್ ಸಹಕಾರ’ ಈ ಎರಡು ಪರಿಚಯಾತ್ಮಕ ಲೇಖನಗಳು

ಕನ್ನಡಿಗರು ಮುಂಬಯಿಯಲ್ಲಿ ಮಾಡಿದ ಸಾಧನೆ, ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ರಂಗದಲ್ಲಿ ಕನ್ನಡಿಗರ ಕೊಡುಗೆಯನ್ನು ಸವಿಸ್ತಾರ ಕಟ್ಟಿಕೊಡುವುದರಿಂದ ಲೇಖಕರು ಪ್ರೀತಿಗೆ ಪಾತ್ರರಾಗುತ್ತಾರೆ.

ಒಟ್ಟಿನಲ್ಲಿ ಇದು ಉಪಯುಕ್ತ ಪುಸ್ತಕ. ಒಂದು `ಪ್ಯಾಕೇಜ್`ನಂತೆ ಬರುವ ಈ ಪುಸ್ತಕ (ಇದು ಮುಂಬಯಿ ವಾಸಿಗರ ಮನೋಧರ್ಮವೂ ಹೌದು) ಮುಂಬಯಿಗೆ ಬರುವ ಹೊರನಾಡಿನ ಲೇಖಕ / ಪ್ರವಾಸಿಗರಿಗೆ ಉಡುಗೊರೆ ಕೊಡಬಹುದಾದ ಉಪಯುಕ್ತತೆ ಪಡೆದಿದೆ. ಮುಂಬಯಿ ಕನ್ನಡಿಗರ ಸಾಧ್ಯತೆಗಳ ಎಲ್ಲ ಮಗ್ಗುಲುಗಳಲ್ಲಿ ಕೈಯಾಡಿಸುವ ಲೇಖಕರ ಆಸಕ್ತಿಯು ಹಂದರ ಮೆಚ್ಚುವಂತಹದ್ದು. ಸದಾ ಜಾಗೃತ ಮನಸ್ಸಿನ ಹಿಂದೆ ಕೆಲಸ ಮಾಡುವ ಕಾರ್ನಾಡರ ಆಸಕ್ತಿಯು ಹರವು ಈ ಲೇಖನಗಳಲ್ಲಿದೆ. ಈ ಲೇಖನಗಳು ಒಂದು ರೀತಿಯ ತೈಲ ಅಭ್ಯಂಜನಗಳ ಹಾಗೆ ವಸ್ತುವಿಷಯಗಳಿಗೆ ಎಣ್ಣೆ ಸವರಿಸಿ ಸ್ನಾನ ಮಾಡುವ ಸುಖದ ಹಾಗೆ. ಡಾ. ತಾಳ್ತಜೆ ವಸಂತಕುಮಾರರು ಹೇಳುವಂತೆ– ಆಳ ಮತ್ತು ಹರವನ್ನು ಕಾಯ್ದುಕೊಳ್ಳುವ ವಿಶ್ವಾಸದಲ್ಲಿ ಕಾರ್ನಾಡರು ಭಾಷೆ ಭಾವಗಳ ಸಮದಂಡೆಯನ್ನು ಕಾಯ್ದುಕೊಳ್ಳುವ ಈ ಪ್ರಯತ್ನದಲ್ಲಿ ಯಶ ಸಿಗಲಿ.

– ವಿ. ಎಸ್. ಶ್ಯಾನಭಾಗ್, ಎ-೩೦೪, ಸೀಗ್ರೇಸ್, ಸಿವಿಚ್‌ಎಸ್ ನ್ಯೂ ಲಿಂಕ್ ರೋಡ್, ಐ.ಸಿ. ಕಾಲನಿ, ಬೋರಿವಲಿ(ಪ), ಮುಂಬಯಿ-೪೦೦ ೧೦೩

೨. ಡಾ. ಬಿ. ಎ. ಸನದಿ ಬದುಕು-ಬರಹ : ಡಾ. ಜಿ. ಎನ್. ಉಪಾಧ್ಯ

ಕರ್ನಾಟಕ ಸಂಘ, ಡಾ. ಎಂ. ವಿಶ್ವೇಶ್ವರಯ್ಯ ಸ್ಮಾರಕ ಮಂದಿರ, ಸಿಎಸ್‌ಎಂ ಮಾರ್ಗ, ಮಾಟುಂಗಾ (ಪ.ರೇ.), ಮುಂಬಯಿ-೪೦೦ ೦೧೯, ಪ್ರಮು. ೨೦೦೫, ಪು. ೧೩೫, ರೂ. ೬೦/-

ಬಾಬಾಸಾಹೇಬ ಅಹ್ಮದ್‌ಸಾಹೇಬ ಸನದಿಯವರ ಬದುಕು ಬರಹ ಎಂಬ ಡಾ. ಜಿ. ಎನ್. ಉಪಾಧ್ಯರ ಈ ಕೃತಿ "ಸನದಿ ಅವರ ಸಾಹಿತ್ಯದ ಅಭ್ಯಾಸಕ್ಕೆ ಒಂದು ಪ್ರವೇಶಿಕೆ."

ಇದರಲ್ಲಿ ೯೧ ಪುಟಗಳಲ್ಲಿ ಲೇಖಕರು ತಮ್ಮ ಅಧ್ಯಯನ ದೃಷ್ಟಿಯಲ್ಲಿ ಸನದಿಯವರ ಸಾಹಿತ್ಯವನ್ನು ಅವಲೋಕಿಸಿದ್ದಾರೆ. ಉಳಿದ ಪುಟಗಳಲ್ಲಿ ಇತರರ ಅನಿಸಿಕೆಗಳು, ಸನದಿಯವರ ಬದುಕಿನ ಮೈಲಿಗಲ್ಲು, ಅವರ ಸಾಹಿತ್ಯಕೃತಿಗಳ ಪಟ್ಟಿ ಇತ್ಯಾದಿ ನೀಡಿದ್ದಾರೆ.

ಬೆಳಗಾವಿಯ ಸಿಂದೊಳ್ಳಿಯಿಂದ ಈಗಿನ ಕುಮಟಾ ತನಕ ಸನದಿಯವರ ಸಾಧನೆ ಅಪಾರ. ಅವರು ರಚಿಸಿದ, ಅನುವಾದಿಸಿದ, ಸಂಪಾದಿಸಿದ ಕೃತಿಗಳು ೫೦ ಕ್ಕಿಂತಲೂ ಹೆಚ್ಚು. ಇವೆಲ್ಲವನ್ನು ಸ್ಪರ್ಶಿಸುವುದು ಎಂದರೆ ಒಬ್ಬ ಸಾಹಿತ್ಯದ ವಿದ್ಯಾರ್ಥಿಗೆ ನಿಜಕ್ಕೂ ರೋಮಾಂಚನ. ಡಾ. ಜಿ. ಎನ್. ಉಪಾಧ್ಯರು ಅಂತಹ ಸಾಹಸಕ್ಕೆ ಇಳಿದಿದ್ದಾರೆ. ಅತ್ಯಂತ ಸರಳವಾಗಿ ಇಲ್ಲಿ ಸನದಿಯವರನ್ನು ಪರಿಚಯಿಸುತ್ತಾರೆ.

ಈ ಕೃತಿಯಲ್ಲಿ ಏಳು ಭಾಗಗಳಿವೆ. ಮೊದಲಿಗೆ ಸನದಿಯವರ ಬದುಕು-ಬರಹದ ಆರಂಭದ ದಿನಗಳನ್ನು ನೆನಪಿಸಿದರೆ ಮುಂದೆ ಅವರ ಕಾವ್ಯಕೃತಿಗಳು, ಗದ್ಯಸಾಹಿತ್ಯ, ಅನುವಾದ ಸಾಹಿತ್ಯ, ಸಂಪಾದಿತ ಕೃತಿಗಳು, ವಿಮರ್ಶಕರು ಕಂಡಂತೆ ಸನದಿ ಹಾಗೂ ಅನುಬಂಧ ಹೀಗೆ ಸನದಿಯವರ ಸಾಹಿತ್ಯದ ಅಭ್ಯಾಸ ಮಾಡುವವರಿಗೆ ಸಮರ್ಥ ಪ್ರವೇಶಿಕೆ ಸಿದ್ಧಗೊಳಿಸಿದ್ದಾರೆ.

ಸನದಿಯವರು ಬದುಕಿನ ಮೂರು ದಶಕಗಳಿಗೂ ಹೆಚ್ಚುಕಾಲ ಮುಂಬಯಿ ಕನ್ನಡಿಗರಾಗಿದ್ದವರು. ಅವರ ಮನೆಮಾತು ಉರ್ದು. ಕಲಿತದ್ದು ಕನ್ನಡ ಮಾಧ್ಯಮ. ಮರಾಠೀ, ಹಿಂದೀ, ಗುಜರಾತೀ ಪರಿಸರದಲ್ಲಿ ಅವರು ಸೇವೆ ಸಲ್ಲಿಸಿದವರು. ಸಂಸ್ಕೃತದಲ್ಲೂ ವಿಶೇಷ ಅಧ್ಯಯನ. ಬದುಕಿನಲ್ಲೂ ಬರವಣಿಗೆಯಲ್ಲೂ ಸುಸಂಸ್ಕೃತರು. `ಪ್ರಪಂಚ' ಪತ್ರಿಕೆಯಲ್ಲಿ ಹೇಳಿದಂತೆ, ಒಬ್ಬ ಒಳ್ಳೆಯ ಮುಸ್ಲಿಂ, ಒಬ್ಬ ಒಳ್ಳೆಯ ಸುಸಂಸ್ಕೃತ, ಒಬ್ಬ ಒಳ್ಳೆಯ ಕನ್ನಡಿಗ, ಒಬ್ಬ ಒಳ್ಳೆಯ ಭಾರತೀಯ ಹೇಗೆ ಇರುತ್ತಾನೆಂದು ಕೇಳಿದರೆ ಬಿ. ಎ. ಸನದಿಯವರ ಕಡೆಗೆ ಬೆರಳೆತ್ತಿ ತೋರಿಸಬಹುದು.

ಸನದಿಯವರು ಹೊಸಗನ್ನಡ ಸಾಹಿತ್ಯದ ಚಳವಳಿಗಳನ್ನು, ಆಯಾಮಗಳನ್ನು ಕಂಡವರು. ಆದರೆ ತಮ್ಮದೇ ಆದ ಸ್ವಂತಿಕೆಯನ್ನು, ಅಭಿವ್ಯಕ್ತಿಯನ್ನು ಜೀವಂತ ಇರಿಸಿ ಸಾಹಿತ್ಯಕೃತಿ ಮಾಡುತ್ತಾ ಬಂದವರು.

ಮನುಷ್ಯ ಮಾನವೀಯನಾಗಿ ಉಳಿಯುವುದೇ ಅವರ ಸಾಹಿತ್ಯದ ತಿರುಳು. ಗ್ರಾಮೀಣ ಪರಿಸರದಿಂದ ಬಂದ ಸನದಿ ಎಂದೂ ಅದನ್ನು ಮರೆಯಲಿಲ್ಲ. ಜನಪರ ಧೋರಣೆ, ಜೀವನಪರ ನಿಲುವು ಅವರ ಸಾಹಿತ್ಯದಲ್ಲಿ ಹರಿದು ಬಂದಿದೆ. ಸಾಹಿತ್ಯದ ವಿವಿಧ ಮಗ್ಗಲುಗಳಲ್ಲಿ ಆಸಕ್ತಿ ಇದ್ದ ಸನದಿಯವರು ಕತೆ, ನಾಟಕ, ವಿಮರ್ಶೆ, ಅನುವಾದ, ಕಾವ್ಯ ಹೀಗೆ ಎಲ್ಲಾ ಪ್ರಕಾರಗಳಲ್ಲಿ ಕೃತಿ ರಚಿಸಿದ್ದರೂ ಕಾವ್ಯವೇ ಅವರ ಪ್ರಮುಖ ಅಭಿವ್ಯಕ್ತಿ ಮಾಧ್ಯಮ ಎನ್ನುವುದಕ್ಕೆ ಅವರು ೧೭ ಕವಿತಾ ಸಂಕಲನ ಪ್ರಕಟಿಸಿರುವುದೇ ಸಾಕ್ಷಿ. ಈ ಎಲ್ಲ ಸಂಕಲನಗಳ ವೈಶಿಷ್ಟ್ಯವನ್ನು ಉಪಾಧ್ಯರು ಸ್ವಾರಸ್ಯಪೂರ್ಣವಾಗಿ ಗುರುತಿಸಿದ್ದಾರೆ. ರಾಷ್ಟ್ರಪ್ರೇಮವನ್ನು ಬಿಂಬಿಸುವ ಕನ್ನಡದ ವಿಶಿಷ್ಟ ಕವನ ಸಂಕಲನ 'ಹಿಮಗಿರಿಯ ಮಡಿಲಲ್ಲಿ', ಬಹುಮಾನ ವಿಜೇತ 'ತಾಜಮಹಲು', 'ಮನೆಮನೆಗೆ ಜೇಲಿ', 'ಧ್ರುವಬಿಂದು', 'ಸಂಭವ' ಇತ್ಯಾದಿ ಸಂಕಲನಗಳ ಆಶಯವನ್ನು ಉಪಾಧ್ಯರು ತಮ್ಮದೇ ನೆಲೆಯಲ್ಲಿ ಗುರುತಿಸಿದ್ದಾರೆ. ಇವುಗಳಲ್ಲಿ ಕೆಲವು ಸಂಕಲನಗಳನ್ನು ಮುಂಬಯಿಯ ತಾಯಿನುಡಿ ಪ್ರಕಾಶನ, ವಿದ್ಯಾನಿಧಿ ಪ್ರಕಾಶನ, ಸುವರ್ಣಗಿರಿ ಪ್ರಕಾಶನ, ಭಾವನಾ ಪ್ರಕಾಶನ ತಂದಿವೆ. ಇದನ್ನು ಗಮನಿಸಿದರೆ ಮುಂಬಯಿಯ ಆಗಿನ ಪ್ರಕಾಶನ ಸಂಸ್ಥೆಗಳ ಒಂದು ಪರಿಚಯವೂ ಆಗಿಬಿಡುತ್ತದೆ. ಸನದಿಯವರು ಸಂಕಲನದಿಂದ ಸಂಕಲನಕ್ಕೆ ಬೆಳೆದುಬಂದ ಬಗೆಯನ್ನು ಓದುಗರ ಮುಂದಿರಿಸುವ ಪ್ರಯತ್ನ ಇಲ್ಲಿದೆ. ಶಿಶುಸಾಹಿತ್ಯಕ್ಕೂ ಸನದಿ ಅವರ ಕೊಡುಗೆ ಗಮನಿಸಬೇಕು. ಇಲ್ಲಿನ ಲವಲವಿಕೆ, ಸಹಜ ಲಯ, ಪ್ರಾಸ, ಚಿತ್ತಾಕರ್ಷಕವಾದುದು ಎನ್ನುತ್ತಾರೆ ಉಪಾಧ್ಯ.

'ನೀರಿಲ್ಲದ ನಲ್ಲಿ' ಮತ್ತು 'ಅನುಭವ' ಸನದಿಯವರನ್ನು ಕತೆಗಾರರನ್ನಾಗಿಸಿದ ಸಂಕಲನಗಳು, ಗ್ರಾಮೀಣ ಬದುಕಿನ ನೈಜ ಚಿತ್ರಣಗಳು ಇಲ್ಲಿ ದೊರೆಯುತ್ತವೆ. ಸನದಿಯವರು ಹರಟೆ ಪ್ರಿಯರೂ ಹೌದು. ಹರಟೆಗಳ ಸಂಕಲನವನ್ನೂ ('ನಂದೊಂದ್ಮಾತು') ತಂದಿದ್ದಾರೆ. ಅದೇ ರೀತಿ ನಾಟಕಕಾರರಾಗಿ, ವಿಮರ್ಶಕರಾಗಿ ಸನದಿ ಹೇಗಿದ್ದಾರೆ, ನಾಳಿನ ಕಾವ್ಯದ ಧೋರಣೆಯನ್ನು ಯಾವ ರೀತಿ ಪಟ್ಟಿ ಮಾಡಿದ್ದಾರೆ ಎಂಬುದನ್ನೂ ಇಲ್ಲಿ ವಿವರಿಸಲಾಗಿದೆ. ಬಹುಭಾಷಾ ವಿಶಾರದ ಸನದಿ ಅನುವಾದ ಸಾಹಿತ್ಯದಲ್ಲೂ ೮ ಕೃತಿಗಳನ್ನು ತಂದಿದ್ದಾರೆ. ಉಪಾಧ್ಯರು ಸನದಿ ಅವರೊಂದಿಗೆ ಸಂದರ್ಶನ ನಡೆಸಿದ್ದೂ ಇಲ್ಲಿದೆ. ಇದು ಸನದಿಯವರನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಸಹಕಾರವಾದೀತು.

– ಶ್ರೀನಿವಾಸ ಜೋಕಟ್ಟೆ, ಜೋಕಟ್ಟೆ, ವಯಾ ಬಜಪೆ-೪೦೦ ೦೯೮ (ದ.ಕ.)

೩. *ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ : ಚಂದ್ರಶೇಖರ ವಸ್ತ್ರದ*

ಕ್ಷಮಾ ಪ್ರಕಾಶನ, ಬೆಳಗು, ಆನಂದಾಶ್ರಮ ರಸ್ತೆ, ಗದಗ-೫೮೨ ೧೦೧, ಪ್ರಮು. ೨೦೦೪, ಪು.೧೦೨, ರೂ.೫೦/-

ಉಚ್ಚ-ನೀಚಗಳೆರಡರ ನಡುವೆ ಒಂದು ಸಾಮಾನ್ಯ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದ ಕಾಲಸಂದರ್ಭ ೧೨ ನೇ ಶತಮಾನ. ಅಂತ್ಯಜರಲ್ಲಿ ಒಬ್ಬನಾಗಿ ಜನಿಸಿದ ಚೆನ್ನಯ್ಯ ಮಾನಸಿಕವಾಗಿ, ಭೌತಿಕವಾಗಿ ಬಸವನೆತ್ತರಕ್ಕೆ ಏರಿದ್ದು ಈ ಕ್ರಾಂತಿಯ ಒಂದು ಉದಾಹರಣೆ. ಹರಿಹರನ ಕೃತಿಯಿಂದ ಅಲ್ಲದೆ ಇಂದಿನ ವಾಸ್ತವ ಸಂಗತಿಗಳಿಂದ ಆಯ್ದು 'ಮಾದಾರ ಚೆನ್ನಯ್ಯ' ಕತೆಯನ್ನು ಹೆಣೆಯಲಾಗಿದೆ. ಮಾದಾರ ಚೆನ್ನಯ್ಯ ಐತಿಹಾಸಿಕ ಪುರುಷನಾದರೂ ಈ ಕೃತಿ ಇತಿಹಾಸವಲ್ಲ. ಸಾಹಿತ್ಯ ಕೃತಿಗಳಲ್ಲಿ ಅಲ್ಲಲ್ಲಿ ದೊರಕುವ ವಿವರಗಳಿಗೆ ಕಲ್ಪನೆಯ ರಕ್ತ ಮಾಂಸ ತುಂಬಿ ಕತೆಯಾಗಿಸಲಾಗಿದೆ. ಚಂದ್ರಶೇಖರ ವಸ್ತ್ರದ ಅವರು ಈ ಕತೆಯನ್ನು ನಿರೂಪಿಸಲು ಬಳಸಿದ ತಂತ್ರ ಭಿನ್ನವಾಗಿದೆ. ಮಾದಾರ ಚೆನ್ನಯ್ಯನ ಬಗ್ಗೆ ತಿಳಿಸಿಕೊಳ್ಳುವ ವೈಯಕ್ತಿಕ ಹಂಬಲಕ್ಕೆ ನಮ್ಮ ನಿಮ್ಮೆಲ್ಲರನ್ನು ಒಳಗುಮಾಡಿಕೊಂಡು "ಯಾರು ಈ ಚೆನ್ನಯ್ಯ? ಇವರ ಸಾಧನೆಯಾದರೂ ಏನು? ಬನ್ನಿ ನಾವು ನೀವು ಕೂಡಿ ತಿಳಿಯುವ ಪ್ರಯತ್ನ ಮಾಡೋಣ" –ಹೀಗೆ ಶರಣರ ಹಂಚಿ ಉಣ್ಣುವ ಪರಿಕಲ್ಪನೆಯನ್ನು ತಿಳಿಸುವಲ್ಲಿ ಕ್ರಿಯಾತ್ಮಕವಾಗಿಸಿದ್ದಾರೆ. ಇಂತಹ ಪ್ರೇರಕ ಮಾತುಗಳ ಮುಖಾಂತರ ಈ ಕೃತಿಯನ್ನು ಓದುವ ಗ್ರಂಥವಾಗಿಸದೆ ಕೇಳುವ ಕತೆಯಾಗಿಸುವಲ್ಲಿ ಯಶ ಸಾಧಿಸಿದ್ದಾರೆ. ಕೇಳುವ ಮಾತಿನ ರೀತಿ ಯಥಾವತ್ತಾಗಿ ಅಕ್ಷರದಲ್ಲಿ ಮೂಡಿಬಂದಿದೆ. "ಮಾದಾರ

ಚೆನ್ನಯ್ಯ ನಡೆವಲ್ಲಿ ಪೊರೆ ಇರದು. ನುಡಿಯಲ್ಲಿ ಮೈಲಿಗೆ ಇರದು. ಎಷ್ಟಾದರೂ ಶಿವನೊಡನೆ ಕೂಡಿ ಉಂಡವರಲ್ಲವೇ?'' ಎಂದು ಇನ್ನೊಂದು ಘಟನೆಗೆ ಪೀಠಿಕೆ ಹಾಕಿ ``ಶಿವನೊಡನೆ ಕೂಡಿ ಉಂಡವರು ಎಂದೆನಲ್ಲವೆ ಆ ಕಥೆ ಹೇಳ್ತೀನಿ'' ಹೀಗೆ ವಸ್ತ್ರದ ಅವರು ಕತೆ ಹೇಳುವ ಪ್ರಕ್ರಿಯೆಯಲ್ಲಿ ತೊಡಗಿಸಿ ಹೆಚ್ಚು ಕ್ರಿಯಾತ್ಮಕವಾಗಿಸುತ್ತಾರೆ. ಇಷ್ಟಾದರೂ ಅವರು ಸ್ವತಃ ಕತೆಯನ್ನು ಹೇಳುವುದಿಲ್ಲ. ಮಾದಾರ ಚೆನ್ನಯ್ಯನವರನ್ನು ಕಂಡ ಕೇರಿಯ ಜನರಿಂದ ಕತೆ ಹೇಳಿಸುತ್ತಾರೆ. ಚೆನ್ನಯ್ಯನೆಂಬ ಹುಡುಗ ಕಾಮಧೇನುವನ್ನು ಕೊಲ್ಲುವುದು, ಎಡಗೈ-ಬಲಗೈ ಗುಂಪುಗಳಾದ ಪ್ರಸಂಗ, ಬ್ರಹ್ಮ ಆಕಳಿಸಿದಾಗ ಜಾಂಬವಂತ ಹುಟ್ಟಿಬಂದ ಎಂಬ ಕತೆ ಅವಾಸ್ತವ ಎನ್ನಿಸುತ್ತದೆ. ಸಿಂಧು ಬಲ್ಲಾಳನು ಶಿವನಿಗೆ ತನ್ನ ಹೆಂಡತಿಯನ್ನೇ ಕೊಟ್ಟ ಎಂಬ ಹೇಳಿಕೆಯನ್ನು ಕುರಿತು, ಸಿಂಧು ಬಲ್ಲಾಳನು ಶರಣಸತಿ, ಲಿಂಗಪತಿ ಎಂಬರ್ಥದಲ್ಲಿ ತನ್ನನ್ನು ಶಿವನಿಗೆ ಅರ್ಪಿಸಿಕೊಂಡ ಎಂಬ ವಿವರಣೆ ಇವರು ಮಾಡಿಕೊಂಡ ವೈಚಾರಿಕ ಬದಲಾವಣೆ. ಡೊಕ್ಕಲಿಗ ಪದ ನಿಷ್ಪತ್ತಿಗೆ ಸಂಬಂಧಿಸಿ ಐತಿಹ್ಯಗಳನ್ನು ದಾಖಲಿಸಿ ನಂತರ ಇವನ್ನೆಲ್ಲ ಕಟ್ಟುಕತೆ ಎಂಬುದಾಗಿ ವೈಚಾರಿಕ ನೆಲೆಯಲ್ಲಿ ನಿರಾಕರಿಸುವುದು ವಸ್ತ್ರದ ಅವರು ಐತಿಹ್ಯಗಳು ಹಾಗೂ ವೈಚಾರಿಕತೆಯನ್ನು ಮುಖಾಮುಖಿಯಾಗಿಸುವ ಪ್ರಯತ್ನ ಎನ್ನಬಹುದಾಗಿದೆ. ಕಾಳಿ ಸಿದ್ಧಯ್ಯನ ಕತೆ, ಶಿವನು ಚೆನ್ನಯ್ಯನ ಮನೆಯಲ್ಲಿ ಉಂಡ ಕತೆ, ಡೊಕ್ಕಲಿಗ ಪದ ನಿಷ್ಪತ್ತಿಗೆ ಸಂಬಂಧಿಸಿದ ಕತೆ, ಎಡಗೈ-ಬಲಗೈ ಪದಗಳಿಗೆ ಸಂಬಂಧಿಸಿದ ಕತೆ ಹೀಗೆ ಅನೇಕ ಉಪಕತೆಗಳು ಇಲ್ಲಿ ಹೆಣೆಯಲ್ಪಟ್ಟಿವೆ.

ಕತೆಯಲ್ಲಿ 'ಅಜಗಜಾಂತರ ವ್ಯತ್ಯಾಸ' ಎಂಬ ಪದಪುಂಜದ ಬಳಕೆ, ``ಕೀಳಿಂಗಲ್ಲದೆ ಹಯನು ಕರೆಯದು'' ಎಂಬುದನ್ನು– ಆಕಳು ಕರೆಯಬೇಕೆನ್ನುವವನು ಆಕಳ ಕೆಳಗೆ ಕುಳಿತು ಹಾಲು ಕರೆಯಬೇಕಲ್ಲದೆ ಅದರ ಡುಬ್ಬದ ಮೇಲೆ ಕುಳಿತರೆ ಕರೆಯಲಾದೀತೆ? ಎಂದು ಅರ್ಥೈಸುವುದು– ಮುಂತಾದವು ಸರಿಯಲ್ಲ. ಮೂಲ ಪರಿಸರವನ್ನು ನಿರ್ಮಿಸುವ ಸಲುವಾಗಿ ವಸ್ತ್ರದವರು ಕೇರಿಯ ಸುತ್ತ ನಮ್ಮನ್ನು ಸುತ್ತಿಸುತ್ತಿದ್ದಾರೆ. ಮಾದರಿ ಗ್ರಾಮವನ್ನು ನಿರ್ಮಿಸುತ್ತಾರೆ. ಅವರವರ ವೃತ್ತಿಗೆ ಸಂಬಂಧಿಸಿದ ಪರಿಕರಗಳ ಮೂಲಕ ಅವರವರ ಸಂಸ್ಕೃತಿಯ ಪಾರಿಭಾಷಿಕ ರೂಪಗಳನ್ನು ಪರಿಚಯಿಸುತ್ತಾರೆ. ``ಆತ್ಮಕಲ್ಯಾಣದಷ್ಟೇ ಮುಖ್ಯ ಸಮಾಜಕಲ್ಯಾಣ'', ``ದೊಡ್ಡವರಾಗುವುದು ದೊಡ್ಡ ನಡತೆಯಿಂದಲೇ ವಿನಃ ದೊಡ್ಡ ಜಾತಿ, ದೊಡ್ಡ ಪದವಿ, ದೊಡ್ಡ ಮನೆ, ಅಧಿಕಾರದಿಂದಲ್ಲ'' –ಮುಂತಾದ ಆದರ್ಶಗಳನ್ನು ಹೆಣೆಯುತ್ತಾರೆ. 'ಅಶ್ರಮ ಸಂಸ್ಕೃತಿಯನ್ನು ಧಿಕ್ಕರಿಸಿ ಶ್ರಮ ಸಂಸ್ಕೃತಿಯನ್ನು ಕಾಣಲೇಬೇಕು' – ಎಂಬುದಾಗಿ ಚೆನ್ನಯ್ಯನವರಿಂದ ಹೇಳಿಸುವುದರ ಮೂಲಕ ಸಾಮಾಜಿಕ ಬದಲಾವಣೆಯನ್ನು ದಾಖಲಿಸುತ್ತಾರೆ. ಒಟ್ಟಿನಲ್ಲಿ ಹೊತ್ತಿಗೆ ಚಿಕ್ಕದಾದರೂ ವಿನೂತನ ಕಥನವಿಧಾನ, ಅಲ್ಲಲ್ಲಿ ಅವಾಸ್ತವ ಎನ್ನುವ ಸಂಗತಿಗಳಿದ್ದರೂ ವೈಚಾರಿಕತೆಗೆ ಬಂದು ತಲುಪುವ ವಿಚಾರಗಳು, ಸಹಜ ಭಾಷೆಯ ಬಳಕೆಯಿಂದಾಗಿ ಈ ಕೃತಿ ಉತ್ತಮವಾಗಿದೆ.

– ಡಾ. ಎ. ಮುರಿಗೆಪ್ಪ, ಡಿ-೧೮, ಕ. ವಿ. ವಿ. ವಸತಿ ನಿಲಯ, ಕವಿವಿ ಆವರಣ, ಧಾರವಾಡ-೫೮೦ ೦೦೩

೪. *ಹೆಣ್ಣು-ಹಕ್ಕು-ಹೋರಾಟ : ಡಾ. ವೆಂ. ವನಜ*

ಸಮತಾ ಅಧ್ಯಯನ ಕೇಂದ್ರ (ರಿ.), ಮೈಸೂರು, ಪ್ರಮು. ೨೦೦೩, ಪು.೧೦೪, ರೂ.೬೦/-

ಸ್ವಾತಂತ್ರ್ಯಕ್ಕಾಗಿ, ಸಮಾನತೆಗಾಗಿ ಹೋರಾಟ ನಡೆಯದೆ (ಸಂಬಂಧಿಸಿದವರಿಗೆ) ಯಾವುದೇ ಬಗೆಯ ಸಾಮುದಾಯಿಕ ನ್ಯಾಯ ದೊರಕಿದ್ದನ್ನು, ಭೂಗೋಲದ ಯಾವುದೇ ಭಾಗದಲ್ಲಾಗಲೀ ಇತಿಹಾಸದ ಯಾವುದೇ ಕಾಲಾವಧಿಯಲ್ಲಾಗಲೀ ನೋಡಲು ಸಿಗುವದಿಲ್ಲ. ತೀರ ವಿಶೇಷವಾಗಿ, ನಮ್ಮ ಸ್ತ್ರೀ ಸಮುದಾಯ ಗಮನಿಸಲೇಬೇಕಾದ ಅಂಶವಿದು. ಏಕೆಂದರೆ, ವರ್ಗ ಮತ್ತು ವರ್ಣ ಎರಡನ್ನೂ ಮೀರಿ ಇತಿಹಾಸದ ಎಲ್ಲ ಕಾಲಾವಧಿಗಳುದ್ದಕ್ಕೂ ತುಳಿತಗಳಿಗೂ, ಅನ್ಯಾಯಗಳಿಗೂ, ಅಸಮಾನತೆಗಳಿಗೂ ಒಳಗಾಗಿರುವವಳು ಹೆಣ್ಣು. ಎಂತಲೇ, ತಾನು ನಿರ್ವಹಿಸುತ್ತಿರುವ ಕೌಟುಂಬಿಕ, ಸಾಮುದಾಯಿಕ ಕರ್ತವ್ಯಗಳಾಚೆ ಇದ್ದೇ ಇರುವ

ತನ್ನ ಹಕ್ಕುಗಳಿಗಾಗಿ ಇಂದಾದರೂ, ಹೆಣ್ಣು ಹೋರಾಟದ ತನ್ನ ಕೈಯನ್ನು ಎತ್ತಲೇಬೇಕಾಗಿದೆ. ಅಂತಹ ಒಂದು ಹೋರಾಟ, ಒಂದು ಚಳವಳಿ ಮತ್ತು ಅದಕ್ಕೆ ಅಗತ್ಯವಾದ ಒಂದು ಎಚ್ಚರದ ತಿಳಿವಳಿಕೆಗಳನ್ನು, ಪ್ರಾಥಮಿಕ ಹಂತಗಳಲ್ಲಿ ಪ್ರತಿಪಾದಿಸುವ ಕೃತಿ ಡಾ. ವನಜ ಅವರ `ಹೆಣ್ಣು-ಹಕ್ಕು-ಹೋರಾಟ.'

ಈ ಕೃತಿಯಲ್ಲಿ ಒಟ್ಟು ನಾಲ್ಕು ಲೇಖನಗಳಿವೆ. `ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಅದೃಶ್ಯ ಹೋರಾಟಗಾರ್ತಿಯರು' ಎಂಬ ಲೇಖನದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಂಡಸರೊಂದಿಗೆ ಹೆಗಲೆಣೆಯಾಗಿ (ಎಷ್ಟೋ ಸಲ ಅವರಿಗಿಂತಲೂ ಮುನ್ನುಗ್ಗಿ), ವಿವಿಧ ಮುಖಗಳಲ್ಲಿ ಹೋರಾಟಕ್ಕಿಳಿದ ಮಹಿಳೆಯರ ಕೆಲವು ಘಟನೆಗಳ ವಿವರಗಳಿವೆ (ಇಲ್ಲಿ ಚಿತ್ರಿತವಾಗಿರುವ ಹೆಚ್ಚಿನ ಪಾಲು ಮಹಿಳೆಯರು ಉತ್ತರ ಕರ್ನಾಟಕದವರು ಎಂಬುದು ಗಮನಾರ್ಹ).

`ಹೆಣ್ಣುಮಕ್ಕಳ ಶಿಕ್ಷಣ-ಅಡೆತಡೆಗಳು ಮತ್ತು ಪ್ರೇರಕಗಳು' ಎಂಬ ಲೇಖನದಲ್ಲಿ ಪೋಷಕರ ಅನಕ್ಷರತೆ, ಬಡತನ, ತಾರತಮ್ಯ ನೀತಿ, ವರದಕ್ಷಿಣೆ ಪದ್ಧತಿ, ಬಾಲ್ಯವಿವಾಹ, ತಪ್ಪು ಕಲ್ಪನೆಗಳು, ತಪ್ಪು ಮಾದರಿಗಳು ಎಂದು ಗುರುತಿಸಲಾಗುವ ಮಹತ್ವದ ಭಾಗದಲ್ಲಿ, ಮಕ್ಕಳ ಶಿಕ್ಷಣದ ಸಾಮುದಾಯಿಕ ಆವಶ್ಯಕತೆಯತ್ತ ಒತ್ತನ್ನೀಯುತ್ತಾರೆ.

ಬೀಡಿ ಕಾರ್ಮಿಕ ಮಹಿಳೆಯರ ಅನೇಕ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ, `ನಿಪ್ಪಾಣಿಯ ಬೀಡಿ ಕಾರ್ಮಿಕ ಮಹಿಳೆಯರು' ಎಂಬ ಲೇಖನ, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಸಿಯಲ್ ಸಾಯನ್ಸಿನ ಛಾಯಾ ದಾತಾರ ಅವರು ಬರೆದ ಲೇಖನದ ಸಂಗ್ರಹಾನುವಾದವಾಗಿದೆ.

ನಾಲ್ಕನೆಯ ಬರಹ `ದಕ್ಷಿಣ ಕರ್ನಾಟಕದ ಸಾರಾಯಿ ವಿರೋಧಿ ಚಳವಳಿಗಳು'. ಇದರಲ್ಲಿ ಮಹಿಳೆಯರು, ಅದರಲ್ಲೂ ವಿಶೇಷವಾಗಿ, ಗ್ರಾಮೀಣ ಪ್ರದೇಶದ ಪರಿಶಿಷ್ಟ ಪಂಗಡಗಳ ಅನಕ್ಷರಸ್ಥ ಮಹಿಳೆಯರು, ಸಾರಾಯಿ ಮಾರಾಟಗಳ ವಿರುದ್ಧ ವಿವಿಧ ಕಡೆ ಕೈಗೊಂಡ ಹೋರಾಟಗಳ ವಿವರಗಳಿವೆ.

`ವಿದ್ಯಾರ್ಥಿಗಳನ್ನೇ ಗಮನದಲ್ಲಿಟ್ಟುಕೊಂಡು ಸಿದ್ಧವಾದ ಸಂಕಲನ'ವೆಂದು ಸ್ವತಃ ಲೇಖಕರೇ ಹೇಳಿದ್ದರೂ, ಈ ಕೃತಿ, ಪ್ರೌಢರೂ ಓದಿ ಮೆಚ್ಚಬಹುದಾದ ಅಂಶಗಳನ್ನು ಒಳಗೊಂಡಿದೆ.

– ದೇಶಪಾಂಡೆ ಸುಬ್ಬರಾಯ, 'ನೆಲೆ', ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೫೮೦ ೦೦೮

೫. *ಇತಿಹಾಸ ಮರೆತವರು : ಮರಿಯಪ್ಪ ನಾಟೇಕರ್*

ಅಭಿಜಿತ್ ಪ್ರಕಾಶನ, ಎ-೪೦೪, ವಿನಾಯಕ ಆಶಿಶ್, ಎಂ. ಎಂ. ರಸ್ತೆ, ಪಿ. ಆ್ಯಂಡ್ ಟಿ ಕಾಲನಿ ಹತ್ತಿರ, ಮುಳುಂದ್ (ಪ), ಮುಂಬಯಿ-೪೦೦ ೦೮೦, ಪ್ರ.ಮು. ೨೦೦೫, ಪು. ೬೦, ರೂ. ೩೫/-

ಶಬ್ದ, ಮಾತು, ಕಾಳಜಿಗಳು ಕವಿತೆಯಾಗುವುದಿಲ್ಲ, ಯಾವದೇ ಸಿದ್ಧಾಂತ, ಧೋರಣೆಗಳು ಎಷ್ಟೇ ಉನ್ನತವಾಗಿದ್ದರೂ ಕವಿತೆಯಾಗುವುದಿಲ್ಲ. ಭಾವುಕ ಲಹರಿಗಳು, ಭಾಷೆಯ ಕುರಿತ ಪಾಂಡಿತ್ಯ ಕಾವ್ಯವಾಗದು. ಭಾಷೆಯ ಕನಿಷ್ಠ ತಿಳಿವು, ಅನುಭವದ ಕನಿಷ್ಠ ಸಹಕಾರದೊಂದಿಗೆ ಕವಿತೆಯಾಗಬಲ್ಲದು— ಪ್ರತಿಭೆಯ, ಕಣ್ಣಿಗೆ ಕಾಣದ ಎಳೆಯೊಂದು ಅವುಗಳನ್ನು ಹೆಣೆದರೆ. ಮಾತುಗಳಿಗೆ ಜೈವಿಕ ಶಕ್ತಿ ತುಂಬಬಲ್ಲ ಕವಿಯ ಶಕ್ತಿಯದು. ಈ ಅರ್ಥದಲ್ಲಿ ಕವಿ ಬ್ರಹ್ಮ, ಕವಿತೆ ಕಟ್ಟುವ ಕಾಯಕ ಸೃಷ್ಟಿಕ್ರಿಯೆ. ಹೀಗೆಂದಾಗ ಕವಿ-ಕಾವ್ಯ ಅಸಾಮಾನ್ಯವೆಂದೇನಲ್ಲ. ಅತ್ಯಂತ ಸಾಮಾನ್ಯವಾದುದರಲ್ಲಿಯ ಜೀವಸೆಲೆಯ ಅನಾವರಣ ಕವಿತೆ. ಇದು ಕವಿಯಾಗಬೇಕಾದವನಿಗಿರಬೇಕಾದ ಪ್ರಾಥಮಿಕ ತಿಳಿವಳಿಕೆ.

ಮರಿಯಪ್ಪ ನಾಟೇಕರರ `ಇತಿಹಾಸ ಮರೆತವರು' ಸಂಕಲನದ ಕವಿತೆಗಳ ಬಗ್ಗೆ ಬರೆಯುವಾಗ ಈ ಮಾತುಗಳನ್ನು ನೆನಪಿಸಿಕೊಳ್ಳುವುದು ಅನಿವಾರ್ಯವಾಗುತ್ತಿದೆ. ಅವರನ್ನು ನೋಯಿಸುವ ಕುಗ್ಗಿಸುವ, ಅಪ್ರತಿಭಗೊಳಿಸುವ ಯಾವ ಉದ್ದೇಶವೂ ಇಲ್ಲದೆ ಕೇವಲ ಅವರಿಗೆ ನಿಜವಾದ ಅರ್ಥದಲ್ಲಿ ಒಳ್ಳೆಯದಾಗಲಿ ಎಂಬ ಕಾರಣದಿಂದ ಈ ಮಾತುಗಳನ್ನು ಬರೆಯುತ್ತಿರುವೆ. ಕವಿಯಾಗುವ ಹಂಬಲ ಕವಿತೆಗೆ ಅಗತ್ಯವಿರುವ ಭಾವನಾತ್ಮಕ ಅನುಭವಗಳು, ಮಾನವೀಯ ಆಶಯಗಳು, ಅಭಿವ್ಯಕ್ತಿಗೆ ಅಗತ್ಯವಿರುವ ಭಾಷೆಯ ಪ್ರೌಢಿಮೆ, ಪ್ರಾಮಾಣಿಕತೆ, ಸಂಯಮ, ಆಧುನಿಕ ಮನಸ್ಸು ಈ ಗುಣಗಳು

ನಾಟೇಕರರಲ್ಲಿ ಸಾಕಷ್ಟು ಪ್ರಮಾಣದಲ್ಲಿರುವುದು ಕವಿಯಾಗಲು ಅವರ ಅರ್ಹತೆಯ ಸಕಾರಾತ್ಮಕ ಸಂಗತಿಗಳು. ಅನುಭವಗಳನ್ನು ಸಂವೇದನೆಯ ಪಾತ್ರೆ ಪಾತಳಿಯಲ್ಲಿ ಪಾಕವಾಗಿಸಿಕೊಂಡು, ಅರಿವನ್ನು ಮೀರಿದ ತನ್ಮಯತೆಯಲ್ಲಿ ಕವಿತೆಯ ಅಡಿಗೆ ಸಿದ್ಧವಾಗಬೇಕು. ಅದಕ್ಕಾಗಿ ಆಧುನಿಕ ಕನ್ನಡ ಕಾವ್ಯದ ಅಸಂಖ್ಯಾತ ಮಾದರಿಗಳ ವಿಸ್ತೃತ ಓದಿನಿಂದ ಪಡೆಯಬೇಕಾದ ಹದಗಾರಿಕೆಯ ಅಗತ್ಯವಿದೆ. ಇಲ್ಲಿನ ೪೫ ರಚನೆಗಳಲ್ಲಿ ನಮ್ಮ ಸದ್ಯದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬದುಕಿನ ಬಗೆಗಿನ ಮೇಲು ಗ್ರಹಿಕೆಯ ತೆಳು ಚಿತ್ರಗಳು ಮೂಡಿವೆ. ಇವು ದುರ್ಬಲ ಅನುಕರಣೆಯಂತೆ ಕಾಣುತ್ತವೆ. ಇಂದು ಕವಿಯಾಗಬಯಸುವ ಬೇರೆ ಎಲ್ಲರಂತೆ ನಾಟೇಕರರ ಎದುರಿಗೆ ದೊಡ್ಡ ಸವಾಲಿದೆ. ಆ ಸವಾಲನ್ನೆದುರಿಸುವ ಶಕ್ತಿ ಅವರಲ್ಲಿ ಬೀಜರೂಪದಲ್ಲಿ ಇದೆ ಎಂಬುದನ್ನು ತೋರುವ ಬೇರೆ ಬೇರೆ ಪದ್ಯಗಳ ಕೆಲವು ಸಾಲುಗಳನ್ನಿಲ್ಲಿ ಕೊಡುತ್ತಿರುವೆ :

ಮೋಡ ಮಾಗಿ ಹನಿ ಹನಿಯಾಗಿ / ಮಣ್ಣೊಳು ಸಾಗಿ ಕಲೆತು ಹದವಾಗಿ
ಸುವಾಸನೆ ಸೂಸುವಾಗ ನನ್ನ ತಾಯಿಯ / ನೆನಪಿನ ಬಳ್ಳಿಗೆ ಸಾವಿರ ಮೊಗ್ಗು (ನೆನಪು)

ಕಣ್ಣಿಂದ ಬೆಳಕುಂಟು ಇನ್ನೊಂದು ಒಳಗೆ
ಕಣ್ಣು ಕತ್ತಲೆಗೆ ಮಾರಿದರೂ ಬೆಳಕು ಶಾಶ್ವತ (ಬಸವಣ್ಣ)

ಗುಡ್ಡ ಬೆಟ್ಟ ಕೆಡವಿ ಕಡಲ ಖಾಲಿ ಮಾಡಿ
ಮಂದಿರ ಮಸೀದಿ ಕಾರ್ಖಾನೆ ಬುನಾದಿ ಕೆಡವಿ
ನೋಡಬೇಕಿದೆ ಇತಿಹಾಸ ಬರೆಯಬೇಕಿದೆ (ಇತಿಹಾಸ ಮರೆತವರು)

ಮಳೆಯುಂಡ ಇಳೆಯ / ಸೆರಗಿನ ಚಿತ್ತಾರದಂತೆ ಕಂಡೆ (ನೀಲಿ ಮನಸಿನ ತಾಯಿ)

ನಾಟೇಕರರ ಕಾವ್ಯ ಫಸಲು ಈ ಬಗೆಯ ಸ್ವಂತಿಕೆಯ ಹುಡುಕಾಟದಲ್ಲಿ ಸಮೃದ್ಧವಾಗಿ ಬೆಳೆಯಲಿ. ಅವರಿಂದ ಇನ್ನೂ ಮಹತ್ವದ ಕಾವ್ಯಕೊಡುಗೆ ಕನ್ನಡಕ್ಕೆ ಒದಗಲಿ.

– ಬಸವರಾಜ ಪಕ್ಕುಂದ, ಕೆಂಡದಮಠ ಬಿಲ್ಡಿಂಗ್, ೧೦ ನೇ ಕ್ರಾಸ್, ಸಪ್ತಾಪುರ, ಧಾರವಾಡ-೫೮೦ ೦೦೧

೬. ನದಿಗೊಂದು ಕನಸು ಮತ್ತು ಅವಳು : ಸತ್ಯಾನಂದ ಪಾತ್ರೋಟ

ಸಮತಾ ಪ್ರಕಾಶನ, ಬಾಗಲಕೋಟೆ-೫೮೭ ೧೦೨, ಪ್ರಮು. ೨೦೦೪, ಪು. ೧೩೦, ರೂ. ೫೦/-

ಭೂಮಿಯ ಮೇಲೆ ಮನುಷ್ಯ ಹುಟ್ಟಿದಾಗಿನಿಂದ ಮಾನವೀಯತೆ ರೂಪುಗೊಳ್ಳುತ್ತ, ವಿಕಸಿಸುತ್ತ, ವಿಘಟನೆಗೊಳಗಾಗುತ್ತ, ಮರು ಸಂಘಟನೆಗೊಳ್ಳುತ್ತ ಬಂದಿದೆ. ಈ ಮಾನವೀಯತೆಯ ತಳಹದಿಯೇ ಪ್ರೀತಿಯೆಂಬ ಜೀವದ್ರವ್ಯ. ಮನುಷ್ಯ ಬದುಕಿನಲ್ಲಿ ಸಂಸ್ಕೃತಿ– ವೈಚಾರಿಕತೆಗಳಿಗೆ ಬೇರಾಗಿಪ್ಪದ್ದು ಪ್ರೀತಿ. ನಿಜವಾದ ಧರ್ಮ ಪರಿಕಲ್ಪನೆಯಲ್ಲಿ ತತ್ತ್ವಸಿದ್ಧಾಂತದಲ್ಲಿ ಅಡಕವಾಗಿರುವುದು ಪ್ರೀತಿ. ಆದರೆ ಅಹಂಕಾರ ಮತ್ತು ಆಳುವ ಗುಣ ಯುದ್ಧೋನ್ಮಾದವನ್ನು ದ್ವೇಷ-ಅಸೂಯೆಗಳನ್ನು ಬಿತ್ತಿದೆ. ಮನುಷ್ಯ ಮನುಷ್ಯರ ನಡುವೆ ನೂರಾರು ತಡೆಗೋಡೆಗಳೆದ್ದಿವೆ. ಇವು ಬದುಕಿನ ಸಹಜ ಚಲನೆಯನ್ನು ಸಂಸ್ಕೃತಿಯ ಸೌಂದರ್ಯವನ್ನು ನಾಶಮಾಡುತ್ತಿವೆ. ಸೃಜನಶೀಲ ಮನಸ್ಸಿಗೆ ನಿರಂತರ ಚಡಪಡಿಕೆ ಮತ್ತು ಅನಾಥಪ್ರಜ್ಞೆ ಈ ಕಾಲದ ಕೊಡುಗೆಯಾಗಿದೆ– ಮಾತಿಗೂ ಭಾವಕ್ಕೂ / ಒಲವಿಗೂ ಚೆಲುವಿಗೂ / ನೀರಿಗೂ ದಾರಿಗು / ಜಾತಿ ಮತ ಬೆರಸಿದರೆ / ಹೇಗ ಹೇಳುವುದ್ದೇಳು / ಎದೆಯ ಮಾತು? (ಎದೆಯ ಮಾತು) ಎಂದು ಕಳವಳಿಸುವ ಕವಿ ಪ್ರೀತಿಯ ಸೆಲೆಯನ್ನು ಜೋಪಾನವಾಗಿಡಲು ಯತ್ನಿಸುತ್ತಾರೆ. ಪ್ರೀತಿಯ ಊರುಗೋಲಿನಿಂದ ಬಾಳಿನ ಬೆಂಗಾಡನ್ನು ಕ್ರಮಿಸುವ ಕನಸು ಕಾಣುತ್ತಾರೆ.

ಕವಿ ಸತ್ಯಾನಂದ ಪಾತ್ರೋಟರ 'ನದಿಗೊಂದು ಕನಸು ಮತ್ತು ಅವಳು' ಎಂಬ ಸಂಕಲನ ಈ ಮೇಲಿನ ಮಾತುಗಳು ಹುಟ್ಟಲು ಕಾರಣವಾಗಿದೆ. ಪ್ರೀತಿ ಎನ್ನುವುದು ಇಲ್ಲಿ ಹಳವಂಡವಾಗದೆ ಬದುಕನ್ನು ಸಂರಕ್ಷಿಸುವ ಇರಾದೆಯಾಗಿದೆ. ಪ್ರೀತಿ ಅಕ್ಕನ ಚೆನ್ನಮಲ್ಲಿಕಾರ್ಜುನನಂತೆ. ಅಂತರಂಗದ ಸಾಂಗತ್ಯ. ಪ್ರೀತಿ 'ದೇವ-ದೈವಕ್ಕಿಂತ ಮಿಗಿಲು' ಎಂಬುದು ಕವಿಯ ಅಭಿಪ್ರಾಯ. 'ಅವಳು' ಬದುಕಿಗೆ ಮತ್ತು ಕಾವ್ಯಕ್ಕೆ ಸ್ಫೂರ್ತಿಯಾದುದರಿಂದ ಕವಿ ಅವಳನ್ನು 'ಕಾವ್ಯಾಕ್ಷಿ' ಎನ್ನುತ್ತಾರೆ.

ಪ್ರೀತಿಯ ಸಾಂಪ್ರದಾಯಿಕ ನಿಲುವುಗಳಿಗೆ ಹೊಸಜೀವ ನೀಡಲು ಕವಿ ಯತ್ನಿಸುತ್ತಾರೆ. `ಅವಳ ಸೌಂದರ್ಯ–ಚೈತನ್ಯಗಳ ವರ್ಣನೆಯಲ್ಲಿ ಜೀವನದಿಯೆಂಬ ಸಮೀಕರಣದಲ್ಲಿ ಕಾವ್ಯ ಪರಂಪರೆಗೆ ಋಣಿಯಾಗಿದ್ದಾರೆ. `ನಿನ್ನನ್ನು ಮೀರಿಸುವ ಚೆಲುವೆಯಿರಲಾರದು. ಅವರ ಶೈಲಿ, [illegible] ಕಾಣೆ. ಅವರ ಕಣ್ಣಿನ ಆ ಕಥೆ ನೋಡಿ` ಎಂದು ಪ್ರೀತಿಗೆ ಕಾರಣ ಕೊಡುವುದು, ಪ್ರೀತಿಗೆ ತರ್ಕಬದ್ಧ ಕಾರಣಗಳನ್ನು ನೀಡುವುದು ಆಭಾಸವೆನಿಸುತ್ತದೆ.

ಪ್ರೀತಿಯನ್ನು ಅಲಿಬಾಬಾನ ಚಾಪೆಯಂತೆ ಬಳಸಿಕೊಂಡು ಸಮಾನ ಸಮಾಜದ ಕನಸು ಕಾಣುವುದು ನಮ್ಮ ಸಂದರ್ಭದ ಸೃಜನಶೀಲ ತುರ್ತಾಗಿದೆ. ಇಂತಹ ಕರುಳ ಸಂಬಂಧ ಪಾತ್ರೋಟರ ಕವಿತೆಗಳ ಲಕ್ಷಣವೂ ಆಗಿದೆ. `ನಿನ್ನ ಹೆಜ್ಜೆಯ ನಾದ ಕೇಳಿದರೆ ಸಾಕು / ಮಾತನಾಡುತ್ತವೆ / ಮಾತನಾಡದ ರಸ್ತೆಗಳು / ಮೂಡುತ್ತವೆ. ಮುರಿದ ಕೈಗಳಲಿ ಕಾಮನಬಿಲ್ಲುಗಳ (ಹೆಜ್ಜೆಗಳೆಲ್ಲ ಮಾತನಾಡಿದಾಗ). ವೈಯಕ್ತಿಕ-ಸಾಮಾಜಿಕ ಎಂಬ ಭೇದವನ್ನು ಅರಗಿಸಿಕೊಂಡ ಸಂಕೀರ್ಣ ಅಭಿವ್ಯಕ್ತಿ ಕ್ರಮ ಇಂದಿನ ಕಾವ್ಯದ ಲಕ್ಷಣವಾಗಿದೆ. ಪ್ರಸ್ತುತ ಸಂಕಲನದ ಕವಿತೆಗಳಲ್ಲಿ ಈ ಲಕ್ಷಣ ಗಾಢವಾಗಿಯೇ ಇದೆ. ಈ ಬದುಕಿನ ತುಂಡಿನಂಥ ಅಭಿವ್ಯಕ್ತಿಗೆ ಪಾತ್ರೋಟರ ಅನನ್ಯತೆಯ ಹರಿತವಿದೆ.

ಇಂದು ಮನುಷ್ಯ ರಕ್ತ ತೀರಾ ಸೋವಿಯಾಗಿದೆ. ರಕ್ತದ ಹರಾಜನ್ನು ನಿಲ್ಲಿಸಬಯಸುವ ಎಲ್ಲರ ಮನಸ್ಸುಗಳೂ ಒಂದಾಗುವಂತೆ ಮಾಡುವಲ್ಲಿ ಪ್ರೀತಿ ನೆರವಾದೀತೆಂಬುದು ಕವಿಯ ಕನಸು. ಪ್ರೀತಿಯಿದ್ದ ಮನದಲ್ಲಿ ದ್ವೇಷಕ್ಕೆ ಜಾಗವಿರುವುದಿಲ್ಲ. ಪ್ರೀತಿ ಹರಿವ ನದಿಯಂತೆ. ತನ್ನ ಹರಿವಿನಗುಂಟ ಬದುಕನ್ನು ಅರಳಿಸುತ್ತದೆಂಬ ಸಂತಸ, ಪ್ರೀತಿಯ ಎಲ್ಲ ಸಂಕಟವನ್ನೂ ಸಹಿಸಿಕೊಳ್ಳುವ ಶಕ್ತಿ ನೀಡುತ್ತದೆ ಎನ್ನುತ್ತಾರೆ ಕವಿ. ಇದೊಂದು ಉತ್ತಮ ಸಂಕಲನವಾಗಿದೆ.

– ಡಾ. ವಿನಯಾ, ಕನ್ನಡ ವಿಭಾಗ, ಶ್ರೀ ಸಿದ್ಧೇಶ್ವರ ಸರಕಾರಿ ಕಾಲೇಜು, ನರಗುಂದ

೭. *ಹೈಬ್ರಿಡ್ ಕತೆಗಳು : ಆರ್ಯ*

ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ), ಪ್ರಮು. ೨೦೦೫, ಪು. ೯೨, ರೂ. ೬೫/-

ಆರ್ಯ ಅವರ `ಹೈಬ್ರಿಡ್ ಕತೆಗಳು` ಈ ಕಾಲದ ಜಾಗತೀಕರಣ, ಖಾಸಗೀಕರಣ ಮತ್ತು ಇಡೀ ವಿಶ್ವವೊಂದು ಹಳ್ಳಿಯಾದಾಗ ಸಂಭವಿಸುವಂತಹ ಸಾಂಸ್ಕೃತಿಕ ಪಲ್ಲಟ, ಸ್ಥಿತ್ಯಂತರ ಹಾಗೂ ಅವುಗಳ ಇತ್ಯಾತ್ಮಕ ಹಾಗೂ ನೇತ್ಯಾತ್ಮಕ ಅಂಶಗಳನ್ನ ಸೃಜನಶೀಲ ನೆಲೆಯಲ್ಲಿ ಇಟ್ಟು ನೋಡುವ– ಪರೀಕ್ಷಿಸುವ ಪ್ರಯತ್ನ ಮಾಡುತ್ತವೆ. ಈ ಸಂಕಲನದಲ್ಲಿ ಒಟ್ಟು ಎಂಟು ಕತೆಗಳಿವೆ. ಇಡೀ ಕತೆಗಳ ಕೇಂದ್ರ ಆಶಯವೇ ಸಾಂಸ್ಕೃತಿಕ ಸಂಕರಕ್ಕೆ ಸಿಕ್ಕ ವ್ಯಕ್ತಿಗಳ ವ್ಯಕ್ತಿತ್ವದಲ್ಲಿ ಸಂಭವಿಸುವ ಸಂಕೀರ್ಣ ಆಯಾಮಗಳನ್ನ ಪರೀಕ್ಷಿಸುವುದಾಗಿದೆ.

ಇಲ್ಲಿನ ಬಹುತೇಕ ಕತೆಗಳ ಪರಿಸರ ಮತ್ತು ವ್ಯಕ್ತಿಗಳು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ನೆಲೆಗಳ ನಡುವೆ ತುಯ್ಯುತ್ತವೆ. ಅಲ್ಲಿನ ಪರಿಸರವನ್ನ ಇಲ್ಲಿ, ಇಲ್ಲಿನ ಪರಿಸರವನ್ನು ಅಲ್ಲಿ ಇಟ್ಟು ತೂಗಿ ನೋಡುವ ಕಾರ್ಯವನ್ನೂ ಮಾಡುತ್ತವೆ. ಇಂಥ ಕಾರ್ಯಕ್ಕೆ ಉದ್ಯುಕ್ತವಾಗುವ ಇಲ್ಲಿನ ಬಹುತೇಕ ಪಾತ್ರಗಳಿಗೆ ಒಂದು ವಿಶಿಷ್ಟ ವ್ಯಕ್ತಿತ್ವವಿದೆ. ಅದು ಸಂಗೀತ, ಸಾಹಿತ್ಯ, ಶಿಲ್ಪ, ಇತಿಹಾಸಗಳ, ಅಧ್ಯಾತ್ಮ ಮುಂತಾದ ಕಲೆಗಳ ಮೇಲಣ ಪ್ರೇಮದಿಂದ ರೂಪಿಸಿಕೊಂಡ ವ್ಯಕ್ತಿತ್ವ ಅದು. ಈ ವ್ಯಕ್ತಿತ್ವಗಳಿಗೆ ವಿಚಿತ್ರ ವಿಕ್ಷಿಪ್ತತೆ ಮತ್ತು ಬದುಕಿನ ಬಗ್ಗೆ ಅದಮ್ಯ ಮೋಹವಿದೆ. ಇಂಥ ವಿಕ್ಷಿಪ್ತತೆ ಹಾಗೂ ಮೋಹಗಳು ಬದುಕಿನ ಬೇಲಿ ಕಟ್ಟಲು ಪ್ರಬಲ ಊರುಗೋಲುಗಳಾಗಿ ಒದಗಿಬರುತ್ತವೆ.

ಕತೆಯ ಒಳಾಂಗಣದಲ್ಲಿ ಕಟ್ಟಿಕೊಡುವ ಇಂಥ ವಿವರಗಳು ಸ್ವತಃ ಕತೆಗಾರರ ಆಸಕ್ತಿಯ ಕೇಂದ್ರಗಳಾದ್ದರಿಂದ ಒಂದು ಅಂಥೆಟಿಸಿಟಿಯೂ ಪ್ರಸ್ತಾಪವಾಗಿದೆ. ಕೆಲವೊಮ್ಮೆ ಕತೆಯೇ ಹಿಂದೆ ಸರಿದು ಈ ವಿವರಗಳೇ ಕತೆಗಳ ಮೇಲೆ ಸವಾರಿ ಮಾಡಿದಂತೆಯೂ ಅನ್ನಿಸುವುದಿದೆ.

ಈ ಸಂಕಲನದ ಮೊದಲ ಕತೆ `ಭೂತ` ಒಂದು ಯಶಸ್ವಿ ಕತೆ. ಇಂಥ ಕತೆಗಳು ನಮ್ಮ ಸಂದರ್ಭದಲ್ಲಿ ಹೇರಳವಾಗಿ ಬಂದಿದ್ದರೂ ಕತೆಯು ಕಟ್ಟಕಡೆಗೆ ಪಡೆದುಕೊಳ್ಳುವ `ದೇಸಿ`ತನದ ದಟ್ಟ ವಿವರ ಮತ್ತು ನಾಟಕೀಯವಲ್ಲದ ಪ್ರಾಮಾಣಿಕ ತಿರುವುಗಳು ಕತೆಯನ್ನು ಎತ್ತರಕ್ಕೆ ಎತ್ತಿವೆ. ಬೂದಶೆಟ್ಟಿ– ಇಂಗ್ಲೆಂಡಿಗೆ ಹೋಗಿ ಕಲಿತು `ಮಿಸ್ಟರ್ ಭೋದ್ ಹಿಂಡರ್ಟ್` ಆಗಿ ಮರಿಯಾನಳ ಮದುವೆಯಾಗಿ materialistic ಬದುಕಿನ ಅರ್ಥಹೀನತೆಯನ್ನು ಗ್ರಹಿಸಿ ಕೊನೆಗೆ ತನ್ನ ಮೂಲ `ಬೂದುಶೆಟ್ಟಿ`ಗೆ ಹಿಂದಿರುಗುತ್ತಾನೆ. `ಭೂತ`ದಲ್ಲಿ ಸುಖವಿದೆ ಎಂಬುದು ಒಂದು ಹಳಹಳಿಯಾಗದೆ ಅದು ವಾಸ್ತವವೆನಿಸುವಂತೆ ಕತೆ ರೂಪಗೊಂಡಿದೆ.

‘ಸಹಸ್ರನಾಮ` ಕತೆ ಕೂಡ ನಮ್ಮ ಸಮಾಜ ಹೊರಳುತ್ತಿರುವ `ಹೈಬ್ರಿಡ್ ಕಲ್ಚರನ್ನು` ಹಿಡಿಯುವ ಕತೆ. ಶಂಕರಾಧ್ಯಾರು ತಮ್ಮ ಬದುಕಿನಲ್ಲಿ ಇಂಥ ಹೈಬ್ರಿಡ್ ಅನುಭವಗಳಿಗೆ ಪಕ್ಕಾಗುತ್ತಾ ಅದನ್ನು ಒಪ್ಪಿಕೊಳ್ಳುವ ಹಂತಕ್ಕೆ ಬರುತ್ತಾರೆ. ಅವರು ಕೈಗೊಳ್ಳುವ ತೀರ್ಥಯಾತ್ರೆ– ಅರಿವಿನ ಯಾತ್ರೆಯಾಗಿ ಪರಿಣಮಿಸುತ್ತದೆ. ಬಹು ಸಂಸ್ಕೃತಿ, ಬಹು ನಂಬಿಕೆಗಳನ್ನು ಒಪ್ಪಿಕೊಳ್ಳುವ ಸ್ಥಿತಿಗೆ ಅವರು ತಲುಪುತ್ತಾರೆ.

`ಚೇಂಜ್ ಆಫ್ ಗಾರ್ಡ್ಸ್` ಇದೇ ಮಾದರಿಯ ಪರಿವರ್ತನೆಗೆ ಪಕ್ಕಾಗುತ್ತಿರುವ ಜೀವನ ಮಾದರಿಗಳನ್ನು ಹಲವು ನೆಲೆಯಲ್ಲಿ ಹಿಡಿಯುವ ಕತೆ. `ಡಬ್ಬಲ್ ಲಾಟರಿ` ಇನ್ನೊಂದು ಬಗೆಯ `ಇತಿಹಾಸದ ಸತ್ಯಗಳನ್ನು` ಇನ್ನೊಂದು ನೆಲೆಯಿಂದ ನೋಡುವ ಕತೆ.

`ಆದಿತಾಳದಲ್ಲಿ ಬ್ಲೂ ಜಾಸ್` ಕತೆ ಸಂಗೀತ ಕ್ಷೇತ್ರದಲ್ಲಿ ಉಂಟಾಗುತ್ತಿರುವ ಹೈಬ್ರಿಡ್ ಸಂಸ್ಕೃತಿಯನ್ನು ಪರಿಚಯಿಸುವ ಕತೆ. ಈ ಕತೆಯ ನಾಯಕ ಬಾರ್ಬಭಾಗವತ. ಹೆಸರೇ ಸೂಚಿಸುವಂತೆ ಐರೋಪ್ಯ– ಭಾರತೀಯ ಸಂಸ್ಕೃತಿಗಳ ಸಂಗಮದಂತೆ ಅವ ಇಡೀ ಕತೆಯ ಉದ್ದಕ್ಕೂ ಕಾಣಬರುತ್ತಾನೆ. `ಕನ್ನಡಿಯ ಕಣ್ಣು` ಕತೆ `ಯಥಾದರ್ಶ ತಥಾತ್ಮನಿ` ಅಂದರೆ ನಾವು ಏನನ್ನು ನೋಡಬಯಸುತ್ತೇವೋ ಅದನ್ನೇ ನೋಡುತ್ತೇವೆ ಎಂಬ ಆಶಯವನ್ನು ಮಂಡಿಸುವ ಕತೆ. ಬಂದೋಪಾಧ್ಯಾಯ– ಲಾವುರ– ಪೀಟರ್... ಲಲಿತಾ, ಬದುಕಿನ ವಿವಿಧ ನಿಲುವುಗಳಿಗೆ ಪ್ರತೀಕವಾಗಿ ಚಿತ್ರಿತವಾಗಿದ್ದಾರೆ. `ನಿಗೂಢ` ಒಂದು ನಾಟಕೀಯ ಕತೆ. ಪ್ರೀತಿಯ ಹಲವು ಮಜಲುಗಳನ್ನು ಕತೆ-ಉಪಕತೆ– ದೃಶ್ಯಾಂತರಗಳಿಂದ ಚೊಕ್ಕವಾಗಿ ನಿರೂಪಿಸುವ ಕತೆ. ಈ ಸಂಕಲನದ ಕೊನೆಯ ಕತೆ ‘ಗೋರಿಗೊಂದು ಹೂ` `ಶುದ್ಧ ಆದರ್ಶಗಳನ್ನು ಸಾಧಿಸಲು ಶುದ್ಧ ಸಾಧನಗಳನ್ನೇ ಬಳಸಬೇಕೆಂಬ` ಆಶಯವನ್ನು ನಿರೂಪಿಸಲು ಪ್ರಯತ್ನಿಸುವ ಕತೆ.

ಒಟ್ಟಾರೆ ಇದು ನಮ್ಮ ಕಾಲಘಟ್ಟದಲ್ಲಿ ಬಹು ವೇಗವಾಗಿ ನಮ್ಮ ಸಮಾಜ ತೆರೆದುಕೊಳ್ಳುತ್ತಿರುವ ‘ಬೆರಕೆ` ಎಂಬ ಜೀವನಶೈಲಿಯನ್ನು ಬಹು ಉತ್ಸಾಹದಿಂದ ಹಿಡಿದಿಡಲು ಮುಂದಾಗಿರುವ ಕಥಾಸಂಕಲನ. ಕತೆಯನ್ನು ಓದುವಾಗ ದಿಢೀರನೆ ಎದುರಾಗುವ ಅನ್ಯ ದೇಶದ ಪರಿಸರ, ಸಾಂಸ್ಕೃತಿಕ ವಿವರಗಳು, ಹೆಸರುಗಳು, ಕೊಂಚ ಓದುಗನಿಗೆ ಅನನ್ಯ– ಮತ್ತು ‘ದೂರ` ಅನ್ನಿಸಿದರೂ ಆರ್ಯ ಅವುಗಳನ್ನು ಕತೆಯ ಚೌಕಟ್ಟಿಗೆ ಮೂಸುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಇಷ್ಟಾಗಿಯೂ ಇಡೀ ಕತೆಗಳನ್ನು ಓದಿದಾಗ ಓದಿದವನಲ್ಲಿ ಒಂದು ದಟ್ಟ ವಿಷಾದ, ದಟ್ಟ ದರ್ಶನ, ಅಥವ ಒಂದು ಸಣ್ಣ ಬೆರಗು ಉಂಟುಮಾಡುವಲ್ಲಿ ಈ ಕತೆಗಳು ಯಾಕೋ ವಿಫಲವಾಗಿವೆಯೆನಿಸುವ ಅನುಮಾನವು ಕಾಡುತ್ತದೆ.

– ಡಾ. ಪ್ರಹ್ಲಾದ ಅಗಸನಕಟ್ಟೆ, ಸಾರ್ವಜನಿಕ ಸಂಪರ್ಕಾಧಿಕಾರಿ, ಕಿಮ್ಸ್, ಹುಬ್ಬಳ್ಳಿ

೮. ಸಾಹಿತ್ಯ ರೂಪ ಜಿಜ್ಞಾಸೆ : ಎಚ್. ವಿ. ನಾಗೇಶ್

ಸಿ.ವಿ.ಜಿ. ಪ್ರಕಾಶನ, ೭೦, ೨ ನೇ ಮೇನ್, ಜಬ್ಬಾರ್ ಬ್ಲಾಕ್, ಬೆಂಗಳೂರು-೩, ಪ್ರಮು. ೨೦೦೫, ಪು. ೧೧೩, ರೂ. ೮೦/-

ಸಮಾಜವಿಜ್ಞಾನದ ಪ್ರಾಧ್ಯಾಪಕರಾದ ಹಾ. ವೆಂ. ನಾಗೇಶರು ಸಾಹಿತ್ಯಲೋಕದೊಂದಿಗೆ ಹೊಂದಿರುವ ಸಂಬಂಧ ಒಬ್ಬ ಅಧ್ಯಯನಕಾರನ ಕುತೂಹಲ-ಕಳಕಳಿಯದು. ಅವರೊಬ್ಬ ಪ್ರೌಢ ಓದುಗರು; ಸಾಹಿತ್ಯದ ಸಮಕಾಲೀನ ಬೆಳವಣಿಗೆ-ಬದಲಾವಣೆಗಳನ್ನು ಸಮಾಜಶಾಸ್ತ್ರೀಯ ದೃಷ್ಟಿನಿಂದ ಪರಿಶೀಲಿಸುತ್ತ ಬಂದವರು.

ರೂಪಗಳು, ಪ್ರಕಾರಗಳು ಆಧುನಿಕ ಸಾಹಿತ್ಯದ ಅಭಿವ್ಯಕ್ತಿಯ ವೈವಿಧ್ಯಮಯ ಸಾಧ್ಯತೆಗಳು. ಕವಿ, ಲೇಖಕನ ಆಯ್ಕೆಗೂ, ಜೀವನ ಮತ್ತು ಸಾಹಿತ್ಯದಲ್ಲಿ ಇರುವ ಅವರ ದೃಷ್ಟಿಕೋನ/ಪ್ರವೃತ್ತಿಗೂ ಇರುವ ಸಂಬಂಧ ಅಧ್ಯಯನೀಯವಾದುದು. ರೂಪನಿಷ್ಠೆ ಇರದ ಹೊರತು, ಅಭಿವ್ಯಕ್ತಿಯ ಪ್ರಾಮಾಣಿಕತೆ ಸಾಧ್ಯವಾಗದು. ಆಧುನಿಕ ಲೇಖಕರು, ಪಾಶ್ಚಾತ್ಯ ಸಿದ್ಧಮಾದರಿಗಳಿಂದ ಪ್ರಭಾವಿತರಾಗಿ ಆರಂಭದಲ್ಲಿ ಅನುಕರಣೆಗೆ ಒಳಗಾದರೂ, ತಮ್ಮ ಅನುಭವ, ಜೀವನದೃಷ್ಟಿಯ ಪ್ರಾಮಾಣಿಕತೆಗೆ ಬದ್ಧರಾದಾಗ, ಆರಿಸಿಕೊಂಡ ಪ್ರಕಾರವನ್ನು ಪಾಶ್ಚಾತ್ಯಕ್ಕಿಂತ ಭಿನ್ನವಾಗಿ ಸ್ವೋಪಜ್ಞತೆಯ ಬೆಳಕಿನಲ್ಲಿ ಬಳಸಿದ್ದುಂಟು, ಬೆಳೆಸಿದ್ದೂ ಉಂಟು. ಸಣ್ಣಕತೆ, ಪ್ರಬಂಧ, ಕಾದಂಬರಿ, ಪ್ರಕಾರಗಳು ಕನ್ನಡದಲ್ಲಿ ನೂರು ವರ್ಷಗಳಿಂದ ಪಡೆದಿರುವ ರೂಪವಿನ್ಯಾಸಗಳ ಬಗ್ಗೆ ನಾಗೇಶ ಅವರು ಸೂಕ್ತ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಪ್ರಬಂಧ ಪ್ರಕಾರದ ಬಗೆಗಿನ ಅವರ ಟಿಪ್ಪಣಿಗಳು ಅಭ್ಯಾಸಕ್ಕೆ ಆಕರವಾಗಿವೆ. 'ಕಾರಂತರ ಕಾದಂಬರಿಗಳಲ್ಲಿ ಲಭ್ಯವಾಗುವ ಸಮಾಜಶಾಸ್ತ್ರೀಯ ಸಾಮಗ್ರಿ' ಎಂಬ ಟಿಪ್ಪಣಿ ವಿಮರ್ಶಕರಿಗೆ ಒಂದು ದಿಕ್ಸೂಚಿ 'ಸಾಹಿತ್ಯ ಸಂದರ್ಭದಲ್ಲಿ ಸಮಾಜಶಾಸ್ತ್ರೀಯ ದೃಷ್ಟಿಕೋನ' ಎಂದರೆ ಏನು ಎನ್ನುವುದನ್ನು ಚರ್ಚಿಸುವ ೧೩ ನೇ ಲೇಖನ ನಾಗೇಶ್ ಅವರ ಜಿಜ್ಞಾಸು ವ್ಯಕ್ತಿತ್ವದ ಸಮರ್ಪಕ ಪರಿಣಾಮ. ವಿಮರ್ಶಕರು, ಸಾಹಿತ್ಯಾಭ್ಯಾಸಿಗಳು ಅವಶ್ಯವಾಗಿ ಮನನ ಮಾಡಬೇಕಾದ ಲೇಖನಗಳ ಸಂಗ್ರಹ ಇದು.

೯. *ದಲಿತ ಚಳುವಳಿಯ ನಾಳೆಗಳು* : ಆರ್. ಟಿ. ವಿಠ್ಠಲಮೂರ್ತಿ

ಪ್ರಥೆ ಪ್ರಕಾಶನ, ನಂ. ೮೮, ೧೩ ನೇ 'ಎ' ಕ್ರಾಸ್, ಅಶೋಕನಗರ, ಬನಶಂಕರಿ ೧ ನೇ ಹಂತ, ಬೆಂಗಳೂರು-೫೦, ಪ್ರಮು. ೨೦೦೫, ಪು. ೧೩೨, ರೂ. ೯೦/-

ಡಾ. ಬಾಬಾಸಾಹೇಬ ಅಂಬೇಡ್ಕರರಿಂದ ಸ್ವಾತಂತ್ರ್ಯಪೂರ್ವದಲ್ಲಿ ಆರಂಭವಾದ ದಲಿತ ಚಳವಳಿ, ಸ್ವಾತಂತ್ರ್ಯ-ಸಮಾನತೆ-ಶಿಕ್ಷಣ-ಸ್ವಾಭಿಮಾನಗಳ ಸ್ಥಾಪನೆಗಾಗಿ ಶ್ರಮಿಸಿದ್ದು ಈಗ ಇತಿಹಾಸದ ಒಂದು ಹಂತ. ಸಂವಿಧಾನಬದ್ಧವಾಗಿ 'ದಲಿತ ವರ್ಗ'ಕ್ಕೆ ಅವೆಲ್ಲ ಲಭಿಸುತ್ತಿರುವುದು ವರ್ತಮಾನ. ಆದರೆ, 'ದಲಿತೋದ್ಧಾರ' ೬೦ ವರ್ಷಗಳಲ್ಲಿ ಸಾಧ್ಯವಾಗಿದೆಯೇ? ಉದ್ಧಾರದ ಪ್ರಕ್ರಿಯೆಯಲ್ಲಿ ಆದ ರಾಜಕೀಯ ಏಡವಟ್ಟುಗಳು; ಅಂತಾರಾಷ್ಟ್ರೀಯ ಬಿಕ್ಕಟ್ಟುಗಳು ಒಡ್ಡಿದ ಸವಾಲುಗಳು– ದಲಿತ ಚಳವಳಿಯ ದಿಕ್ಕು-ದೆಸೆಗಳನ್ನು ಬದಲಿಸುತ್ತಿಲ್ಲವೆ? ಚಳವಳಿಯ ಭವಿಷ್ಯದ ಬಗ್ಗೆ ಕಾಳಜಿ ಹೊಂದಿರುವ ಪತ್ರಕರ್ತ-ಲೇಖಕ-ಚಿಂತಕ ಆರ್. ಟಿ. ವಿಠ್ಠಲಮೂರ್ತಿ ಹದಿನಾರು ಜನ ಚಿಂತಕರನ್ನು ಭೇಟ್ಟಿಯಾಗಿ ಮಾತಾಡಿಸಿ, ಅವರ ಅನಿಸಿಕೆ-ಅಭಿಪ್ರಾಯ-ನಿಲುವುಗಳನ್ನು ಸಂಗ್ರಹಿಸಿದ್ದಾರೆ. ಕವಿಗಳಾದ ಸಿದ್ಧಲಿಂಗಯ್ಯ, ಎಲ್. ಹನುಮಂತಯ್ಯ, ಗೋವಿಂದಯ್ಯ, ಕೆ. ಬಿ. ಸಿದ್ಧಯ್ಯ; ಗದ್ಯಲೇಖಕರಾದ ಅರವಿಂದ ಮಾಲಗತ್ತಿ, ಯು. ಆರ್. ಅನಂತಮೂರ್ತಿ, ದೇವನೂರು ಮಹಾದೇವ; ಸಕ್ರಿಯ ರಾಜಕಾರಣಿ ಶ್ರೀನಿವಾಸ ಪ್ರಸಾದ್; ಚಳವಳಿಗಾರರೂ ಸಂಘಟಕರೂ ಆದ ಶ್ರೀಧರ್ ಕಲಿವೀರ, ಡಿ. ಜಿ. ಸಾಗರ್ ಮೊದಲಾದವರ ಜತೆ ವಿಠ್ಠಲಮೂರ್ತಿ ಮಾತಾಡಿದ್ದಾರೆ. ದಲಿತ ಚಳವಳಿಯ ವಿಮರ್ಶೆ, ವಿಶ್ಲೇಷಣೆ ಇಲ್ಲಿ ತೆರೆದ ಮನಸ್ಸಿನಿಂದ ಸಾಧ್ಯವಾಗಿದೆ. ಮುಂದಿನ ಹಾದಿಯ ಬಗ್ಗೆ ಕೆಲವರು ಕನಸಿನ ಅಂಶಗಳನ್ನು ಮುಂದಿಟ್ಟರೆ; ಹಲವರು ರಾಜಕೀಯ ಕಾರ್ಯತಂತ್ರಗಳನ್ನು ಪ್ರತಿಪಾದಿಸಿದ್ದಾರೆ. ದೇವನೂರು ಮಹಾದೇವ ಅವರ 'ಸರ್ವೋದಯ ಕರ್ನಾಟಕ' ರಾಜಕೀಯ ಪಕ್ಷವೊಂದು ತಲೆ ಎತ್ತಿದ್ದು, ಅದು ಸವಾಲುಗಳನ್ನು ಸಮರ್ಥವಾಗಿ ನಿರ್ವಹಿಸಲಿದೆ ಎಂಬುದು ವಿಠ್ಠಲಮೂರ್ತಿಯವರ ನಿರೀಕ್ಷೆಯೂ ಆಗಿದೆ; ಹಾರೈಕೆಯೂ ಆಗಿದೆ. ಕರ್ನಾಟಕದ ರಾಜಕಾರಣಿಗಳು ಈವರೆಗಿನ ಚುನಾವಣಾ ಕಾರ್ಯತಂತ್ರಗಳನ್ನು ಬದಿಗಿರಿಸಿ, 'ದಲಿತ ಜನಸಮುದಾಯ'ದ ಆಸೆ-ನಿರೀಕ್ಷೆಗಳನ್ನು ಗಂಭೀರವಾಗಿ ಪರಿಗಣಿಸಿ ಪ್ರಾಮಾಣಿಕವಾಗಿ ಸ್ಪಂದಿಸಬೇಕಾಗಿದೆ.

ಈ ಪುಸ್ತಕ, ಕರ್ನಾಟಕದಲ್ಲಿ ತಲೆ ಎತ್ತಬೇಕಾಗಿರುವ 'ರಾಜನೀತಿ'ಯ ಒಂದು ಪ್ರಣಾಳಿಕೆಯಂತಿದೆ.

– ಡಾ. ಶ್ಯಾಮಸುಂದರ ಬಿದರಕುಂದಿ, # ೧೫೧ - MIG, ೫ನೇ ಮುಖ್ಯರಸ್ತೆ, ನವನಗರ, ಹುಬ್ಬಳ್ಳಿ-೨೫

ಸಂಕಲನ : ಅನಿಸಿಕೆ

೧. **ಸಂಕಲನ-೨೫** ರಲ್ಲಿ ನನ್ನ ಕವಿತೆಗಳನ್ನು ಪ್ರಕಟಿಸಿ ಉಪಕಾರ ಮಾಡಿದ್ದೀರಿ. ಅದಕ್ಕೆ ಸರಿಯಾಗಿ ನನಗೆ International Penguin Publishing House ಅವರ ಕಡೆಯಿಂದ Rising Personalities of India-2005 ಎಂಬ ಪ್ರಶಸ್ತಿ, ಬೆಳ್ಳಿಯ ಸ್ಮರಣಿಕೆ ಮತ್ತು ಚಿನ್ನದ ಪದಕ ಸಿಕ್ಕಿವೆ. ಎಲ್ಲವೂ ತುಂಬ ಅನಿರೀಕ್ಷಿತ. ಕೊನೆಯ ಹಂತದಲ್ಲಿದ್ದಾಗ ನೆಮ್ಮದಿ ಉಲ್ಲಾಸಕ್ಕೆ ಕಾರಣ. ಬದುಕಿನುದ್ದ ಒದ್ದಾಡಿದ್ದಕ್ಕೆ ಪ್ರತಿಫಲದ ಶಾಂತಿ. ದೈವ ನಕ್ಕಿತು. ನಿಮ್ಮ ಪತ್ರಿಕೆ ಸಂಕಲನದಲ್ಲಿ ನನಗೆ ೭೬ನೇ ಜನ್ಮದಿನದ ಶುಭಾಶಯ ಹೇಳುತ್ತ ಈ ಪ್ರಶಸ್ತಿಯ mention ಮಾಡಿದರೆ ತುಂಬಾ ಕೃತಜ್ಞನಾಗುತ್ತೇನೆ. ನಿಮಗೂ ಎಲ್ಲ ಚಂದಾದರರಿಗೂ ಶುಭಾಶಯಗಳು. – **ಅರವಿಂದ ನಾಡಕರ್ಣಿ**, ಮುಂಬಯಿ ೩೦-೧೧-೦೬

೨. ೨೦೦೬ರ ಮೊದಲ ಸಂಚಿಕೆಯ ಮುಖಪುಟ ವಿನ್ಯಾಸ ಆಕರ್ಷಕವಾಗಿದೆ. ಪ್ರತಿ ಪುಟದಲ್ಲಿ ಚಿಂತನಾರ್ಹ ವಿಷಯಗಳಿವೆ. ಈ ಬಾರಿ ಕಡೀಪುಟಕ್ಕೆ ಒನ್ನೇಪುಟ ಸೇರಿಕೊಂಡಿರುವುದು ಕುತೂಹಲದ ಸಂಗತಿ. ಬಹುಕಾಲದಿಂದ ನಾವು ಮರೆತ ಅಥವಾ ನೆನಪಿದ್ದೂ ಮರೆತವರ ಹಾಗೆ ಕಾಣುವ ಅಮೂಲ್ಯ 'ಗುರು ತತ್ತ್ವ'ವನ್ನು ಕಬೀರ ದೋಹೆಯ ಮೂಲಕ ಪ್ರಸ್ತಾಪಿಸಿದ ಒನ್ನೇಪುಟ ಪತ್ರಿಕೆಯ ಒನ್ನೇಪುಟ ಮಾತ್ರವಾಗಿರದೆ ನಮ್ಮೆಲ್ಲರ ಒನ್ನೇಪುಟವಾಗುವಷ್ಟು ಮಹತ್ವದ್ದಾಗಿದೆ. 'ಕವಿರಾಜಮಾರ್ಗ' ಲೇಖನಗಳು ಕರ್ನಾಟಕತ್ವವನ್ನು ನಿರ್ಧರಿಸುವಲ್ಲಿ ಅಪರೂಪದ ಆಧಾರವಾಗಿವೆ. ಪ್ರೊ. ಶೆಟ್ಟರ್ ಅವರ ಪರಿಶ್ರಮಕ್ಕೆ 'ಲಾಖ್ ನಮಸ್ಕಾರಗಳು'. – **ಶಶಿಧರ ತೋಡಕರ**, ಧಾರವಾಡ

೩. **ಸಂಕಲನ** ತಪ್ಪದ್‌ಅ ಓತ್ತೇನಿ. ಮನಸ್ಸಿಗೆ ಮುದ ಕೊಡ್ತದ, ಚೈತನ್ಯ ಕೊಡ್ತದ. ಮೈಸೂರು ಭಾಗದ ಮಂದಿ 'ಅ ಆ' ಬಳ್ಳೀನ 'ಆ ಆ' ಅಂತನ್‌ಅ ಹೇಳೂದು 'ಕ ಕಾ'ನ 'ಕಾ ಕಾ' ಅಂತ. ಮಾತಿನ್ಯಾಗೂ ಮೊದಲ ಸ್ವರ ಮಾಯ ಆಗಿರತದ. ಅದಕ್ಕ ಒಂದು ಭೋಲೋ ಉದಾ. ಅಂದರ ಸಿ. ಅಶ್ವತ್ಥರ 'ಬಂಗಾರ ನೀರ ಕಡಲಾಚೆ ಈಚೆ', 'ಅಂದದೋ ಅಂದದಾ' ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ... ತಿಳೀತದಾ. ನಮಗ ಅದನ್ನ ಕೇಳಬೇಕಾದ್ರು ಎಷ್ಟು ತ್ರಾಸಾಗತದ ನೀವು ಬರೋಬ್ಬರ ಬರದೀರಿ.

– **ವಸುಂಧರಾ ದೇಸಾಯಿ**, ಶಿವಮೊಗ್ಗ

೪. **ಸಂಕಲನ** ಚೆನ್ನಾಗಿ ಬರುತ್ತಿದೆ. ಷ. ಶೆಟ್ಟರ್ ಅವರ ಸಂಶೋಧನಾ ಲೇಖನಗಳು ಮೌಲಿಕವಾಗಿವೆ. ಕವನಗಳು ಮೇಲ್ಮಟ್ಟದವಾಗಿವೆ. ಸಂಕಲನದಲ್ಲಿ ಕವಿತೆ, ಲೇಖನ ಅಚ್ಚಾಗುವುದು ಅಭಿಮಾನದ ವಿಷಯ ಎಂದು ಲೇಖಕರಿಗೆ ಅನ್ನಿಸಹತ್ತಿದೆ. – **ಡಾ. ವಸಂತಕುಮಾರ ಪೆರ್ಲ**, ಮಂಗಳೂರು

೫. ಜನವರಿ-ಫೆ.ಯ **ಸಂಕಲನ** ಎಂದಿನಂತೆ ವೈವಿಧ್ಯಪೂರ್ಣವಾಗಿದ್ದರೂ ಕಬೀರದಾಸನ ಕುರಿತಾದ ನಿಮ್ಮ ವಿಚಾರಗಳು– ಗುರುವಿನ ಕುರಿತಾದ ವಿಚಾರಗಳು ತುಂಬ ಔಚಿತ್ಯಪೂರ್ಣವಾಗಿವೆ. ಚಳುವಳಿಯ ಇತಿಹಾಸವನ್ನೇ ಉಲ್ಲೇಖಿಸಿದ ನಾಗೇಶರ ವಿಚಾರಗಳು ಮಾರ್ಮಿಕವಾಗಿವೆ. ಷ. ಶೆಟ್ಟರ್ ಅವರ ದ್ರಾವಿಡ ಸಂಬಂಧದ ಳನೆಯ ಲೇಖನ ಹೊಸ ಕ್ಷಿತಿಜವನ್ನು ತೆರೆದಿದೆ. ಕಾವ್ಯಾನಂದರ ಕುರಿತು ಡಾ. ಪಾರ್ಶ್ವನಾಥರ ಲೇಖನ ಜನರ ಕವಿಯೊಬ್ಬನನ್ನು ಹೊಸ ದಷ್ಟಿಕೋನಗಳಿಂದ ಬೆಳಗಿಸಿದೆ.

– **ಕೃ. ಶಿ. ಹೆಗಡೆ**, ಪುಣೆ

೬. **ಸಂಲನ-೨೫** ಬೆಳ್ಳಿಸಂಚಿಕೆ ಹೊಳೆಯುತ್ತಲೇ ಬಂದಿದೆ. ಎಚ್. ವಿ. ನಾಗೇಶರ 'ಚಳವಳಿ-ವಿವೇಚನೆ' ಶ್ರದ್ಧೆಯಿಂದ ಬರೆದ ಲೇಖನ. ಎಂದಿನಂತೆ 'ಕವಿರಾಜಮಾರ್ಗ' ಉತ್ಕೃಷ್ಟ. ಪುಸ್ತಕ ಪರಿಶೀಲನೆಗಳು ವಸ್ತುನಿಷ್ಠ. ಒನ್ನೇಪುಟ ಆರಂಭಿಸಿದ್ದು ಒಳ್ಳೇದಾಯ್ತು. 'ಕ್ಯಾಮೆರಾ ಕಣ್ಣು' 'ಮಾತಾಡುವ ಮರ' ಕುರಿತ ಲೇಖನಗಳು ಇಷ್ಟವಾದವು. – **ಲಲಿತಾ ಸಿದ್ದಬಸವಯ್ಯ**, ತುಮಕೂರು

೭. **ಸಂಕಲನ-೨೫** ಭಾಳ ಛೊಲೋ ಬಂದದ. ಅಗದೀ ರೀಡೇಬಲ್, ಪಠನೀಯ ಆಗೇದ.

– **ಡಾ. ಶ್ರೀನಿವಾಸ ಹಾವನೂರ**, ಮಂಗಳೂರು

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಾನು ರೆಗ್ಯುಲರ್ ಆಗಿ ವಾಕಿಂಗ್ ಹೋಗೂದುಲ್ಲ. ಮೂರು ನಾಕು ದಿನಕ್ಕೊಮ್ಮೆ ಹೋಗತೇನಿ, ಸ್ವಲ್ಪ ಹೊತ್ತು ಸುತ್ತಾಡಿ ಬರತೇನಿ. ಅದೂ ಒಂದ್‌ಅ ಕಡೆ ಹೋಗೂದುಲ್ಲ. ಒಂದೊಂದ ಸಲ ಒಂದೊಂದ ಕಡೆ. ಒಂದೊಂದು ದಿಕ್ಕಿನ್ಯಾಗ ಹೋದಾಗೂ ಬ್ಯಾರೆ ಬ್ಯಾರೆ ಮಂದಿ ಸಿಗತಾರು. ಬ್ಯಾರೆ ಬ್ಯಾರೆ ವಯಸ್ಸಿನವರು, ಮನಸ್ಸಿನವರು, ಸ್ವಭಾವದವರು, ಆಕಾರದವರು, ಮಾತಿನವರು ಇತ್ಯಾದಿ.

ಇವತ್ತು ಸ್ವಲ್ಪ ತಡಾ ಆಗೇ ಹ್ವಾದೆ. ನವಲೂರ ಕೆರೀ ಕಡೆ ದಾರ್‍ಯಾಗ ಹೊಂಟಿದ್ದೆ. ದೂರದೊಳಗ ಆ ನಾಕೂ ಮಂದಿ ಯಜಮಾನರು ಕಂಡರು. ಒಬ್ಬರು ರಿ-ಟಾಯರ್ಡ್ 'ಕನಡಾ' ಪ್ರೊಫೆಸರ್‍ರು. ಒಬ್ಬರು ಪೊಲೀಸ್ ಆಫೀಸರ್‍ರು. ಒಬ್ಬರು ಕಂಟ್ರ್ಯಾಕ್ಟರ್‍ರು. ಇನ್ನೊಬ್ಬರು ಪಿಡಬ್ಲ್ಯೂಡಿ ಘಟ. ನನಗಿಂತ ನಾಕಾರು ವರ್ಷ ಹೆಚ್ಚು ವಯಸ್ಸಾದವರು. ದಿನಾ ಏನು ಮಾತಾಡತಾರೋ ಏನೋ, ಯಾವಾಗಲೂ ಮಾತಾಡತಾನ್‌ಅ ಇರತಾರ. ಇವತ್ತು ನಾ ಸಾವಕಾಶ ಬರೂದು ನೋಡಿದವರ್‌ಅ ಗಕ್ಕನ್‌ಅ ನಿಂತ್‌ಅ ಬಿಟ್ಟರು. ಇನ್ನ ಇವರ್‍ನ ಬಿಡಿಸಿಕೊಳ್ಳೂದು ತ್ರಾಸ ಅಂತ ಹತ್ತರಕ್ಕ ಹ್ವಾದೆ.

ಹ್ವಾದಕೂಡಲೇ ಒಬ್ಬರು ತಟ್ಟನ್‌ಅ ಬಾಂಬ್ ಹಾಕೇಬಿಟ್ಟರು. 'ಬರ್‍ರಿ ಬರ್‍ರಿ, ನಿಮ್ಮದ್‌ಅ ಸುದ್ದೀ ಮಾತಾಡತಿದ್ವಿ. ನಾಕ ದಿವಸದಿಂದ ನಮ್ಮ ತೆಲೀ ಕೆಟ್ಟ ಹೋಗ್ಯಾವು...' ನನಗ ಏನು ಹೇಳಬೇಕೋ ತಿಳೀಲಿಲ್ಲ. ಒಬ್ಬರು, 'ನಿಮಗ ಅರವತ್ತು ದಾಟಿದರೂ ತೆಲ್ಯಾಗಿನ ಕೂದಲ ಇನ್ನೂ ಕರೇವ್ ಅ ಅದಾವಲ್ಲ... ಅಂದರ ಅವು ಖರೇನ ಕರೇವದಾವೋ ಅಥವಾ ಅವುನ್ನ ಕರ್‍ರಗ ಕಾಣೂಹಂಗ ಮಾಡಿಕೊಂಡೀರೋ...' ಅಂತ ಕೇಳಿದರು.

ನಾ ಏನೂ ಮಾತಾಡಲಿಲ್ಲ. ಸಾವಕಾಶ ನಡ್ಯಾಕ್ಹತ್ತಿದ್ದೆ. ಅವರೂ ಬಂದರು. ನಾಕ ಹೆಜ್ಜೀ ಹೋಗೂವಷ್ಟೊತ್ತಿಗೆ ಇನ್ನೊಬ್ಬರು, 'ನಮಗೂ ಅಷ್ಟ್‌ಅ ವಯಸ್ಸಾಗೇತಿ, ಆದರ ನಮ್ಮ ಕೂದಲಾ ಕರ್‍ರಗ ಉಳದಿಲ್ಲ. ಅದಕ್ಕ ಈ ಮಾತು ಕೇಳೂಹಂಗಾತು' ಅಂದರು. ನಾ ಅವರ ಕಡೆ ನೋಡಿ ನಕ್ಕೆ. 'ಯಾಕ್ರೀ, ಯಾಕೋ ನಗತೀರಿ... ಅಂದಮ್ಯಾಲೆ ಇದರಾಗ ಏನೋ ಗುಟ್ಟ ಅಯ್ತಿ ಅಂದಂಗಾತು' ಅಂದರು. ಮತ್ತೊಬ್ಬರು ಆ ಮಾತಿನ ಚುಂಗ್‌ಅ ಹಿಡಿದರು, 'ನಂದೂ ಅದ್‌ಅ ಸಮಸ್ಯಾರೀ. ಎಷ್ಟ ಪ್ರಯತ್ನ ಮಾಡತೇನಿ, ಎಷ್ಟ ಛೆಂದ ತೆಲೀಗೆ ತಿಕ್ಕಿತಿಕ್ಕಿ ಹಚಗೋತೇನಿ. ಆದರೂ ಕೆಂಜಿಗ್ಯಾನಂಗ ಕೆಂಪ ಕೂದಲ ಅಲ್ಲಲ್ಲೆ ಹಣಿಕಿ ಹಾಕತಾವು. ನಿಮ್ಮಷ್ಟು ಕರ್‍ರಗ ಆಗವಲ್ವು ನೋಡಿರಿ, ನೀವು ಅಷ್ಟ ಛೆಂದ ಹ್ಯಾಂಗ ಮಾಡಿಕೋತೀರಿ?' ಅಂದರು.

'ಬಣ್ಣಾ ಪಣ್ಣಾ ಹೇರ್‌ಡಾಯ್ ಮುಂತಾದ್ದು ಅಂತೀರೇನು? ಅಂಥಾದ್ದೆಲ್ಲಾ ನಾ ಹಚಗೋಳೂದುಲ್ಲ. ನನಗ ಅಂಥಾದ್ದರಾಗ ನಂಬಿಕೀನೂ ಇಲ್ಲ' ಅಂದೆ. 'ಹಂಗಾರ ನೀವಾಗೇ ಹಚಗೊಳೂದುಲ್ಲ, ಸಲೂನಿಗೆ ಹೋಗಿ ಹಚ್ಚಿಸಿಕೊಂಡು ಬರತಿರಬೇಕು...' ಅಂತ ಮತ್ತೊಬ್ಬರು ಜೋಡಿಸಿದರು.

ಯಾರೂ ನನಗ ಮಾತಾಡಾಕ ಕೊಡವಲ್ಲರಾಗಿತ್ತು. 'ಯಾಕ್ರಿ, ಇವತ್ತು ಎಲ್ಲಾರೂ ಕೂಡಿ ಒಮ್ಮೆಗಿಲೆ ನನ್ನ ಮ್ಯಾಲೆ ಹಿಂಗ್ಯಾಕ ಮುಗಿಬಿದ್ದೀರಿ?' ಅಂತ ಕೇಳಬೇಕಾತು. 'ಹೌದು ಮತ್ತ, ಈ ನಾಕ ದಿವಸ ನೀವು ವಾಕಿಂಗೂ ಬರಲಿಲ್ಲ, ಎಲ್ಲ್ಯೂ ಕಾಣಸಲೂ ಇಲ್ಲ. ಈ ನಾಕ ದಿವಸದಾಗ ನಮ್ಮ ತೆಲಿ ತುಂಬ ನಿಮ್ಮ ತೆಲೀನ್‌ಅ ತುಂಬೇತಿ' ಅಂದರು. 'ಅದ ಖರೆ, ನಿಮ್ಮ ತಲ್ಯಾಗ ನನ್ನ ತಲೀ ತುಂಬಿದರ, ನಿಮ್ಮ ತಲ್ಯಾಗಿನ ಕೂದಲಾನೂ ಕರ್‍ರಗ ಇರಬೇಕಿತ್ತಲ್ಲ' ಅಂತ ನಕ್ಕೆ. ಅವರ ಮುಖದಲ್ಲಿ ಆನಂದ ಆಶ್ಚರ್ಯ ಚಿಂತಿ ನೋವು.

ಅಷ್ಟೊತ್ತಿಗೆ ಬೇವಿನಗಿಡದ ಕಟ್ಟೆಗೆ ಬಂದಿದ್ವಿ. ದಿನಾ ಅಲ್ಲಿ ಅರ್ಧಾ ತಾಸು ಕುಂಡರೂ ಅಭ್ಯಾಸ ಎಲ್ಲಾರಿಗೂ. ನಾ ಅಂದೆ, 'ನನ್ನ ಕೂದಲ ಬೆಳ್ಳಗ ಯಾಕ ಆಗಿಲ್ಲಂತ ಯಾರೂ ಕೇಳವಲ್ರಿ. ಕರ್‍ರಗ ಯಾಕ ಅದಾವಂತನ್‌ಅ ಎಲ್ಲಾರೂ ಕೇಳತೀರಿ. ನಿಮ್ಮೆಲ್ಲಾರ ಕೂದಲಾನೂ ಬೆಳ್ಳಗ್‌ಅ ಅದಾವು. ನನಗ ನಿಮ್ಮನ್ನ ನೋಡಿ ಆನಂದ ಆಕ್ಕತಿ, ಗೌರವ ಹುಟ್ಟತಯ್ತಿ, ಹೊಟ್ಟೇಕಿಚ್ಚು ಅನಸತಯ್ತಿ.'

'ನಮಗೂ ಹೊಟ್ಟೇಕಿಚ್ಚು...' ಅನ್ನಾಕ ಸುರು ಮಾಡಿದವರು, ತಟ್ಟನ್‌ಅ ಬದಲಿಸಿ, 'ನೀವೇನ್ರೆಪಾ ಸಾಹಿತಿಗಳು. ಏನೇನೋ ಹೇಳಿಬಿಡತೀರಿ...' ಅಂದರು. ನಾ ಚಾಷ್ಟೀಲೆ, 'ನನ್ನ ಮನಸು ಬೆಳ್ಳಗ ಅಯ್ತಿ, ಆದಕ್ಕ ತಲ್ಯಾನ ಕೂದಲ ಕರ್‍ರಗ ಅದಾವು' ಅಂದೆ. 'ಅಂದರ ನಮ್ಮೆಲ್ಲಾರ ಮನಸ್ಸು ಕರ್‍ರಗ ಅದಾವು, ಅಂದರ ಕೆಟ್ಟ ಅದಾವು, ಅಂತೀರೇನು?' ಅಂತ ಕೇಳಿದರು.

'ಛೆ ಛೆ, ಹಂಗಲ್ಲ. ಈಗ ನೋಡ್ರಿ, ಒಂದ ರೀತೀಲೆ ನಿಮ್ಮ ಪ್ರಶ್ನೆಯೊಳಗ್‌ಅ ಉತ್ತರಾನೂ ಹೇಳಿಬಿಟ್ಟರಿ. ಕರ್‍ರಗ ಅಂದರ ಕೆಟ್ಟ ಅಂತ ನೀವು ತಿಳಕೊಂಡೀರಿ. ಹಂಗನ್‌ಅ ಬೆಳ್ಳಗ ಅಂದರ ಸ್ವಚ್ಛ, ಶುಭ್ರ, ಶುದ್ಧ, ಪವಿತ್ರ ಇರೂದು, ಮುಕ್ತ ಇರೂದು, ನಮ್ಮ ಒಳಗಿನ ಮನಸ್ಸಿನ ಪ್ರಕೃತಿ ಮತ್ತು ನಮ್ಮ ಹೊರಗಿನ ನೈಸರ್ಗಿಕ ಪ್ರಕೃತಿ ನಮ್ಮನ್ನ ಹೆಂಗ ಇಡತಾವೋ ಹಂಗ ಇರೂದು ಅಂತ ಅರ್ಥ. ಇಲ್ಲೆ ಕೆಟ್ಟಾ ಛೊಲೋ ಮುಂತಾದ್ದುವೆಲ್ಲ ಭಾಳ ದೂರಕ್ಕ ಎಳಕೊಂಡ ಬಂದ ಅರ್ಥಗಳು' ಅಂದೆ, 'ನಮ್ಮವ್ವಗ ಎಪ್ಪತ್ತಯ್ದನೇ ವಯಸ್ಸಿನ್ಯಾಗ ಆಗ ಕೂದಲಾ ಬೆಳ್ಳಗ ಆಗಾಕ ಸುರೂ ಆಗಿದ್ದುವು. ಹಿಂಗ ಅವ್ವ ಅಪ್ಪಂದಿರ ಪೂರ್ವಜರ ದೇಹಗುಣಗಳು ಒಮ್ಮೊಮ್ಮೆ ನಮ್ಮಲ್ಲಿ ಬರತಾವು. ಇಲ್ಲಂದರ ಸಹಜವಾಗಿ ಆಯಾ ಕಾಲಕ್ಕ, ಆ ವಯಸ್ಸಿಗೆ ತಕ್ಕಂಗ ಏನ ಆಗಬೇಕೋ ಆಕ್ಕತಿ, ಆಗಬೇಕು. ಅದನ್ನ ನಾವು ಮುಕ್ತವಾಗಿ ನಕ್ಕೊಂತ ಸ್ವೀಕಾರ ಮಾಡಿದರ ನಮಗ ಯಾವ ಚಿಂತೀನೂ ಆಗೂದುಲ್ಲ. ನಾವೆಲ್ಲಾರೂ ಅರವತ್ತು ದಾಟಿದವರ್‌ಅ ಅದೇವು, ಈ ವಯಸ್ಸಿಗೆ ಕೂದಲ ಬೆಳ್ಳಗ ಆಗಬೇಕು, ಆಗತಾವು. ಕೆಲವರಿಗೆ ಲಗೂ ಆಗತಾವು, ಕೆಲವರಿಗೆ ತಡಾ ಆಗತಾವು. ಅದು ಪ್ರಕೃತಿ ಧರ್ಮ. ಅದನ್ನ ಸ್ವಚ್ಛ, ಅಂದರ ಶುದ್ಧ, ಅಂದರ ಬೆಳ್ಳನ್ನ ಮನಸ್ಸಿನಿಂದ ನಾವು ಒಪ್ಪಬೇಕು. ಖರೇ ಅಂದರ ನಿಮಗ ಇದ್ದಂಗ ನನಗೂ ಯಾಕ ಲಗೂನ ಬಿಳೀ ಕೂದಲು ಬರವಲ್ಲುವು ಅಂತ ನನಗೂ ಚಿಂತಿ ಆಗೇತಿ. ನಾ ನೋಡತೇನಲ್ಲ, ನಿಮ್ಮನ್ನ ನೋಡಿದ ಕೂಡಲೇ ಎದುರಿಗೆ ಬಂದವರು, ನೀವು ಹಿರ್‍ಯಾರ ಅಂತ ತಿಳಕೊಂಡು ನಿಮಗ ಕೈ ಮುಗೀತಾರು. ನನಗ, ಹಂಗ್‌ಅ ಹೆಂಗದೀರಿ ಅನಕೊಂತ ಹೋಗತಾರು. ಹೌದಲ್ಲರಿ...? ಹೋಗಲಿ, ಪೂಜಾ ಮಾಡಿ ದೇವರ ತಲೀಮ್ಯಾಲ ಬಿಳೀ ಹೂ ಇಟ್ಟು ನಲೀತೀರಿ, ಆಕಾಶದಾಗ ಕರೇ ಕತ್ತಲ ರಾತ್ರಿ ಕಳೆದು ಬಿಳೀ ಹಗಲು ಮೂಡಿದರ ಇಡೀ ಜಗತ್ತು ಕಣ್ಣು ತೆರೀತಯ್ತಿ. ನಾವು ನಕ್ಕರ ಬಿಳೀ ಹಲ್ಲು ಜಗತ್ತನ್ನ ನಲಿಸುವ ಶುಭ್ರತೆಯನ್ನ ಬೀರತಾವು. ಅಂಥಾ ಸಾವಿರದ ಬಿಳೀ ಬೆಳ್ಳೀ ಕೂದಲಾ ದೇವರ ತಲೀ ಮ್ಯಾಲಿನ ಹೂವಿನ್ಹಂಗ ನಿಮ್ಮ ತಲೀ ಮ್ಯಾಲ ಬಂದಾವು. ನನಗಿಂತ ಲಗೂ ಬಂದಾವು. ಅಂದಮ್ಯಾಲ ಸಂತೋಷ ಪಡಬೇಕೋ ಚಿಂತೀ ಮಾಡಬೇಕೋ ನೀವ್‌ಅ ಹೇಳ್ರಿ... ನನಗೂ ನಿಮ್ಮಂಗ ಬೆಳ್ಳೀ ಕೂದಲ ಲಗೂನ ಬರಲಿ. ಬೆಳ್ಳನ್ನ ವಿಚಾರಾ, ಬೆಳ್ಳನ್ನ ಮನಸ್ಸು ದಕ್ಕಲಿ ಅಂತ ಹಾರಯಿಸಿರಿ' ಅಂದೆ.

ನಾಕೂ ಮುಖದಾಗೂ ನಗೀನವಿಲು ನಲಿಯಾಕ್ಹತ್ತಿದುವು, ಕುಣ್ಯಾಕ್ಹತ್ತಿದುವು. ಎಲ್ಲರ ತಲೀ ಮ್ಯಾಲಿನ ಬಿಳೀ ಕೂದಲ ಅವರು ಅಂದುಕೊಂಡಿದ್ದ ಮತ್ತು ಅಪೇಕ್ಷಿಸಿದ್ದ ಉತ್ಸಾಹದ ಕರೇ ಕೂದಲಾಗಿ ನಿಮಿರಿ ನಿಂತುವು. ಅವರ ಆನಂದ, ಕಣ್ಣಾಗಿನ ಮಿಂಚುಗಳನ್ನ ನೋಡಿ ನನ್ನ ತಲೀ ಬೆಳ್ಳಗಾತು, ಶುಕ್ರ ಆತು.

SANKALANA: RNI No. KARKAN 14160/10/1/2002-TC

ಸೌಂದರ್ಯ ಲೋಕದಲ್ಲಿ ವಿಹರಿಸಲು ವಿಶೇಷ ವಿನ್ಯಾಸ

ಸೌಂದರ್ಯ ಹಾಗೂ ಹಣಕ್ಕೆ ತಕ್ಕ ಮೌಲ್ಯದ ಸಮ್ಮಿಲನ ಪ್ರಿಯದರ್ಶಿನಿ ಸೀರೆಗಳಲ್ಲಿ. ಬ್ರೋಕೇಡ್ ಹಾಗೂ ಸಾಂಪ್ರದಾಯಕ ವಿನ್ಯಾಸಗಳಲ್ಲಿ ಕಲಾಂಜಲಿ, ಕಾಂತಾ ಹಾಗೂ ಜಾಮ್ದಾನಿ ಸೀರೆಗಳ ಬೃಹತ್ ಶ್ರೇಣಿ.

ಬ್ರೋಕೇಡ್: ವಿವಿಧ ಆಕರ್ಷಕ ವರ್ಣಗಳಲ್ಲಿ ಬಂಗಾರದ ಹಾಗೂ ಬೆಳ್ಳಿ ಜರಿಯ ವಿನ್ಯಾಸಗಳು.

ಕಾಂತಾ: ಕಲ್ಕತ್ತಾ ಹಾಗೂ ಡಾಕಾದ ಸಾಂಪ್ರದಾಯಕ

ಗಂಡಭೇರುಂಡ: ಎರಡು ತಲೆಯ ಗಂಡಭೇರುಂಡ ಪಕ್ಷಿಯ ವಿನ್ಯಾಸದ ಸೀರೆಗಳು

ಜಾಮ್ದಾನಿ: ನೇಯ್ಗೆಯ ಸಮಯದಲ್ಲಿಯೇ ಅಂಚುಗಳಲ್ಲಿ ಅಳವಡಿಸಿದ ಆಕರ್ಷಕ ಕಸೂತಿಯ ವಿನ್ಯಾಸ

ಕಲಾಂಜಲಿ: ಕಂಠಹಾರದ ಮಾದರಿಯಲ್ಲಿ ನೇಯ್ದ ವಿಶಿಷ್ಠ ಸೀರೆ.

ಪ್ರಿಯದರ್ಶಿನಿ
ಕೈಮಗ್ಗದ ತವರು

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಪ್ರಿಯದರ್ಶಿನಿ ಕಮರ್ಷಿಯಲ್ ಕಾಂಪ್ಲೆಕ್ಸ್, ನಂ. 1, ಟ್ಯಾಂಕ್ ರೋಡ್, ಹಲಸೂರು,
ಬೆಂಗಳೂರು - 560 042 ಫೋನ್: 080-25575421/2 e-mail: khdc@vsnl.net website: www.khdcl.com

ಕರ್ನಾಟಕದಾದ್ಯಂತ ಮಾರಾಟ ಮಳಿಗೆಗಳು ಮತ್ತು:
• ನವದೆಹಲಿ • ಮುಂಬೈ • ಕೊಲ್ಕತ್ತ • ಚೆನ್ನೈ • ಹೈದರಾಬಾದ್ • ಜೈಪುರ್ • ಕಾನ್‌ಪುರ್ ಗಳಲ್ಲಿ ಸಹ